ಪಾವಗಡ ತಾಲ್ಲೂಕಿನ ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ರೇಣುಕ ಎಚ್. ಆರ್

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
ವಿದ್ಯಾರಣ್ಯ- 583276

2013

554

ಪಾವಗಡ ತಾಲ್ಲೂಕಿನ ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ರೇಣುಕ ಎಚ್. ಆರ್

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ವಿದ್ಯಾರಣ್ಯ– 583276

2013

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸಮಾಜ ವಿಜ್ಞಾನ ನಿಕಾಯದ ಜಾನಪದ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ ಪದವಿಗಾಗಿ "ಪಾವಗಡ ತಾಲ್ಲೂಕಿನ ಕಾಡುಗೊಲ್ಲ ಮಹಿಳೆ ಸಾಂಸ್ಕೃತಿಕ ಸಂಕಥನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಸಂಶೋಧನಾ ಅಭ್ಯರ್ಥಿಯಾದ ಎಚ್. ಆರ್ ರೇಣುಕ ಇವರು ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧವಾಗಲೀ, ಮಹಾಪ್ರಬಂಧದ ಅಧ್ಯಾಯವಾಗಲೀ ಬೇರೆ ಯಾವ ಗ್ರಂಥಗಳು, ನಿಯತಕಾಲಿಕೆಗಳಲ್ಲಿ ಪ್ರಕಟಿಸಲ್ಪಟ್ಟಿಲ್ಲ. ಈ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗೆ ಮೌಲ್ಯ ಸ್ವೀಕಾರಕ್ಕಾಗಿ ಒಪ್ಪಿಸುತ್ತಿರುವುದಕ್ಕೆ ನನ್ನ ಒಪ್ಪಿಗೆ ಇದೆ.

ದಿನಾಂಕ: 18:11.2013

ಮಾರ್ಗದರ್ಶಕರ ಸಹಿ

(ಡಾ.ಮಂಜುನಾಥ ಬೇವಿನಕಟ್ಟಿ)

ಅಭ್ಯರ್ಥಿಯ ಘೋಷಣೆ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸಮಾಜ ವಿಜ್ಞಾನ ನಿಕಾಯದ ಜಾನಪದ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ಅಭ್ಯರ್ಥಿಯಾಗಿ ಎಚ್. ಆರ್ ರೇಣುಕ ಆದ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಪಿಎಚ್.ಡಿ ಅಧ್ಯಯನದ ಅಂಗವಾಗಿ ಸಂಶೋಧನಾ ಮಹಾಪ್ರಬಂಧ ರಚಿಸಲು "ಪಾವಗಡ ತಾಲ್ಲೂಕಿನ ಕಾಡುಗೊಲ್ಲ ಮಹಿಳೆ ಸಾಂಸ್ಕೃತಿಕ ಸಂಕಥನ" ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಮಹಾಪ್ರಬಂಧವನ್ನು ರಚಿಸಿರುತ್ತೇನೆ.

ಈ ಮಹಾಪ್ರಬಂಧವಾಗಲೀ, ಮಹಾಪ್ರಬಂಧದ ಅಧ್ಯಾಯವಾಗಲೀ ಬೇರೆ ಯಾವ ಗ್ರಂಥಗಳು ನಿಯತಕಾಲಿಕೆಗಳಲ್ಲಿ ಪ್ರಕಟಿಸಲ್ಪಟ್ಟಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಕನ್ನಡ ವಿಶ್ವವಿದ್ಯಾನಿಲಯ ನೀಡುವ ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ: 18.11.2013

ಅಭ್ಯರ್ಥಿಯ ಸಹಿ

ಕೃತಜ್ಞತೆಗಳು

'ಪಾವಗಡ ತಾಲ್ಲೂಕಿನ ಕಾಡುಗೊಲ್ಲ ಮಹಿಳೆ: ಸಾಂಸ್ಕೃತಿಕ ಸಂಕಥನ'ವು ಬುಡಕಟ್ಟಿನ ಸಾಂಸ್ಕೃತಿಕ ಬದುಕನ್ನು ಮಹಿಳಾಪ್ರಧಾನ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸಿದೆ. ಈ ದೃಷ್ಟಿಕೋನವು ಬುಡಕಟ್ಟಿನ ಬದುಕನ್ನು ವಿಭಿನ್ನ ನೆಲೆಯಲ್ಲಿ ನಿರೂಪಿಸುತ್ತದೆ. ಈ ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಂಡು ಕ್ಷೇತ್ರಕಾರ್ಯಕ್ಕೆ ಬುಡಕಟ್ಟಿನ ಹಟ್ಟಿಗೆ ಆತಂಕದಿಂದಲೇ ತೆರಳಿದಾಗ ಪಾವಗಡದ ಬುಡಕಟ್ಟಿನ ಹಟ್ಟಿಗಳು ಮುಕ್ತವಾಗಿ ನನ್ನನ್ನು ಸ್ವೀಕರಿಸಿದ್ದು ನನ್ನ ಅಧ್ಯಯನ ನಿರಾಂತಕವಾಗಿಸಾಗಲು ಸಾಧ್ಯವಾಯಿತು. ಈ ಹಟ್ಟಿಯ ಮಹಿಳೆಯರು ನಿರ್ಭಯವಾಗಿ ತಮ್ಮ ಸ್ಥಿತಿ ಗತಿಗಳ ಕುರಿತು ಮಾಹಿತಿ ನೀಡಿದ್ದು ನನ್ನ ಅಧ್ಯಯನ ವಸ್ತುನಿಷ್ಟವಾಗಿರಲು ಸಾಧ್ಯವಾಯಿತು. ನನಗೆ ಅಗತ್ಯಮಾಹಿತಿಗಳನ್ನು ನೀಡಿ ಸಹಕರಿಸಿದ ಪಾವಗಡ ತಾಲ್ಲೂಕಿನ ಗೊಲ್ಲರ ಹಟ್ಟಿಗಳಿಗೂ ಮತ್ತು ಇಲ್ಲಿನ ಮಹಿಳೆಯರಿಗೂ ನಾನು ಕೃತಜ್ಞಳಾಗಿದ್ದೇನೆ.

ಈ ಮಹಾಪ್ರಬಂಧದ ವಿಷಯವನ್ನು ಬದಲಾಯಿಸಲು ನನ್ನ ಮಾರ್ಗದರ್ಶಕರಾದ ಡಾ. ಮಂಜುನಾಥ ಬೇವಿನಕಟ್ಟಿಯವರಲ್ಲಿ ನಾನು ಮನವಿ ಮಾಡಿದಾಗ ಅವರು ಮಹಾಪ್ರಬಂಧದ ವಿಷಯದ ಪ್ರಸ್ತುತತೆಯನ್ನು ಮನಗಾಣಿಸಿ ಕ್ಷೇತ್ರಕಾರ್ಯದ ಕುರಿತು ಇದ್ದ ಸಂಶಯಗಳನ್ನು ನಿವಾರಿಸಿ ಈ ಮಹಾಪ್ರಬಂಧ ರಚನೆಗೆ ಸೂಕ್ತ ಮಾಗದರ್ಶನ ಮತ್ತು ಪ್ರೋತ್ಸಾಹ ನೀಡಿದ್ದಾರೆ. ಜೊತೆಗೆ ಸ್ವತಂತ್ರ ನಿರ್ಧಾರಗಳಿಗೆ ಬರಲು ಮುಕ್ತ ಅವಕಾಶವನ್ನು ನೀಡಿದ್ದಾರೆ. ಅವರ ಭರವಸೆ ಮತ್ತು ವಿಶ್ವಾಸ ತುಂಬಿದ ಮಾರ್ಗದರ್ಶನದಿಂದ ನಾನು ಹೆಚ್ಚು ಪ್ರಯೋಜನ ಪಡೆದಿದ್ದೇನೆ. ಅವರಿಗೆ ನಾನು ಕೃತಜ್ಞಳಾಗಿದ್ದೇನೆ.

ನನ್ನ ಅಧ್ಯಯನ ಸಕಾಲಕ್ಕೆ ಪೂರೈಸಲು ಮತ್ತು ಕ್ಷೇತ್ರಕಾರ್ಯಕ್ಕೆ ನೆರವಾದವರು ಶ್ರೀ ರಾಮಚಂದ್ರಯ್ಯ ಆರ್.ಕೆ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕೋರ್ಸ್‌ವರ್ಕ್ ತರಗತಿಗಳಲ್ಲಿ ಮಾತ್ರವಲ್ಲದೆ, ಸದಾಕಾಲ ಸಂಶೋಧನೆಗೆ ಸಂಬಂಧಿಸಿದಂತೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಮೊಗಳ್ಳಿ ಗಣೇಶ್‌ರವರಿಗೂ, ಮತ್ತು ಪ್ರಾಧ್ಯಾಪಕರಾದ ಡಾ.ಹೆಬ್ಬಾಲೆ ನಾಗೇಶ್‌ರವರಿಗೂ, ಡಾ. ಗುರುಪ್ರಸಾದ್‌ರವರಿಗೂ, ಡಾ. ಸ.ಚ ರಮೇಶ್‌ರವರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನೆಗೆ ಅಗತ್ಯವಾದ ತಾಂತ್ರಿಕ ಸಲಹೆ ಮತ್ತು ಸಹಕಾರ ನೀಡಿದ ಶ್ರೀ ಅಜಿತ್‌ರವರಿಗೂ, ಶ್ರೀ ನಾಗರಾಜ್‌ರವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ನನ್ನ ಅಧ್ಯಯನಕ್ಕೆ ಸಹಕಾರ ನೀಡಿದ ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಟಿ.ಎನ್ ಹರಿಪ್ರಸಾದ್ ರವರಿಗೂ, ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಬಿ.ಕರಿಯಣ್ಣ ನವರಿಗೂ, ಸಹೋದ್ಯೋಗಿ ಮಿತ್ರರಾದ ಡಾ.ನಾಗಭೂಷಣರವರಿಗೂ, ಡಾ. ಎಸ್ ಶಿವಣ್ಣರವರಿಗೂ, ಶ್ರೀ ವೆಂಕಟರೆಡ್ಡಿ ರಾಮರೆಡ್ಡಿಅವರಿಗೂ, ಡಾ.ಪಿ.ಎಮ್. ಗಂಗಾಧರಯ್ಯರವರಿಗೂ, ಕು/ಮಂಜುಳಾ ಮತ್ತು ಶ್ರೀಮತಿ ವಸುಧಾ ಅವರಿಗೂ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ತಮ್ಮ ಪ್ರೀತಿ ತುಂಬಿದ ಮಾತುಗಳಿಂದ ನನ್ನನ್ನು ಅಧ್ಯಯನಕ್ಕೆ ಉತ್ತೇಜಿಸಿದ ನನ್ನ ತಂದೆ ಶ್ರೀ ಎಚ್.ಎಲ್ ರಂಗಸ್ವಾಮಿ ತಾಯಿ ಶ್ರೀಮತಿ ಎಸ್.ಹೊನ್ನಗಂಗಮ್ಮ ಅವರಿಗೂ ಹಾಗೂ ನನ್ನ ಕುಟುಂಬದ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆಗಳು ಸಲ್ಲುತ್ತವೆ.





▲ ಪಾವಗಡ ತಾಲ್ಲೂಕಿನ ಕಾಡುಗೊಲ್ಲರ ನೆಲೆಗಳು



ಪರಿವಿಡಿ

ಅಧ್ಯಾಯ 1

ಅಧ್ಯಯನದ ಉದ್ದೇಶ ವ್ಯಾಪ್ತಿ

ಕರ್ನಾಟಕ ಹಲವು ಸಂಸ್ಕೃತಿಗಳ ನೆಲೆಮನೆ. ಈ ಸಂಸ್ಕೃತಿಗಳಲ್ಲಿ ಕಾಡುಗೊಲ್ಲ ಬುಡಕಟ್ಟು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ. ಈ ನೆಲದ ಸಾಂಸ್ಕೃತಿಕ ಮೀಮಾಂಸೆಯನ್ನು ಕಟ್ಟುವಲ್ಲಿ ಕಾಡುಗೊಲ್ಲರು ಬಹುಮುಖ್ಯವಾದ ಭಾಗವಾಗಿದ್ದಾರೆ. ಮಧ್ಯ ಕರ್ನಾಟಕದಲ್ಲಿ ದಟ್ಟವಾಗಿ ನೆಲೆಸಿರುವ ಕಾಡುಗೊಲ್ಲರು ಆಂಧ್ರದ ಗಡಿಭಾಗಗಳಲ್ಲೂ ಕೊಂಚ ಮಟ್ಟಿಗೆ ಕಾಣಸಿಗುತ್ತಾರೆ. ಈ ಸಮುದಾಯದ ವಿಶಿಷ್ಟವಾದ ಆಚರಣೆಗಳು, ಸಾಮಾಜಿಕ, ಧಾರ್ಮಿಕ, ಆಚಾರ-ವಿಚಾರಗಳು, ಸಾಂಸ್ಕೃತಿಕ ಮಹಾಕಾವ್ಯ, ಪಶುಪಾಲಕರ ಕಥೆಗಳು, ಗೀತೆಗಳು ಈ ಮೊದಲಾದವುಗಳಿಂದ ಈ ಬುಡಕಟ್ಟು ವಿಶೇಷವೆನಿಸಿಕೊಂಡಿದೆ.

ಕರ್ನಾಟಕದ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಆಂಧ್ರ ಪ್ರದೇಶದ ಕಲ್ಯಾಣದುರ್ಗ, ಮಡಕಶಿರ ಪ್ರದೇಶಗಳಲ್ಲಿ ಕಾಡುಗೊಲ್ಲ ಬುಡಕಟ್ಟಿನ ನೆಲೆಗಳಿವೆ. ಚಿತ್ರದುರ್ಗದ ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಪ್ರದೇಶಗಳಲ್ಲಿ ತುಮಕೂರಿನ ಪಾವಗಡ, ಮಧುಗಿರಿ, ಶಿರಾ ತಾಲ್ಲೋಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರು ವಾಸಿಸುತ್ತಿದ್ದಾರೆ. ಕಾಡುಗೊಲ್ಲರ ಬುಡಕಟ್ಟಿನ ಮನೆಮಾತು ಕನ್ನಡವೇ ಆಗಿದೆ. ಆಂಧ್ರಕ್ಕೆ ಹೊಂದಿಕೊಂಡಂತಿರುವ ತುಮಕೂರು ಜಿಲ್ಲೆಯ ಗಡಿಭಾಗಗಳಲ್ಲಿ ಕನ್ನಡ ತೆಲುಗು ಎರಡೂ ಭಾಷೆಯನ್ನು ಮಾತನಾಡುವ ದ್ವಿಭಾಷಿಕ ಪರಿಸರವಿದೆ. ಪಾವಗಡ ಭಾಗದಲ್ಲಿ ನೆಲೆಸಿರುವ ಕಾಡುಗೊಲ್ಲರು ಕನ್ನಡ ಮತ್ತು ತೆಲುಗು ಎರಡೂ ಭಾಷೆಯನ್ನು ಬಲ್ಲವರಾಗಿದ್ದಾರೆ.

ಕಾಡುಗೊಲ್ಲ ಬುಡಕಟ್ಟಿನ ಸಂಸ್ಕೃತಿಯ ವಿಶಿಷ್ಟತೆಗೆ ಹಲವು ಕಾರಣಗಳಿವೆ. ಅವುಗಳೆಂದರೆ ಜೆನಿಗೆ, ಕಂಟಕಾವರಣ, ಕಳ್ಳಿ ನಿರ್ಮಾಣ, ಹಾಲುಮೀಸಲು, ಗೊಲ್ಲಕಡಗ, ಕಟ್ಟೆಮನೆ, ರವಿಕೆರಹಿತ ಸಂಪ್ರದಾಯ, ಎತ್ತಪ್ಪ ಜುಂಜಪ್ಪರ ಆರಾಧನೆ, ಊದೋಗಣೆ, ಥಮುಗು, ಮೊದಲಾದ ಸಾಂಸ್ಕೃತಿಕ ಆಚರಣೆಗಳು. ಕಾಡುಗೊಲ್ಲರ ಬುಡಕಟ್ಟಿನ ಒಳಗೇ ಇರುವ ಕರಡಿಗೊಲ್ಲರು, ತಾಳಿಕಟ್ಟದ ಗೊಲ್ಲರು, ಮಾರನೋರಗೊಲ್ಲರು, ತಾಳಿಕಟ್ಟುವ ಗೊಲ್ಲರು, ಚಿತ್ತಗೊಲ್ಲರು, ಶಿಲುವಾಡಿ ಗೊಲ್ಲರು ಸಹ ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದ್ದಾರೆ.

ಕಾಡುಗೊಲ್ಲರ ಕುಲಕಸುಬು ಪಶುಪಾಲನೆ, ದೈವವಾಗಿ ಪೂಜಿಸಲ್ಪಡುತ್ತಿರುವ ಎತ್ತಪ್ಪ, ಜುಂಜಪ್ಪ ಪಶುಪಾಲಕರೇ ಆಗಿದ್ದಾರೆ. ಕಾಡುಗೊಲ್ಲರ ಜೀವನಾಧಾರವೂ ಅವರ ಸಂಪತ್ತೂ ಆದ

ಗೋವುಗಳನ್ನು ರಕ್ಷಿಸುವ ಸಲುವಾಗಿ ಪಶುಪಾಲಕರು ಜೀವತೆತ್ತಿದ್ದಾರೆ. ಹೀಗೆ ಮಡಿದ ವೀರರನ್ನು, ಗೋವುಗಳ ಪಾಲನೆಗಾಗಿ ತೆರಳಿ ಅಲ್ಲಿಯ ಮಡಿದ ಹಿರಿಯರನ್ನು 'ಅಲಗು' ಮೂಲಕ ಆರಾಧಿಸುವ ಸಂಪ್ರದಾಯವನ್ನು ಇವರು ಪಾಲಿಸುತ್ತಾರೆ. ಈ ಬುಡಕಟ್ಟಿನ ಸಾಂಸ್ಕೃತಿಕ ನಾಯಕನಾದ ಎತ್ತಪ್ಪ ಬುಡಕಟ್ಟಿಗೆ ನೀತಿ, ನಿಯಮಗಳನ್ನು ಸಂಪ್ರದಾಯ ಆಚರಣೆಗಳನ್ನು ಧಾರ್ಮಿಕ ರೀತಿ ರಿವಾಜುಗಳನ್ನು ಹುಟ್ಟು ಹಾಕಿದವನು. ಎಂದು ನಂಬಲಾಗಿದೆ. ಅನಂತರ ಕಾಣಿಸಿಕೊಳ್ಳುವ ಜುಂಜಪ್ಪ ಈ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿ ಬುಡಕಟ್ಟಿನ ಮೇಲೆ ಹೇರುವುದನ್ನು ಕಾಣಬಹುದು. ಎತ್ತಪ್ಪ ಜುಂಜಪ್ಪರಂತಹ ಸಾಂಸ್ಕೃತಿಕ ವೀರರನ್ನು ಆರಾಧಿಸುವುದಲ್ಲದೆ ಕಾಡುಗೊಲ್ಲರು ಕಾಟಂಲಿಂಗ, ಪಾತೇಲಿಂಗ, ನರಸಿಂಹಸ್ವಾಮಿ, ತಿಮ್ಮಪ್ಪ, ಚಳ್ಳಕೆರೆಯಮ್ಮ, ಗೌರಸಂದ್ರದ ಮಾರಮ್ಮ, ದೈವಗಳನ್ನೂ ಆರಾಧಿಸುತ್ತಾರೆ.

ಊರಿನಿಂದ ದೂರವಾಗಿ ಕಾಡಿನಲ್ಲಿ ತಮ್ಮ ವಾಸದ ನೆಲೆಗಳನ್ನು ಕಟ್ಟಿಕೊಂಡು ವಾಸಿಸುವ ಕಾಡುಗೊಲ್ಲರಿಗೆ ಊರನ್ನು ಪ್ರವೇಶಿಸುವುದು ಮತ್ತು ಊರವರ ನೆರಳು ತಮ್ಮ ಮೇಲೆ ಬೀಳುವುದು ಮೈಲಿಗೆ. ಅಲ್ಲದೆ ಆಧುನಿಕ ಜೀವನ ಶೈಲಿಯನ್ನೂ ಇವರು ಮೈಲಿಗೆಯಾಗಿ ಭಾವಿಸುತ್ತಾರೆ. ಉದಾ :- ಬಸ್ ಸಂಚಾರ, ಹೋಟೆಲ್ ಊಟ, ಚಪ್ಪಲಿಯ ಬಳಕೆ, ವಿದ್ಯುತ್ ಬಳಕೆ ಇತ್ಯಾದಿ. ತಮ್ಮದೇ ಬುಡಕಟ್ಟಿನ ಋತಿಮತಿಯಾದ, ಬಾಣಂತಿಯರಾದ ಹೆಣ್ಣು ಮೈಲಿಗೆ ಎಂದು ಭಾವಿಸಿ ಸೂತಕ ಕಳೆಯುವವರೆಗೂ ಹಟ್ಟಿಯಿಂದ ಆಚೆಯಿರಿಸಿ ಮಡಿಯಾದ ನಂತರವೇ ಹಟ್ಟಿ ಪ್ರವೇಶಕ್ಕೆ ಅವಕಾಶ ನೀಡಲಾಗುವುದು. ಕಾಡುಗೊಲ್ಲ ಬುಡಕಟ್ಟಿನಲ್ಲಿರುವ ಈ ಮಡಿ ಮೈಲಿಗೆ ಆಚರಣೆಗಳೇ ಅವರನ್ನು ಊರಿನಿಂದ ದೂರವಾಗಿ ವಾಸಿಸುವಂತೆ ಪ್ರೇರೇಪಿಸಿವೆ. ಆಧುನಿಕ ಯುಗದದಲ್ಲಿ ಈ ಮೇಲೆ ಹೇಳಿದ ಮಡಿ–ಮೈಲಿಗೆಯ ಆಚರಣೆಗಳಲ್ಲಿ ಮೊದಲಿನ ಕಟ್ಟುನಿಟ್ಟು ಕಡಿಮೆಯಾಗಿದೆ.

ಕಾಡುಗೊಲ್ಲರ ವಿಶಿಷ್ಟ ಸಾಂಸ್ಕೃತಿಕ ಬದುಕಿನಲ್ಲಿ ಕಾಡುಗೊಲ್ಲ ಮಹಿಳೆ ಈ ಬುಡಕಟ್ಟಿನ 'ಸಾಂಸ್ಕೃತಿಕ ಪ್ರತಿನಿಧಿ'ಯಾಗಿದ್ದಾಳೆ. ಊರಿನ ಬದುಕಿಗೂ ಕಾಡಿನಲ್ಲಿರುವ ತಮ್ಮ ಬುಡಕಟ್ಟಿನ ಬದುಕಿಗೂ ಇರುವ ಅಂತರವನ್ನು ಮಹಿಳೆಯರಿಗೆ ಸಂಬಂಧಿಸಿದ ಆಚರಣೆಗಳ ಮೂಲಕವೇ ನಿರ್ಧರಿಸಲಾಗುತ್ತದೆ. ಊರಿನಲ್ಲಿ ಋತುಮತಿಯಾದ, ಬಾಣಂತಿಯಾದ ಹೆಣ್ಣುಗಳು ಸೂತಕವಿದ್ದರೂ ತಮ್ಮ ಮನೆಯೊಳಗೇ ನೆಲೆಸುತ್ತಾರೆ ಆದರೆ ಈ ಬುಡಕಟ್ಟಿನಲ್ಲಿ ಇವರನ್ನು ಹಟ್ಟಿಯಿಂದ ಆಚೆಯಿರಿಸಿ ಹಟ್ಟಿಯ ಶುದ್ಧತೆಯನ್ನು ಕಾಪಾಡಿಕೊಂಡಿದ್ದೇವೆ ಎಂದು ಹೇಳುವ ಇವರು ಬುಡಕಟ್ಟಿನ ಸಾಂಸ್ಕೃತಿಕ ವಿಶಿಷ್ಟತೆಯನ್ನು ಹೇಳುತ್ತಿದ್ದರೂ ಕೂಡ ಮಹಿಳಾ ಸ್ವಾತಂತ್ರ್ಯದ ದೃಷ್ಟಿಯಿಂದ ಬುಡಕಟ್ಟಿನ ಈ ಆಚರಣೆಯು ಶೋಷಣಾ ನೆಲೆಯದು. ಹೆಣ್ಣಿನ ಬದುಕನ್ನು ಕಾಡುವ ಈ ಮಡಿ–ಮೈಲಿಗಯು ಆಕೆಯನ್ನು ಕನಿಷ್ಠ ದರ್ಜೆಗೆ ಇಳಿಸಿ ಹಾಗಿಲ್ಲದ ಪುರಷರನ್ನು ಶ್ರೇಷ್ಠ ದರ್ಜೆಗೆ ಎತ್ತರಿಸುತ್ತದೆ. ಹೀಗೆ

ಕಾಡುಗೊಲ್ಲ ಬುಡಕಟ್ಟಿನ ಒಳಗೆ ಇರುವ ಮಹಿಳೆಯ ಶೋಷಣಾ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ನನ್ನ ಉದ್ದೇಶವಾಗಿದೆ.

ಅವೈದಿಕ ಸಂಸ್ಕೃತಿಯಾದ ಜನಪದರ ಬುಡಕಟ್ಟಿನ ಸಮಾಜದಲ್ಲಿ ಹೆಣ್ಣಿಗೆ ಮುಕ್ತ ಸ್ವಾತಂತ್ರ್ಯವಿರುತ್ತದೆ. ಆದರೆ ಕಾಡುಗೊಲ್ಲರ ಬುಡಕಟ್ಟಿನ ಮಹಿಳೆಯರಲ್ಲಿ ಅಂತಹ ಸ್ವಾತಂತ್ರ್ಯ ಅಪಹರಿಸಲ್ಪಟ್ಟಿವೆ. ಇದಕ್ಕೆ ಕಾರಣವಾದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

ಕಾಡುಗೊಲ್ಲ ಬುಡಕಟ್ಟಿನ ಬದುಕಿನಲ್ಲಿ ಅವಿಭಾಜ್ಯ ಅಂಗವಾಗಿರುವ ಮಹಿಳೆಯರು ಹಟ್ಟಿಯ ಆಧಾರ ಸ್ತಂಭಗಳಾಗಿದ್ದಾರೆ. ಪಶುಪಾಲಕರಾದ ಕಾಡುಗೊಲ್ಲರ ಪುರುಷರು ಹುಲ್ಲು ನೀರು ಅರಸುತ್ತಾ ಹಟ್ಟಿಯಿಂದ ದೂರಕ್ಕೆ ತೆರಳಿದಾಗ ತಮ್ಮ ಕುಟುಂಬದ ಮತ್ತು ಹಟ್ಟಿಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದವರು ಮಹಿಳೆಯರೇ. ಹೀಗೆ ಸಮಾಜದ ಮುಖ್ಯ ಭಾಗವಾದ ಕಾಡು ಗೊಲ್ಲ ಮಹಿಳೆಯರ ಚರಿತ್ರೆಯನ್ನು ಹುಡುಕಿದರೆ ಕಾಡುಗೊಲ್ಲ ಬುಡಕಟ್ಟಿನ ಚಾರಿತ್ರಿಕ ದಾಖಲೆಗಳಾದ ಮಹಾಕಾವ್ಯಗಳು, ಪಶುಪಾಲಕ ವೀರರ ಕಥೆಗಳು, ಗೀತೆಗಳು ಮೌನವಾಗುತ್ತದೆ. ಈ ಚಾರಿತ್ರಿಕ ದಾಖಲೆಯೊಳಗೆ ಪುರುಷ ಮನಸ್ಸಿನ ಆದರ್ಶ ಬಿಂಬಗಳಾಗಿ ಮಹಿಳಾ ಪಾತ್ರಗಳು ಪ್ರತಿಬಿಂಬಿಸಿದೆ. ಇಲ್ಲಿ ಮಹಿಳೆಯರ ಸ್ವರೂಪವೇನು? ಸ್ವಭಾವವೇನು? ಎಂಬುದಕ್ಕೆ ಬೆಲೆಯಿಲ್ಲ, ಈ ಸ್ವರೂಪ ಸ್ವಭಾವಗಳಿಗೆ ಬೆಲೆಕಟ್ಟುವ ಕೆಲಸವನ್ನು ಪುರುಷರೇ ನಿರ್ವಹಿಸಿರುವುದು ಕಂಡು ಬರುತ್ತದೆ. ಬುಡಕಟ್ಟಿನ ಚರಿತ್ರೆಯಲ್ಲಿ ಕಳೆದುಹೋಗಿರುವ ಕಾಡುಗೊಲ್ಲ ಮಹಿಳೆಯ ಚರಿತ್ರೆಯನ್ನು ಹುಡುಕುವುದು ನನ್ನ ಅಧ್ಯಯನದ ಉದ್ದೇಶವಾಗಿದೆ. ಈ ಚರಿತ್ರೆಯು ಕಾಡುಗೊಲ್ಲರ ಸಾಹಿತ್ಯ, ನಂಬಿಕೆ, ಆಚರಣೆಗಳಲ್ಲಿ ಹುದುಗಿರಬಹುದು. ಈ ಮಹಿಳಾ ಚರಿತ್ರೆಯ ಶೋಧವು ಈ ನೆಲದ ಸ್ತ್ರೀ ಮೀಮಾಂಸೆಯನ್ನು ಕಟ್ಟಲು ನೆರವಾಗಲೂ ಬಲ್ಲದು.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಒಳಗೆ ಮಹಿಳೆಯರ ಅಸ್ತಿತ್ವದ ನೆಲೆ ತೀರ ಮಸುಕಾದುದು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕರಗುತ್ತಿರುವ ಈ ಬುಡಕಟ್ಟಿನ ಮಹಿಳೆಯ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಅಸ್ಮಿತೆಯನ್ನು ಗುರುತಿಸಿಕೊಳ್ಳಬೇಕಿದೆ. ಹಾಗೂ ಅದನ್ನು ಮಹಿಳಾ ದೃಷ್ಟಿಕೋನದಿಂದ ಪುನರ್ ಮೌಲ್ಯಮಾಪನಕ್ಕೆ ಒಳಗಾಗಬೇಕಿದೆ. ಈ ಎಲ್ಲಾ ಸಂಗತಿಗಳನ್ನು ಈ ಅಧ್ಯಯನ ಗಂಭೀರವಾಗಿ ಪರಿಗಣಿಸುತ್ತಿದೆ. ಕಾಡುಗೊಲ್ಲರ ಸಾಹಿತ್ಯದಲ್ಲಿ ಮಹಿಳೆಯರ ಸ್ವರೂಪ, ಸ್ವಭಾವವನ್ನು ಅರಿಯಲು ಇರುವ ಮಾಹಿತಿ ಅಲ್ಪವೇ. ಕ್ಷೇತ್ರಕಾರ್ಯದ ಮೂಲಕ ಇದನ್ನು ಸಾಧಿಸಬಹುದು. ಈ ದೃಷ್ಟಿಯಿಂದ ಮಹಿಳೆಯರ ಜೀವನ ಸಂದರ್ಭದಲ್ಲಿ ಉಂಟಾದ ಆಚರಣೆ, ಕಲೆ, ಸಾಹಿತ್ಯ ವಿಚಾರ ಕಲ್ಪನೆಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಿದೆ. ಈ ಕ್ರಮದಿಂದ

ಕಳೆದುಹೋಗಿರುವ ಕಾಡುಗೊಲ್ಲ ಮಹಿಳೆಯ ಚರಿತ್ರೆಯನ್ನು ಮತ್ತೆ ಪಡೆಯಬಹುದು. ಅಲ್ಲದೆ ಪ್ರಸ್ತುತದ ಬದುಕನ್ನು ಕಾರಣ-ಪರಿಣಾಮಗಳೊಂದಿಗೆ ದಾಖಲಿಸಲು ಸಾಧ್ಯವಾಗುತ್ತದೆ. ಈ ಮೂಲಕ ಪಡೆದ ಕಾಡುಗೊಲ್ಲ ಮಹಿಳೆಯ ಅಸ್ಮಿತೆಯು ಬುಡಕಟ್ಟಿನ ಬದುಕಿನಲ್ಲಿ ರಚನಾತ್ಮಕ ಪರಿಣಾಮವನ್ನು ಉಂಟುಮಾಡಬಹುದು.

ಕಾಡುಗೊಲ್ಲ ಪಶುಪಾಲಕ ವೀರರಿಗೆ ಸಲ್ಲುವ ಸಾಂಸ್ಕೃತಿಕ ವೀರರು ಎಂಬ Identity ಕಾಡುಗೊಲ್ಲ ಈರಗಾತಿಯರಿಗೆ ಸಿಗುವುದಿಲ್ಲ. ಆದ್ದರಿಂದ 'ಸಾಂಸ್ಕೃತಿಕ ವೀರರು' ಎಂಬ ಪರಿಕಲ್ಪನೆಯನ್ನು ಮಹಿಳಾ ದೃಷ್ಟಿಕೋನದಿಂದ ಮರುವ್ಯಾಖ್ಯಾನಕ್ಕೆ ಈ ಅಧ್ಯಯನ ಒಳಪಡಿಸುತ್ತದೆ. ಹಾಗೂ 'ಅಲಗು' ಆರಾಧನೆಯ ಮೂಲಕ ಬುಡಕಟ್ಟಿನ ವೀರರನ್ನು, ಕುಟುಂಬದ ಹಿರಿಯ ಪುರುಷರನ್ನು ಗೌರವಿಸಲಾಗುತ್ತದೆ. ಆದರೆ ಮಹಿಳೆಯನ್ನು ಇಂತಹ ಗೌರವದಿಂದ ಹೊರಗಿರಿಸಲಾಗಿದೆ. ಹೀಗೆ ಈ ಬುಡಕಟ್ಟಿನ ಸಾಂಸ್ಕೃತಿಕ ಬದುಕನ್ನು ವಿಶ್ಲೇಷಿಸುತ್ತಾ ಹೋದರೆ ಈ ಸಮಾಜದ ಒಳಗೆ ಅಡಗಿರುವ ಲಿಂಗ ತಾರತಮ್ಯದ ನೆಲೆಗಳು ಗೋಚರಿಸುತ್ತವೆ. ಈ ಸಮಾಜದಲ್ಲಿರುವ ಲಿಂಗ ತಾರತಮ್ಯದ ಕಾರಣದಿಂದ ·ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಯರು ವಂಚಿಸಲ್ಪಟ್ಟಿದ್ದಾರೆ. ಅಲ್ಲದೆ ಸಮಾಜದ ತಾರತಮ್ಯದ ವ್ಯವಸ್ಥೆಯು ಮಹಿಳೆಯ ಬದುಕಿನ ಎಲ್ಲಾ ಸಂಗತಿಗಳನ್ನು ನಿಯಂತ್ರಿಸಿ ನಡೆಸುತ್ತದೆ. ಇದರಿಂದ ಉಂಟಾಗಿರುವ ಪರಿಣಾಮವನ್ನು ಈ ಅಧ್ಯಯನ ಒಳಗೊಂಡಿದೆ.

ಕಾಡುಗೊಲ್ಲರ ಬುಡಕಟ್ಟನ್ನು ಕುರಿತು ಇದುವರೆಗೂ ಹಲವು ಸಾಂಸ್ಕೃತಿಕ ಅಧ್ಯಯನಗಳು ನಡೆದಿವೆಯಾದರೂ ಕಾಡುಗೊಲ್ಲರ ಮಹಿಳೆಯರ ದೃಷ್ಟಿಕೋನದಿಂದ ಮಾಡಿರುವ ಅಧ್ಯಯನಗಳು ಇಲ್ಲವೆಂದೇ ಹೇಳಬೇಕು. ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು, ಕಾಡುಗೊಲ್ಲರ ಸಾಂಸ್ಕೃತಿಕ ವೀರರು, ಕಾಡುಗೊಲ್ಲರ ಹಟ್ಟಿ,\ಗೊಲ್ಲ ಸಮುದಾಯದ ಅಧ್ಯಯನ, ಜುಂಜಪ್ಪನ ಕಾವ್ಯ, ಬುಡಕಟ್ಟು ಸಂಸ್ಕೃತಿ ಈ ಮೊದಲಾದ ಸಂಶೋಧನೆ ಮತ್ತು ಸಾಂಸ್ಕೃತಿಕ ಅಧ್ಯಯನದಲ್ಲಿ ಕಾಡುಗೊಲ್ಲ ಮಹಿಳೆಯ ಬದುಕಿನ ಸ್ವರೂಪ ಉಪೇಕ್ಷೆಗೆ ಒಳಗಾಗಿದೆ. ಉಪೇಕ್ಷೆಗೆ ಒಳಗಾಗಿರುವ ಕಾಡುಗೊಲ್ಲ ಮಹಿಳೆಯರ ಬದುಕನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಲಾಗುತ್ತದೆ. ಈ ಅಧ್ಯಯನ ವಿಧಾನವು ವಿಶ್ಲೇಷಣಾತ್ಮಕ ಮಾದರಿಯದ್ದಾಗಿದೆ. ಅಧ್ಯಯನಕ್ಕಾಗಿ ತುಮಕೂರು ಜಿಲ್ಲೆಯ ಪಾವಗಡವನ್ನು ಕ್ಷೇತ್ರಕಾರ್ಯಕ್ಕೆ ಆಯ್ದುಕೊಳ್ಳಲಾಗಿದೆ. ಪಾವಗಡ ಆಂಧ್ರಪ್ರದೇಶ ಗಡಿಭಾಗಕ್ಕೆ ಹೊಂದಿಕೊಂಡಿರುವ ವಿಶೇಷ ಪರಿಸರವಾಗಿದೆ. ತೆಲುಗು ಮತ್ತು ಕನ್ನಡ ಭಾಷೆಯ ಪ್ರಭಾವಗಳು ಸಾಂಸ್ಕೃತಿಯ ಕೊಳು-ಕೊಡುಗೆಗಳು ಈ ಪ್ರದೇಶದ ವೈಶಿಷ್ಟ್ಯವೂ ಆಗಿದೆ. ಪಾವಗಡ ಮತ್ತು ಆಂಧ್ರದಲ್ಲಿ ನೆಲೆಸಿರುವ ಕಾಡುಗೊಲ್ಲ ಬುಡಕಟ್ಟನ್ನು ಭೌಗೋಳಿಕ ಗಡಿರೇಖೆಗಳು ಪ್ರತ್ಯೇಕಿಸಿಲ್ಲ. ಎರಡೂ ಪ್ರದೇಶಗಳಲ್ಲಿ ಈ

ಬುಡಕಟ್ಟು ಸಮುದಾಯ ಸಾಂಸ್ಕೃತಿಕ ಅನನ್ಯತೆಯೊಂದಿಗೆ ಬದುಕುತ್ತಿದೆ. ಅಲ್ಲದೆ ಪಾವಗಡ ಮಧ್ಯಕರ್ನಾಟಕದ ಮುಖ್ಯ ಪ್ರದೇಶವಾಗಿದ್ದು ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿಯನ್ನು ಪಡೆದಿದೆ. ಈ ಪ್ರದೇಶದಲ್ಲಿ ನೆಲೆಸಿರುವ ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರ ಸ್ಥಿತಿಯೂ ಈ ಹಣೆಪಟ್ಟಿಯಿಂದ ಹೊರತಾಗೇನೂ ಇಲ್ಲ. ಈ ಭಾಗದಲ್ಲಿ ನೆಲೆಸಿರುವ ಕಾಡುಗೊಲ್ಲ ಮಹಿಳೆಯರ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳು, ಆರ್ಥಿಕ ಸ್ಥಿತಿಗತಿಗಳನ್ನು ಈ ಅಧ್ಯಯನ ತನ್ನ ವ್ಯಾಪ್ತಿಯಲ್ಲಿ ಒಳಗೊಂಡಿದೆ. ಆಧುನಿಕ ಯುಗದಲ್ಲಿ ಕಾಡುಗೊಲ್ಲ ಬುಡಕಟ್ಟು ಜಾತಿ ಸಮುದಾಯವಾಗಿ ಪರಿವರ್ತನೆಯಾಗುತ್ತಿರುವ ಸ್ಥಿತ್ಯಂತರದ ಈ ಸಂದರ್ಭದಲ್ಲಿ ಮಹಿಳೆಯರ ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರವನ್ನು ಸೂಕ್ಷ್ಮವಾಗಿ ಈ ಅಧ್ಯಯನ ದಾಖಲಿಸುತ್ತದೆ. ಸರ್ಕಾರಿ ಪ್ರಾಯೋಜಿತ ಹಲವು ಅಭಿವೃದ್ಧಿ ಪರವಾರ ಬುಡಕಟ್ಟು ಯೋಜನೆಗಳು ಈ ಮಹಿಳೆಯ ಬದುಕಿನಲ್ಲಿ ವಹಿಸಿದ ಪಾತ್ರ ಉಂಟುಮಾಡಿದ ಪರಿಣಾಮವನ್ನು ಈ ಅಧ್ಯಯನವು ಸಮೀಕ್ಷಿಸುತ್ತದೆ. ಕಾಡುಗೊಲ್ಲ ಬುಡಕಟ್ಟಿನಲ್ಲಿ ಹುದುಗಿಹೋದ ಕಾಡುಗೊಲ್ಲ ಮಹಿಳೆಯ ಚರಿತ್ರೆಯನ್ನು ಈ ಅಧ್ಯಯನ ನಿರೂಪಿಸುತ್ತದೆ.

ಸಂಕಥನವೆಂದರೆ 'ವಿಶ್ಲೇಷಣೆ'[1] ಎಂದು, ಇಂಗ್ಲೀಷಿನ **Discourse** [2] ಪದಕ್ಕೆ ಸಂವಾದಿಯಾಗಿ ಬಳಸುತ್ತಿರುವ ಪದವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ನಿಘಂಟಿನಲ್ಲಿ ಸಂಕಥನವೆಂಬ ಪದಕ್ಕೆ ಬರವಣಿಗೆಯ ಭಾಷೆ, ಆಡುಮಾತು ಎಂಬ ಅರ್ಥಗಳಿವೆ. '1970 ರ ದಶಕದಿಂದಾಚೆಗೆ ಸಂಕಥನವನ್ನು ವಿಶ್ಲೇಷಣೆಯ ಪ್ರಧಾನ ನೆಲೆಯಾಗಿಮಾಡಿಕೊಳ್ಳಬೇಕೆಂಬ ಧೋರಣೆ ಬೆಳದಿದೆ'[3] ಸಂಸ್ಕೃತ – ಕನ್ನಡ ಶಬ್ದಕೋಶದಲ್ಲಿ ಸಂಕಥಾ ವೆಂಬ ಪದಕ್ಕೆ ಸ್ತ್ರೀ ಸಂವೇದನೆ, ಮಾತು ಎಂಬರ್ಥಗಳಿವೆ. ಈ ನನ್ನ ಅಧ್ಯಯನದಲ್ಲಿ ಸಂಕಥನವೆಂಬುದು ಅಧ್ಯಯನ ವಿಧಾನವಾಗಿದೆ. ಕಾಡುಗೊಲ್ಲ ಮಹಿಳೆಯರ ಸಾಂಸ್ಕೃತಿಕ ಬದುಕನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನಕ್ಕೆ ಒಳಪಡಿಸಿ ದತ್ತವಾದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಂದರೆ ಕಾಡುಗೊಲ್ಲರ ಸಂಸ್ಕೃತಿಯ ವ್ಯಕ್ತ ರೂಪಗಳಾದ ಸಾಹಿತ್ಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಮತ್ತು ವರ್ತಮಾನದ ಬದುಕಿನೊಳಗೆ ಮಹಿಳೆಯರಿಂದಲೇ ಸಂವೇದನೆಗಳನ್ನು ಪಡೆದು ಮಾಡಲಾದ ವಿಶ್ಲೇಷಣೆಯು ಇದಾಗಿದೆ.

1. ಸಂಕಥನ ಲೇ: ಡಾ ಕರೀಗೌಡ ಬೀಚನಹಳ್ಳಿ
2. ವಿಮರ್ಶೆಯ ಪರಿಭಾಷೆ ಲೇ: ಓ.ಎಲ್. ನಾಗಭೂಷಣಸ್ವಾಮಿ ಪುಟ 382
3. ಅದೇ ಪುಟ 382

ಅಧ್ಯಾಯ 2

ಪಾವಗಡ ತಾಲ್ಲೂಕಿನ ಭೌಗೋಳಿಕ, ಧಾರ್ಮಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ

ಕರ್ನಾಟಕ ರಾಜ್ಯದಲ್ಲಿಯೇ ಕಲ್ಪತರುನಾಡು, ಶೈಕ್ಷಣಿಕನಗರ, ಧಾರ್ಮಿಕ ಪುಣ್ಯಕ್ಷೇತ್ರವಾಗಿ ಪ್ರಸಿದ್ಧವಾದದು ತುಮಕೂರು ಜಿಲ್ಲೆ.ರಾಜ್ಯದ ರಾಜಧಾನಿಗೆ 70 ಕಿ.ಮೀ ದೂರದಲ್ಲಿರುವ ತುಮಕೂರು ಜಿಲ್ಲೆ 10597 ಚ.ಕಿ.ಮೀ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಕಾವೇರಿ, ಕೃಷ್ಣ, ಗೋದಾವರಿ, ಕುಮುದ್ವತಿ, ನಾಗಿನಿ ಹಾಗೂ ಸ್ಥಳೀಯವಾಗಿಯೇ ಹುಟ್ಟಿ ಹರಿಯುವ ಸುವರ್ಣಮುಖೀ, ಜಯಮಂಗಲೀ ನದಿಗಳಿಂದ ಜಿಲ್ಲೆ ಸಮೃದ್ಧಗೊಂಡಿದೆ. ನಿಡುಗಲ್ ಕೋಟೆ, ಪಾವಗಡ ಕೋಟೆ, ಸಿದ್ಧರ ಬೆಟ್ಟ, ದೇವರಾಯನದುರ್ಗ ಸಿದ್ಧಗಂಗೆ, ಶಿವಗಂಗೆ, ಮಂದರಗಿರಿ ಜೈನಬಸದಿ, ಮಧುಗಿರಿಯ ಏಕ ಶಿಲಾಬೆಟ್ಟ ಮೊದಲಾದವು ಜಿಲ್ಲೆಯ ಸೌಂದರ್ಯವನ್ನು ಹೆಚ್ಚಿಸುವ ಜೊತೆಗೆ ಜಿಲ್ಲೆಗೆ ಐತಿಹಾಸಿಕ ಮಹತ್ವವನ್ನು ತಂದುಕೊಟ್ಟಿದೆ. ತ್ರಿದಾಸೋಹಕ್ಕೆ ಹೆಸರಾಗಿರುವ ಶ್ರೀ ಸಿದ್ಧಗಂಗಾ ಕ್ಷೇತ್ರ ಮತ್ತು ಯಡೆಯೂರು ಕ್ಷೇತ್ರ, ನಾಗಲಮಡಿಕೆ, ಶ್ರೀ ಶನೀಶ್ವರಸ್ವಾಮಿ ದೇವಾಲಯ, ದೇವರಾಯನದುರ್ಗ, ಮೊದಲಾದವು ನಿತ್ಯವೂ ಭಕ್ತರು ಮತ್ತು ಪ್ರವಾಸಿಗರು ಭೇಟಿನೀಡುವ ಧಾರ್ಮಿಕ ಪ್ರಾಮುಖ್ಯತೆ ಪಡೆದ ತಾಣಗಳಾಗಿವೆ. ಜಿ.ಎಂ.ಶ್ರೀ, ತಿ.ನಂ.ಶ್ರೀ,. ಡಿ.ಎಲ್.ಎನ್, ಗುಬ್ಬಿವೀರಣ್ಣ ಮೊದಲಾದ ವಿದ್ವಾಂಸರು ಕಲಾವಿದರು ಜಿಲ್ಲೆಯ ಕಲೆ ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಪ್ರಮುಖ ಜಿಲ್ಲಾ ಆಡಳಿತ ಕೇಂದ್ರವಾಗಿರುವ ತುಮಕೂರು, ಗುಬ್ಬಿ, .ಕುಣಿಗಲ್, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ, ಮಧುಗಿರಿ, ಶಿರಾ ಕೊರಟಗೆರೆ, ಪಾವಗಡ – ಈ ಹತ್ತು ತಾಲ್ಲೂಕಗಳನ್ನು, 12 ಪಟ್ಟಣಗಳನ್ನು, 2727 ಗ್ರಾಮಗಳನ್ನು, 50 ಹೋಬಳಿ ಕೇಂದ್ರಗಳನ್ನು ಹೊಂದಿದೆ.10597 ಚ.ಕಿ. ಮೀ ವಿಸ್ತೀರ್ಣಹೊಂದಿ ಕರ್ನಾಟಕ ರಾಜ್ಯದಲ್ಲಿ ಎರಡನೇ ಜಿಲ್ಲೆಯಾಗಿರುವ ತುಮಕೂರು, ರಾಜ್ಯದ ಶೇ.5.53 ರಷ್ಟಿದೆ.ಜಿಲ್ಲೆಯ ಜನಸಂಖ್ಯೆ 2681449 ಅಗಿದ್ದು ಇದರಲ್ಲಿ ಮಹಿಳೆಯರ ಸಂಖ್ಯೆ 1326679 ಪುರುಷರ ಸಂಖ್ಯೆ 1354770. 2011 ರ ಗಣತಿಯಂತೆ ಜಿಲ್ಲೆಯ ಒಟ್ಟು ಸಾಕ್ಷರತೆ 74.32% ರಷ್ಟಾಗಿದ್ದು, 82.05% ಪುರುಷರು, 66.45% ಮಹಿಳೆಯರು ಸಾಕ್ಷರಾಗಿದ್ದಾರೆ.

ಪಾವಗಡ ತುಮಕೂರು ಜಿಲ್ಲೆಯ ಎರಡನೇ ದೊಡ್ಡ ತಾಲ್ಲೂಕಾಗಿದೆ. ತುಮಕೂರು ಅಭಿವೃದ್ಧಿಯ ಹಾದಿಯಲ್ಲಿ ನಾಗಲೋಟವಲ್ಲಿದ್ದರೆ ಪಾವಗಡ ತಾಲ್ಲೂಕು ಅಭಿವೃದ್ಧಿಯಲ್ಲಿ ಹಿಂದುಳಿದ

ಪ್ರದೇಶವೆಂದು ಗುರುತಿಸಿಕೊಂಡಿದೆ. ಜಿಲ್ಲೆಗೆ ಯಾವುದೇ ಭಾಗದಿಂದಲೂ ಸಂಪರ್ಕವಿಲ್ಲದೆ, ಭೌಗೋಳಿಕವಾಗಿ ಬೇರ್ಪಟ್ಟು ತುಮಕೂರಿನ ಈಶಾನ್ಯ ಭಾಗಕ್ಕಿರುವ ಪಾವಗಡ ಆಂಧ್ರಪ್ರದೇಶದ ಮಡಕಶಿರಾ, ಅನಂತಪುರ ಜಿಲ್ಲೆಯಿಂದ ಸುತ್ತುವರಿದಿದೆ. ಚಿತ್ರದುರ್ಗಕ್ಕೆ ಸಮೀಪವಾಗಿರುವ ಪಾವಗಡ ಈ ಮೊದಲು ಚಿತ್ರದುರ್ಗಜಿಲ್ಲೆಯ ಭಾಗವಾಗಿದ್ದು 1886 ರಲ್ಲಿ ಬಳ್ಳಾರಿಯಿಂದ ಚಿತ್ರದುರ್ಗ ಪ್ರತ್ಯೇಕ ಜಿಲ್ಲೆಯಾಗಿ ಬೇರ್ಪಟ್ಟಾಗ ಪಾವಗಡವು ತಾಲ್ಲೂಕಿನ ಮಾನ್ಯತೆಯೊಂದಿಗೆ ತುಮಕೂರು ಜಿಲ್ಲೆಗೆ ಸೇರಿಕೊಂಡಿತು.[1] ಕರ್ನಾಟಕದ ಈಶಾನ್ಯ ಭಾಗದ ಗಡಿನಾಡಾಗಿರುವ ಪಾವಗಡ ಮಳೆಯ ಅಭಾವವಿರುವ, ಒಣ ಭೂಪ್ರದೇಶವುಳ್ಳ ಬರಪೀಡಿತ ನಾಡು. ತೆಲುಗು ಭಾಷೆಯ ಪ್ರಭಾವಕ್ಕೊಳಗಾಗಿರುವ ದ್ವಿಭಾಷಿಕ ಪರಿಸರ ಪಾವಗಡದಲ್ಲಿದೆ. ವ್ಯವಸಾಯಕ್ಕೆ ಅನಾನುಕೂಲವಾದ ಭೂಮಿ, ಮಳೆ, ವಾತವರಣದಿಂದಲೂ, ಕೂಲಿ ಕಾರ್ಮಿಕರು ಹೆಚ್ಚಿರುವುದರಿಂದಲೂ, ಬೃಹತ್ ಕೈಗಾರಿಕೆಗಳಾವುವು ಇಲ್ಲದಿರುವದರಿಂದಲೂ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಈ ಎಲ್ಲಾ ಸಂಗತಿಗಳೂ ಇಲ್ಲಿಯ ಜನಜೀವನವನ್ನು ತೀವ್ರವಾಗಿ ಪ್ರಭಾವಿಸಿವೆ. ಈ ಪ್ರಭಾವಕ್ಕೆ ಸಿಲುಕಿ ಸಂಕಷ್ಟದಲ್ಲಿರುವ ಜನಸಮುದಾಯಗಳಲ್ಲೊಂದು ಕಾಡುಗೊಲ್ಲ ಬುಡಕಟ್ಟು.ತಾಲ್ಲೂಕಿನಲ್ಲಿ ವ್ಯಾಪಕವಾಗಿ ನೆಲೆಸಿರುವ ಕಾಡುಗೊಲ್ಲರು ಮಾನವ ಪರಿಸರ ಮತ್ತು ಭೌಗೋಳಿಕ ಪರಿಸರದ ಅಸಹಕಾರದ ಕಾರಣದಿಂದಾಗಿ ಹಿಂದುಳಿದ ಬುಡಕಟ್ಟು ಸಮುದಾಯವೆನಿಸಿದೆ. ಈ ಅಂಶವು ತಾಲ್ಲೂಕಿನ ಅಭಿವೃದ್ಧಿಯ ಹಿನ್ನಡೆಗೆ ಕಾರಣವಾದ ಸಂಗತಿಯೂ ಆಗಿದೆ.

ಈ ತಾಲ್ಲೂಕಿಗೆ ಪಾವಗಡವೆಂಬ ಹೆಸರು ಬರಲು ಕಾರಣ ಇಲ್ಲಿ ಹಾವಿನ ಮಾದರಿಯಲ್ಲಿ ಕಾಣಲ್ಪಡುವ ಬೆಟ್ಟ-ಗುಡ್ಡಗಳು.ಪಾಮುಕೊಂಡ ಎಂದರೆ ಹಾವಿನಬೆಟ್ಟ ಎಂದು ಅರ್ಥ.ಈ ಪಾಮುಕೊಂಡವೇ ನಂತರದಲ್ಲಿ ಪಾವುಕೊಂಡ>ಪಾವುಕೊಡ>ಪಾವಗಡ ವಾಗಿದೆ. ಪಾಮು>ಪಾವು ಎಂದರೆ ಹಾವು ಕೊಂಡ>ಗೊಂಡ ಎಂದರೆ ಬೆಟ್ಟ (ತೆಲುಗಿನಲ್ಲಿ). ದ್ವಿಭಾಷಿಕ ಪರಿಸರವಾದ್ದರಿಂದ ಅದರ ಪ್ರಭಾವದಿಂದ ಈ ಸ್ಥಳನಾಮವು ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ತಾಲ್ಲೂಕಿನ ಹಲವು ಸ್ಥಳನಾಮಗಳ ಮತ್ತು ವ್ಯಕ್ತಿನಾಮಗಳ ಮೇಲೆ ತೆಲುಗು ಭಾಷೆಯ ಪ್ರಭಾವವಿದೆ.

ಪಾವಗಡ ಐತಿಹಾಸಿಕವಾಗಿ ಹಲವು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು.ಪಾವಗಡ ದಂಡಕಾರಣ್ಯವೂ, ಜನವಸತಿರಹಿತ ಪ್ರದೇಶವಾದ್ದರಿಂದಲೂ ಬಹುಕಾಲ ಈ ಪ್ರದೇಶ ಯಾವ ರಾಜ ಮನೆತನಗಳ ಅಧೀನಕ್ಕೂ, ಆಕ್ರಮಣಕ್ಕೂ ಒಳಗಾಗಿರಲಿಲ್ಲ. ಇದು ಕೆಲವೊಮ್ಮೆ ಸ್ವತಂತ್ರ ಸಂಸ್ಥಾನವಾಗಿ, ಹಲವುಬಾರಿ ಪಾಳೇಗಾರರ ಆಡಳಿತಕ್ಕೆ ಒಳಪಟ್ಟ ಸಂಸ್ಥಾನವಾಗಿ ಇತಿಹಾಸದಲ್ಲಿ ದಾಖಲಾಗಿದೆ. ಪಾವಗಡ ಇತಿಹಾಸದ ದಾಖಲೆ ಅಸ್ಪಷ್ಟವಾಗಿ 10 ನೇ ಶತಮಾನದಲ್ಲೂ ಸ್ಪಷ್ಟವಾಗಿ 15ನೇ ಶತಮಾನದಲ್ಲೂ ಶಾಸನಗಳ ಮೂಲಕ ಲಭ್ಯವಾಗಿರುತ್ತದೆ.

ಪಾವಗಡದಲ್ಲಿ ದೊರೆತಿರುವ 45 ನೇ ಸಂಖ್ಯೆಯ ಶಾಸನವು ಸುಮಾರು 9-10 ನೇ ಶತಮಾನದಲ್ಲಿ ಪ್ರಬಲರಾಗಿ ಚಿತ್ರದುರ್ಗ, ತುಮಕೂರು, ಕೋಲಾರ, ಬಳ್ಳಾರಿ, ಚಿತ್ತೂರು, ಅನಂತಪುರ ಜಿಲ್ಲೆಯ ವಿವಿಧ ಪ್ರದೇಶಗಳನ್ನೊಳಗೊಂಡ ನೊಳಂಬವಾಡಿ-3200 ನ್ನು ಆಳಿದ ಸಾಮಂತ ಮನೆತನವಾದ ನೊಳಂಬರು ಪಾವಗಡದ ವಿವಿಧ ಪ್ರದೇಶಗಳ ಮೇಲೆಹಿಡಿತ ಹೊಂದಿದ್ದಿರಬಹುದೆಂದು ತಿಳಿಸುತ್ತದೆ. ನೊಳಂಬರು ಗಂಗ, ರಾಷ್ಟ್ರಕೂಟ, ಚಾಲುಕ್ಯ ರಾಜಮನೆತಗಳ ಅಧೀನದಲ್ಲಿ ಸಾಮಂತರಾಗಿ ಆಳ್ವಿಕೆ ನಡೆಸಿದ್ದಾರೆ. ನೊಳಂಬರು ರಾಷ್ಟ್ರಕೂಟರ ಅಧೀನದಲ್ಲಿ ಸಾಮಂತರಾಗಿದ್ದಾಗ ಕ್ರಿ.ಶ. ಸುಮಾರು 974 ರಲ್ಲಿ ಗಂಗ ಅರಸರ ದಾಳಿಗೆ ಒಳಗಾಗಿ ನಾಶ ಹೊಂದಬೇಕಾಯಿತು. ನೊಳಂಬರು ಮತ್ತೆ ಪ್ರಬಲರಾಗಿ ಅಧಿಕಾರವನ್ನು ಪಡೆದದ್ದು ವಿಜಯನಗರದ ಅರಸರಿಂದ. ಮಧುಗಿರಿಯ ಸುತ್ತಮುತ್ತಲ ಪ್ರದೇಶಗಳನ್ನಾಳಿದ ಮಹಾನಾಡಪ್ರಭುಗಳೆನಿಸಿಕೊಂಡ ಇವರ ಆಡಳಿತಕ್ಕೆ ಪಾವಗಡದ ಪ್ರದೇಶಗಳೂ ಸೇರಿದ್ದಿರಬಹುದು.

ಕ್ರಿ.ಶ 15 ನೇ ಶತಮಾನದಲ್ಲಿ ಪಾವಗಡ ಭೂಭಾಗವು ವಿಜಯನಗರ ಅರಸರ ಅಧೀನದಲ್ಲಿತ್ತು. ಪಾವಗಡದ 82 ನೇ ಶಾಸನ ಬುಕ್ಕ ಭೂಪತಿಯ ಆಳ್ವಿಕೆಯನ್ನು ತಿಳಿಸುವ ಜೊತೆಗೆ, ಪಾವಗಡಕ್ಕೆ ತೆಲುಗುನಾಡಿನಿಂದ ಐದು ಗೌಡಕುಟುಂಬಗಳು ವಲಸೆ ಬಂದ ವಿಚಾರವನ್ನು ತಿಳಿಸುತ್ತದೆ.[2] ಕ್ರಿ.ಶ 1406 ರಿಂದ 1422 ರವರೆಗೆ ಆಡಳಿತ ನಡೆಸಿದ ಒಂದನೆ ದೇವರಾಯನ ಅಧೀನದಲ್ಲಿದ್ದ ಪಾರ್ಥಿವ ಗೋಪಣ್ಣನೆಂಬುವನು ಕ್ರಿ.ಶ ಸುಮಾರು 1405-06 ರಲ್ಲಿ ಪಾವಗಡಕೋಟೆಯನ್ನು ನಿರ್ಮಿಸಿದನೆಂದು ಪಾವಗಡದ 97 ನೇ ಶಾಸನದಿಂದ ತಿಳಿದುಬರುತ್ತದೆ.[3] ಪಾವಗಡದ 39 ನೇ ಶಾಸನವು ಇಂದು ಪಾವಗಡದ ಹೋಬಳಿ ಕೇಂದ್ರವಾಗಿರುವ ನಿಡುಗಲ್ಲು ವಿಜಯ ನಗರದ ಅರಸರ ಕಾಲದಲ್ಲಿ ನಿಡುಗಲ್ಲು ಸೀಮೆ ಎಂಬ ಪ್ರಖ್ಯಾತ ಪ್ರದೇಶವಾಗಿತ್ತೆಂಬುದನ್ನು ತಿಳಿಸುತ್ತದೆ. ಪಾವಗಡವನ್ನಾಳಿದ ಕೊನೆಯ ಪಾಳೆಯಗಾರನಾದ ತಿಮ್ಮಪ್ಪ ನಾಯಕನು ಹೈದರಾಲಿಗೆ ಕಪ್ಪ-ಕಾಣಿಕೆ ಸಲ್ಲಿಸುತ್ತಾ ಆಡಳಿತ ನಡೆಸುತ್ತಿದ್ದನು.ಈತ ಕಪ್ಪ- ಕಾಣಿಕೆಗಳನ್ನು ಹೈದರಾಲಿಗೆ ಕೊಡಲು ನಿರಾಕರಿಸಿದಾಗ ಹೈದರಾಲಿಯು ಈತನನ್ನು ಸೆರೆಹಿಡಿದು ಮಧುಗಿರಿಯ ಕೋಟೆಯಲ್ಲಿ ಬಂಧಿಸಿಟ್ಟನು. ಮೈಸೂರು ಯುದ್ಧ ಪ್ರಾರಂಭವಾದಾಗ ಮರಾಠರು ಬ್ರಿಟಿಷ್ ಅಧಿಕಾರಿ ಲಾರ್ಡ್‌ಕಾರ್ನ್‌ವಾಲೀಸ್‌ಗೆ ಸಹಾಯಮಾಡಲು ಬಂದು ಮಧುಗಿರಿಯನ್ನು ಗೆದ್ದು ತಿಮ್ಮಪ್ಪನಾಯಕನನ್ನು ಸೆರೆಯಿಂದ ಬಿಡಿಸಿದರು. ನಂತರ ತಿಮ್ಮಪ್ಪ ನಾಯಕ ಮರಳಿ ಅಧಿಕಾರವನ್ನು ಪಡೆದನು. ಅಲ್ಲಿಯವರೆಗೆ ಮುಸಲ್ಮಾನರು ಪಾವಗಡವನ್ನು ಆಳುತ್ತಿದ್ದರು.[4]ನಂತರದಲ್ಲಿ ಪಾವಗಡ ಬ್ರಿಟಿಷರ ನಂತರ ಮೈಸೂರು ರಾಜ್ಯದ ಅಧೀನವಾಯಿತು.

ನಿಡುಗಲ್ಲು ಸಂಸ್ಥಾನ ಪಾವಗಡ ಭಾಗದಲ್ಲಿ ಐತಿಹಾಸಿಕವಾಗಿ ಪ್ರಸಿದ್ಧವಾದ ಸೀಮೆಯಾಗಿತ್ತು.ಗಂಗರು, ನೊಳಂಬರು, ಪಲ್ಲವರು ಚಾಲುಕ್ಯರು, ಹೊಯ್ಸಳರು ನಿಡುಗಲ್ಲನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದರು. ಕ್ರಿ.ಶ 16 ನೇ ಶತಮಾನದಲ್ಲಿ ತಿಪ್ಪನಾಯಕನೆಂಬ ಪಾಳೆಯಗಾರ ನಿಡುಗಲ್ಲನ್ನು ಆಳಲು ಆರಂಭಿಸಿದನು.ನಂತರದಲ್ಲಿ ಕಾಮಿನಾಯಕ, ಅಜ್ಜಿ ನಾಯಕ, ಬೊಮ್ಮನಾಯಕ ದಕ್ಷರಾಗಿ ಆಳ್ವಿಕೆ ನಡೆಸಿದರು. ಶ್ರೀಕೃಷ್ಣದೇವರಾಯನ ಅಧೀನದಲ್ಲಿದ್ದಾಗಲೇ ಬೊಮ್ಮನಾಯಕನು ಪೂರ್ವಕ್ಕೆ ಪಾವಗಡ ಉತ್ತರಕ್ಕೆ ಮೊಳಕಾಲ್ಮೂರಿನವರೆಗೆ ಅಧಿಕಾರವನ್ನು ವಿಸ್ತರಿಸಿದನು. ಈ ವಂಶದ ಕೊನೆಯ ಪಾಳೇಯಗಾರನಾದ ತಿಮ್ಮಣ್ಣ ನಾಯಕನ ನಂತರದಲ್ಲಿ ಹರತಿ ನಾಯಕರು ನಿಡುಗಲ್ಲನ್ನು ವಶಪಡಿಕೊಂಡರು.[5]

ವಿಸ್ತೀರ್ಣದಲ್ಲಿ ಜಿಲ್ಲೆಯ ಎರಡನೇ ದೊಡ್ಡದೆನಿಸಿರುವ ಪಾವಗಡ ತಾಲ್ಲೂಕು ಭೌಗೋಳಿಕವಾಗಿ 1358 ಚ ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ಈ ತಾಲ್ಲೂಕು ಅಕ್ಷಾಂಶ 77^{0}14 ರೇಖಾಂಶ 140.05 ರ ನಡುವೆ ಕಂಡು ಬರುತ್ತದೆ. ಸಮುದ್ರಮಟ್ಟದಿಂದ 639.1 ಎತ್ತರದಲ್ಲಿದೆ. ಜಿಲ್ಲೆಯಿಂದ ಭೌಗೋಳಿಕವಾಗಿ ಪ್ರತ್ಯೇಕವಾಗಿರುವ ಈ ತಾಲ್ಲೂಕಿನ ಸಮೀಪಕ್ಕೆ ಚಿತ್ರದುರ್ಗ ಜಿಲ್ಲೆಯಿದೆ. ಉಳಿದಭಾಗ ಆಂಧ್ರ ಪ್ರದೇಶದ ಅನಂತಪುರಜಿಲ್ಲೆ, ಮಡಕಶಿರ· ದಿಂದ ಆವೃತವಾಗಿದೆ.ಬೆಟ್ಟದ ಸಾಲುಗಳಿಂದ ಕಂಗೊಳಿಸುವ ಪಾವಗಡಬೆಟ್ಟಗಳ ಬಹುಭಾಗ ಬೃಹತ್ ಬಂಡೆಗಳಿಂದ ಹಿಡಿದು ಸಣ್ಣಪ್ರಮಾಣದ ಬಂಡೆಗಳಿಂದ ಕೂಡಿವೆ. ಈ ಶಿಲಾ ಬೆಟ್ಟಗಳು ವಾತವರಣದಲ್ಲಿ ಹೆಚ್ಚುವ ಉಷ್ಣತೆಗೆ, ಒಣಹವೆಗೆ ತಮ್ಮದೇ ಕೊಡುಗೆ ನೀಡಿದೆ.ಬೆಟ್ಟಗಳಲ್ಲಿ ಸಸ್ಯಸಂಪತ್ತು ವಿರಳವಾಗಿದೆ. ವಿಶಾಲ ಮೈದಾನಗಳಿಂದ ಕೂಡಿರುವ ಈ ಭಾಗದಲ್ಲಿ ಕೆಂಪು, ಕಪ್ಪು, ಮರಳು ಮಿಶ್ರಿತ ಮಣ್ಣಿದೆ. ಇಲ್ಲಿನ ವಾಯುಗುಣ ಉಷ್ಣವಲಯದ ಮಾನ್ಸೂನ್ ಮಾದರಿಯದು.ಜೂನ್‌ನಿಂದ ಆಗಸ್ಟ್‌ವರೆಗೆ ಮಳೆಗಾಲವೆನಿಸಿದ್ದು, ಡಿಸೆಂಬರ್‌ನಿಂದ ಫೆಬ್ರವರಿವರೆಗೆಚಳಿಗಾಲವಿರುತ್ತದೆ.ಉಳಿದಂತೆ ಅಧಿಕ ಉಷ್ಣದಿಂದ ಕೂಡಿದ ಬಿಸಿ ವಾತವರಣವಿರುತ್ತದೆ.ಗರಿಷ್ಠ 40^{0}ಉಷ್ಣಾಂಶವೂ ದಾಖಲಾಗಿರುತ್ತದೆ. 2011 ರ ಗಣತಿಯಂತೆ ವಾಡಿಕೆ ಮಳೆ 39.8 ಮಿಮೀ ವಾಸ್ತವಿಕ ಮಳೆ 27.4 ಮಿಮೀ ಆಗಿದ್ದು ಕೃಷಿಚಟುವಟಿಕೆಗಳೆಲ್ಲಾ ಬಹುಪಾಲು ಮಳೆಯನ್ನೇ ಆಧರಿಸಿದೆ. ತಾಲ್ಲೂಕು ಅತೀ ಕಡಿಮೆ ಬೀಳುವ ಪ್ರದೇಶವಾಗಿರುವುದರಿಂದ ಬರಪೀಡಿತ ಪ್ರದೇಶವೆಂಬ ಕುಖ್ಯಾತಿಗೆ ಒಳಗಾಗಿದೆ. ಮಳೆಯ ಅಭಾವ ಮತ್ತು ಕೊಳವೆ ಬಾವಿಗಳಿಂದ ಅಂತರ್ಜಲಮಟ್ಟವು ಕುಸಿದಿದೆ. ಮಳೆಗಾಲದಲ್ಲಿ ಕಡಲೆಕಾಯಿ, ತೊಗರಿ, ಹುರುಳಿ, ಹೆಸರು, ರಾಗಿ, ಅಲಸಂದೆ, ಅವರೆಗಳನ್ನು ಬಿತ್ತನೆ ಮಾಡಲಾಗುತ್ತದೆ. ತಾಲ್ಲೂಕು ಶೇಂಗಾ ಬೆಳೆಗೆ ಹೆಸರುವಾಸಿಯಾಗಿದೆ. ಅರಳು, ಸೂರ್ಯಕಾಂತಿ ವಾಣಿಜ್ಯ ಬೆಳೆಗಳ ಜೊತೆಗೆ ಬಾಳೆ, ಮಾವು ನಿಂಬೆ, ಸೀಬೆ, ದ್ರಾಕ್ಷಿ,ಸಪೋಟ, ದಾಳಿಂಬೆ ಹಣ್ಣುಗಳನ್ನು ಬೆಳೆಯಲಾಗುತ್ತದೆ. ಬದನೆ, ಈರುಳ್ಳಿ

ಹಸಿಮೆಣಸಿನಕಾಯಿ,ಹುರುಳಿ, ಟಮೋಟ ಮುಖ್ಯ ತರಕಾರಿ ಬೆಳೆಗಳಾಗಿವೆ. ಹುಣಸೇಹಣ್ಣು ಈ ಭಾಗದಲ್ಲಿ ಹೇರಳವಾಗಿ ಬೆಳೆಯಲಾಗುತ್ತದೆ. ರೇಷ್ಮೆ ಮತ್ತು ಎಣ್ಣೆಕಾಳುಗಳು ಮುಖ್ಯ ವಾಣಿಜ್ಯ ಬೆಳೆಗಳಾಗಿವೆ. ಮೀನುಗಾರಿಕೆ ಈ ಭಾಗದಲ್ಲಿ ವಿರಳವಾಗಿ ಇದೆ.

ತಾಲ್ಲೂಕಿನಲ್ಲಿ ನೈಸರ್ಗಿಕವಾಗಿ ಸಮೃದ್ಧವಾದ ಸಸ್ಯಸಂಪತ್ತಿನ ಮೂಲಗಳಿಲ್ಲ. ಅಮೂಲ್ಯ ಅರಣ್ಯ ಉತ್ಪನ್ನಗಳು ವಿರಳ. ನದೀಮೂಲಗಳು ಇಲ್ಲವೇ ಇಲ್ಲ. ಒಣ ಭೂಪ್ರದೇಶದಿಂದ ಕೂಡಿರುವ ಇಲ್ಲಿನ ಸಸ್ಯಸಂಪತ್ತಿನಲ್ಲಿ ಹೆಚ್ಚಿನದು ಮಾನವನಿರ್ಮಿತವಾದ ರಕ್ಷಿತ ಅರಣ್ಯ.ಇದನ್ನು ಬಿಟ್ಟರೆ ಬೆಟ್ಟ ಗುಡ್ಡಗಳಲ್ಲಿ ತೆಳುವಾದ ಸಸ್ಯಸಂಪತ್ತಿದೆ.9218.98 ಹೆಕ್ಟೇರ್‌ನಷ್ಟು ತಾಲ್ಲೂಕಿನಲ್ಲಿ ಅರಣ್ಯಪ್ರದೇಶವಿದೆ. ಹಾಗೂ ಸಾಮಾಜಿಕ ಅರಣ್ಯಪ್ರದೇಶ 223 ಹೆಕ್ಟೇರ್‌ನಷ್ಟಿದೆ.ಇತ್ತೀಚೆಗೆ 1.6 ಲಕ್ಷ ಸಸಿಗಳನ್ನು ನೆಡಲಾಗಿದೆ.ಇಂದು ಬೆಟ್ಟ-ಗುಡ್ಡಗಳನ್ನು ವ್ಯವಸಾಯದ ಭೂಮಿಗಳನ್ನಾಗಿ ಪರಿವರ್ತಿಸುತ್ತಿರುವುದರಿಂದ ಅವು ನೆಲಸಮವಾಗುತ್ತಿವೆ.

ತಾಲ್ಲೂಕಿನಲ್ಲಿ ಯಾವುದೇ ನದೀ ಮೂಲಗಳಿಲ್ಲ. ಕೆಲವೇ ಕಿ.ಮೀ ಹರಿಯುವ ಉತ್ತರ ಪಿನಾಕಿನಿ ನದಿಯು ಮುಂದುವರಿದು ಆಂಧ್ರದ ಅನಂತಪುರ ಜಿಲ್ಲೆಯ ಪೆನ್ನಾರ್ ನದಿಯನ್ನು ಸೇರುತ್ತದೆ. ಈ ಭಾಗದಲ್ಲಿ ಯಾವುದೇ ನಾಲಾ ನೀರಾವರಿಯಾಗಲಿ, ಕಾಲುವೆಗಳಾಗಲೀ ಇಲ್ಲ. ನೀರಾವರಿಗಾಗಿ ತಾಲ್ಲೂಕು ಕೆರೆ, ಕೊಳವೆ ಬಾವಿಗಳನ್ನೇ ಅವಲಂಬಿಸಿದೆ.ಈ ಕೆರೆ, ಬಾವಿಗಳಿಗೆ ಮಳೆ ನೀರೆ ಆಧಾರ.125 ಕೆರೆಗಳು, 4806 ಬಾವಿಗಳಿಂದ 415 ಹೆಕ್ಟೇರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವಾಗಿದೆ.

ತಾಲ್ಲೂಕಿನಲ್ಲಿ ಖನಿಜ ಸಂಪತ್ತು ವಿರಳವಾಗಿದೆ. Sillimante ಮತ್ತು micagneisses ಖನಿಜಗಳು 5% ದೊರೆತಿವೆ. ಇತ್ತೀಚೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ವಜ್ರದ ನಿಕ್ಷೇಪವನ್ನು ಪತ್ತೆಹಚ್ಚುತ್ತಿದೆ.

2011 ರ ಜನಗಣತಿಯಂತೆ ತಾಲ್ಲೂಕಿನ ಜನಸಂಖ್ಯೆ ಒಟ್ಟು 244072. ಇದರಲ್ಲಿ ಪುರುಷರು 123543 ಇದ್ದರೆ ಮಹಿಳೆಯರು 120529 ಇದ್ದಾರೆ. ದಶಕದ ಬೆಳವಣಿಗೆ ದರ 0.9 ಆಗಿದೆ. ಲಿಂಗಾನುಪಾತ 1000 ಕ್ಕೆ 976 ಆಗಿದೆ. ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಹಿಂದೂಗಳು 234804, ಮುಸ್ಲಿಂಮರು 11021, ಜೈನರು 135, ಸಿಖ್‌ರು 6, ಕ್ರಿಶ್ಚಿಯನ್ನರು 88,ಬೌದ್ಧರು 2 ಇದ್ದಾರೆ.

ತಾಲ್ಲೂಕಿನ ಸಾಕ್ಷರತೆಯು 2011 ರ ಜನಗಣತಿಯಂತೆ 66.58% ರಷ್ಟಿದೆ. ಗ್ರಾಮೀಣ ಪ್ರದೇಶದಲ್ಲಿ ಪುರುಷರ ಸಾಕ್ಷರತೆ 72.25% ರಷ್ಟಿದ್ದರೆ ಮಹಿಳೆಯರು 53.69 ಸಾಕ್ಷರರಾಗಿದ್ದಾರೆ.ನಗರ ಪ್ರದೇಶದಲ್ಲಿ ಪುರುಷರ ಸಾಕ್ಷರತೆ 88.21 ರಷ್ಟಿದ್ದರೆ ಮಹಿಳೆಯರು 75.38 ಸಾಕ್ಷರರಾಗಿದ್ದಾರೆ.

ತಾಲ್ಲೂಕಿನಲ್ಲಿ ಪಾವಗಡ ಒಂದೇ ನಗರ ಪಟ್ಟಣ ಪ್ರದೇಶವಾಗಿದೆ. ಉಳಿದಂತೆ ನಾಲ್ಕು ಹೋಬಳಿಗಳು, ಎರಡು ನಾಡ ಕಛೇರಿಗಳು, ಮೂವತ್ತಮೂರು ಗ್ರಾಮಪಂಚಾಯತಿಗಳು, ನೂರ ನಲವತ್ತೇಳು ಗ್ರಾಮಗಳಿವೆ.ತಾಲ್ಲೂಕಿನಲ್ಲಿ ಯಾವುದೇ ರೈಲು ಮಾರ್ಗಗಳು ಇಲ್ಲ. ರಾಷ್ಟ್ರೀಯ ಹೆದ್ದಾರಿ 37.1 ಕಿ.ಮೀ ರಾಜ್ಯ ಹೆದ್ದಾರಿ 38.1 ಕಿ.ಮೀ ಮುಖ್ಯ ಜಿಲ್ಲಾ ರಸ್ತೆ 342 ಕಿ.ಮೀ ಇತರೆ ಜಿಲ್ಲಾ ರಸ್ತೆ 5.6 ಕಿ.ಮೀ ನಷ್ಟು ಮಾರ್ಗವನ್ನು ಹೊಂದಿದೆ.

ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೆ ಪೂರಕವಾಗಿ ತಾಲ್ಲೂಕಿನಲ್ಲಿ 131 ಪ್ರಾಥಮಿಕ ಶಾಲೆಗಳು, 69 ಪ್ರೌಢಶಾಲೆಗಳಿವೆ. ಪದವಿಪೂರ್ವ ಕಾಲೇಜುಗಳು 16 ಇವೆ. 01 ಸರ್ಕಾರಿ ಪ್ರಥಮದರ್ಜೆ ಕಾಲೇಜು 04 ಖಾಸಗಿ ಪ್ರಥಮದರ್ಜೆ ಕಾಲೇಜುಗಳಿವೆ. ತಾಲ್ಲೂಕಿನಲ್ಲಿ ವೈದ್ಯಕೀಯ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳಿಲ್ಲ.ತಾಲ್ಲೂಕಿನಲ್ಲಿ 8 ಸರ್ಕಾರಿ ಆಸ್ಪತ್ರೆಗಳು, 5 ಖಾಸಗಿ ಆಸ್ಪತ್ರೆಗಳು, 25 ಚಿಕಿತ್ಸಾಲಯಗಳು,ನರ್ಸಿಂಗ್ ಹೋಂ ಗಳಿದ್ದು ಆರೋಗ್ಯ ಸುಧಾರಣೆಗೆ ಸೇವೆಸಲ್ಲಿಸುತ್ತಿವೆ.

ತಾಲ್ಲೂಕಿನಲ್ಲಿರುವ ಪಾವಗಡ ಕೋಟೆ, ನಿಡುಗಲ್ ಕೋಟೆ ಕೊತ್ತಲುಗಳು ಐತಿಹಾಸಿಕ ಮಹತ್ವ ಪಡೆದ ಪ್ರೇಕ್ಷಣೀಯ ಸ್ಥಳಗಳಾಗಿವೆ. ಇಲ್ಲಿನ ಶ್ರೀ ಶನಿಮಹಾತ್ಮದೇವರ ದೇವಾಲಯ. ನಾಗಲಮಡಿಕೆಯ ಶ್ರೀ ಸುಬ್ರಮಣ್ಯಸ್ವಾಮಿ ದೇವಾಲಯ, ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯಗಳು ನಿತ್ಯವೂ ಭಕ್ತರು ಭೇಟಿನೀಡುವ ಮತ್ತು ಆರಾಧನೆಗೊಳ್ಳುತ್ತಿರುವ ಪವಿತ್ರಪುಣ್ಯಕ್ಷೇತ್ರವೂ ಆಗಿವೆ. ಪಾವಗಡ ತಾಲ್ಲೂಕಿನಲ್ಲಿ ಸ್ವತಂತ್ರ ಸಂಸ್ಥಾನಗಳಾಗಿ,ಸಾಮಂತರಾಗಿ, ಪಾಳೇಗಾರರಾಗಿ ಆಡಳಿತ ನಡೆಸಿದ ಕುರುಹುಗಳಾಗಿ ಪಾವಗಡ ಕೋಟೆ, ನಿಡುಗಲ್ ಕೋಟೆಗಳು ಕಂಗೊಳಿಸುತ್ತವೆ. ನಿಡುಗಲ್ ಕೋಟೆ ಅಥವಾ ನಿಡುಗಲ್ ದುರ್ಗವು ಕರ್ನಾಟಕದಲ್ಲಿಯೇ ದುರ್ಗಮವಾದ ಕೋಟೆಯಾಗಿತ್ತೆಂದು ಶಾಸನಗಳಲ್ಲಿ ವರ್ಣನೆ ಇದೆ. ಇಲ್ಲಿ ಏಳು ಸುತ್ತಿನ ಕೋಟೆಯಿದ್ದುದಕ್ಕೆ ಸಾಕ್ಷ್ಯಗಳಿವೆ. ಕ್ರಿ.ಶ 11 ರಿಂದ 18 ನೇ ಶತಮಾನದವರೆಗೂ ಇಲ್ಲಿ ನಿಡುಗಲ್ಲು ಪಾಳೆಯಗಾರರು, ವಿಜಯನಗರದ ಅರಸರು, ಚೋಳರು ಆಳ್ವಿಕೆ ನಡೆಸಿದ್ದಾರೆ. ವಿಸ್ತಾರವಾದ ಕೋಟೆಯ ಗೋಡೆಯು ದಪ್ಪವಾಗಿದ್ದು ಅಭೇದ್ಯವಾಗಿವೆ. ಕೋಟೆಯೊಳಗೆ ಕಲ್ಲೇಶ್ವರ, ನಗರೇಶ್ವರ, ಭೈರವೇಶ್ವರ, ನರಸಿಂಹ, ವೀರಭದ್ರ ಮೊದಲಾದ ದೇವಾಲಯಗಳಿವೆ. ಪಾವಗಡದ ಬಾಗಿಲು, ಸಿಂಗಾರದ ಬಾಗಿಲು, ಸೀಲಮಯ್ಯನ ದಿಡ್ಡಿ ಮೊದಲಾದ ಕೋಟೆಯ ಬಾಗಿಲುಗಳಿವೆ. ಕೋಟೆ ತುದಿಯಲ್ಲಿ ಬಸವನ ಮಂಟಪವಿದೆ.ಈ

ಮಂಟಪವನ್ನು ಕ್ರಿ.ಶ 1653 ರಲ್ಲಿ ಓಬಣ್ಣನಾಯಕನು ನಿರ್ಮಿಸಿದನು.ಕೋಟೆಯ ಮಧ್ಯಭಾಗದಲ್ಲಿ ಹಾಸಿಗೊಂಡಿರುವ ಹಲವು ದೇವಾಲಯಗಳಿವೆ. ಬೆಟ್ಟದಲ್ಲಿ ಕಾಳಹಸ್ತೀಶ್ವರ ಫಿರಂಗಿ ಮತ್ತು ಬೃಹತ್ತಾದ ಎರಡು ಆಳವಾದ ಕಣಜ, ದೊಡ್ಡ ನೀರಿನ ಕೊಳ ದರ್ಬಾರಿನ ಜಾಗಗಳಿವೆ. ಕ್ರಿ.ಶ 1115 ರಲ್ಲಿ ನಿರ್ಮಿತವಾದ ನಗರೇಶ್ವರ ದೇವಾಲಯವು ದುರ್ಗದ ಮಧ್ಯಭಾಗದಲ್ಲಿದೆ. ಕೋಟೆಯ ಒಳಭಾಗದಲ್ಲಿ ವಿಸ್ತಾರವಾದ ಪ್ರದೇಶವಿರುವುದು ಒಂದು ಕಾಲಕ್ಕೆ ಈ ಭಾಗದಲ್ಲಿ ಗ್ರಾಮವು ಅಸ್ತಿತ್ವದಲ್ಲಿರುವುದನ್ನು ತಿಳಿಸುತ್ತದೆ.

ಪಾವಗಡ ಕೋಟೆಯನ್ನು ಕ್ರಿ.ಶ 1405 ರಲ್ಲಿ ವಿಜಯನಗರದ ಅರಸ ಒಂದನೇ ದೇವರಾಯನ ಸಾಮಂತ ಪಾರ್ಥೀವ ಗೋಪಣ್ಣ ಎಂಬುವನು ನಿರ್ಮಿಸಿದನು.ಸುಮಾರು ಹತ್ತು ಬಾಗಿಲುಗಳನ್ನು ಹೊಂದಿರುವ ಕೋಟೆ ಚಿಕ್ಕದಾದರೂ ಆಕರ್ಷಣೀಯವಾಗಿದೆ. ಈ ಭದ್ರವಾದ ಕೋಟೆಯೊಳಗೆ ಕಮ್ಮಾರ ಮಂಟಪ, ಬೆಟ್ಟದ ಆಂಜನೆಯ, ಕೊನೇರಿ, ದೊಣೆ, ಸುಲ್ತಾನ್ ಬತೇರಿ, ಸುಬ್ಬರಾಯ ಬತೇರಿ, ನಿಡುಗಲ್ಲು ಬತೇರಿ, ಭೀಮನ ದೊಣೆ ಸುಂದರವಾಗಿದ್ದು ಚಾರಣಿಗರ ಸ್ವರ್ಗವೆನಿಸಿವೆ.

ಶ್ರೀ ಶನಿಮಹಾತ್ಮದೇವಾಲಯ ಕರ್ನಾಟಕ ಮತ್ತು ಹೊರರಾಜ್ಯಗಳಲ್ಲಿಭಕ್ತರನ್ನು ಹೊಂದಿರುವ ಪ್ರಸಿದ್ಧವಾದ ದೇವಾಲಯ.ಈ ದೇವಾಲಯದ ಕಾರಣದಿಂದ ಪಾವಗಡ ಧಾರ್ಮಿಕ ಪುಣ್ಯಕ್ಷೇತ್ರವೆನಿಸಿದೆ.1955 ರಲ್ಲಿ ಈ ದೇವಾಲಯ ನಿರ್ಮಾಣವಾಯಿತು.ದೇವಾಲಯದ ಪ್ರಾಂಗಣದಲ್ಲಿಯೇ ನವಗ್ರಹಗಳು, ಗಣಪತಿ, ಲಕ್ಷ್ಮೀ, ಸತ್ಯನಾರಾಯಣ ದೇವರುಗಳ ಸಣ್ಣ ಗುಡಿಗಳು ದೇವಾಲಯದ ಪ್ರಾಂಗಣದಲ್ಲಿವೆ. ದೇವಾಲಯ ವಿಶಾಲವಾಗಿದ್ದು ಸುಂದರವಾಗಿದೆ.ತಾಲ್ಲೂಕಿನ ಹೃದಯ ಭಾಗದಲ್ಲಿ ದೇವಾಲಯ ಸ್ಥಾಪನೆಗೊಂಡಿದೆ.ಜನವರಿ ಫೆಬ್ರವರಿ ತಿಂಗಳ ಅವಧಿಯಲ್ಲಿ ಆರು ದಿನಗಳಕಾಲ ಜಾತ್ರೆಯು ವಿಜೃಂಭಣೆಯಿಂದ ನಡೆಯುತ್ತದೆ.

ಪಾವಗಡದಿಂದ 18 ಕಿ.ಮೀ ದೂರದಲ್ಲಿರುವ ನಾಗಲಮಡಿಕೆಯ ಶ್ರೀ ಸುಬ್ರಮಣ್ಯಸ್ವಾಮಿ ದೇವಾಲಯ ದೇಶದ ಗಮನ ಸೆಳೆದಿರುವ ಪ್ರತಿಷ್ಠಿತ ದೇವಾಲಯವಾಗಿದೆ. ನಾಗರಾಧನೆಯ ಹಿನ್ನೆಲೆಯಲ್ಲಿ ನಾಗಪೂಜೆ, ನಾಗಪ್ರ ತಿಷ್ಠಾಪನಾ ಪೂಜಾ ಕಾರ್ಯಗಳಿಗಾಗಿ ರಾಜ್ಯದ ಹೊರಭಾಗದಿಂದಲೂ ಭಕ್ತರು ಕ್ಷೇತ್ರಕ್ಕೆ ಆಗಮಿಸುತ್ತಾರೆ.ದೇವಾಲಯದ ಸಮೀಪ ಉತ್ತರ ಪಿನಾಕಿನಿ ನದಿ ಹರಿಯುತ್ತದೆ.ಡಿಸೆಂಬರ್ ಜನವರಿ ತಿಂಗಳಲ್ಲಿ ಸುಮಾರು ಹತ್ತು ದಿನಗಳ ಕಾಲ ನಾಗಾರಾಧನೆ ಮತ್ತು ಜಾತ್ರೆಗಳು ವಿಜೃಂಭಣೆಯಿಂದ ನಡೆಯುತ್ತವೆ. ಜಾತ್ರೆಯ ಸಂದರ್ಭದಲ್ಲಿ ಭಕ್ತರು ಎಂಜಲು ಎಲೆಯ ಮೇಲೆ ಉರುಳುವುದು ಇತ್ತೀಚೆಗೆ ವಿವಾದಕ್ಕೆ ಒಳಗಾಗಿದೆ. ಇವುಗಳೇ ಅಲ್ಲದೆ ದೇವರ ಬೆಟ್ಟ, ಕರಿಯಮ್ಮ ದೇವಿ, ಗಾಳಿ ಆಂಜನೇಯ, ಅಕ್ಕಮ್ಮನ ಬೆಟ್ಟದ ಅಕ್ಕಮಹಾದೇವಿ, ಹರಿಹರಾಪುರದ ಶ್ರೀ

ಸಿದ್ದೇಶ್ವರ ಸ್ವಾಮಿ, ಕಾವಲಮ್ಮ, ಎತ್ತಪ್ಪ, ಜುಂಜಪ್ಪ ಮೊದಲಾದ ದೇವಿ- ದೇವತೆಗಳಿಗೆ ಸ್ಥಳೀಯವಾಗಿ ನೆಲೆಸಿರುವ ವಿವಿಧ ಸಮುದಾಯಗಳ ಜನರು ನಡೆದುಕೊಳ್ಳುತ್ತಾರೆ.

ತಾಲ್ಲೂಕಿನ ಕಿಲಾರನಹಳ್ಳಿಯ ತಮಟೆ ವಾದ್ಯ, ಬಂಗಾರ ನಾಯಕನ ಹಟ್ಟಿಯ ಬಯಲಾಟ ಮತ್ತು ಯಕ್ಷಗಾನ, ರಾಜವಂತಿಯ ಡೊಳ್ಳುಕುಣಿತ, ವೈ.ಎನ್ ಹೊಸಕೋಟೆಯ ಡ್ರಂಸೆಟ್ ಕಲಾವಿದರು, ನಾಗಲಮಡಿಕೆಯ ಚಕ್ಕೆ ಭಜನಾ ತಂಡ, ಲಿಂಗದ ಹಳ್ಳಿಯ ಪೌರಾಣಿಕ ನಾಟಕ ತಂಡಗಳು ಜಾನಪದ ಕಲೆ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಪ್ರಸ್ತುತ ಸಿನಿಮಾ ರಂಗದಲ್ಲಿ ತನ್ನದೇಯಾದ ಛಾಪು ಮೂಡಿಸಿರುವ ಪ್ರತಿಭಾನ್ವಿತ ಕಲಾವಿದರಾದ ರಂಗಾಯಣ ರಘು ಈ ತಾಲ್ಲೂಕಿನವರೇ ಆಗಿದ್ದಾರೆ. ಪಾವಗಡ ಪ್ರಕಾಶ್‌ರಾವ್, ರಾಮಚಂದ್ರಪ್ಪ, ವೆಂಕಟರಾಮಪ್ಪ, ಚೆಲುವರಾಜನ್ ಇದೇ ತಾಲ್ಲೂಕಿನವರಾಗಿದ್ದು ಪ್ರಸಿದ್ಧ ವಿದ್ವಾಂಸರೆನಿಸಿದ್ದಾರೆ.

ಕೊನೆ ಟಿಪ್ಪಣಿ

1.ಮೈಸೂರ್ ಸ್ಟೇಟ್ ಗೆಜಿಟಿಯರ್, ತುಮಕೂರ್ ಡಿಸ್ಟ್ರಿಕ್ಟ್, ಪುಟ – 02

2.ಮೈಸೂರ್ ಸ್ಟೇಟ್ ಗೆಜಿಟಿಯರ್, ತುಮಕೂರ್ ಡಿಸ್ಟ್ರಿಕ್ಟ್, ಪುಟ – 36

3. ಮೈಸೂರ್ ಸ್ಟೇಟ್ ಗೆಜಿಟಿಯರ್, ತುಮಕೂರ್ ಡಿಸ್ಟ್ರಿಕ್ಟ್, ಪುಟ –37

4.ತುಮಕೂರು ಜಿಲ್ಲೆಯ ಗ್ರಾಮದೇವತೆಗಳು ಪುಟ – 11

5. ಮೈಸೂರ್ ಸ್ಟೇಟ್ ಗೆಜಿಟಿಯರ್, ತುಮಕೂರ್ ಡಿಸ್ಟ್ರಿಕ್ಟ್, ಪುಟ – 39

ಅಧ್ಯಾಯ 3

ಮೌಖಿಕ ಸಂಸ್ಕೃತಿ ಮತ್ತು ಮಹಿಳಾ ಚರಿತ್ರೆ

ಮಹಿಳಾ ಅಧ್ಯಯನ 19ನೇ ಶತಮಾನದಲ್ಲಿ ಆರಂಭಗೊಂಡ ಅಧ್ಯಯನಶಿಸ್ತು. ಸಾಂಸ್ಕೃತಿಕ ಚರಿತ್ರೆಯಲ್ಲಿ ನಿರ್ಲಕ್ಷಕ್ಕೆ ಒಳಗಾದ ದಮನಿತ ಸಮುದಾಯಗಳು ತಮ್ಮ ಚರಿತ್ರೆಯನ್ನು ಹೊಸದಾಗಿ ಶೋಧಿಸಿಕೊಂಡಂತೆ ಭಾರತೀಯ ಸಮಾಜದ ಒಳಗೆ ಲಿಂಗಬೇಧಕ್ಕೆ ಒಳಗಾದ ಮಹಿಳೆಯರೂ ತಮ್ಮ ಚರಿತ್ರೆಯನ್ನು ಕಟ್ಟಿಕೊಳ್ಳಲು ತೊಡಗಿಸಿಕೊಂಡರು. ಪಾಶ್ಚಾತ್ಯರ ಮಹಿಳಾ ಚಿಂತನೆಗಳು ಮತ್ತು ದೇಸಿ ಸಂಸ್ಕೃತಿಗಳ ಹುಡಕಾಟದಲ್ಲಿ ಕನ್ನಡ ಮಹಿಳಾ ಅಧ್ಯಯನ ತೆರದುಕೊಂಡಿತು. ಇದೇ ಸಂದರ್ಭದಲ್ಲಿ ಸಮಾಜ ವಿಜ್ಞಾನ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನೋವಿಜ್ಞಾನ, ಧಾರ್ಮಿಕ ನಂಬಿಕೆಗಳು ಈ ಮೊದಲಾದ ಜ್ಞಾನಶಿಸ್ತುಗಳು ಮಹಿಳೆಯನ್ನು ತಮ್ಮ ತಮ್ಮ ಅಧ್ಯಯನಗಳ ಹಿನ್ನಲೆಯಲ್ಲಿ ವ್ಯಾಖ್ಯಾನಿಸಿಕೊಳ್ಳವ ಪ್ರಯತ್ನ ಮಾಡಿದವು.ಸಮಾಜ ವಿಜ್ಞಾನ ಮಹಿಳೆಯ ಅಬಲತನವನ್ನು ಗುರುತಿಸಿಕೊಂಡರೆ, ರಾಜ್ಯಶಾಸ್ತ್ರವು ಆಕೆಯನ್ನು ಅಧಿಕಾರ ಕಕ್ಷೆಗೆ ತರಬೇಕೆನ್ನುವ ಒತ್ತಡ ತಂದಿತು.ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಮುಖ್ಯ ಮಾನವ ಸಂಪನ್ಮೂಲವೆಂದು ಪರಿಗಣಿಸಿದ ಅರ್ಥಶಾಸ್ತ್ರ, ಆಕೆಯ ಸ್ಥಿತಿ ಗತಿಗಳ ಸುಧಾರಣೆಗಾಗಿ ಆರ್ಥಿಕ ಯೋಜನೆಗಳನ್ನು ನಿರೂಪಿಸಿತು. ಧರ್ಮವೂ ತನ್ನ ಕುರುಡು ನಂಬಿಕೆಗಳಿಂದ ಮಹಿಳೆಯನ್ನು ಘಾಸಿಗೊಳಿಸಿರುವುದನ್ನು ಮನಗೊಂಡು ತನ್ನನ್ನು ಪುನರುಜ್ಜೀವನಗೊಳಿಸಿಕ್ಕೊಳ್ಳುವಂತೆ ವೈಚಾರಿಕತೆಯತ್ತ ಮುಖ ಮಾಡಿತು. ಮನೋವಿಜ್ಞಾನವು ಮಹಿಳಾ ಸಂವೇದನೆಗಳಿಗೆ ಮೂರ್ತ ರೂಪ ನೀಡುವ ಪ್ರಯತ್ನ ಮಾಡಿತು. ಹೀಗೆ ವಿವಿಧ ಜ್ಞಾನಶಿಸ್ತುಗಳ ಮುಖೇನ ನಡೆದ ಮಹಿಳಾ ಅಧ್ಯಯನಗಳು ಬಿಡಿ ಬಿಡಿಯಾಗಿದ್ದವು.ಮಹಿಳೆಯ ಇಡಿಯಾದ ಅಧ್ಯಯನ ಬಹುಮಟ್ಟಿಗೆ ಸಾಧ್ಯವಾಗಿದ್ದು ಸಾಹಿತ್ಯ ಮತ್ತು ಸ್ತ್ರೀವಾದಿ ವಿಮರ್ಶೆಯಿಂದ ಸಮಾಜ ಮತ್ತು ಸಂಸ್ಕೃತಿಗಳ ಪ್ರತಿಬಿಂಬವಾದ ಸಾಹಿತ್ಯದ ಮುಖೇನ ಶೋಧಿತವಾದ ಮಹಿಳೆಯ ಅಸ್ತಿತ್ವದ ನೆಲೆಗಳು ಮಹಿಳಾ ಚರಿತ್ರೆಗೆ ಹೊಸ ಆರಂಭವನ್ನು ತಿರುವನ್ನು ನೀಡಿತು.

ಇದುವರೆಗೆ ಸಾಹಿತ್ಯ ಸಂಸ್ಕೃತಿಗಳಲ್ಲಿ ಲಭ್ಯವಾದ ಸ್ತ್ರೀಮಾದರಿಗಳನ್ನು ವಿವೇಚಿಸಿದ ಮಹಿಳಾ ಅಧ್ಯಯನವು ಈ ಸ್ತ್ರೀಮಾದರಿಗಳನ್ನು ನಿರಾಕರಿಸಿತು. ಏಕೆಂದರೆ "ಸ್ತ್ರೀ ಮಾದರಿಗಳೆಲ್ಲಾ ಸ್ತ್ರೀಯರ ಅಂತರಂಗದ ಬಿಂಬಗಳಲ್ಲಿ ಪುರುಷನ ಮನಸ್ಸಿನ ಆದರ್ಶ"[1] ಆಗಿತ್ತು.ಹೀಗೆ ಪ್ರಜ್ಞಾಪೂರ್ವಕವಾಗಿ ಮಹಿಳಾ ಅಧ್ಯಯನ ತನ್ನನ್ನು ಸರಿಯಾದ ಮಾರ್ಗದಲ್ಲಿ ಸಾಗುತ್ತಿದ್ದೇನೆಯೇ ಎಂದು ಪದೇ ಪದೇ ಪರೀಕ್ಷಿಸಿಕೊಂಡಿತು.ಜೊತೆಗೆ"ಮಾನವನ ಇತಿಹಾಸ ಮಹಿಳೆಯ ಇತಿಹಾಸ ಅಲ್ಲ ಮಹಿಳೆಯ

ಇತಿಹಾಸ ಹೊಸದಾಗಿ ಶೋಧಿತವಾಗಬೇಕಿದೆ"[2] ಎಂಬ ತೀರ್ಮಾನಕ್ಕೆ ಬಂದಿತು.ಮಹಿಳಾ ಅಧ್ಯಯನದ ಮೂಲಕ ತನ್ನ ಅಸ್ತಿತ್ವದ ಹೋರಾಟಕ್ಕೆ, ಪ್ರತಿಭಟನೆಯ ರಚನಾತ್ಮಕ ಪರಿಣಾಮಕ್ಕೆ ಚರಿತ್ರೆಯನ್ನು ಕಟ್ಟಿಕೊಳ್ಳಲು ಹೊರಟ ಮಹಿಳಾ ಸಮುದಾಯ ಹಲವು ತೊಡರುಗಳನ್ನು ಎದುರಿಸಬೇಕಾಯಿತು.ಮೊದಲಿಗೆ ಎದುರಾದ ತೊಡರೆಂದರೆ ಮಹಿಳಾ ಚರಿತ್ರೆಯನ್ನು ಕಟ್ಟಲು ಬೇಕಾದ ಆಕರಗಳ ಲಭ್ಯತೆ.ಸಾಹಿತ್ಯದ ಮುಖೇನ ಒದಗುವ ಆಕರಗಳನ್ನು ಮಹಿಳಾ ಅಧ್ಯಯನ ಮೊದಲಿಗೆ ಬಳಸಿಕೊಂಡಿತು.ಭಾರತೀಯ ಸಮಾಜದಲ್ಲಿ ಮಹಿಳೆ ಬದುಕು ಹೇಗಿತ್ತು ಎಂಬುದಕ್ಕೆ ವಿವಿಧ ಕಾಲಘಟ್ಟದಲ್ಲಿ ಬಂದ ಸಾಹಿತ್ಯವು ಉತ್ತರಿಸಿತ್ತು. ಮಹಿಳೆಯು ತನ್ನ ಸ್ಥಾನ-ಮಾನಗಳು ಹೇಗೆಲ್ಲಾ ಅತಿಕ್ರಮಿಸಲ್ಪಟ್ಟವೆ, ನಿಯಂತ್ರಿಸಲ್ಪಟ್ಟವೆ ಎಂಬುದನ್ನು ಸಾಹಿತ್ಯದ ಮುಖೇನ ಗುರುತಿಸಿಕೊಂಡಳು.

ಸಾಹಿತ್ಯ ಮೂಲಕ ಮಹಿಳಾ ಚರಿತ್ರೆಯನ್ನು ಕಟ್ಟಲು ಹೊರಟ ಮಹಿಳಾ ಅಧ್ಯಯನ ಶಿಷ್ಟ ಸಾಹಿತ್ಯವನ್ನು ಮೊದಲು ವಿಮರ್ಶಿಸಿಕೊಂಡಿತು. ಶಿಷ್ಟ ಸಾಹಿತ್ಯ ಪ್ರಧಾನವಾಗಿ ಪುರುಷಾಧಿಕಾರದಲ್ಲಿದ್ದರಿಂದ ಮತ್ತು ಅವರಿಂದ ನಿರ್ದೇಶಿತವಾದುದರಿಂದ ಅಲ್ಲಿ ಸ್ತ್ರೀತ್ವ ದಮನಕ್ಕೊಳಪಟ್ಟಿದೆ ಎಂಬ ಅರಿವು ಮೂಡಿತು. ಮೌಖಿಕ ಸಂಸ್ಕೃತಿಯು ನಿಸರ್ಗದೊಂದಿಗೆ ಒಡನಾಟದಲ್ಲಿರುವುದರಿಂದ ಅಲ್ಲಿ ಮಹಿಳಾ ಬದುಕು ಹೇಗಿತ್ತು ಎಂದು ತಿಳಿಯುವ ಹಂಬಲ ಹೆಚ್ಚಾಯಿತು.ಮಹಿಳಾ ಅಧ್ಯಯನವು ಮಹಿಳಾ ಚರಿತ್ರೆಯ ವಾಸ್ತವತೆಗೆ ಮೌಖಿಕ ಸಂಸ್ಕೃತಿಯತ್ತ ಮುಖಮಾಡಿದುದರಿಂದ ಮಹಿಳಾ ಅಧ್ಯಯನ ವೈಜ್ಞಾನಿಕತೆಯನ್ನು ಹೊಂದುವಂತಾಯಿತು.ಶಿಷ್ಟ ಸಾಹಿತ್ಯವನ್ನಾಧರಿಸಿ ಸೈದ್ಧಾಂತಿಕರಿಸಿದ ಮಹಿಳಾ ಮಾದರಿಗೂ ಮೌಖಿಕ ಸಂಸ್ಕೃತಿಯಲ್ಲಿ ಬದುಕುತ್ತಿರುವ ಮಹಿಳೆಗೂ ನಡುವಿನ ಅಂತರ ಹೆಚ್ಚಾಗಿಯೇ ಕಂಡುಬಂದಿತು.ಬಹು ಸಂಸ್ಕೃತಿಗಳ ಈ ನಾಡಿನಲ್ಲಿ ಮಹಿಳಾ ಬದುಕುಗಳೆಲ್ಲಾ ಒಂದೇ ರೀತಿಯಾಗಿ ಇಲ್ಲ ಎಂಬ ಸತ್ಯವು ಆಯಾ ಸಂಸ್ಕೃತಿಗಳ ಹಿನ್ನಲೆಯಲ್ಲಿಯೇ ಮಹಿಳಾ ಚರಿತ್ರೆಯನ್ನು ಕಟ್ಟಬೇಕೆನ್ನುವ ಅರಿವು ನೀಡಿತು.ಹೀಗಾಗಿ 1930 ರಿಂದ ಇಂದಿನವರೆಗೂ ಮೌಖಿಕ ಸಾಹಿತ್ಯ, ಆಚಾರ- ವಿಚಾರ, ಧರ್ಮ, ನಂಬಿಕೆಗಳು ಮುಂತಾದವು ಸ್ತ್ರೀ ಪರ ಕಾಳಜಿಯಿಂದ ವಿವಿಧ ಸ್ತರಗಳಲ್ಲಿ ಅಧ್ಯಯನಕ್ಕೊಳಪಟ್ಟವು.

ಮಾನವನ ಅಭಿವ್ಯಕ್ತಿಗಳಲ್ಲಿ ಸಂಸ್ಕೃತಿಯ ಅಭಿವ್ಯಕ್ತಿಗೆ ಚಾರಿತ್ರಿಕ ಮಹತ್ವವಿದೆ " ಸಂಸ್ಕೃತಿ ಎಂದರೆ ಗತಿಸಿರುವ ಜನ ಜೀವನಗಳ ದಾಖಲೆಯಷ್ಟೇ ಅಲ್ಲ ಮಾನವನ ಬದುಕಿಗೆ ನಿರಂತರವಾಗಿ ವ್ಯಕ್ತತೆಯನ್ನು ಒದಗಿಸುತ್ತಿರುವ ಸಂಗತಿಯಾಗಿದೆ."[3] ಮೌಖಿಕ ಸಂಸ್ಕೃತಿಗಳಲ್ಲಿರುವ ಇಂತಹುದೊಂದು ಚಾರಿತ್ರಿಕ ನಡಿಗೆಯಲ್ಲಿ ಮಹಿಳೆಯ ಬದುಕು ಸೇರಿದುದರಿಂದ ಮೌಖಿಕ ಸಂಸ್ಕೃತಿಗಳಲ್ಲಿನ ಮಹಿಳಾ ಅಸ್ತಿತ್ವದ ನೆಲೆಗಳ ಹುಡುಕಾಟವೆ ನಿಜವಾದ ಮಹಿಳಾ ಚರಿತ್ರೆಯ ಆರಂಭ ಎನ್ನುವಂತಾಯಿತು.

ಮೌಖಿಕ ಸಂಸ್ಕೃತಿ ತನ್ನ ಸುತ್ತಲಿನ ಬದುಕನ್ನು ಗ್ರಹಿಸಿ ತನ್ನದೇ ಜ್ಞಾನವನ್ನು ಕಟ್ಟಿಕೊಂಡಿರುತ್ತದೆ. ಈ ಗ್ರಹಿಕೆಯು ಪ್ರಬುದ್ಧವಾಗಿರಬಹುದು, ಪರಿಮಿತಿಗೊಳಪಟ್ಟಿರಬಹುದು ತನ್ನ ಸುತ್ತಲಿನ ಪರಿಸರದೊಂದಿಗೆ ಒಡನಾಡಿ ಗಳಿಸಿಕೊಂಡ ಅನುಭವಗಳ ಹಿನ್ನಲೆಯಲ್ಲಿ ಮೌಖಿಕ ಸಂಸ್ಕೃತಿಯು ತನ್ನ ಗ್ರಹಿಕೆಗೆ ಒಗ್ಗಿದನ್ನು ಹೇಳುವುದು ಮಾತ್ರವಲ್ಲದೆ ತನ್ನ ಗ್ರಹಿಕೆಗೆ ದಕ್ಕದೇ ಇರುವುದನ್ನು ವಿವರಿಸುವ ಪ್ರಯತ್ನ ಮಾಡಿತು. ಮಹಿಳೆಯರ ಮಾತೃತ್ವ, ಪಾತಿವ್ರತ್ಯ, ಋತುಚಕ್ರ ಇವೆಲ್ಲವೂ ಈ ಗ್ರಹಿಕೆಯ ಹಿನ್ನೆಯಲ್ಲಿ ಆಕೆಯ ಸ್ಥಾನ ಮಾನಗಳನ್ನು ನಿರ್ಧರಿಸುವಂತೆ ಮಾಡಿತು.ಹೀಗೆ ಗ್ರಹಿಕೆ ಮತ್ತು ನಿರ್ಧಾರಗಳು ಮೌಖಿಕ ಸಂಸ್ಕೃತಿಯಲ್ಲಿ ಮಹಿಳೆಗೆ ನೀಡಿದ ಸ್ಥಾನ-ಮಾನಗಳ ಅಧ್ಯಯನವು ಆರಂಭವಾಯಿತು. ಮೌಖಿಕ ಪರಂಪರೆಯ ಸಾಂಸ್ಕೃತಿಕ ಸಂಕಥನಗಳೆನಿಸಿದ ಮಹಾಕಾವ್ಯ, ಕಥನಕಾವ್ಯ, ಜನಪದಗೀತೆಗಳ ಮೂಲಕ ಈ ಅಧ್ಯಯನ ಪ್ರವೇಶ ಪಡೆಯಿತು.ನಿಸರ್ಗದೊಂದಿಗೆ ಒಡನಾಟದಲ್ಲಿದ್ದ ಬುಡಕಟ್ಟುಗಳು ಇಂತಹ ಪ್ರವೇಶಕ್ಕೆ ಸಿದ್ಧವಾದವು ಸಾಹಿತ್ಯದೊಂದಿಗೆ, ಸಂಸ್ಕೃತಿ, ಆಚಾರ-ವಿಚಾರ, ಸಂಪ್ರದಾಯ, ರೂಢಿಗಳು- ಈ ಮೊದಲಾದವುಗಳಲ್ಲಿ ಮಹಿಳೆಯ ಸ್ಥಾನವನ್ನು ಸ್ವತಃ ಕಂಡು ದಾಖಲಿಸುವ ಪ್ರಯತ್ನಗಳು ನಡೆದವು. ಇದು ಮಹಿಳಾ ಚರಿತ್ರೆಗೆ ವ್ಯವಸ್ಥಿತ ರೂಪ ನೀಡಿತು. ಈ ಹಿನ್ನಲೆಯಲ್ಲಿ ಕರ್ನಾಟಕ ಮೂಲ ನಿವಾಸಿಗಳಲ್ಲಿ ಒಬ್ಬರಾದ ಕಾಡುಗೊಲ್ಲ ಬುಡಕಟ್ಟಿನ ಮಹಿಳಾ ಸಾಂಸ್ಕೃತಿಕ ಅಧ್ಯಯನವೂ ಮುಖ್ಯವಾಗುತ್ತದೆ.

ಹೀಗೆ ಮೌಖಿಕ ಸಂಸ್ಕೃತಿಗಳಲ್ಲಿ ನಡೆಯುವ ಪ್ರಾಯೋಗಿಕ ಅಧ್ಯಯನಗಳು ಸೈದ್ಧಾಂತಿಕ ಅಧ್ಯಯನಗಳಲ್ಲಿನ ಲೋಪಗಳನ್ನು ಸರಿಪಡಿಸಬಲ್ಲದು.ಸ್ಥಳೀಯ ಮಹಿಳೆಯರ ಸ್ಥಿತಿ-ಗತಿಗಳ ಸಮಸ್ಯೆಗಳಿಗೆ ಸ್ಥಳೀಯವಾದುದರಿಂದಲೇ ಪರಿಹಾರ ಕಂಡುಕೊಳ್ಳಲು ಇಂತಹ ಅಧ್ಯಯನಗಳು ಹೆಚ್ಚು ಪ್ರಯೋಜನಕಾರಿಯಾಗಬಲ್ಲವು.ಜೊತೆಗೆ ಸೈದ್ಧಾಂತಿಕವಾಗಿ ಮಹಿಳೆಯನ್ನು ಅಧ್ಯಯನ ಮಾಡಬಹುದು. ಆಕೆಯ ಬದುಕನ್ನೂ ತಿಳಿದುಕೊಳ್ಳಬಹುದು.ಆದರೆ ವಾಸ್ತವದಲ್ಲಿ ಆಕೆಗೆ ಬೇಕಾದುದನ್ನು ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೌಖಿಕ ಸಂಸ್ಕೃತಿಗಳ ಮೂಲಕವೇ ಪ್ರವೇಶಪಡೆಯುವ ಪ್ರಾಯೋಗಿಕ ಅಧ್ಯಯನಗಳೊಟ್ಟಿಗೆ ಸೈದ್ಧಾಂತಿಕತೆಯು ಸಾಗಬೇಕಾಗುತ್ತದೆ.

ಮಹಿಳಾ ಚರಿತ್ರೆಗೆ ಮೌಖಿಕ ಸಂಸ್ಕೃತಿಗಳಲ್ಲಿನ ಆಕೆಯ ವ್ಯಕ್ತಸ್ವರೂಪ ಮುಖ್ಯವಾಗುತ್ತದೆ. ವರ್ತಮಾನದ ಈ ವ್ಯಕ್ತತೆಗೆ ಗತದಲ್ಲಿ (ಅಡಗಿರುವ) ಅವ್ಯಕ್ತವಾಗಿರುವ ಆಕೆಯ ಚರಿತ್ರೆಯ ಕೊಡುಗೆ ಇರುತ್ತದೆ. ಕಾಡಿನ ಸಮೀಪ ಕಾಡಿನ ಉತ್ಪನ್ನಗಳನ್ನು ನಂಬಿಕೊಂಡು ಬದುಕುವ ಕಾಡುಗೊಲ್ಲ ಬುಡಕಟ್ಟು ತಮ್ಮ ವಿಶಿಷ್ಟ ಸಂಸ್ಕೃತಿಯಿಂದಾಗಿ ಮೌಖಿಕ ಪರಂಪರೆಯಲ್ಲಿ ಗುರುತಿಸಿಕೊಂಡಿದ್ದಾರೆ. ಈ ಸಂಸ್ಕೃತಿ ಕೃಷಿ ಪೂರ್ವದಲ್ಲಿದ್ದ ಪಶುಪಾಲನ ಸಂಸ್ಕೃತಿಯಾಗಿದ್ದು ಇದರ ಒಳಗೆ ಮಹಿಳೆಯ

ಬದುಕು ಹೇಗಿತ್ತು? ಹೇಗಿದೆ? ಎನ್ನುವುದನ್ನು ಕಾಡುಗೊಲ್ಲರ ಸಾಂಸ್ಕೃತಿಕ ಬದುಕು ವ್ಯಕ್ತಪಡಿಸುತ್ತಿರುತ್ತದೆ.ಇದನ್ನು ಗಮನಿಸಿದರೆ ಮಹಿಳಾ ಬದುಕು ಮುಕ್ತವಾಗಿರದೆ ಸಂಸ್ಕೃತಿಯ ಹಿಡಿತದಲ್ಲಿ ಬಂಧಿಸಿರುವುದನ್ನು ಕಾಣಬಹುದು. ಉದಾಹರಣೆಗೆ ಕಾಡುಗೊಲ್ಲರ 'ಅಲಗು ಆರಾಧನೆ' ಸತ್ತ ಹಿರಿಯರ, ಸಾಂಸ್ಕೃತಿಕ ವೀರ ಪುರುಷರ ಆರಾಧನೆ, ಪಿತೃ ಆರಾಧನೆಯನ್ನು ತಿಳಿಸುತ್ತದೆ. 'ಗೊಲ್ಲಕಡಗ' ಕಾಡುಗೊಲ್ಲ ಮಹಿಳೆ ಗಂಡನನ್ನು ಕಳೆದುಕೊಂಡರೂ ಶ್ರೀಕೃಷ್ಣನನ್ನೇ ಗಂಡ ಎಂದು ಭಾವಿಸಿ ವಿಧವಾಚರಣೆಯನ್ನು ಕೈಬಿಟ್ಟಿರುವುದರ ಬಗ್ಗೆ ತಿಳಿಸುತ್ತದೆ.ಈ ಆಚರಣೆ ಪ್ರಗತಿಪರವಾದದು ಎಂದು ಕಾಡುಗೊಲ್ಲರು ಹೆಮ್ಮೆಪಟ್ಟುಕೊಳ್ಳುತ್ತಾರೆ.ಇತರೆ ಸಂಸ್ಕೃತಿಗಳು ವಿಧವೆಯರನ್ನು ನಡೆಸಿಕೊಂಡಿರುವುದಕ್ಕಿಂತ ಇದು ಉತ್ತಮ ಎನಿಸಿದರೂ ವಿಧವಾ ವಿವಾಹದ ಅವಕಾಶವನ್ನು ಈ ಸಾಂಸ್ಕೃತಿಕ ಆಚರಣೆ ನಿಯಂತ್ರಿಸಿದೆ. ಹೀಗೆ ಮೌಖಿಕ ಸಂಸ್ಕೃತಿಯೊಳಗಿನ ಹಲವು ಸಂಗತಿಗಳು ಮಹಿಳೆಯರ ಸಾಂಸ್ಕೃತಿಕ ಸಂಕಥನವೇ ಆಗಿವೆ.

ಮೌಖಿಕ ಸಂಸ್ಕೃತಿಗಳಲ್ಲಿ ಮಹಿಳೆಯರ ಪಾತ್ರವೇ ಗಣ್ಯವಾಗಿರುತ್ತದೆ. ಶಿಷ್ಟ ಮತ್ತು ಮೌಖಿಕ ಸಂಸ್ಕೃತಿಗಳೆರಡರಲ್ಲೂ ಅದರ ವಾಹಕತೆ ಸಾಧ್ಯವಾಗಿರುವುದು ಮಹಿಳೆಯರಿಂದ. ಸಾಮಾಜಿಕ ಬದುಕಿನಲ್ಲಿ ಮಹಿಳೆಯು ಅಬಲೆಯಾಗಿದ್ದರೂ ದಮನಿತಳಾಗಿದ್ದರೂ ನಿರ್ಲಕ್ಷಿತಳಾಗಿದ್ದರೂ ಸಂಸ್ಕೃತಿಯಲ್ಲಿ ಮಾತ್ರ ಆಕೆ ಉಚ್ಚಸ್ಥಾನವನ್ನು ಪಡೆದಿರುತ್ತಾಳೆ.ದೇವತೆಯಾಗಿ ಆರಾಧಿಸಲ್ಪಡುತ್ತಾಳೆ. ಉದಾಹರಣೆಗೆ ಕಾಡುಗೊಲ್ಲ ಬುಡಕಟ್ಟು ತನ್ನ ಸಂಸ್ಕೃತಿಯ ಹೆಚ್ಚುಗಾರಿಕೆಯನ್ನು ಬ್ರಾಹ್ಮಣನಿಗೆ ತಿಳಿಯಪಡಿಸಬೇಕಾದರೆ "ನಿಮ್ಮಲ್ಲಿ ಹೆಂಗಸ್ರು ಮುಟ್ಟಾದರೆ ಒಳಗೇ ಇರ್ತಾರೆ?ನೀವು ಯಾವಾಗಲೂ ಸೂತಕದವರು" ಎಂದು ಜರಿಯುತ್ತಾರೆ.ಕಾಡುಗೊಲ್ಲ ಮಹಿಳೆಯ ಸೂತಕ ಆಚರಣೆ ಆಕೆಯ ಇಷ್ಟವಾಗಿರದಿದ್ದರೂ ಬುಡಕಟ್ಟಿನ ಸಂಸ್ಕೃತಿ ರೂಪಿಸಿದ್ದರಿಂದ ಪಾಲಿಸಬೇಕಾಗಿರುತ್ತದೆ.ಕೊಂಡವಾಗಿ ದೇವಿಯ ಸ್ಥಾನಕ್ಕೇರುವ ಮಹಿಳೆಗೂ.ಸಂಸ್ಕೃತಿಯ ಕಾವಲುಗಾರಳಂತೆ ದುಡಿಯುವ ಮಹಿಳೆಯ ನಡುವಿನ ಅಂತರ ಹೆಚ್ಚಾಗಯೇ ಇದೆ.ಹಟ್ಟಿಯ ಆಚೆಗಿದ್ದು ವಾರ- ತಿಂಗಳುಗಳ ಕಾಲ ಸೂತಕವನ್ನಾಚರಿಸುವ ಮಹಿಳೆಯರು ಸ್ವತಃ ಅನುಭವಗಳು ಈ ಸಂಸ್ಕೃತಿಯ ಹೆಚ್ಚುಗಾರಿಕೆಯನ್ನು ಒಡೆಯಬಲ್ಲವಾಗಿವೆ.

ಮಹಿಳಾಅಧ್ಯಯನವಲ್ಲಿ ಇಂದು ಮಹಿಳೆಯರಷ್ಟೇ ಅಲ್ಲದೆ ಪುರುಷರು ತಮ್ಮ ಬರವಣಿಗೆಯಲ್ಲಿ ಮಹಿಳಾ ಸಂವೇದನೆಯನ್ನು ಸಮರ್ಥವಾಗಿ ತಂದಿದ್ದು ಮಹಿಳಾ ಚರಿತ್ರೆಗೆ ವಿಸ್ತಾರವನ್ನು ತಂದುಕೊಟ್ಟಿತು. "ನಮ್ಮ ಚರಿತ್ರೆ ಅರ್ಧಸತ್ಯಗಳಿಂದ ಕೂಡಿದೆ.ಈಗ" ಹೆಣ್ಣೆಂಬ ಇನ್ನೊಂದು ಕಣ್ಣು ತೆರೆಯುವುದೆಂದರೆ ಗಂಡೆಂಬ ಕಣ್ಣನ್ನು ಮುಚ್ಚುವುದೆಂದು ಯಾರೂ ಭಾವಿಸಬೇಕಾಗಿಲ್ಲ ಅರಿವಿನ ವಲಯಗಳ ವಿಸ್ತರಣೆಯು ಯಾವುದೇ ಹೋರಾಟಕ್ಕೆ

ಅಸ್ತಿಯಾಗಬಾರದು"' ಈ ಅರಿವಿನಿಂದ ಉಂಟಾದ ಬೆಳವಣಿಗೆ ಸುಧಾರಣಾ ಚಳುವಳಿಗಳು ಸುಧಾರಣೆಯ ವಸ್ತುಗಳಂತೆ ಮಹಿಳೆಯರನ್ನು ಭಾವಿಸಿದಕ್ಕಿಂತ ಭಿನ್ನ ಪರಿಣಾಮ ಬೀರಿತು.ಮಹಿಳಾ ಅಧ್ಯಯನ ತನ್ನೆಲ್ಲಾ ಪೂರ್ವಾಗ್ರಹಗಳನ್ನು ಬಿಡಿಸಿಕೊಳ್ಳಲು ನೇರವಾಯಿತು.

ಮೌಖಿಕ ಸಂಸ್ಕೃತಿಯಲ್ಲಿ ಭೌತಿಕ ಮತ್ತು ಮಾನಸಿಕ ಚಹರೆಗಳು ಮುಖ್ಯವಾದವು.ಮಹಿಳಾ ಅಧ್ಯಯನವು ಈ ಎರಡೂ ಚಹರೆಗಳಲ್ಲಿ ಸಾಗಬೇಕಿರುತ್ತದೆ.ಮಾನಸಿಕ ಸ್ತರವೇ ಇಲ್ಲಿಯವರೆಗೆ ಮಹಿಳಾ ಅಧ್ಯಯನದ ಬಹುಪಾಲನ್ನು ಆವರಿಸಿದೆ.ಮಹಿಳಾ ಸಂವೇದನೆಗಳು ಭಾವನೆಗಳು.ಆಕಾಂಕ್ಷೆಗಳಿಗೆ ಮಹಿಳಾಅಧ್ಯಯನ ಮಾತುನೀಡಿತು.ಆ ಮೂಲಕ ಆಕೆಯ ಚಾರಿತ್ರಿಕ ಹೆಜ್ಜೆಗಳನ್ನು ಗುರುತಿಸಿತು. ಸಂಸ್ಕೃತಿಗಳ ಭೌತಿಕಸ್ತರವು ವರ್ತಮಾನದ ಮಹಿಳಾ ಬದುಕನ್ನು ವಿವರಿಸುವುದರಿಂದ ಮಹಿಳಾ ಅಧ್ಯಯನವು ಈ ಭೌತಿಕಸ್ತರವನ್ನು ಮಾನ್ಯ ಮಾಡಬೇಕಾಗುತ್ತದೆ.ಆಹಾರ, ಉಡುಗೆ, ತೊಡುಗೆ. ಕುಟುಂಬ, ಬಂದುತ್ವ ಮೊದಲಾದವು ಮಹಿಳೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚು ನೆರವಾಗುತ್ತವೆ. ಮೌಖಿಕ ಸಂಸ್ಕೃತಿಯಲ್ಲಿ ಭೌತಿಕ ಮತ್ತು ಮಾನಸಿಕಸ್ತರಗಳೆರಡೂ ಮಹಿಳಾ ಚರಿತ್ರೆಯನ್ನು ಕಟ್ಟುವಲ್ಲಿ ಸಮಪಾಲುದಾರವಾಗಿರುತ್ತವೆ.

ಮಹಿಳಾ ಅಧ್ಯಯನಕ್ಕೆ ಸೇರಲ್ಪಟ್ಟ ಸ್ತ್ರೀವಾದಿ ವಿಮರ್ಶೆಯು ಮಹಿಳೆಗೆ ಸಂಬಂಧಿಸಿದ ಸಕಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿತು. ಮಹಿಳಾ ಅಧ್ಯಯನದ ಪ್ರಸ್ತುತತೆಯನ್ನು ಸ್ತ್ರೀವಾದಿ ವಿಮರ್ಶೆ ಒರೆಗೆ ಹಚ್ಚಿತು. ಇದರಿಂದ ಉಂಟಾದ ಫಲಿತಗಳು ನಗರಕೇಂದ್ರಿತ ಮಹಿಳಾ ಬದುಕಿಗೆ ಹೆಚ್ಚು ಫಲದಾಯಕವಾದವು.ಮೌಖಿಕ ಸಂಸ್ಕೃತಿಗಳ ಮಹಿಳೆ ಹೆಚ್ಚಿನ ಬದಲಾವಣೆಗಳಿಲ್ಲದೆ ಹಾಗೆಯೇ ಉಳಿದಳು.ಇದರಿಂದ ಮಹಿಳಾ ಅಧ್ಯಯನ ಮಹಿಳೆಯನ್ನು ಪೂರ್ಣವಾಗಿ ಗ್ರಹಿಸುವುದು ಸಾಧ್ಯವಾಗಿಲ್ಲ.

ಶಿಷ್ಟ ಸಂಸ್ಕೃತಿಗಳಂತೆ ಜನಪದ ಸಂಸ್ಕೃತಿಯು ಮಹಿಳೆಯನ್ನು ನಿರ್ಲಕ್ಷಿಸಿಲ್ಲ, ಶೋಷಿಸಿಲ್ಲ ಈ ಆಶಯಗಳೊಂದಿಗೆ ಜನಪದ ಸಂಸ್ಕೃತಿಯತ್ತ ಮಹಿಳಾ ಅಧ್ಯಯನ ಮುಖಮಾಡಿತು." ಅವೈದಿಕ ಸಂಸ್ಕೃತಿಯ ಅಭಿವ್ಯಕ್ತಿಯಾದ ಜನಪದ ಸಂಸ್ಕೃತಿ ಹೆಂಗಸಿನ ವಿಷಯದಲ್ಲಿ ಅಷ್ಟು ದಮನಕಾರಿಯಾಗಿರಲಿಲ್ಲವೆಂದೇ ನನಗೆ ತೋರುತ್ತದೆ".[5] ಈ ಅನಿಸಿಕೆಗಳು ಜನಪದ ಸಂಸ್ಕೃತಿಯಲ್ಲಿ ಸಿಗಬಹುದಾದ ಸ್ತ್ರೀಮಾದರಿಗಳಿಗೆ ಕಾತುರಗೊಳ್ಳುವಂತೆ ಮಾಡಿದವು. ಜನಪದ ಸಂಸ್ಕೃತಿಯಲ್ಲಿ ಮಹಿಳೆಯ ಸ್ಥಾನ ಮಾನಗಳನ್ನು ಗಮನಿಸಿದಾಗ ವೈದಿಕಶಾಹಿಯಲ್ಲಿಯಂತೆಯೇ ಅವೈದಿಕ ಸಂಸ್ಕೃತಿಯಲ್ಲೂ ಮಹಿಳೆಯು ನಲುಗಿರುವುದು ಕಂಡುಬಂದಿತು. ಜನಪದ ಸಂಸ್ಕೃತಿಯು ಕಾಲಕ್ರಮೇಣ ವೈದಿಕಶಾಹಿಯ ಪ್ರಭಾವಕ್ಕೆ ಒಳಗಾಗಿದ್ದರಿಂದ ಪಿತೃಪ್ರಧಾನತೆಯು ತನ್ನ ಮೊನೆಯಿಂದ ಮಹಿಳೆಯನ್ನು ಹಿಂಸಿಸಿದೆ". "ಬುಡುಕಟ್ಟು ಸಂಪ್ರದಾಯದ ಪಶುಪಾಲನಾ ಹಂತದಲ್ಲಿ ಶಿಷ್ಟ

ಪರಂಪರೆಯ ಆಚರಣೆಗಳು ಪ್ರೇರಣೆಯಾಗಿದ್ದುವೇ ಎಂಬುವನ್ನು ಯೋಚಿಸಬೇಕಾಗುತ್ತದೆ. ಆದರೆ ಇದು ಸರಿಯೇ ಎಂಬ ಪ್ರಶ್ನೆಯು ಸಮಂಜಸವಲ್ಲ. ಏಕೆಂದರೆ ಪರಂಪರೆಯಲ್ಲಿ ಹೊಸತುಗಳು ತುಳಿತಗೊಳ್ಳುತ್ತ ಹಳೆಯದಾದ ಕೆಲವು ನಿರುಪಯುಕ್ತ ಎಂಬ ಅಂಶಗಳು ಮರೆಯಾಗುತ್ತಾ ಹೋಗುತ್ತವೆ. ಹೀಗೆ ಸಂಸ್ಕೃತಿ ವಿಕಸನಗೊಳ್ಳುತ್ತಿರುತ್ತದೆ"[6] ಸಂಸ್ಕೃತಿಯ ವಿಕಾಸಪಥದಲ್ಲಿ ಪಡೆದುಕೊಂಡ ಬದಲಾವಣೆಗಳು ಮಹಿಳೆಯ ಸ್ಥಾನವನ್ನು ಮತ್ತಷ್ಟು ಕೆಳಕ್ಕೆ ತಳ್ಳಿದವು. ಕಾಡುಗೊಲ್ಲ ಬುಡಕಟ್ಟು ಸಮಾಜವು ಪಿತೃ ಪ್ರಧಾನತೆಯನ್ನು ಕಾಲಕ್ರಮೇಣ ತಮ್ಮ ಬದುಕಿಗೆ ಸೇರಿಸಿಕೊಂಡಿರಬಹುದು.ಇದರಿಂದಾಗಿ ಕಾಡುಗೊಲ್ಲ ಮಹಿಳೆಯು ಪಿತೃ ಪ್ರಧಾನ ವ್ಯವಸ್ಥೆಯ ಮಾದರಿಯಲ್ಲೇ ಗೋಚರಿಸುತ್ತಾಳೆ.

ಮೌಖಿಕ ಸಂಸ್ಕೃತಿಯ ಸಂಕಥನಗಳಲ್ಲಿ ಮಹಿಳೆಯ ಸ್ವತಂತ್ರ ನೆಲೆಗಳಿಗಿಂತ ಹೆಚ್ಚಾಗಿ ದಮನಿತ ನೆಲೆಗಳೇ ಇವೆ. ವೈದಿಕಶಾಹಿಯ ಸಂಪರ್ಕವಿಲ್ಲದಾಗೂ ಜನಪದ ಸಂಸ್ಕೃತಿಯಲ್ಲಿ ಹೆಣ್ಣು ಹೆಚ್ಚು ಸ್ವತಂತ್ರಳು, ಅವಳೇ ಅಧಿಕಾರದ ಕೇಂದ್ರದಲ್ಲಿರುತ್ತಾಳೆ ಎಂಬ ಊಹೆಗೆ ವಾಸ್ತವದಲ್ಲಿ ದೊರೆತ ಆಧಾರಗಳು ಭಿನ್ನವಾಗಿ ಪ್ರತಿಕ್ರಿಯಿಸಿದವು. ಜನಪದ ಸಂಸ್ಕೃತಿಯಲ್ಲೂಪುರುಷನೇ ಅಧಿಕಾರದ ಕೇಂದ್ರದಲ್ಲಿರುವುದು ಕಂಡುಬರುತ್ತವೆ. ಇದೇ ಸಂದರ್ಭದಲ್ಲಿ "ಮೌಖಿಕ ಪರಂಪರೆ ಸಮ್ಮಿಶ್ರ ಬದುಕಿನ ಸಾಂಸ್ಕೃತಿಕ ಸಂಕಥನ ಹಾಗೆಯೆ ಅವ್ಯಕ್ತ ಚರಿತ್ರೆಯ ನಿರೂಪಣೆ. ಇದರಲ್ಲೇ ಭಾರತದ ಅವ್ಯಕ್ತ ಮಹಿಳಾ ಚರಿತ್ರೆ ದಾಖಲಾಗಿರುವುದು. ಮಹಿಳೆಯ ಈ ಚರಿತ್ರೆಯಲ್ಲಿ ಪುರುಷ ಎಂಬುವನು ಆಧುನಿಕ ಮಹಿಳೆಯ ಚಿಂತನೆಯ ಮಾದರಿಯಂತೆ ಇರದಿರುವುದು ವಿಶೇಷ ಎನಿಸುತ್ತದೆ"[7] ಈ ಮಾತುಗಳು ಬೆರಗು ಹುಟ್ಟಿಸುತ್ತವೆ. ಮಹಿಳಾ ಅಧ್ಯಯನವು, ಸ್ತ್ರೀವಾದಿ ವಿಮರ್ಶೆಯು ಮೌಖಿಕ ಸಂಸ್ಕೃತಿಯಲ್ಲಿ ಯಾವುದೇ ಪುರುಷ ಮಾದರಿಗಳನ್ನು ಸೃಷ್ಟಿಸುವುದಿಲ್ಲ. ಸ್ತ್ರೀಪರ ಕಾಳಜಿಯಿಂದ ಪ್ರಶ್ನಿಸಿರುತ್ತವೆ. ಜನಪದ ಸಂಸ್ಕೃತಿಯಲ್ಲೂ ತಾಯಿಯ ಪಾತಿವ್ರತ್ಯ ಪರೀಕ್ಷಿಸುವವರೂ ಪತ್ನಿಯ ಶೀಲಶಂಕಿಸುವ ಪುರುಷ ಸಂಸ್ಕೃತಿಗಳು ಇವೆ. ಮಹಿಳಾ ಅಧ್ಯಯನವು ತನ್ನ ಚರಿತ್ರೆಯನ್ನು ಕಟ್ಟಬೇಕಾದರೆ ವಹಿಸಬೇಕಾದ ಎಚ್ಚರಿಕೆಯನ್ನು ಮೇಲಿನ ಮಾತುಗಳು ತಿಳಿಸುತ್ತವೆ. ಇಲ್ಲದಿದ್ದರೆ ಭ್ರಾಮಕ ಸ್ಥಿತಿಯಲ್ಲಿ ಜನಪದ ಸಂಸ್ಕೃತಿಯನ್ನು, ಮಹಿಳೆಯನ್ನು, ಪುರುಷನನ್ನು ವಿವರಿಸಬೇಕಾಗುತ್ತದೆ.

'ಮಾತೃ ಆರಾಧನೆಯು ಮಹಿಳೆಯರಿಗೆ ಹಿಂದೆ ಇದ್ದ ಉಚ್ಚಸ್ಥಾನವನ್ನು, ಅಧಿಕಾರವನ್ನು ತೋರಿಸುತ್ತದೆ."ತಾಯಿಯ ಹಕ್ಕಿನ ನಿರಾಕರಣೆಯೆ ಆಕೆಯ ಇಂದಿನ ಸ್ಥಿತಿಗೆ ಕಾರಣ.' ಈ ತಿಳುವಳಿಕೆಯ ಕಾರಣದಿಂದ ಮೌಖಿಕ ಪರಂಪರೆಯೊಳಗಿನ ಮಾತೃಪ್ರಧಾನತೆಯ ಬಗ್ಗೆ ಅಧ್ಯಯನಗಳು ನಡೆದು ಅವು ಮಹಿಳಾ ಚರಿತ್ರೆಯ ಮೂಲಕ್ಕೆ ನಡೆಯುವ ಅವಕಾಶ ಕಲ್ಪಿಸಿದವು. "ಜನಪದ ಸಾಹಿತ್ಯ ಕಲೆ ನಂಬಿಕೆ ಆಚರಣೆಗಳಲ್ಲಿ ಹುದುಗಿರುವ ಸ್ತ್ರೀ ಸಂಸ್ಕೃತಿಯ ಸ್ವರೂಪವನ್ನು

ಕೈಗೆಟುಕಿಸಿಕೊಳ್ಳಬೇಕಾಗಿದೆ.ಮಾತೃಪ್ರಧಾನ ಮಾತೃವಂಶೀಯತೆಯ ಹಿನ್ನೆಲೆಯ ಅನೇಕ ಗುರುತುಗಳು ನಮ್ಮ ರೂಢಿ, ನಂಬಿಕೆ ನಡಾವಳಿಗಳಲ್ಲಿವೆ ಮಾತೃ ಮೂಲೀಯತೆ ಮಹಿಳೆಯ ಮುಕ್ತತೆಯನ್ನು, ಸಮಾನತೆಯನ್ನು ಎತ್ತಿಹಿಡಿಯುತ್ತದೆ."[8] ಆದರೂ ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರಲ್ಲಿದ್ದ ಸೃಷ್ಟಿಶಕ್ತಿ ಆಕೆಯನ್ನು ದೈವತ್ವಕ್ಕೆ ಏರಿಸಿತ್ತು.ಮಹಿಳೆಯ ಮಾತೃತ್ವದ ಕಾರಣದಿಂದಲೇ ಆಕೆಗೆ ಕುಟುಂಬದಲ್ಲಿ ಗೌರವದ ಸ್ಥಾನವನ್ನು ನೀಡಿತು.ಅಂದಿನ ಸಮಾಜ ಪುರುಷ ಮತ್ತು ಮಹಿಳೆ ಒಟ್ಟಿಗೆ ಬದುಕುವುದಕ್ಕೆ ಹೆಚ್ಚು ಅವಕಾಶ ನೀಡಿರಲಿಲ್ಲ. ಅದರಿಂದ ಮಹಿಳೆ ಕುಟುಂಬದ ಕೇಂದ್ರವಾಗಿದ್ದಳು ಮುಖ್ಯಳಾಗಿದ್ದಳು.ಎಂದಿನಿಂದ ಕುಟುಂಬದಲ್ಲಿ ಮಹಿಳೆ ಪುರಷರಿಬ್ಬರು ಒಟ್ಟಿಗೆ ಬದುಕುವುದಕ್ಕೆ ಆರಂಭಿಸಿದರೋ ಅಂದಿನಿಂದ ಪುರುಷಾಧಿಕಾರವು ಕುಟುಂಬದೊಳಗಿದ್ದ ಮಹಿಳೆಯರ ಸ್ಥಾನ-ಮಾನಗಳನ್ನು, ಅಧಿಕಾರವನ್ನು ಅಪಹರಿಸಿತು.ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಅಷ್ಟೇನೂ ಸುಖಿಯಾಗಿರಲಿಲ್ಲ.

"ಇಡೀ ದಕ್ಷಿಣ ಭಾರತ ಮೂಲತಃ ಮಾತೃಮೂಲ ಕುಟುಂಬ ವರ್ಗಕ್ಕೆ ಸೇರಿದ್ದು ಎಂಬುದನ್ನು ಅನೇಕ ಅಧ್ಯಯನಗಳು ದೃಢಪಡಿಸಿದೆ. ಪ್ರತಿ ಗ್ರಾಮಗಳಲ್ಲಿ ಇರುವ ನೂರಾರು ಗ್ರಾಮದೇವತೆಯರು ಇದಕ್ಕೆ ಸಾಕ್ಷಿಯಾಗಿದ್ದಾರೆ. ಅಂದರೆ ಹೆಣ್ಣೆ ಮನೆಯ ಯಜಮಾನಿ ಆದರೆ ಬರುಬರುತ್ತಾ ಈ ಮೌಲ್ಯ ಶಿಥಿಲಗೊಂಡು ಪುರುಷ ಪ್ರಧಾನ ಸಮಾಜ ಅಸ್ತಿತ್ವಕ್ಕೆ ಬಂತು"[9] ಇಂದು ಗ್ರಾಮಗಳಲ್ಲಿ ಆರಾಧನೆಗೊಳ್ಳುತ್ತಿರುವ ಗ್ರಾಮದೇವತೆಗಳು ಮಾತೃ ಆರಾಧನೆಯ ಮೂಲವನ್ನು ಹೇಳುವ ಸಾಕ್ಷಿಗಳಾಗುತ್ತವೆ ಎಂಬುದನಿಲ್ಲಿ ಗಮನಿಸಬೇಕಾಗುತ್ತವೆ. ಗ್ರಾಮದೇವತೆಗಳ ಪೂರ್ವ ಕತೆಗಳನ್ನು, ಚರಿತ್ರೆಯನ್ನು ಬೆದಕಿದರೆ ಅವು ಮಾತೃಪ್ರಧಾನತೆಯನ್ನು ಹೇಳದೆ ಪುರುಷಾಧಿಕಾರಕ್ಕೆ ಬಲಿಯಾದ ಮಹಿಳೆಯರನ್ನು ಕುರಿತು ಹೇಳುತ್ತವೆ. "ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ರೂಪುಗೊಂಡು ಮಾತೃದೇವತೆಗಳ ಪ್ರತಿನಿಧಿಗಳಾದ ಗ್ರಾಮದೇವತೆಗಳು ಗ್ರಾಮಗಳಲ್ಲಿ ಆರಾಧನೆಗೆ ಒಳಗಾದವು".[10] ಆದರೆ ಬಹುಪಾಲು ಗ್ರಾಮದೇವತೆಗಳು ಮಾತೃ ಪ್ರಧಾನತೆಯನ್ನು ನಿರೂಪಿಸುವಲ್ಲಿ ಸೋಲುತ್ತವೆ. ಉದಾಹರಣೆಗೆ ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಸೊಣಪಿನಕೆರೆಯ ಮಾರಮ್ಮನನ್ನು ಮಕ್ಕಳನ್ನು ಕರುಣಿಸುವ ದೇವತೆಯನ್ನಾಗಿ ಪೂಜಿಸುತ್ತಾರೆ. ಈ ದೇವತೆಯ ಪೂರ್ವ ಚರಿತ್ರೆಯೇ ಹೀಗಿದೆ. ಊರಿನ ಕೆರೆ ತುಂಬಿದಾಗ ಕೆರೆಗೆ ಬಲಿಕೊಡಲು ತುಂಬಿದ ಬಸಿರಿ ಬೇಕಾಯಿತು. ಊರಿನಯಾರೂ ತಮ್ಮ ಮನೆಯಿಂದ ಯಾರನ್ನು ಬಲಿಕೊಡಲು ಒಪ್ಪಲಿಲ್ಲ. ಊರಿನ ಅಚೆಗದ್ದೆ ಕಾಡುಗೊಲ್ಲ ಬುಡಕಟ್ಟಿನ ಗರ್ಭಿಣಿಯಾದ ಗೊಲ್ಲಮಹಿಳೆ ದಿನವೂ ಹಾಲ ಮೊಸರು ಮಾರಲು ಕೆರೆಯ ಏರಿಮೇಲೆ ನಡೆದು ಬರುತ್ತಿದ್ದಳು. ಈಕೆಯನ್ನೇ ಬಲಿಕೊಡಲು ಊರಿನ ಮುಖ್ಯಸ್ಥರು ತೀರ್ಮಾನಿಸಿದರು. ಆಕೆಗೆ ತಿಳಿಯದಂತೆ ಕೆರೆಯ ಏರಿಯ ಮೇಲೆ ಆಕೆ ಬರುವ ದಾರಿಯಲ್ಲಿ ಹಳ್ಳ ತೆಗೆದು ತಿಳಿಯದಂತೆ ಮುಚ್ಚಲಾಯಿತು. ಎಂದಿನಂತೆ ಗೊಲ್ಲ ಮಹಿಳೆ ಕೆರೆಯ ಏರಿ ಮೇಲೆ

ಒಯುತ್ತಿದ್ದಾಗ ಹಳ್ಳ ಇರುವುದು ತಿಳಿಯದೆ ಅದರೊಳಗೆ ಬಿದ್ದಾಗ ಕಾಯ್ದು ಕುಳಿತಿದ್ದ ಊರಿನ ಗಂಡಸರು ಹಳ್ಳ ಮುಚ್ಚಿ ಕೆರೆಗೆ ಬಲಿಕೊಡುತ್ತಾರೆ. ಕೆಲದಿನಗಳ ನಂತರ ಕೆರೆಯ ಪಕ್ಕದಲ್ಲಿ ಆಕೆ ಮೂಡಿದ್ದಾಳೆ ಎಂದು ಕಲ್ಲಿಗೆ ಮಾರಮ್ಮ ಎಂದು ನಾಮಕರಣ ಮಾಡಿ ಆರಾಧಿಸುತ್ತಾರೆ.[11] ಇಲ್ಲಿ ಆರಾಧನೆಯಾಗುತ್ತಿರುವ ಮಾರಮ್ಮ ದೇವತೆಯು ಯಾವ ಮಾತೃಪ್ರಧಾನತೆಯನ್ನೂ ಹೇಳುವುದಿಲ್ಲ. ಆದ್ದರಿಂದ ಗ್ರಾಮದೇವತೆಗಳು ಮಾತೃ ಮೂಲಿಯವೇ ಎಂಬುದನ್ನು ಮಹಿಳಾ ಅಧ್ಯಯನವು ಅನುಮಾನಿಸಬೇಕಾಗುತ್ತದೆ. ಗ್ರಾಮದೇವತೆಗಳು ಮಾತೃ ಪ್ರಧಾನತೆಯನ್ನು ಹೇಳುವುದಕ್ಕಿಂತ ಹೆಚ್ಚಾಗಿ ಭಾರತೀಯ ಮಹಿಳೆಯರನ್ನು ಪ್ರತಿನಿಧಿಸುತ್ತಾರೆ ಎಂದರೆ ಸರಿಯಾಗುತ್ತದೆ."ಜನಪದ ಪರಂಪರೆಯಲ್ಲಿ ಗ್ರಾಮದೇವತೆಗಳ ಪ್ರತಿನಿಧಿಕರಣೇ ಭಾರತದ ಉದ್ದಕ್ಕೂ ಗ್ರಾಮೀಣ ಮಹಿಳೆಯ ಪ್ರತಿಮೆಯಾಗಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು".[12] ಗ್ರಾಮದೇವತೆಗಳು ಹೆಚ್ಚು ಪಿತೃಸಂಸ್ಕೃತಿಯ ವಾಹಕಗಳಂತೆ ಕಾಣಿಸುತ್ತವೆ. ಆದ್ದರಿಂದ ಮಹಿಳಾ ಚರಿತ್ರೆಯಲ್ಲಿ ಗ್ರಾಮದೇವತೆಗಳು ಹೊಸದಾಗಿ ಅಧ್ಯಯನಗೊಳ್ಳಬೇಕಿದೆ.

ಕೊನೆ ಟಿಪ್ಪಣಿ

1. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ಪು.12
2. ಅದೇ ಪು.10
3. ಅವ್ಯಕ್ತ ಚರಿತ್ರೆ ಲೇ.ಗಣೇಶ ಮೊಗಳ್ಳಿ ಪು.157
4. ಜನಪದದಲ್ಲಿ ಮಹಿಳೆ ಲೇ.ಪುರುಷೋತ್ತಮ ಬಿಳಿಮಲೆ ಪು 117
5. ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ ಪು.224
6. ವಾಲ್ಮೀಕಿ ಸಮುದಾಯ (ಸಂ):ಡಾ.ಮಂಜುನಾಥ ಬೇವಿನಕಟ್ಟಿ
7. ಅವ್ಯಕ್ತ ಚರಿತ್ರೆ ಲೇ.ಗಣೇಶ ಮೊಗಳ್ಳಿ ಪು.157
8. ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ ಲೇ.ವಿಜಯಾದಬ್ಬೆ ಪು.49
9. ದೇಸಿ ಸಂಸ್ಕೃತಿ ಲೇ.ಹಿ.ಚಿ ಬೋರಲಿಂಗಯ್ಯ ಪು 60
10. ಗ್ರಾಮದೇವತೆಗಳು ಲೇ.ಸಿದ್ದಲಿಂಗಯ್ಯ
11. ವಕ್ತೃ ಹೊನ್ನಗಂಗಮ್ಮ ನೊಣವಿನಕೆರೆ/ವಯಸ್ಸು 58/
12. ಅವ್ಯಕ್ತ ಚರಿತ್ರೆ ಲೇ.ಗಣೇಶ ಮೊಗಳ್ಳಿ

ಅಧ್ಯಾಯ 4

ಕಾಡುಗೊಲ್ಲ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧೀಕರಣ

ಕಾಡುಗೊಲ್ಲರು ಸಾಂಸ್ಕೃತಿಕವಾಗಿ ಬೆಳಕು ಪಡೆದದ್ದು 19 ನೇ ಶತಮಾನದ ನಂತರ. ವಸಾಹತು ಸಂಸ್ಕೃತಿಗೆ ದೇಶೀಯ ಸಂಸ್ಕೃತಿಗಳನ್ನು ಮುಖಾಮುಖಿಯಾಗಿಸಿ ತನ್ನತನವನ್ನು ಸಾಬೀತುಪಡಿಸಲು ಹೊರಟ ಭಾರತೀಯತೆಯು ತನ್ನ ನೆಲದಲ್ಲಿ ಅಡಗಿದ್ದ ದೇಶೀಯ ಸಂಸ್ಕೃತಿಗಳ ಹುಡುಕಾಟಕ್ಕೆ ಇಳಿಯಿತು. ಇದರ ಜೊತೆಗೆ ಭಾರತಕ್ಕೆ ಒಂದೇ ಸಂಸ್ಕೃತಿಯೆಂಬ ಸಾಂಸ್ಕೃತಿಕ ಒಡೆತನವನ್ನು ಜನಪದ ಸಂಸ್ಕೃತಿಗಳ ಶೋಧ ಮತ್ತು ಅವುಗಳ ಅಸ್ತಿತ್ವದ ಮೂಲಕ ನಿರಾಕರಿಸುವ ಪ್ರಯತ್ನಗಳು ನಡೆದವು."ಮಾತೆತ್ತಿದರೆ ಭಾರತೀಯ ಸಂಸ್ಕೃತಿಯೆಂದು ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರಬಂದು ಪ್ರತಿಯೊಂದು ಭಾಷೆಯ ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆ. ತನ್ನದೆ ಆದ ಸಂಸ್ಕೃತಿ ಇದೆ ಎಂದು ವಾಸ್ತವದ ನೆಲೆಯಲ್ಲಿ ನೆಲದ ಗುಣ ಹುಡುಕುವ ಕಾರ್ಯಕ್ಕೆ ನಾವೀಗ ಮುಂದಾಗಬೇಕಿದೆ"[1] ಈ ಕಾರಣದಿಂದ ಊರಿನಿಂದ ಹೊರಗೆ ಹಟ್ಟಿ ಸಂಸ್ಕೃತಿಯಲ್ಲಿ ಬದುಕುತ್ತಿದ್ದ ಕಾಡುಗೊಲ್ಲರ ಸಂಸ್ಕೃತಿಯು ಅಧ್ಯಯನಗಳ ಮೂಲಕ ಬೆಳಕು ಪಡೆಯಿತು.

ಕಾಡುಗೊಲ್ಲರ ಸಂಸ್ಕೃತಿಯನ್ನು ಹೇಳುವ ಸಂಗತಿಗಳಲ್ಲಿ ಕಾಡುಗೊಲ್ಲರ ಸಾಹಿತ್ಯಕ್ಕೆ ಸಿಂಹಪಾಲು ಇದೆ. ಕಾಡುಗೊಲ್ಲರ ಮಹಾಕಾವ್ಯವಾದ ಜುಂಜಪ್ಪ, ಪಶುಪಾಲಕವೀರರ ಕಥೆಗಳು, ತ್ರಿಪದಿಗಳು, ಸಾಂಸ್ಕೃತಿಕ ವೀರರ ಗೀತೆಗಳು, ಗಾಥೆಗಳು ಎಲ್ಲವೂ ಕಾಡುಗೊಲ್ಲರ ಸಂಸ್ಕೃತಿಯ ವಿಶೇಷತೆಗಳನ್ನು ಗರ್ಭೀಕರಿಸಿಕೊಂಡಿದೆ. ಈ ಸಂಸ್ಕೃತಿಯ ಅನನ್ಯ ಭಾಗವಾದ ಕಾಡುಗೊಲ್ಲ ಮಹಿಳೆಯ ಸಾಂಸ್ಕೃತಿಕ ಬದುಕು ಈ ಅಂಧಕಾರದ ಗರ್ಭದೊಳಗೆ ಅಡಗಿಕೂತಿದೆ. ಈ ಕಗ್ಗತ್ತಲೆಯಿಂದ ಸಾಂಸ್ಕೃತಿಕ ವಿಶ್ಲೇಷಣೆಯ ಮೂಲಕ ಮಹಿಳಾ ಬದುಕಿನ ಚರಿತ್ರೆಯನ್ನು ಬೆಳಕು ಕಾಣಿಸಬೇಕಿದೆ.

ಕಾಡುಗೊಲ್ಲ ಜನಪದ ಸಾಹಿತ್ಯದಲ್ಲಿ ಈ ಬುಡಕಟ್ಟಿನ ಮಹಿಳಾ ಬದುಕಿನ ಹೆಜ್ಜೆ ಗುರುತುಗಳಿವೆ. ಕಾಡುಗೊಲ್ಲ ಮಹಿಳಾ ಚರಿತ್ರೆಯೆಂದರೆ ಮಹಿಳಾ ಬದುಕಿನ ನೆಲೆಗಳನ್ನು ಶೋಧಿಸಿಕೊಳ್ಳುವುದೇ ಅಗಿದೆ. ಈ ಸಾಹಿತ್ಯವು ಪುರುಷ ನಿರೂಪಕರಿಂದಲೂ, ಮಹಿಳಾ ನಿರೂಪಕರಿಂದಲೂ ನಿರೂಪಿಸಲ್ಪಟ್ಟಿವೆ. ಸಾಹಿತ್ಯ ಈ ಬುಡಕಟ್ಟಿನ ಬದುಕಿನ ಪ್ರತಿಬಿಂಬವಾಗಿರುವುದರಿಂದ ಮಹಾಕಾವ್ಯ, ವೀರಗೀತೆ. ವೀರರ ಕತೆಗಳು, ತ್ರಿಪದಿ ಸಾಹಿತ್ಯದ ಮೂಲಕ ಕಾಡುಗೊಲ್ಲ ಮಹಿಳಾ ಬದುಕಿನ ಹಲವು ನೆಲೆಗಳನ್ನು ಗುರುತಿಸಕೊಳ್ಳಬಹುದಾಗಿದೆ. ಈ

ನೆಲೆಗಳು ಬುಡಕಟ್ಟಿನ ಬದುಕಿನಲ್ಲಿ ಆಕೆಯ ಪ್ರಧಾನ ಮತ್ತು ಅಧೀನ ನೆಲೆಗಳನ್ನು ಶೋಧಿಸಿ ದಾಖಲಿಸುತ್ತದೆ.

ಪುನರ್‌ಸೃಷ್ಟಿ ಜನಪದ ಸಾಹಿತ್ಯದ ಪ್ರಮುಖ ಲಕ್ಷಣ. ಕಂಠಸ್ಥವಾದ ಜನಪದ ಸಾಹಿತ್ಯ ಪ್ರತೀ ಬಾರಿ ಹೇಳುವಾಗಲು ಹೊಸ ಹೊಸ ಪಠ್ಯವಾಗಿ ಹುಟ್ಟು ಪಡೆಯುತ್ತದೆ. ಈ ಪುನರ್‌ಸೃಷ್ಟಿಯ ಸೌಲಭ್ಯ ಜನಪದ ಸಾಹಿತ್ಯವನ್ನು ಜೀವಂತವಾಗಿಸಿದೆ. ಕಾಡುಗೊಲ್ಲ ಜನಪದ ಸಾಹಿತ್ಯವು ಈ ಪುನರ್‌ಸೃಷ್ಟಿಯ ಪ್ರಕಿಯೆಗೆ ಒಳಗಾಗಿರುವುದರಿಂದ ಸಮಕಾಲೀನ ಸಮಾಜದ ಸಂಗತಿಗಳು ಹೊಸದಾಗಿ ಸೇರ್ಪಡೆಯಾಗುತ್ತಲೇ ಇರುತ್ತವೆ. ಆದ್ದರಿಂದ ಸಾಹಿತ್ಯದ ಮೂಲಕ ಮಹಿಳಾ ಚರಿತ್ರೆಯನ್ನು ಕಟ್ಟುವಾಗ ಪರಂಪರೆಯಿಂದ ಸಾಗಿಬಂದ ಜನಪದ ಸಾಹಿತ್ಯದಲ್ಲಿ ಮಹಿಳಾ ಬದುಕು ಅನಾವರಣಗೊಂಡಿರುವುದನ್ನು ಗಮನಿಸಬಹುದಾಗಿದೆ. ಕೆಲವು ಕಾಡುಗೊಲ್ಲರ ಸಾಹಿತ್ಯ ಕೃತಿಗಳನ್ನು ವಿಶ್ಲೇಷಿಸುವ ಮೂಲಕ ಬುಡಕಟ್ಟಿನೊಳಗೆ ಮಹಿಳಾ ಸ್ಥಾನ ಮಾನಗಳನ್ನು ತಿಳಿಯಬಹುದಾಗಿದೆ.

ಜುಂಜಪ್ಪ ಕಾಡುಗೊಲ್ಲ ಬುಡಕಟ್ಟಿನ ಮಹಾಕಾವ್ಯ. ಚೆಲುವರಾಜು ಅವರು ಸಂಪಾದಿಸಿರುವ ಈ ಕೃತಿಯನ್ನು ೧೯೯೭ ರಲ್ಲಿ ಪ್ರಸಾರಂಗದ ಮೂಲಕ ಕನ್ನಡ ವಿಶ್ವವಿದ್ಯಾನಿಲಯ ಪ್ರಕಟಿಸಿತು. ಈ ಕಾವ್ಯವನ್ನು ಮಧುಗಿರಿ ತಾಲ್ಲೂಕಿನ ಮಾಡ್ಗಾನ ಹಟ್ಟಿಯ ದಾಸಪ್ಪ ಹಾಡಿದ್ದಾರೆ. ಈ ಮಹಾಕಾವ್ಯ ಮಹಿಳಾ ಬದುಕಿನ ಹಲವು ಮುಖಗಳನ್ನು ದರ್ಶಿಸುವುದರಿಂದ ಮಹಿಳಾ ಚರಿತ್ರೆಗೆ ಅತಿಮುಖ್ಯವಾದ ದಾಖಲೆಯೂ ಆಗಿದೆ. ಮಾರುಮುತ್ತಣ್ಣ, ಕೆಂಗರು ಮಲ್ಲೇಗೌಡ, ಜುಂಜಪ್ಪ ಮೂರು ತಲೆಮಾರುಗಳ ಕಾಡುಗೊಲ್ಲ ಬುಡಕಟ್ಟಿನ ಬದುಕು ಜುಂಜಪ್ಪನ ಕಾವ್ಯದಲ್ಲಿದೆ. ಈ ತಲಮಾರುಗಳ ಕಥೆಯಲ್ಲಿ ಸಾಂಸ್ಕೃತಿಕ ನಾಯಕರು, ವೀರರು ವಿಜೃಂಭಿಸುತ್ತಿದ್ದರೂ ಮಹಿಳಾ ಬದುಕು ಮೌನವಾಗಿ ತಣ್ಣಗೆ ಸಾಗಿದೆ. ಈ ಮೌನಕ್ಕೆ ಮಹಿಳಾ ಚರಿತ್ರೆ ಮಾತು ನೀಡಬೇಕಿದೆ.

ಮಾರುಮುತ್ತಣ್ಣನ ಹೆಂಡತಿಯಾದ ಸಾತೆಮ್ಮ ಕಾಡುಗೊಲ್ಲ ಮಹಿಳಾ ಬದುಕಿಗೆ ಮಾದರಿಯಗಿದ್ದಾಳೆ. ಮದುವೆ ಮಹಿಳಾ ಬದುಕಿನಲ್ಲಿ ಹಲವು ಪರಿವರ್ತನೆಗಳಿಗೆ ಕಾರಣವಾಗುವ ಸಂಗತಿ. ಮದುವೆಯಲ್ಲಿ ಪುರುಷನಷ್ಟೇ ಮಹಿಳೆಯ ತೀರ್ಮಾನ ಅಭಿಪ್ರಾಯಗಳಿಗೆ ಬೆಲೆ ಇರಬೇಕಾಗುತ್ತದೆ. ಆದರೆ ಸಾತೆಮ್ಮನ ಬದುಕಿನಲ್ಲಿ ಆಕೆಯ ಮದುವೆಯೇ ಅವಳ ಬಾಳಿನ ದುರಂತಕ್ಕೆ ಕಾರಣವಾಗುತ್ತದೆ. ಮಾರುಮುತ್ತಣ್ಣನೊಂದಿಗೆ ಮದುವೆಯಾಗಬೇಕಾದ ಸಾತೆಮ್ಮ ಅವನ ಪ್ರತಿನಿಧಿಯಾಗಿ ಕಳುಹಿಸುವ ಬಾಕಿನೊಂದಿಗೆ ಮದುವೆಯಾಗುತ್ತಾಳೆ. ಸಾತೆಮ್ಮನ ಬಳಗ ಬಾಕಿನೊಂದಿಗೆ ವಿವಾಹಮಾಡಿಕೊಡಲು ನಿರಾಕರಿಸಿದರೂ ಬಾಕಿನ ಅಸಾಮಾನ್ಯ ಶಕ್ತಿಗೆ ತಲೆಬಾಗಿ ಸಾತೆಮ್ಮನನ್ನು ಬಾಕಿಗೆ ಧಾರೆಯೆರೆಯುತ್ತಾರೆ. ಇಷ್ಟಾದರು ಸಾತೆಮ್ಮ ಎಲ್ಲಿಯೂ ಮಾತನಾಡದೆ

ಮೌನವಾಗಿ ಒಪ್ಪುತ್ತಾಳೆ. ಬಾಲನೊಂದಿಗೆ ವಿವಾಹವಾಗಿ ಮಾರುಮುತ್ತಣ್ಣನ ಹೆಂಡತಿಯಾಗಿ ಗಂಡನ ಮನೆಗೆ ಬರುವ ಸಾತೆಮ್ಮ ಮೂರು ವರ್ಷವಾದರೂ ಗಂಡನ ಮುಖವನ್ನೇ ನೋಡುವುದಿಲ್ಲ.

ಮೂರುವರುಷ ಆಯಿತು
ಆಯಮ್ಮನು ಗಂಡನು ಮನೆಗೆಬಂದು
ತವರು ಮನೆಯಿಂದ
ಬರುವಾಗ ಉಟ್ಟಂತ ಹೊಸಸೀರೆ
ಅವತ್ತು ತಲೆಬಾಸಿದ್ದು
ಅವತ್ತು ತಲೆಗೆಣ್ಣೆ ಹಚ್ಚಿದ್ದು
ಅವತ್ತು ಮೈಗೆನಿರಾಕೆದ್ದು
ಅವರಪ್ಪನ ಮನೆಯೊಳಗೆ.

ಮೂರುವರ್ಷಗಳಕಾಲ ಗಂಡನಿಲ್ಲದ ಗಂಡನ ಮನೆಯಲ್ಲಿ ಅತ್ತಿಗೆ ಅಣ್ಣಂದಿರ ಆಳಾಗಿ ದುಡಿಯಲ್ಪಡುವ ಸಾತೆಮ್ಮ ಕಡೆಗೊಮ್ಮೆ ಗಟ್ಟಿ ನಿರ್ಧಾರಕ್ಕೆ ಬಂದು ಗಂಡನನ್ನು ಹುಡುಕುತ್ತಾ ಹೊರಡುತ್ತಾಳೆ. ಗಂಡನಾದ ಮಾರುಮುತ್ತಣ್ಣ ಗೋವುಗಳೊಂದಿಗೆ ಕಾಡಿನಲ್ಲಿಯೇ ಇದ್ದು ಬಿಟ್ಟಿರುತ್ತಾನೆ. ಮಾರುಮುತ್ತಣ್ಣನ ನೆಲೆಯನ್ನು ಅವನ ಅಣ್ಣಂದಿರು ತಿಳಿಸದಿದ್ದಾಗ ಸಾತೆಮ್ಮನೇ ಹುಡುಕುತ್ತಾ ಹೊರಡುತ್ತಾಳೆ. ಆಕೆ ಗಂಡನನ್ನು ಹುಡುಕುವುದು ಶರಣೆ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವುದನ್ನು ನೆನಪಿಸುತ್ತದೆ.

ಕಾರೆಯ ಗಿಡಗಳಿರೋ
ಕವಳೇಯ ಗಿಡಗಳಿರಾ
ನಮ್ಮ ಸ್ವಾಮಿ ಮಾರುಮುತ್ತಣ್ಣ
ದನಗಳ ರೊಪ್ಪ ಎಲ್ಲೈತಿ ಹೇಳಿಕಯ್ಯ

ಎಂದು ಕಾಡಿನೊಳಗೆ ಅಲೆದು ಗಂಡನ ನೆಲೆ ಹುಡುಕುತ್ತಾಳೆ. ಅವನ ಅನುಕಂಪದ ದೃಷ್ಟಿಗೆ ಬಿದ್ದು ಹೆಂಡತಿಯಾಗಿಯು ಸ್ವೀಕೃತವಾಗುತ್ತಾಳೆ. ಕಾಡಿನಲ್ಲಿಯೆ ಇಬ್ಬರು ಸಂಸಾರ ಜೀವನ ನಡೆಸುತ್ತಾರೆ. ಗರ್ಭಿಣಿಯು ಆದ ಸಾತ್ತೆಮ್ಮನಿಗೆ ಮಾರುಮುತ್ತಣ್ಣನು ತೋರುವ ವರ್ತನೆ ಶೋಷಣಾತ್ಮಕನೆಲೆಯದ್ದು

ನಮ್ಮದು ನಂದಗೋಕುಲ
ಹೆರಿಗೆ ಸೂತಕ ನನ್ನ ಮೇಲೆ ಬೀಳಂಗಿಲ್ಲ
ಅಂತೇಳಿ ಆ ಕಡೆ ಹೋಗುಬಿಟ್ಟು

ಆ ಗಿಡದ ಮರೆ ಕುಂತಗಂಜಿಟ್ಟ ಮಾರುಮುತ್ತಣ್ಣ

ಈಯಮ್ಮ ಗುಡಿಸಲೊಳಗೆ ಒಬ್ಬಳೆ ಗೋಳಾಡುತ್ತಾಳೆ.

ಗಂಡನ ನೆರವಿಲ್ಲದೆ ದಿಕ್ಕೆಟ್ಟ ಸಾತೆಮ್ಮ ಶಿವನಲ್ಲಿ ಸಹಾಯಕ್ಕಾಗಿ ಮೊರೆಯಿಡುತ್ತಾಳೆ.ಅವರ ನೆರವಿನಿಂದ ಮಗುವನ್ನೂ ಪಡೆಯುತ್ತಾಳೆ. ಕೆಂಗರು ಮಲ್ಲೆಗೌಡ ಸಾತೆಮ್ಮ ಮಾರುಮುತ್ತಣ್ಣ ದಂಪತಿಗಳ ಮಗ, ತಂದೆಯಂತೆಯೇ ಕೆಂಗರು ಮಲ್ಲೆಗೌಡನ ವರ್ತನೆಗಳಿದ್ದು ತಂದೆಯ ಒತ್ತಾಯಕ್ಕೆ ಮಣಿದು ಚಿನ್ನಮ್ಮನನ್ನು ಮದುವೆಯಾಗುತ್ತಾನೆ. ಮದುವೆಯಾದ ಕ್ಷಣವೆ ಕೆಂಗರುಮಲ್ಲೆಗೌಡ ಚಿನ್ನಮ್ಮನನ್ನು ಬಿಟ್ಟು ಕಾಡಿಗೆ ತೆರಳುತ್ತಾನೆ ಏಕೆಂದರೆ,

ತಂದೆ ಸೊಸೆಯೆ ಬೇಕೆಂದು

ನಾನು ಮದುವನೆ ಮಾಡಿಕೊಂಡೆ

ಇನ್ನು ನನ್ನ ದನಗಳು ಹಸುಗಂಡದಪ್ಪ ಹೋಗುತ್ತೇನೆ

ಎಂದು ಹೆಂಡತಿಯಾದ ಚಿನ್ನಮ್ಮನನ್ನು ಮನೆಯಲ್ಲಿ ಬಿಟ್ಟು ಕಾಡಿಗೆ ನಡೆದು ಬಿಡುತ್ತಾನೆ. ಹನ್ನೆರಡು ವರ್ಷವಾದರು ಚಿನ್ನಮ್ಮನನ್ನು ನೋಡಲು ಬರುವುದೆ ಇಲ್ಲ. ಹೆಂಡತಿಯಾದ ಅವಳೊಟ್ಟಿಗೆ ಜೀವನವನ್ನು ನಡೆಸುವುದಿಲ್ಲ. ಈ ಹೊತ್ತಿಗೆ ಹನ್ನೆರಡು ವರ್ಷಗಳಲ್ಲಿ ಸಿನ್ನಮ್ಮ ಬಂಜೆಯೆಂಬ ಅಪಮಾನಕ್ಕೆ ತುತ್ತಾಗಿ ಜರ್ಜರಿತಳಾಗುತ್ತಾಳೆ

ರಾತ್ರಿ ಆಗುತ್ತಿದ್ದಾಂಗೆ

ಅರಣ್ಯದೊಳಕ್ಕೋಗಿ

ಪ್ರಾಣೋಗಲೆಂದು

ಎನೇನೋ ಆಟ ಆಡುತ್ತಾಳೆ

ಬಂಜೆಯೆಂಬ ಅಪವಾದದಿಂದ ಸಮಾಜದಿಂದ ತಿರಸ್ಕೃತಳಾದ ಚಿನ್ನಮ್ಮ ತನ್ನದಲ್ಲದ ತಪ್ಪಿಗೆ ನೊಂದು ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ. ಕೊನೆಗೆ ಗೌರಸಂದ್ರದ ಮಾರಿಯ ಸಹಾಯದಿಂದ ಶಿವನನ್ನು ಬೇಡಿ ಮಕ್ಕಳನ್ನು ಪಡೆಯತ್ತಾಳೆ. ಬಂಜೆಯೆಂಬ ಅಪವಾದ ಈ ಮೂಲಕ ನೀಗಿದರು ಪತಿವ್ರತೆಯಲ್ಲ ಎಂಬ ಅಪವಾದ ಬಿಡದೆ ಕಾಡುತ್ತದೆ.

ಗೋ ಮುಟ್ಟಿದ್ದು

ಗೊಡ್ಡಾಗದುಂಟೆನಯ್ಯ

ಗಂಡ ಮುಟ್ಟಿದ್ದು

ಗರ್ಭಿಣಿಯಾಗದುಂಟೆನಯ್ಯ

ಎಂದು ಸಿನ್ನಮ್ಮನನ್ನು ಕೂತಲ್ಲಿ ನಿಂತಲ್ಲಿ ಸಮಾಜ ಅಪಮಾನಿಸಿ ಅಪಹಾಸ್ಯ ಮಾಡುತ್ತದೆ. ಹೀಗೆ ಸಿನ್ನಮ್ಮ, ಶ್ಯಾತಮ್ಮ ಹೆಂಡತಿಯರಾಗಿ ತಾಯಿಯರಾಗಿ ಅಪಮಾನ ಅವಮಾನಗಳಿಂದ ಬದುಕನ್ನು ಪೂರೈಸುತ್ತಾರೆ. ಈ ಅಪಮಾನಗಳು ಅವರಿಗೆ ಗಂಡಂದಿರಿಂದ ಮಕ್ಕಳಿಂದ ಒದಗುತ್ತದೆ. ಕೈ ಹಿಡಿದ ಗಂಡಂದಿರು ವರ್ಷಗಳ ಕಾಲ ಪಶುಪಾಲನೆಗೆ ತೆರಳಿದಾಗ ಮನೆಯಲ್ಲಿಯೆ ಉಳಿದು ನಾನಾ ಕಷ್ಟಕ್ಕೆ ತುತ್ತಾಗುವ ಹೆಣ್ಣಿನ ಬದುಕನ್ನು ಈ ಎರಡು ಪಾತ್ರಗಳು ಕಟ್ಟಿಕೊಡುತ್ತವೆ.

ಮದುವೆಯಾಗಿ ಬರುವ ಹೆಣ್ಣು ಗಂಡನ ಯಾವ ವರ್ತನೆಯನ್ನು ಪ್ರಶ್ನಿಸದೆ, ಪ್ರತಿಭಟಿಸದೆ ಮೂಕ ಪ್ರಾಣಿಯಂತೆ ಮನೆಯಲ್ಲಿ ಇರಿಸಲಾಗುತ್ತದೆ. ಅಸಹಾಯಕರಾದ ಈ ಹೆಣ್ಣುಗಳು ಆತ್ಮಹತ್ಯೆಗೆ ಯತ್ನಿಸಿದ್ದುಂಟು ಇಲ್ಲವೆ ಸಹಾಯಕ್ಕಾಗಿ ದೇವರ ಮೊರೆಯಿಡುವುದುಂಟು. ತಮ್ಮದಲ್ಲದ ತಪ್ಪಿಗೆ ಬಂಜೆಯೆಂಬ ಲೋಕದ ಅಪವಾದಕ್ಕೆ ತುತ್ತಾಗಿ ಸಮಾಜದಿಂದ ತಿರಸ್ಕರಿಸಲ್ಪಟ್ಟು ಅಪಮಾನಿತರಾಗುತ್ತಾರೆ. ಹೇಗಾದರು ಮಕ್ಕಳನ್ನು ಪಡೆದರು ಪಾತಿವ್ರತ್ಯಾತನವನ್ನು ಸಾಬೀತು ಪಡಿಸಲು ಅಗ್ನಿ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಒಟ್ಟಾರೆ ಮಹಿಳಾ ಭಾವನೆಗಳಿಗೆ ಅಗತ್ಯತೆಗಳಿಗೆ ಈ ಬುಟಕಟ್ಟಿನ ಸಮಾಜ ಕುರುಡರಂತೆ, ಕಿವುಡರಂತೆ ವರ್ತಿಸುತ್ತದೆ. ಹೆಣ್ಣಿನ ಬದುಕು ಗಂಡಿನ ಸೇವೆಗೆ ಆತನ ಉದ್ಧಾರಕ್ಕೆ ಸಂತಾನೋತ್ಪತ್ತಿಗೆ ಮೀಸಲು ಇರುವಂತದ್ದು ಎಂಬ ಸಂಗತಿಗಳು ಕಾವ್ಯದಲ್ಲಿ ಪದೇ ಪದೇ ಕಾಣಿಸುತ್ತವೆ. ಪ್ರಸ್ತುತ ಸ್ತ್ರೀವಾದದ ಹಿನ್ನೆಲೆಯಲ್ಲಿ ಇದನ್ನು ಶೋಷಣೆ ಎಂದು ಪರಿಗಣಿಸಿದರೂ ಬುಡಕಟ್ಟಿನೊಳಗಿನ ಮಹಿಳಾ ಬದುಕು ಈ ಶೋಷಣೆಯ ಅರಿವಿಲ್ಲದೆ ಇದೇ ಬದುಕೆಂದು ಒಪ್ಪಿ ಬಾಳುತ್ತಾರೆ. ತನ್ನ ಮೇಲಾಗುವ ದೌರ್ಜನ್ಯಗಳಿಗೆ ಆಕೆ ವಹಿಸುವ ಮೌನ, ಅಪಮಾನಗಳನ್ನು ಸಹಿಸುವ ತಾಳ್ಮೆ, ಅಸಹಾಯಕತೆಯು ಅವಳ ಬದುಕಿನ ದುರಂತಕ್ಕೆ ಕಾರಣ ಎನ್ನುವುದರಲ್ಲಿ ಸಂಶಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವಳ ಆಲೋಚನೆ ಒಂದೆ

ನಮ್ಮಂತವುರಾಳು
ಹೆಣ್ಣಿನ ಜಲುಮದಲ್ಲಿ ಹುಟ್ಟುಕ್ಕಿಂತ
ಒಂದು ಮರವಾಗಿ ಹುಟ್ಟದರೆ
ನೆರಳು ತಣ್ಣಗಾಯ್ತೆಂದು ಕುಳಿತಂತ ಪುಣ್ಯಾತ್ಮರು
ಎದ್ದೋಗುತ್ತಾರಮ್ಮ

ಹೀಗೆ ಹೆಣ್ಣು ಹುಟ್ಟನ್ನೇ ನಿರಾಕರಿಸುವ ಮೂಲಕ ಪ್ರತಿಭಟನೆಯು ಸುಪ್ತವಾಗಿರುವುದನ್ನು ಕಾಣುತ್ತೇವೆ. ಪುರುಷಪ್ರಧಾನ ಸಮಾಜದ ವಿರುದ್ಧ ನಡೆಸಬೇಕಾಗಿರುವ ಹೋರಾಟವನ್ನು ತನ್ನ ಬದುಕೆಂಬ ಹೋರಾಟವನ್ನು ಕೊನೆಗೊಳಿಸುವಿಕೆಯಲ್ಲಿ ನಡೆಸುವುದು, ಆಲೋಚಿಸುವುದು ಸಮಾಜದೊಳಗೆ ಆಕೆಯ ಅಧೀನ ನೆಲೆಯನ್ನು ಪ್ರಸ್ತುತ ಪಡಿಸುತ್ತದೆ.

'ಬದ್ಕುಂಟೆ ಈರು ಚಿಕ್ಕಣ್ಣ' ಕಾವ್ಯ ಕಾಡುಗೊಲ್ಲರ ಪಶುಪಾಲಕ ವೀರರ ಕಥನವನ್ನು ಹೇಳುವ ಕಾವ್ಯ. ೨೦೦೬ರಲ್ಲಿ ಹೊಸ್ಗಾನಹಳ್ಳಿ ಕರಿಯಣ್ಣನವರು ಈ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಕಾವ್ಯವನ್ನು ಹಾಡಿರುವವರು ಸಂಪಾದಕರ ತಾಯಿ ಕೆಂಗಮ್ಮ ಅಕ್ಕ ಕಾಡಮ್ಮ ಅತ್ತಿಗೆ ಚಿಕ್ಕವ್ವ ಇವರ ಮಗ ಸಣ್ಣಪ್ಪ.

ಪ್ರಣಯ ಕಲಹದ ಕಥಾವಸ್ತುವುಳ್ಳ ಬದ್ಕುಂಟೆ ಈರು ಚಿಕ್ಕಣ್ಣ ಕಾವ್ಯ ಚಿಕ್ಕಣ್ಣನ ವೀರತನವನ್ನು ಕೊಂಡಾಡುವ ಕಾವ್ಯ. ಚಿಕ್ಕಣ್ಣನ ಬಳಿಯಿದ್ದ ಗೋ ಸಂಪತ್ತಿಗೆ ಆಸೆ ಪಡುವ ಬೇಡರು ತಮ್ಮ ತಂಗಿ ಓಬಮ್ಮನಿಂದ ಚಿಕ್ಕಣ್ಣನನ್ನು ತಮ್ಮೆಡೆಗೆ ಸೆಳೆಯಬಯಸುತ್ತಾರೆ. ಪ್ರೇಮದೇವತೆಯಂತೆ ಕಾಡುವ ಓಬಮ್ಮನ ಪ್ರೇಮಕ್ಕೆ ಒಲಿದ ಚಿಕ್ಕಣ್ಣ ಅವಳಿಗಾಗಿ ತಾಯಿ ತಂದೆ ಹೊಲ ಮನೆ ತೊರೆಯುತ್ತಾನೆ.

ಏರಲಾರದ ಕೋಟೆ ಏರೋದನಾಕಮ್ಮ
ಏರುತ್ತೆ ಕೋಟೆ ತೆನೆಮುದ್ದ ಈರಣ್ಣ
ಏರೋದ ಸೂಳೆ ಅರಮನೆಗೊ

ಹೀಗೆ ಓಬಮ್ಮನ ಅರಮನೆಗೆ ಹೋದ ಚಿಕ್ಕಣ್ಣ ಅವಳೊಂದಿಗೆ ಹನ್ನೆರಡು ವರ್ಷ ಬಾಳುತ್ತಾನೆ. ಈ ಬದುಕೆ ಆಕೆ ಸೂಳೆಯಾಗಿರಲಿಲ್ಲ ಎಂಬ ಸಂಗತಿಯನ್ನು ಹೇಳುತ್ತದೆ. ಹನ್ನೆರಡು ವರ್ಷ 'ಅಸಲೆಯ ಸಂಗ್ಮಾಡಿ ಇನ್ಬೇಡರುಡುಗಿ ಭಯವೇನೆ' ಎಂದು ಆಕೆಗೆ ಅಭಯವನ್ನು ನೀಡುತ್ತಾನೆ. ಆನಂತರ ಓಬಮ್ಮನ ಅಣ್ಣಂದಿರಿಂದ ತಲೆಹೊಡಿಸಿಕೊಂಡು ಸಾಯುವ ಚಿಕ್ಕಣ್ಣ ಕಾಡುಗೊಲ್ಲರ ದೈವವಾಗಿ ಆರಾಧಿಸಲ್ಪಡುತ್ತಾನೆ.

ಕಥೆಯಲ್ಲಿನ ಚಿಕ್ಕಣ್ಣನ ತಾಯಿ ತಿಮ್ಮವ್ವ ಬೇಡರ ಓಬಮ್ಮ ಮುಖ್ಯ ಮಹಿಳಾ ಪಾತ್ರಗಳು. ಚಿಕ್ಕಣ್ಣನ ತಾಯಿ ತಿಮ್ಮವ್ವ ಶೋಕದೇವತೆಯಂತೆ ಕಾವ್ಯದುದ್ದಕ್ಕು ಕಾಣಿಸುತ್ತಾಳೆ. 'ಮೋಸಗಾರರು ಬೇಡರು ನಂಬ್ಬೇರೋ ಈರಣ್ಣ' ಎಂದು ಮಗನನ್ನು ಎಚ್ಚರಿಸುತ್ತಾಳೆ. ಬೇಡರೊಡನೆ ಕಾಳಗಕ್ಕೆ ಹೋಗಬೇಡೆಂದು ಕಾಡುತ್ತಾಳೆ. ಆತ ಸತ್ತಾಗ ಇನ್ನಿಲ್ಲದಂತೆ ಗೋಳಾಡುತ್ತಾಳೆ. ತಾಯಿಯ ಯಾವ ಮಾತಿಗೂ ಚಿಕ್ಕಣ್ಣ ಬೆಲೆ ತೆರೆದೆ ಜೀವವನ್ನೆ ತೆರುತ್ತಾನೆ. ಬೇಡರ ಹೆಣ್ಣಾದ ಓಬಮ್ಮ ಕಾವ್ಯ ಹೇಳುವಂತೆ ಸೂಳೆ. ಈಕೆಯೊಂದಿಗೆ ಚಿಕ್ಕಣ್ಣ ವಿವಾಹವಾಗದೆ ಹನ್ನೆರಡುವರ್ಷ ಜೊತೆ ಬಾಳುತ್ತಾನೆ. ಪಗಡೆಯ ವಸ್ತುವಿನಂತೆ ಓಬಮ್ಮನನ್ನು ಅಣ್ಣಂದಿರೆ ಗೋವುಗಳಿಗಾಗಿ ಚಿಕ್ಕಣ್ಣನಿಗೆ ಆಮಿಷವಾಗಿ ಒಡ್ಡುತ್ತಾರೆ. ಈ ಕಾವ್ಯವು ಓಬಮ್ಮನ ಯಾವ ಭಾವನೆಗಳಿಗೂ ಮಾತುಕೊಡುವುದಿಲ್ಲ. ಆದರೆ ತನ್ನ ಅಣ್ಣಂದಿರಿಂದ ಚಿಕ್ಕಣ್ಣನಿಗೆ ಒದಗುವ ದುರಂತದ ವಾಸನೆ ಬಂದಾಗ ಚಿಕ್ಕಣ್ಣನಿಗೆ ಆತನ ತಂದೆ ತಾಯಿ ಬಂಧು ಬಳಗ ಗೋವುಗಳನ್ನು ನೆನಪಿಸಿ ಹಿಂದಕ್ಕೆ ಕಳುಹಿಸುವ ಪ್ರಯತ್ನ ಮಾಡುವ

ಮೂಲಕ ಮಾನಹೀಯುತೆ ಮೆರೆಯುತ್ತಾಳೆ. ಹೀಗೆ ಗೋಸಂಪತ್ತಿಗಾಗಿ ಉಂಟಾದ ಕಲಹ ಆದಕ್ಕಾಗಿ ಹೆಣ್ಣನ್ನು ವಸ್ತುವಿನಂತೆ ಬಳಸಿಕೊಂಡಿರುವುದನ್ನು ಕಾವ್ಯ ಹೇಳುತ್ತದೆ.

'ಹೊನ್ನೇಮರದ ಈರಣ್ಣ' ಕೃತಿಯನ್ನು ಶಿವಣ್ಣ ಬೆಳವಾಡಿಯವರು ೨೦೦೮ ರಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ದೈವ ಪಿಂಡವಾದ ಈರಣ್ಣನ ಸಾಹಸ ಮಹಿಮೆಗಳು ಕಥೆಯಲ್ಲಿವೆ. ಈರಣ್ಣನ ಚೆಲುವಿಗೆ ಸೋತು ಬಂದ ಬೇಡರ ಹುಡುಗಿಯನ್ನು ನಿರಾಕರಿಸಿದ್ದಕ್ಕಾಗಿ ಆ ಜೇಡತಿ ಅಣ್ಣಂದಿರಿಗೆ ಹೇಳಿ ಬಾಣ ಬಿಡಿಸಿ ಕೊಲ್ಲಿಸುತ್ತಾಳೆ. ಈರಣ್ಣನಾದರು ಕರಿಯಮ್ಮ ದೇವತೆಯ ಸಹಾಯದಿಂದ ಬೇಡರ ಪಡೆಯನ್ನು ನಾಶಮಾಡುತ್ತಾನೆ. ಕರಿಯಮ್ಮದೇವತೆ ಈರಣ್ಣನ ಕಾವ್ಯದಲ್ಲಿ ಶಕ್ತಿಸ್ವರೂಪಿಣಿಯಾಗಿ ಕಾಣಿಸಿಕೊಳ್ಳುತ್ತಾಳೆ.

'ಪಶುಪಾಲಕ ವೀರರ ಕಥೆಗಳು' ಕೃತಿಯನ್ನು ಮೀರಸಾಬಿಹಳ್ಳಿ ಶಿವಣ್ಣನವರು ಸಂಪಾದಿಸಿ ೨೦೦೮ ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯು ಪಶುಪಾಲಕರಾದ ಕಾಡುಗೊಲ್ಲ ವೀರರ ಕಥೆಯನ್ನು ಒಳಗೊಂಡಿದೆ. ಕೃತಿಗೆ ಪ್ರಾಮುಖ್ಯತೆ ಇರುವುದು ಇಲ್ಲಿನ ಕಥೆಗಳು ಕಾಡು ಗೊಲ್ಲರ ಸಾಮಾನ್ಯ ಜೀವನವನ್ನು ಚಿತ್ರಿಸುವುದರಲ್ಲಿ. ಕುಂಬಾರಳ್ಳಿ ಅಜ್ಜಪ್ಪನ ಕಥೆಯಲ್ಲಿ ಅಣ್ಣೆಬೆಟ್ಟದ ಗ್ರಾಮದವರು ಮಾರಿ ಉಪದ್ರ ಬಂದು ಸತ್ತಾಗ ದೈವವಾದ ಕ್ಯಾತೆಲಿಂಗ ಜಡೆಗೊಂಡನಿಗೆ ಕನಸಿನಲ್ಲಿ ಕಾಣಿಸಿ ತನ್ನನ್ನು ಕರೆದುಕೊಂಡುಹೋಗು ಎಂದು ನುಡಿಯುತ್ತದೆ. ದೇವರು ತರಲುಹೊರಟ ಜಡೆಗೊಂಡನಿಗೆ ಅವನ ಹಿರಿಯ ಮತ್ತು ಕಿರಿಯ ಹೆಂಡತಿಯರಿಬ್ಬರು 'ಹೋದೋನು ಎಷ್ಟು ದಿನಕ್ಕೆ ಬರ್ತಿಯೋ ಬಾಳಮಕ್ಕಳನ್ನು ಸಲಿಹೋಕ್ಕೆ ನಮಗಾಗಲ್ಲ' ಎಂದು ಅಸಹಾಯಕರಾಗಿ ಬೇಡಿದ ಹೆಂಡತಿಯರಿಗಾಗಿ ಕ್ಯಾತೆಲಿಂಗ ದೇವರಲ್ಲಿ ಜಡೆಗೊಂಡ ಪ್ರಾರ್ಥಿಸುವುದೇನೆಂದರೆ 'ಇವಳ ನಾಲಗೆ ತೆಗೆ ಬಿದಿರೆ ಏಣಿಗೆ ಹೋಗುವಷ್ಟೋತ್ತಿಗೆ ಚಿಕ್ಕಮಾಳಿಯ ಸಾವಿನ ಸುದ್ದಿ ಬರಲಿ' ಎಂದು. ಮುಂದೆ ತನ್ನ ಊರಿಗೆ ಹಿಂದುರುಗಿದಾಗ ಇಬ್ಬರು ಹೆಂಡಿರನ್ನು ಕಳೆದುಕೊಂಡು ಮೂರುವರ್ಷ ಆಯ್ತು ನನ್ನ ಕುರಿದನ ಏನಾದವೋ ಎಂದು ಕುರಿದನ ನೆನೆಯುತ್ತಾನೆ.

ಜಡೆಗೊಂಡ ತನ್ನ ಕಾರ್ಯಕ್ಕೆ ಅಡ್ಡಿ ಪಡಿಸಿದ ಹೆಂಡತಿಯರ ಸಾವನ್ನು ನಿರ್ದಯಿಯಾಗಿ ಬಯಸುತ್ತಾನೆ. ಅವರ ಸಾವಿನ ಸುದ್ದಿಯನ್ನು ಮನವಾರೆ ಹಾಲು ಕುಡಿದು ಆನಂದಿಸುತ್ತಾನೆ. ಈ ಕಥೆಯು ಬುಡಕಟ್ಟಿನೊಳಗೆ ಹೆಣ್ಣಿನ ಬಗೆಗೆ ಪುರುಷ ಸಮಾಜದ ನಿರ್ದಯತೆಯನ್ನು ತಿಳಿಸುತ್ತದೆ. ಗೋವು ಕುರಿಗಳನ್ನು ನೆನೆಯುವ ಜಡೆಗೊಂಡ ಎಂದು ಸತ್ತ ಮಡದಿಯರನ್ನು ನೆನೆಯುವುದಿಲ್ಲ.

'ತೋರಣಗಟ್ಟೆ ಮೆಲ್ಲಜ್ಜನ ಕಥೆ'ಯಲ್ಲಿ ಮೆಲ್ಲಜ್ಜನ ಹೆಂಡತಿಯೊಂದಿಗೆ ಸಣ್ಣ ಮುತ್ತಜ್ಜನು ಅಸಹ್ಯವಾಗಿ ನಡೆದುಕೊಂಡಿದ್ದರಿಂದ ಆಕೆ ಬೇಸತ್ತು ಅನ್ನ ನೀರು ಬಿಟ್ಟು ಗಂಗೆಗೆ ಬಿದ್ದು

ಸಾಯುತ್ತಾಳೆ. ಮೊದಲ ಹೆಂಡತಿ ಸತ್ತ ಮೇಲೆ ಮಲ್ಲಜ್ಜ ಎರಡನೆ ಮದುವೆ ಮಾಡಿಕೊಳ್ಳುತ್ತಾನೆ. ಮಲ್ಲಜ್ಜನ ಹೆಂಡತಿಯ ಸಾವಿಗೆ ಕಾರಣನಾದ ಸಣ್ಣ ಮುತ್ತಜ್ಜನಿಗೆ ಈ ಬುಡಕಟ್ಟು ಸಮಾಜದಲ್ಲಿ ಯಾವ ಶಿಕ್ಷೆಯು ಇಲ್ಲ. ಆದರೆ ತಪ್ಪೆ ಮಾಡದ ಮಲ್ಲಜ್ಜನ ಹೆಂಡತಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

'ಈರ ಕರಿಯಣ್ಣನ ಕಥೆ' ವಿಭಿನ್ನವಾದ ವಸ್ತುವುಳ್ಳದ್ದು. ಈರ ಕರಿಯಣ್ಣ ತನ್ನ ಅಪ್ಪನಿಗೆ ತರುಣಿಯಾದ ಹೆಣ್ಣನ್ನು ಮದುವೆ ಮಾಡಿಸುತ್ತಾನೆ. ಆದರೆ ಆಕೆ ಮುಸಲ್ಮಾನ ಯುವಕನಲ್ಲಿ ಅನುರುಕ್ತಳಾಗುತ್ತಾಳೆ. ಮುಂದೆ ಕರಿಯಣ್ಣನಿಂದ ತೊಂದರೆ ಬರಬಹುದೆಂದು ಬಾವಿಸಿ ಇಬ್ಬರು ಸೇರಿ ಕರಿಯಣ್ಣನನ್ನು ಕೊಲ್ಲಿಸುತ್ತಾರೆ. ಹೀಗೆ ಸತ್ತ ಕರಿಯಣ್ಣ ವೀರನಾಗಿ ಪೂಜಿಸಲ್ಪಡುತ್ತಾನೆ. ಆಕೆಯನ್ನು ಕರಿಯಣ್ಣನ ಗೋವುಗಳು ತಿವಿದು ಕೊಲ್ಲುತ್ತವೆ. ಕಥೆಯಲ್ಲಿ ತರುಣಿಯನ್ನು ಅಪ್ಪನಿಗೆ ಮದುವೆ ಮಾಡಿಸುವ ಸಂದರ್ಭದಲ್ಲಿ ಆಕೆಯ ಅಭಿಪ್ರಾಯವನ್ನು ಕೇಳುವುದಿಲ್ಲ. ಪ್ರತಿಭಟನೆಗೆ ಜಲೆ ಇಲ್ಲದೆ ತರುಣಿ ಮುಸಲ್ಮಾನಲ್ಲಿ ಅನರುಕ್ತಳಾಗುವ ಮೂಲಕ ಬಲವಂತದ ವಿವಾಹ ಬಂದನವನ್ನು ಕಳಚಿ ಬಿಡುತ್ತಾಳೆ.

ಹುಲಿ, ಹಂದಿಗಳೊಂದಿಗೆ ಹೋರಾಡಿದ, ಸಂಸ್ಕೃತಿಯ ರಕ್ಷಣೆಗಾಗಿ ಪ್ರಾಣ ತೆತ್ತ, ತಮ್ಮ ದೈವಗಳಿಗೆ ಅರ್ಪಿಸಿಕೊಂಡು ಬೇಡರ ಹೆಣ್ಣುಗಳಿಗೆ ಒಲಿಯದೆ ಅವರಿಂದ ತಲೆಹೊಡೆದು ಸತ್ತ ಕಾಡುಗೊಲ್ಲ ಪುರುಷರು ವೀರರು ಎಂದೆ ಹೊಗಳಲ್ಪಡುತ್ತಾರೆ. ಹೀಗೆ ಸತ್ತವರನ್ನು ತಮ್ಮ ಕುಲದ ಅಥವಾ ಮನೆಯ ದೈವವನ್ನಾಗಿ ಮಾಡಿ ಆರಾಧಿಸುತ್ತಾರೆ. ಸತ್ತ ವೀರರ ಮಡದಿಯರು ಪತಿಯೊಂದಿಗೆ ಚಿತೆ ಏರಿ ಮಹಾ ಸತಿಯರಾಗುತ್ತಾರೆ, ಇವರನ್ನು ಯಾವ ದೈವಪಟ್ಟಕ್ಕೆ ಏರಿಸದೆ ನಿರ್ಲಕ್ಷಿಸಲಾಗುತ್ತದೆ. ಇವರನ್ನು ಸಮಾಜ ಅಸಡ್ಡೆಯಿಂದಲೆ ನೋಡಿದೆ

ಈರಗಾತಿ ತಿಮ್ಮವ್ವನ ಕಥೆಯಲ್ಲಿ ಈರನಾಗಣ್ಣನು ಮಾದಿಗರವನು ಮುಟ್ಟಿದ್ದರಿಂದ ಎಂಜಲುದೇಹ ಇರಬಾರದೆಂದು ಕೆರೆಯಲ್ಲ ಅಲಗನ್ನು ನೆಟ್ಟು ಅದರಮೆಲೆ ಬಿದ್ದು ಸಾಯುತ್ತಾನೆ. ಆತನ ಹೆಂಡತಿ ತಿಮ್ಮವ್ವ ಈ ಸಂದರ್ಭದಲ್ಲಿ

ಗಂಡ ಸತ್ತ ಮೇಲೆ ಅರೆ ಗಳಿಗೆ ನಾನಿರಲಾರೆ
ಗಂಜೀಯ ಸೀರೆ ನಾನುಡಲಾರೆ ಮಾವಗಳ
ಚಿತ್ತಾರದ ಕೊಂಡ ತಗನೇರಿಸಿ
ಎಂದು ಕೊಂಡಗುತ್ತಾಳೆ.

ಈರಗಾತಿ 'ಗಿಡ್ಡಮ್ಮನ ಕಥೆ'ಯಲ್ಲಿ ಗಿಡ್ಡಮ್ಮ ಹಟ್ಟಿಯ ಹೊರಗೆ ಋತು ಸೂತಕದಲ್ಲಿದ್ದಾಗ ಸಮೀಪದಲ್ಲಿ ಹೋಗುತ್ತಿದ್ದ ಈರಣ್ಣನಿಂದ ಎಲೆ ಅಡಕೆ ತರುವಂತೆ ಹುಡುಗನನ್ನು ಕಳುಹಿಸುತ್ತಾಳೆ.

ಈರಣ್ಣ ಗಿಡ್ಡಮ್ಮನ ಮೈದನಾಗಿದ್ದ. ಈರಣ್ಣ ಕೊಟ್ಟ ಎಲೆ ಅಡಕೆ ಗಿಡ್ಡಮ್ಮನ ಮಡಿಲಿಗೆ ಬಂದಾಗ ಅವು ಮುತ್ತು ರತ್ನವಾಗುತ್ತವೆ. ಇದನ್ನು ನೋಡಿದವರು ಮೈದುನ ಮತ್ತು ಗಿಡ್ಡಮ್ಮನ ನಡುವೆ ಅನೈತಿಕ ಸಂಬಂಧವಿದೆಯೆಂದು ಆಡಿಕೊಳ್ಳುತ್ತಾರೆ. ಈ ಅಪಮಾನ ಸಹಿಸದೆ ಗಿಡ್ಡಮ್ಮ ಗಂಡನಿರುವಾಗಲೇ ಕೊಂಡವೇರುತ್ತಾಳೆ. ಹಟ್ಟಿಯ ಹೊರಗೆ ಸೂತಕದಲ್ಲಿದ್ದಾಗ ಯಾರೊಂದಿಗೂ ಮಾತನಾಡದೆ ಮೌನದಿಂದಿರಬೇಕೆಂಬ ಒತ್ತಾಯದ ಬದುಕು ಕಥೆಯ ಮೂಲಕ ಬೆಳಕಿಗೆ ಬರುತ್ತದೆ.

ಈರಗಾತಿ ತಂಗಮ್ಮನ ಕಥೆಯಲ್ಲಿ ಸುಂದರಿಯಾದ ತಂಗಮ್ಮನ ಗಂಡ ಅಕಾಲ ಮೃತ್ಯುವಿಗೆ ಒಳಗಾದಾಗ ಪಾಳೆಗಾರ ತಂಗಮ್ಮನನ್ನು ಅವನ ಅರಮನೆಗೆ ಕಳುಹಿಸುವಂತೆ ಅವಳ ಮಾವನಿಗೆ ಹೇಳುತ್ತಾನೆ. ತಂಗಮ್ಮ 'ಕೊಂಡಕ್ಕಾದರೂ ಬೀಳ್ತೀನಿ ಕೂಡೋಲ್ಲ' ಎಂದು ಕೊಂಡವೇರುತ್ತಾಳೆ.

ಈರಗಾತಿ ಕಾಟವ್ವನ ಕಥೆಯಲ್ಲಿ ಕಾಟವ್ವ ಇಷ್ಟಂದು ವೈಯ್ಯಾರಮಾಡೋ ಹೆಣ್ಣು ನಮ್ಮಣ್ಣನಿಗೆ ಸಂಸಾರ ಮಾಡ್ತಾಳ ಎಂದು ಮೈದುನನ ಮೂದಲಿಸಿದಾಗ ಗಂಡನಿರುವಾಗಲೆ ಕೊಂಡವೇರುತ್ತಾಳೆ. ಹೀಗೆ ಕೊಂಡವಾದ ಸತಿಯರನ್ನು ಗಮನಿಸಿದರೆ ಮಹಾಸತಿಯಾಗುವಂತೆ ಪ್ರೇರೇಪಿಸುವ ಸಮಾಜದ ಒತ್ತಡ ಪ್ರಬಲವಾಗಿ ಕಂಡುಬರುತ್ತದೆ. ಸತ್ತ ಈರಗಾರರೊಂದಿಗೆ ಮಹಾಸತಿಯಾಗುತ್ತಿದ್ದ ಹೆಣ್ಣುಗಳನ್ನು ಸಮಾಜ ಗೌರವಿಸುತ್ತಿತ್ತು. ಈ ಗೌರವವೇ ಅವಳನ್ನು ಸತಿಯಾಗುವಂತೆ ಪ್ರೇರೇಪಿಸುತ್ತಿತ್ತು. ಇಲ್ಲವೇ ಅವಳ ಅಸಹಾಯಕತೆಯೇ ಇಂತಹ ಆತ್ಮಹತ್ಯೆಗಳಿಗೆ ಕಾರಣವಾಗುತ್ತಿತ್ತು.

ಪುರುಷ ಪ್ರಧಾನ ಸಮಾಜ:-

ಕಾಡುಗೊಲ್ಲರ ಬುಡಕಟ್ಟು ಪಿತೃ ಪ್ರಧಾನ ಸಮಾಜವನ್ನು ಹೊಂದಿದೆ. ಕಾಡುಗೊಲ್ಲರು ಪಿತೃ ಆರಾಧಕರು. ಬುಡಕಟ್ಟಿನ ಒಳಗೆ ಆಚರಿಸಲ್ಪಡುವ 'ಅಲಗು ಸಂಸ್ಕೃತಿ' ಈ ಸಂಗತಿಯನ್ನು ದೃಢೀಕರಿಸುತ್ತದೆ. ಅಲಗು ಸಂಸ್ಕೃತಿಯು ಸತ್ತವೀರನ ಹೆಸರಿನಲ್ಲಿ ಅಲಗು ಮಾಡಿಸಿ ಪೂಜಿಸುವ ಪದ್ಧತಿಯಾಗಿದೆ. ಕಾಡುಗೊಲ್ಲರ ಹಿರಿಯ ಪುರುಷರು ಮತ್ತು ವೀರರು ಅಲಗಿನ ರೂಪದಲ್ಲಿಯೇ ಆರಾಧನೆಗೆ ಒಳಗಾಗುತ್ತಿದ್ದಾರೆ. ಆದರೆ ಬುಡಕಟ್ಟಿನ ಹಿರಿಯ ಹೆಂಗಸರಿಗಾಗಲಿ ಅಥವಾ ಕೊಂಡವಾದ ಗಿಡ್ಡಮ್ಮ, ತಂಗಮ್ಮ, ಕಾಟಮ್ಮ ಮಹಾಸತಿಯರ ಹೆಸರಿನಲ್ಲಿ ಯಾವ ಸತಿಯರಿಗೂ ಅಲಗನ್ನು ಹುಯ್ಯಿಸಿ ಆರಾಧಿಸುವುದಿಲ್ಲ. ಅಲಗಿನ ಆರಾದನೆಯ ಗೌರವ ದಕ್ಕುವುದು ಪುರುಷರಿಗೆ ಮಾತ್ರ. ಆತ ವೀರನಾಗಿರದಿದ್ದರೂ ಪಶುಪಾಲನೆಗೆ ತೆರಳಿ ಎಲ್ಲಿಯೋ ಮಡಿದರೂ ಅವನ ಹೆಸರಿನಲ್ಲಿ ಅಲಗು ಮಾಡಿಸಿ ಕುಲ ದೈವವಾಗಿ ಆರಾಧಿಸುವ ಪದ್ದತಿಯಿದೆ.

ಬುಡಕಟ್ಟು ಸಂಸ್ಕೃತಿಗಳು ಸಾಮಾನ್ಯವಾಗಿ ಮಾತೃಮೂಲೀಯವಾಗಿರುತ್ತವೆ. ಇಂತಹ ಸಂಸ್ಕೃತಿಗಳಲ್ಲಿ ಹೆಣ್ಣಿಗೆ ಮುಕ್ತವಾಗಿ ಬದುಕುವ ಅವಕಾಶಗಳಿರುತ್ತವೆ. ಬುಡಕಟ್ಟು ಸಮಾಜವಾದ ಕಾಡುಗೊಲ್ಲರದು ಪಿತೃಪ್ರಧಾನ ಸಮಾಜ. ಇಲ್ಲಿನ ಮಹಿಳಾ ಬದುಕು ಈ ಸಮಾಜದಿಂದ ನಿಯಂತ್ರಿಸಲ್ಪಟ್ಟಿವೆ, ನಿರಾಕರಿಸಲ್ಪಟ್ಟಿವೆ. ಈ ಬುಡಕಟ್ಟು ಪಶುಪಾಲನೆಯನ್ನು ಮುಖ್ಯ ಕಸುಬನ್ನಾಗಿ ಹೊಂದಿದೆ. ಬಹುಶಃ ಕೃಷಿ ಸಮಾಜಕ್ಕೆ ಆದ ನಿಧಾನಗತಿಯ ಪರಿವರ್ತನೆಯು ಕಾಡುಗೊಲ್ಲ ಸಮಾಜ ಪಿತೃ ಪ್ರಧಾನವ್ಯವಸ್ಥೆಯಲ್ಲಿಯೇ ಉಳಿಯುವಂತೆ ಮಾಡಿರಬಹುದು. ಈ ವ್ಯವಸ್ಥೆಯು ಇಲ್ಲಿನ ಮಹಿಳಾ ಬದುಕನ್ನು ತೀವ್ರವಾಗಿ ಪ್ರಭಾವಿಸಿದೆ. ಬಹುಪತ್ನಿತ್ವವನ್ನುಹೊಂದಿರುವ ಈ ಸಮಾಜದಲ್ಲಿ ಬಹುಪತಿತ್ವಕ್ಕೆ ಅವಕಾಶವಿಲ್ಲ. ಬುಡಕಟ್ಟಿನ ಪುರುಷರು ಅನ್ಯ ಜಾತಿಯ ಹೆಣ್ಣನ್ನು ವಿವಾಹವಾಗುವಂತೆ ಹೆಣ್ಣಿಗೆ ಅವಕಾಶವಿಲ್ಲ. ವಿದುರ ವಿವಾಹಕ್ಕೆ ಮುಕ್ತ ಅವಕಾಶವಿದೆ. ವಿಧವಾ ವಿವಾಹ ನಿಷೇಧಿಸಲ್ಪಟ್ಟಿದೆ. ಇಂತಹ ಲಿಂಗತಾರತಮ್ಯದ ಧೋರಣೆಗಳು ಸಹಜವಾಗಿ ಇಲ್ಲಿ ಒಪ್ಪಿತವಾಗಿವೆ.

ಕಾಡುಗೊಲ್ಲರ ಸಾಹಿತ್ಯದಲ್ಲಿ ಬುಡಕಟ್ಟಿನ ವೀರರು ಪಶುಪಾಲಕರು ದ್ವಿಪತ್ನಿಯರನ್ನು ಹೊಂದಿರುವುದು ಸಮಾಜದ ಆಚಾರವಾಗಿದೆ. ಈ ಆಚಾರವು ಮಹಿಳೆಗೆ ಅನ್ವಯಿಸುವುದಿಲ್ಲ. ಒಂದು ವೇಳೆ ಗಂಡ ತೀರಿಕೊಂಡರೂ ಮರು ವಿವಾಹವಗುವಂತಿಲ್ಲ. ಕರಡಿಗೊಲ್ಲರ ಬುಳ್ಳಣ್ಣ ಇಬ್ಬರು ಹೆಂಡಿಯರಿದ್ದೂ ಕರಿಯೋಬಿಯನ್ನು ವಿವಾಹವಾಗುತ್ತಾನೆ. ಚಿತ್ತಯ್ಯ ಬ್ರಾಹ್ಮಣರ ಹೆಣ್ಣು ಗಂಗಿಮಾಳಿಯನ್ನು ವಿವಾಹವಾಗುತ್ತಾನೆ. ಕಾಡುಗೊಲ್ಲ ಬುಡಕಟ್ಟಿನ ಪುರುಷರು ಅನ್ಯಜಾತಿಯವರನ್ನು ವಿವಾಹವಾದರೂ ಅವರು ದೈವವಾಗಿ ಆರಾಧಿಸಲ್ಪಡುತ್ತಾರೆ. ಆದರೆ ವಿವಾಹವಾಗುವುದು ಅಂತಿರಲಿ ಈ ಸಮಾಜದ ಹೆಣ್ಣು ಹಟ್ಟಿಯಿಂದ ಒಂದು ರಾತ್ರಿ ಹೊರಗಿದ್ದರೂ ಅವಳನ್ನು ಬುಡಕಟ್ಟಿನಿಂದ ಬಹಿಷ್ಕರಿಸಲಾಗುತ್ತದೆ.

ಹೆಣ್ಣಿನಿಂದ ಪತಿವ್ರತಾಧರ್ಮ ಪಾಲನೆಯನ್ನು ಈ ಸಮಾಜ ನಿರೀಕ್ಷಿಸುತ್ತದೆ. ಪತಿವ್ರತಾಧರ್ಮವನ್ನು ಮೀರಿದರೆ ಘೋರ ಶಿಕ್ಷೆಯನ್ನು ಮಹಿಳೆ ಅನುಭವಿಸಬೇಕಾಗಿತ್ತು. ಬುಡಕಟ್ಟಿನ ಸಾಂಸ್ಕೃತಿಕ ನಾಯಕನೆಂದೇ ಗುರುತಿಸಲಾಗುವ ಜುಂಜಪ್ಪ ತನ್ನ ತಾಯಿಯನ್ನೇ ಶಂಕಿಸಿ ಪಾತಿವ್ರತ್ಯ ಸಾಬೀತು ಪಡಿಸಲು ಹಲವು ಸವಾಲುಗಳನ್ನು ಆಕೆಯ ಮುಂದಿಡುವುದನ್ನು ನೋಡಬಹುದು.

'ಗೊಲ್ಲ ಕಡಗ' ಈ ಬುಡಕಟ್ಟಿನ ವಿಶೇಷ ಸಂಪ್ರದಾಯವಾಗಿದೆ. ಮದುವೆಯಾದ ಹೆಣ್ಣು ಗೊಲ್ಲ ಕಡಗ ಧರಿಸುತ್ತಾಳೆ. ದೈವವಾದ ಶ್ರೀಕೃಷ್ಣನೇ ಮುಂದೆ ಆಕೆಯ ಗಂಡನೆಂಬುದನ್ನು ಈ ಗೊಲ್ಲ ಕಡಗ ಸಂಕೇತಿಸುತ್ತದೆ. ಈ ಕಡಗ ಧರಿಸಿದ ಮಹಿಳೆಯ ಲೌಕಿಕದ ಗಂಡ ತೀರಿಕೊಂಡರೆ ಅಲೌಕಿಕ ಗಂಡನಾದ ಶ್ರೀಕೃಷ್ಣನನ್ನು ನಂಬಿ ಬದುಕಬೇಕಾಗುತ್ತದೆ. "ಗಂಡ ಸತ್ತರೂ ತಮ್ಮನ್ನು ವಿಧವೆಯರೆಂದು

ಭಾವಿಸುವುದಿಲ್ಲ ಬಳೆ ಒಡೆಯುವುದಿಲ್ಲ, ಹೂವು ಮುಡಿಯುವುದಕ್ಕೂ ನಿಷೇಧವಿಲ್ಲ. ಕೈಯಲ್ಲಿ ಗೊಲ್ಲಕಡಗವಿದ್ದರೆ ಮುಗಿಯಿತು. ಅವರು ನಿತ್ಯ ಮುತ್ತೈದೆಯರು ನಮ್ಮ ಬುಡಕಟ್ಟುಗಳ ಈ ಹೃದಯವಂತ ನಡವಳಿಕೆ ಬೇರೆಯವರಿಗೊಂದು ಮಾದರಿ"[2] ಹೀಗೆ ಹೊಗಳಿಕೊಳ್ಳುವ ಗೊಲ್ಲಕಡಗದ ಸಂಸ್ಕೃತಿ ಮಹಿಳಾ ಬದುಕಿನಲ್ಲಿ ಹೃದಯವಂತ ನಡವಳಿಕೆಯಾಗಿ ಕಾಣದೆ. ಆಕೆಗೆ ಪಿತೃ ಪ್ರಧಾನ ಸಮಾಜ ನಯವಾಗಿ ತೊಡಿಸಿದ ಸಂಕೋಲೆಯಾಗಿದೆ. ಬುಡಕಟ್ಟಿನಲ್ಲಿ ಗಂಡ ಸತ್ತ ಮಹಿಳೆಗೆ ಮರುವಿವಾಹದ ಅವಕಾಶವನ್ನು ಈ ಮೂಲಕ ನಿಷೇಧಿಸಿದೆ. ಗಂಡ ಸತ್ತ ಮಹಿಳೆ ಒಂದು ಮಹಾಸತಿಯಾಗಬೇಕಿತ್ತು. ಇಲ್ಲವೇ ಶ್ರೀ ಕೃಷ್ಣನೇ ಗಂಡನೆಂದು ಭಾವಿಸಿ ಶೀಲಾಚಾರ ಕಡಿಸಿಕೊಳ್ಳದೆ ಬಾಳಬೇಕಿತ್ತು.

ದೇವತೆ- ಮಾನವ- ರಾಕ್ಷಸಿ:-

ಕಾಡುಗೊಲ್ಲ ಬುಡಕಟ್ಟು ಸಾಹಿತ್ಯದಲ್ಲಿ ಮಹಿಳೆಯನ್ನು ದೇವತೆ, ಸಾಮಾನ್ಯ ಮಹಿಳೆ, ರಾಕ್ಷಸಿ ಎಂಬ ಭಿನ್ನ ನೆಲೆಗಳಲ್ಲಿ ಗುರುತಿಸಬಹುದಾಗಿದೆ. ದೇವತೆಗಳಾದ ಗೌರಸಂದ್ರದ ಮಾರಿ, ಏಳು ಮಾರಿಯರು ಮನುಷ್ಯರಾದ ಸಿನ್ನಮ್ಮ, ಸಾತಮ್ಮ, ಗಿಡ್ಡಮ್ಮ, ಕಾಟವ್ವ ರಾಕ್ಷಸಿಯಾದ ತಾಳೆದುರ್ಗಿ ಈ ಪಾತ್ರಗಳ ವಿವೇಚನೆಯು ವಿಭಿನ್ನ ರೀತಿಯಲ್ಲಿ ಕಾಡುಗೊಲ್ಲ ಮಹಿಳಾ ಬದುಕನ್ನು ಕಟ್ಟಿಕೊಡುತ್ತದೆ.

ಜುಂಜಪ್ಪನ ಕಾವ್ಯದಲ್ಲಿ ಕಣಿ ಹೇಳುವ ದೇವತೆಯಾಗಿ ಕಾಣುವ ಗೌರಸಂದ್ರದ ಮಾರಿಯನ್ನು ಬುಡಕಟ್ಟಿನ ವೀರರು ಮತ್ತು ಕಾರಣಿಕ ಪುರುಷರೆಲ್ಲರೂ ಗೌರವಿಸುತ್ತಾರೆ. ಈ ಸಾಂಸ್ಕೃತಿಕ ವೀರರು ಮತ್ತು ಕಾರಣಿಕ ಪುರುಷರು ತೊಂದರೆಗೊಳಗಾದ ಸಂದರ್ಭದಲ್ಲಿ ಅವರ ನೆರವಿಗೆ ಬರುವವಳು ಗೌರಸಂದ್ರದ ಮಾರಿ. ಈಕೆ ಮಾನವ ಮತ್ತು ದೇವತೆಗಳ ನಡುವೆ ಸೇತುವೆಯಾಗಿದ್ದಾಳೆ. ಬುಡಕಟ್ಟಿನ ಮುಖ್ಯದೇವತೆಯಾದ ಮಾರಿಯು ತನ್ನ ಗಂಡನಿಗೆ ಹೆದರುತ್ತಾಳೆ. ತಡವಾಗಿ ಹೋದರೆ ತನ್ನ ಇತರ ಸವತಿಯರು ತನ್ನ ಬಗ್ಗೆ ಚಾಡಿ ಹೇಳುತ್ತಾರೆಂದು ತಲ್ಲಣಿಸುತ್ತಾಳೆ. ಪುರುಷ ಪ್ರಧಾನ ಸಮಾಜದ ಒಳಗೆ ಈ ದೇವತೆ ಸಾತ್ವಿಕ ಶಕ್ತಿಯಾಗಿ ಪುರುಷನ ಏಳ್ಗೆಗೆ ಸಹಾಯಕಳಾಗಿ ನಿಲ್ಲುತ್ತಾಳೆ. ಕಾರಣಿಕ ಪುರುಷರ ರಕ್ಷಣೆಗಾಗಿಯೇ ಜನ್ಮಿಸಿರುವಂತೆ ಗೌರಸಂದ್ರದ ಮಾರಿ ಅವರನ್ನು ಕಾಯುತ್ತಾಳೆ. ಬುಡಕಟ್ಟಿನ ಸಮಾಜದ ನಿರೀಕ್ಷೆಯು ಇದೇ ಹಾಗಿದೆ.

ಮನುಷ್ಯ ಪಾತ್ರಗಳಲ್ಲಿ ಚಿನ್ನಮ್ಮ, ಸಾತಮ್ಮ, ಗಿಡ್ಡಮ್ಮ ಕಾಟಮ್ಮ ಮೊದಲಾದ ಮಹಿಳಾ ಪಾತ್ರಗಳು ಪುರುಷನೇ ನಿರ್ಮಿಸಿದ ಸಂಸ್ಕೃತಿಯ ಸಾಕಾರ ಮೂರ್ತಿಗಳಾಗಿದ್ದಾರೆ.

ಕಾಡುಗೊಲ್ಲರು ನಾವು

ನೀವು ಊರು ಜನ

ಈಚೆ ಆದ್ರೆ ಒಳಗಡೆ ಇರ್ತಾರೆ
ನಿಮ್ಮ ಮನೆಯೊಳಗೆ ಹೆಂಗ್ಸೂರು ಹೆರಿಗೆ ಆದ್ರೆ
ಒಳಗೆ ಇರ್ತರಯ್ಯ ನೀವು ಯಾವಾಗಲೂ ಸೂತಕ

ಕಾಡುಗೊಲ್ಲರು ಊರಿನ ಜನಗಳಿಗೂ ತಮಗೂ ಇರುವ ಸಾಂಸ್ಕೃತಿಕ ಅಂತರವನ್ನು ಮೇಲ್ಮೆಯನ್ನು ಹೇಳಲು ಮಹಿಳೆಯರ ಮೂಲಕ ಆಚರಿಸಲ್ಪಡುವ ಸಂಪ್ರದಾಯಗಳನ್ನು ತಿಳಿಸುತ್ತಾರೆ. ಹೆಣ್ಣು ಋತುಮತಿಯಾದಾಗ, ಋತುಚಕ್ರವಾದಾಗ, ಹೆರಿಗೆ ಆದಾಗ ಹಟ್ಟಿಯಿಂದ ಆಚೆಗೆ ಇರಬೇಕಾಗುತ್ತದೆ. ನಿರ್ದಯವಾದ ಈ ಬುಡಕಟ್ಟಿನ ನಡವಳಿಕೆ ಕಾಡುಗೊಲ್ಲರಿಗೆ ಸಾಂಸ್ಕೃತಿಕ ಹಿರಿಮೆಯಾಗಿದೆ. ಈ ಸಂಸ್ಕೃತಿಯನ್ನು ಪಾಲಿಸುವ ಪೋಷಿಸುವ ರಕ್ಷಿಸುವ ಹೊಣೆಗಾರಿಕೆ ಬುಡಕಟ್ಟಿನ ಮಹಿಳೆಯರದ್ದು. ಈ ಸಂಪ್ರದಾಯಗಳನ್ನು ತಪ್ಪಿ ನಡೆದರೆ ಪಾತಿವ್ರತ್ಯಾ ಪರೀಕ್ಷೆಗೆ ಒಳಗಾಗಬೇಕಿತ್ತು. ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುವ ಹಾದಿ ಹಿಡಿಯಬೇಕಿತ್ತು. ಬುಡಕಟ್ಟಿನೊಳಗೆ ಸಾಮಾನ್ಯ ಮಹಿಳೆಗೆ ಸಂಸ್ಕೃತಿಯ ರಕ್ಷಣೆಯ ಹೊಣೆಗಾರಿಕೆ ಇದೆ. ಈ ಹೊಣೆಗಾರಿಕೆ ನಿರ್ವಹಿಸಿದರೆ ಅದರಿಂದ ದೊರೆಯುವ ಕೀರ್ತಿ ಪುರುಷ ಸಮಾಜದ ಪಾಲಾಗುತ್ತದೆ.

'ಹೆಣ್ಣು ಸೂರ್ಯ ಮುಣುಕಿದ ಮೇಲೆ ನಮ್ಮ ಗೊಲ್ಲ ಗೋಣಿಯೊಳಗೆ ಹುಟ್ಟಿದ ಮ್ಯಾಲೆ ಇಲ್ಲ ಕೆಳ ಮನೆಯೊಳಗೆ ಕಿರುಪಿನಿಂದ ಒಳಗಡೆ ಇರಬೇಕು. ಊರೊಳಗೆ ಒಂದೇ ಒಂದು ರಾತ್ರಿ ನಿಂತವಳೆ ಅಂದ್ರೆ ಕೆಟ್ಟೋಗೌಳೆ ಅಂತ'. ಹೀಗೆ ಹೆಣ್ಣಿನ ಬದುಕಿನ ಚಲನೆಯನ್ನು ನಿರ್ಬಂಧಿಸಿ ಗೃಹವೆಂಬ ಚೌಕದೊಳಗೆ ಬಂಧಿಸ ಬಯಸುವ ಬುಡಕಟ್ಟಿನ ಸಮಾಜ ಮಹಿಳೆಗೆ ಹೊರ ಜಗತ್ತಿನ ಅರಿವನ್ನು ನಿರಾಕರಿಸಿತು. ಬುಡಕಟ್ಟಿನೊಳಗೆ ಹುಟ್ಟಿದ ಹೆಣ್ಣು ಮನೆಯೊಳಗೆ ಗಂಡ ಮಕ್ಕಳ ಸೇವೆಯಲ್ಲೇ ಬದುಕನ್ನು ಕಂಡುಕೊಂಡವಳು. ಅಷ್ಟೇಅಲ್ಲದೆ ಬುಡಕಟ್ಟಿನ ಸಂಸ್ಕೃತಿಯನ್ನು ಕಾಪಾಡುವ ಹೊಣೆಹೊತ್ತವಳು. ಋತು ಸೂತಕ, ಮೈಲಿಗೆ ಈ ಭಾವಗಳಲ್ಲಿ ಅವಳ ಬದುಕು ನರಳಿದೆ. ಜೈವಿಕವಾಗಿ ದತ್ತವಾದ ಸ್ತ್ರೀ ಬದುಕಿನ ಸಂಗತಿಗಳನ್ನು ಮೈಲಿಗೆ ಎಂದು ಭಾವಿಸುವ ಮನಸ್ಸುಗಳೇ ಮಲಿನವಾದವು.

ಜುಂಜಪ್ಪನ ಕಾವ್ಯದಲ್ಲಿ ತಾಳೆದುರುಗಿ ಅಪಾರ ಸಾಮರ್ಥ್ಯವುಳ್ಳ ಹೆಣ್ಣು. ಪುರುಷ ಸಮಾಜದ ಸಂಪ್ರದಾಯಗಳನ್ನು ಮುರಿಯುವ ಈಕೆಯನ್ನು ರಾಕ್ಷಸೀ ಶಕ್ತಿ ಎಂದು ಕರೆದು ಅಪಮಾನಿಸಲಾಗಿದೆ. ಸಾತ್ವಿಕ ಶಕ್ತಿಯ ರೂಪಗಳಾದ ಬುಡಕಟ್ಟಿನ ದೇವತೆಗಳು ಸಂಸ್ಕೃತಿ ಪೋಷಕರು. ಸಾಮಾನ್ಯ ಮಹಿಳೆಯರು ಸಂಸ್ಕೃತಿ ಪಾಲಕರು ರಕ್ಷಕರು. ಈ ಮಹಿಳೆಯರು ಎಲ್ಲಿಯೂ ಬುಡಕಟ್ಟು ಸಂಸ್ಕೃತಿಯ ಸಂಕೋಲೆಗಳನ್ನು ಮುರಿಯುವುದಿಲ್ಲ. ಹಾಗಾಗಿ ಇವರು ನಿಂದಿಸಲ್ಪಡುವುದಿಲ್ಲ. ಪಿತೃಪ್ರಧಾನ ವ್ಯವಸ್ಥೆಯ ಸಂಕೋಲೆಗಳನ್ನು ಮುರಿಯಲು ಸಾಧ್ಯವಿರುವುದು ತಾಳೆದುರುಗಿಯಂತ ಹೆಣ್ಣಿಗೆ ಮಾತ್ರ

ಸಾಧ್ಯ. ಈಕೆಯನ್ನು ಅಂಟು ಮುಟ್ಟಿನ ದೇವತೆಯೆಂತಲೂ ಕರೆಯುತ್ತಾರೆ. ಸಾಂಸ್ಕೃತಿಕ ನಾಯಕನು, ಕಾರಣ ಜನ್ಮನೂ ಆದ ಜುಂಜಪ್ಪ ಈಕೆಯನ್ನು ನೋಡಿದರೆ ನಡುಗುತ್ತಾನೆ. ಹೆದರಿ ಓಡುತ್ತಾನೆ. ತಾಳೆಮುರುಗಿ ಪ್ರಸಂಗ ಜುಂಜಪ್ಪ ಮತ್ತು ತಾಳೆಮುರುಗಿಯ ನಡುವಿನ ಸಂಘರ್ಷವಾಗಿ ಮಾತ್ರ ಕಾಣದೆ ಪುರುಷ ಮತ್ತು ಮಹಿಳೆಯ ನಡುವಿನ ಮಡಿ ಮೈಲಿಗೆಯ ಘರ್ಷಣೆಯಾಗಿಯೂ ಕಾಣುತ್ತದೆ.

ಕಾರಣಿಕ ಪುರುಷನಾದ ಜುಂಜಪ್ಪ ತಾಯಿಯ ಹೊಟ್ಟೆಯಲ್ಲಿದ್ದಾಗ ಯೋಚಿಸಿದವನೆ ಮೈಲಿಗೆ ಯಾಗುತ್ತೇನೆ, ಊರೊಳಗಿದ್ದರೆ ಮೈಲಿಗೆಯಾಗುತ್ತೇನೆ ಎಂದು ತನ್ನ ತಾಯಿಯನ್ನು ಊರಿನ ಆಚೆಗೆ ಕರೆದುಕೊಂಡು ಹೋಗಿ ಜಪ್ಪಿನಲ್ಲಿ ಹುಟ್ಟಿ ಬರುತ್ತಾನೆ. ಬುಡಕಟ್ಟಿನ ಮಹಿಳೆಯರು ಹೆರಿಗೆ ಸೂತಕದ ಸಂದರ್ಭದಲ್ಲಿ ಹಟ್ಟಿಯಿಂದ ಹೊರಗಿರಬೇಕೆಂಬ ನಿಯಮವನ್ನು ಹೊರಿಸುತ್ತಾನೆ. ಈ ನಿಯಮವನ್ನು ಮಹಿಳೆಯರು ಪಾಲಿಸುತ್ತಾರೆ. ಮೈಲಿಗೆ ಎಂದು ಹೀಗಳೆಯುವ ಸಂಸ್ಕೃತಿಗೆ ಸವಾಲಾದವಳು ತಾಳೆ ಮುರುಗಿ. ಯಾವುದನ್ನು ಸೂತಕ ಮೈಲಿಗೆ ಎನ್ನಲಾಗುತ್ತದೋ ಅದೇ ಬಟ್ಟೆಗಳನ್ನು ಧರಿಸಿ ಸಂಸ್ಕೃತಿ ನಿರ್ಮಾಣತ್ವಗಳನ್ನೇ ನಾಶಮಾಡುವ ಸಂಹಾರಕ ಶಕ್ತಿಯಾಗಿ ತಾಳೆಮುರುಗಿ ಕಾಣುತ್ತಾಳೆ.

“ಸ್ತ್ರೀವಾದಿ ಸಾಹಿತ್ಯದ ವಿಶಿಷ್ಟತೆ ಇರುವುದು ಗಂಡು ಯಾವುದನ್ನು ನೇತ್ಯಾತ್ಮಕ ಲಕ್ಷಣಗಳು ಎಂದು ಭಾವಿಸಿದ್ದನೋ ಅವಕ್ಕೆ ಸಾತ್ವಿಕ ಸವಾಲನ್ನು ನೀಡಿದ್ದರಲ್ಲಿ ಹೆಣ್ಣು ಕೇಂದ್ರವಲ್ಲ ಆಕೆ ಅಂಚಿನವಳು ಎಂದಿರಾ? ಅಂಚೇ ಕೇಂದ್ರವನ್ನು ಹಿಡಿದು ಅಲ್ಲಾಡಿಸುತ್ತದೆ. ಹೆಣ್ಣು ತೀವ್ರವಾಗಿರುತ್ತಾಳೆ ನೈತಿಕವಲ್ಲ ಎಂದಿರಾ ತೀವ್ರತೆಯನ್ನು ನೈತಿಕ ಎಂದು ಭಾವಿಸಿ ನಿಮ್ಮ ನೀತಿಗಳನ್ನು ನುಗ್ಗಿ ಪುಡಿ ಮಾಡುತ್ತಾಳೆ.” ಯಾವುದರಿಂದ ಸ್ತ್ರೀಯರ ಬದುಕು ಹೊಲೆ ಸೂತಕವಾಗಿತ್ತೋ ಆ ಸಂಗತಿಯಿಂದಲೇ ಪುರುಷ ಸಮಾಜವನ್ನು ಅದರ ಒಡೆತನವನ್ನು ಹೊಡೆದುರುಳಿಸುವ ತಂತ್ರವನ್ನು ತಾಳೆಮುರುಗಿ ನಮ್ಮ ಮುಂದಿಡುತ್ತಾಳೆ.

ಸೂತಕದ ಬಟ್ಟೆಗೊಳೆಲ್ಲ
ಕೊರಳಿಗೆ ರುಂಡಮಾಲೆ ಹಾಕ್ಕಂಡು
ಬಂದು ಬಿಡ್ತಾಳೆ ಹೊಲೆಸ್ತ್ಯಾಲೆಗೊಳ್ಳ
ಅವಳು ಮುಟ್ಕಂಬಟ್ರೆ
ನನಗೆ ಇಲ್ಲದ ಅಂಟು ಮುಟ್ಟು
ಬತಗೆಡಿಸಿ ಬಿಡುತ್ತಾಳೆ.

ಎಂದು ತಾಳೆಮುರುಗಿಯನ್ನ ಕಂಡವನೇ ಜುಂಜಪ್ಪ ಹೆದರಿ ಓಡುತ್ತಾನೆ. ಅವನನ್ನು ಅಟ್ಟಿಸಿಕೊಂಡು ಹೋಗುವ ದುರುಗಿಗೆ ಮುನ್ನೂರು ಅರವತ್ತು ಕೋಟಿಲಿಂಗ, ಒಂಭತ್ತು ಜನ ರಂಗಪ್ಪಗಳು ಏಳು ಮಂದಿ ಮಾರಿಯರು ಶರಣಾಗಿದ್ದಾರೆ. ಇಂತಹ ದುರುಗಿ ಪುರುಷ ಪರವಾದ ನಿಲುವುಗಳನ್ನು ಒಡೆಯುವ ಶಕ್ತಿಯುಳ್ಳ ಹೆಣ್ಣಾಗಿ ಕಾಣುವುದು ವಿಶೇಷ.

ಪತಿವ್ರತಾಶಕ್ತಿ:-

ಕಾಡುಗೊಲ್ಲ ಮಹಿಳೆಯರ ಪತಿವ್ರತಾತನ ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಒಂದು ಶಕ್ತಿ. ಉಚ್ಚ ಸಂಸ್ಕೃತಿಗಳು ಮಹಿಳೆಯ ಪತಿನಿಷ್ಠೆಯನ್ನು ಒಂದು ಮೌಲ್ಯ ಶಕ್ತಿ ಎಂದು ಕರೆದಿದೆ. ಬುಡಕಟ್ಟಾದ ಕಾಡುಗೊಲ್ಲರ ಸಂಸ್ಕೃತಿಯಲ್ಲಿಯೂ ಮಹಿಳೆಯರು ಪತಿವ್ರತೆಯರಾಗಿರಬೇಕೆಂದು ಬಯಸಲಾಗಿದೆ. ಭಾಗಶಃ ವಿವಿಧ ಸಮಾಜಗಳ ಸಂಸ್ಕೃತಿಗಳು ಮಹಿಳೆಯರ ವಿಷಯದಲ್ಲಿ ಉದಾರವಾಗಿಲ್ಲದಿರುವಿಕೆ ಸ್ಪಷ್ಟವಾಗಿಯೇ ಗೋಚರಿಸುತ್ತದೆ.

"ಪತಿವ್ರತೆಯರು ಎಂದಾಕ್ಷಣ ನಮಗೆ ನೆನಪಾಗುವುದು ಸೀತೆ ಮಂಡೋದರಿ , ಅಹಲ್ಯೆ, ದ್ರೌಪದಿ ಎಂಬ ಹೆಸರುಗಳು. ಇದು ಪುರಾಣಗಳ ಮೂಲಕ ತಿಳಿದು ಬರುವ ವಿಚಾರ. ಇದೇ ರೀತಿ ಜನಪದ ಸಾಹಿತ್ಯದಲ್ಲೂ ಪತಿವ್ರತೆಯರನ್ನು ಗುರುತಿಸುವುದು ಕಂಡು ಬರುತ್ತದೆ. ಹಳ್ಳಿಕಾರ, ತಿಗಳ, ಗೊಲ್ಲ ಜಾತಿಯ ಹೆಂಗಸರನ್ನು ಪತಿವ್ರತೆಯರು ಎಂದು ಕರೆಯುವ ಜನಪದ ಸಂಸ್ಕೃತಿಯೊಂದು ಕಂಡು ಬರುತ್ತದೆ."[5] ಶಿಷ್ಟ ಸಂಸ್ಕೃತಿಯಂತೆಯೇ ಜನಪದ ಸಂಸ್ಕೃತಿಯೂ ಮಹಿಳೆಯಿಂದ ಪಾತಿವ್ರತ್ಯವನ್ನೇ ನಿರೀಕ್ಷಿಸುತ್ತದೆ

ಕರಡಿ ಬುಳ್ಳಪ್ಪನ ಕಥೆಯಲ್ಲಿ ಮುಸ್ಲಿಂದೊರೆ ತನ್ನ ಖಡ್ಗದಿಂದ ಮಗುವನ್ನು ಕೊಲ್ಲ ಹೊರಟಾಗ ಮಗುವನ್ನು ಕಾಪಾಡುವುದು ತಾಯಿಯ ಪತಿವ್ರತಾತನ. ರಾಜನೊಬ್ಬ ಕಟ್ಟಿಸುತ್ತಿದ್ದ ಕೆರೆಯ ಏರಿ ನಿಲ್ಲದಾಗ ನಿಲ್ಲಿಸಲು ಸಾಧ್ಯವಾಗುವುದು ಹಳ್ಳಿಕಾರ, ತಿಗಳ, ಗೊಲ್ಲಜಾತಿಯ ಗರತಿಯರು ಹಾಲು ಬಿಟ್ಟು ಗಂಗಾದೇವಿಯನ್ನು ಪೂಜಿಸಿದ್ದರಿಂದ. ಜುಂಜಪ್ಪ ತನ್ನ ತಾಯಿಯನ್ನು ಸಮುದ್ರದಿಂದ ಮುತ್ತು ತೆಗೆಸುವುದು, ಒನಕೆಯಲ್ಲಿ ಚಿಗುರು ತೆಗೆಸುವುದು, ಜರಡಿಯಲ್ಲಿ ನೀರು ನಿಲ್ಲಿಸುವಂತೆ ಪರೀಕ್ಷೆ ಒಡ್ಡಿದಾಗ ಆಕೆಯನ್ನು ರಕ್ಷಿಸುವುದು ಅವಳ ಪತಿವ್ರತಾಶಕ್ತಿ. ಹೀಗೆ ಬುಡಕಟ್ಟಿನ ಮಹಿಳೆಯರ ಪತಿವ್ರತಾತನವನ್ನು ಆಕೆಯ ಶಕ್ತಿಯನ್ನಾಗಿ ಒಂದು ರೀತಿಯ ಆಯುಧವನ್ನಾಗಿ ಸಮಾಜ ನಿರ್ವಹಿಸಿದೆ. ವಾಸ್ತವದಲ್ಲಿ ಈ ಶಕ್ತಿಯನ್ನು ಆಯುಧವನ್ನು ತನ್ನ ಬದುಕಿನ ಅಗತ್ಯಕ್ಕೆ

ಅವಶ್ಯಕತೆಗೆ, ಇಚ್ಛೆಗೆ ಎಂದೂ ಮಹಿಳೆ ದುರುಪಯೋಗ ಪಡಿಸಿಕೊಂಡಿಲ್ಲ. ಆ ಅವಕಾಶವೂ ಒದಗಲಿಲ್ಲ.

ಪ್ರಾಚೀನಕಾಲದಲ್ಲಿ ಮದುವೆಯಾಗದೆ ಮೈನೆರೆದ ಮದುವೆಗೆ ಮುನ್ನವೆ ಮಕ್ಕಳನ್ನು ಹೆತ್ತ ಹೆಣ್ಣುಗಳನ್ನು ಕಾಡುಪಾಲು ಮಾಡುತ್ತಿದ್ದರು. ಹೀಗೆ ಕಾಡು ಸೇರಿದ ಹೆಣ್ಣುಗಳಲ್ಲಿ ಹುಟ್ಟಿದ ಮಕ್ಕಳಿಗೆ ಕುಲವನ್ನು ಪಡೆಯಲು ಹೆಣ್ಣುಗಳು ಹರಸಾಹಸ ಪಡುತ್ತಿದ್ದರು. ಜುಂಜಪ್ಪನ ಕಾವ್ಯದಲ್ಲಿ ಗೊಲ್ಲಕುಲದ ಹುಟ್ಟಿನ ಸಂದುಪಿನಲ್ಲಿ ಚಂದಾಲಗಂಗಮ್ಮ ಮದುವೆಗೆ ಮುನ್ನ ಮಗು ಹಡೆಯುತ್ತಾಳೆ. ಕಾವಲುಗಾರರು ಆ ಮಗುವನ್ನು ಸಾಕಿಕೊಳ್ಳುತ್ತಾರೆ. ಗಂಗಮ್ಮ ಕಾಡು ಪಾಲಾಗುತ್ತಾಳೆ. ಬಂಜೆಗೆರೆ ಈರಣ್ಣನ ಕಥೆಯಲ್ಲಿ ತನ್ನ ಮಗಳು ಕುಂಟ ಸೋಮಗೊಂಡನಿಂದ ಗರ್ಭಿಣಿಯಾದಾಗ ಇವಳನ್ನು ಕಾಡಿನಲ್ಲಿ ಕಡಿದು ಬರ್ರಿ ಎಂದು ಅಪಮಾನಿಸಿದಾಗ ಕಾಡುಪಾಲಾದ ಇವರು ಕಾಡಿನಲ್ಲಿಯೇ ಸಂಸಾರ ನಡೆಸುತ್ತಾರೆ. ಕೊನೆಗೆ ತಮ್ಮ ತಾತನನ್ನು ಸೆರೆಯಿಂದ ಬಿಡಿಸಿದ ಕಾರಣದಿಂದ ಕುಲ ಪಡೆದು ಬಾಳುತ್ತಾರೆ.

ಈ ಕಥೆಗಳು ಮಹಿಳೆಯರನ್ನು ಪಿತೃಪ್ರಧಾನ ಬುಡಕಟ್ಟು ಸಮಾಜ ಪತಿವ್ರತಾ ಬಂಧನದಲ್ಲಿರಿಸಿತು ಎಂಬುದಕ್ಕೆ ನಿದರ್ಶನವಾಗಿದೆ. ಮಹಿಳೆಯ ಮೇಲಿನ ಒಡೆತನ ಪುರುಷನಿಗೆ ಸೇರಿದ್ದು. ಈ ಒಡೆತನವನ್ನು ಬಿಟ್ಟುಕೊಡಲು ಈ ಬುಡಕಟ್ಟು ಸಮಾಜ ಇಷ್ಟಪಡಲಿಲ್ಲ. ಈ ಕಾರಣಕ್ಕಾಗಿಯೇ ಮಹಿಳೆಯ ಮೇಲೆ ಪತಿವ್ರತಾ .ಮಾದರಿಗಳನ್ನು ಹೊರಿಸಲಾಯಿತು. ಅದನ್ನು ಪಾಲಿಸುವಂತೆ ಒತ್ತಾಯಿಸಲಾಯಿತು. ಪತಿವೃತಾ ಧರ್ಮಕ್ಕೆ ಅರ್ಪಿಸಿಕೊಂಡವಳನ್ನು ಈ ಕಾರಣದಿಂದಾಗಿಯೇ ಪೂಜಿಸಲಾಯಿತು. ಪುರುಷಪ್ರಧಾನ ಸಮಾಜ ಮಹಿಳೆಯರನ್ನು ನೈತಿಕವಾಗಿ ಬಂಧಿಸಿದ ಬಂಧನವಾಗಿ ಈ ಪತಿವ್ರತಾತನ ಕಾಣುತ್ತದೆ. ಇದನ್ನೆ ಶಕ್ತಿಯೆಂದು ಭ್ರಮಿಸಿದ್ದು ಕಾಡುಗೊಲ್ಲ ಮಹಿಳಾ ಬದುಕಿನ ದುರಂತವೂ ಹೌದು.

ಸಾಂಸ್ಕೃತಿಕ ರಾಜಕಾರಣ:-

ಕಾಡುಗೊಲ್ಲ ಬುಡಕಟ್ಟಿನ ಸಾಂಸ್ಕೃತಿಕ ರಕ್ಷಣೆಯ ಹೊಣೆಗಾರಿಕೆ ಮಹಿಳೆಯರಿಗೆ ಸೇರಿದ್ದು, ಹೊಣೆಗಾರಿಕೆಯಿಂದ ಉಂಟಾದ ಕೀರ್ತಿ ಪುರುಷ ಕಸಿದುಕೊಂಡದ್ದು. ಇತ್ತೀಚೆಗೆ ಸಾಂಸ್ಕೃತಿಕ ವೀರರು ಎಂಬ ಪರಿಕಲ್ಪನೆ ಬುಡಕಟ್ಟಿನ ಸಂಸ್ಕೃತಿಯ ವಿಚಾರದಲ್ಲಿ ಪದೇ ಪದೇ ಕಾಣಿಸುತ್ತಿದೆ. ಈ ಸಾಂಸ್ಕೃತಿಕ ವೀರತನ ಎಂಬುದೇ ಒಂದು ಕಣ್ಕಟ್ಟು. ಸಾಂಸ್ಕೃತಿಕ ಒಡೆತನ ಯಾರೊಬ್ಬರದೂ ಆಗಿಲ್ಲ. ಬುಡಕಟ್ಟಿನ ಬದುಕಿನಲ್ಲಿ ಮಹಿಳೆಯರ ಪುರುಷರ ಸಮಭಾಗಿತ್ವ ಇರಬೇಕಾದರೆ ಕೆಲವರನ್ನು ಮಾತ್ರ

ಸಾಂಸ್ಕೃತಿಕ ವೀರರೆಂದು ಕರೆದಿರುವುದು ಸ್ತ್ರೀ ಪರ ದೃಷ್ಟಿಕೋನದಿಂದ ಶೋಷಣಾತ್ಮಕವಾದುದು. ಇದು ಪುರುಷ ನಿರ್ವಚಿಸಿದ ಪರಿಭಾಷೆ ಎಂಬುದನ್ನು ಕೆಳಗಿನ ಅಭಿಪ್ರಾಯಗಳು ಧೃಡೀಕರಿಸುತ್ತದೆ "ಒಂದು ಜನಾಂಗದ ಸಂಸ್ಕೃತಿಯನ್ನು ರೂಪಿಸಿದವರನ್ನು ಸ್ಥೂಲವಾಗಿ ಸಾಂಸ್ಕೃತಿಕ ವೀರ ಎಂದು ಕರೆಯುತ್ತೇವೆ".[1] "ವೀರರೆಂದರೆ ಅವರು ಕತ್ತಿ ಹಿಡಿದು ಹೋರಾಡಿ ಮಡಿಯಬೇಕಾಗಿರಲಿಲ್ಲ, ಅವರು ರಕ್ತಪಾತವಿಲ್ಲದೆ ಧರ್ಮಕಾರಣಕ್ಕೆ ಅರ್ಪಿಸಿಕೊಂಡವರೂ ಇರಬಹುದು".[2] "ತಾವೂ ನಂಬಿಕೊಂಡ ಮೌಲ್ಯಗಳಿಗೆ ತಮ್ಮ ಜನಾಂಗದ ಸಂಸ್ಕೃತಿಗೆ ಎಂದೂ ಚ್ಯುತಿ ಬಾರದಂತೆ ನಡೆದುಕೊಂಡು ತಮ್ಮ ಕುಲಶೀಲಗಳಿಗೆ ಭಂಗ ಒದಗಿದಾಗ ಬದುಕನ್ನು ತೃಣವೆಂದು ತಿಳಿದು ಜೀವ ಬಿಟ್ಟವರು ಇಂತ ವೀರ ಜೀವನ ನಡೆಸಿದವರನ್ನು ವೀರರು ಎನ್ನುತ್ತೇವೆ. ಈ ವೀರ ಎಂಬುದು ಆಡುನುಡಿಯಲ್ಲಿ ಈರನಾಗಿದ್ದು ಇಂತ ಆದರ್ಶ ಜೀವಿಗಳನ್ನು ಈರಗಾರರು ಎನ್ನುತ್ತೇವೆ".[3] "ಸಾಂಸ್ಕೃತಿಕ ವೀರರು ಅಯೋನಿಜರು ಅಂದರೆ ತಾಯಿಯ ಗರ್ಭದಿಂದ ಹುಟ್ಟಿದವರು, ಕಾರಣಜನ್ಮಿಗಳು ಅವರ ಹುಟ್ಟಿನಲ್ಲಿ ದೇವಾನು ದೇವತೆಗಳ ಕೈವಾಡವಿದೆ ಎಂಬ ನಂಬಿಕೆಯಿದೆ".[4] "ಒಂದು ಸಮುದಾಯದ ಪುರಾಣ ಜನರ ಐತಿಹ್ಯ ಪ್ರತೀತಿಗಳಲ್ಲಿ ತನ್ನ ಜನರಿಗೆ ಸಂಸ್ಕೃತಿಯನ್ನು ರೂಪಿಸಿದ ಅಥವಾ ತಂದು ಕೊಟ್ಟ ವ್ಯಕ್ತಿಗೆ ಸಾಂಸ್ಕೃತಿಕ ವೀರ ಎನ್ನಲಾಗುತ್ತದೆ".[5]

ಮೇಲಿನ ಸಾಂಸ್ಕೃತಿಕ ವೀರರು ಎಂದರೆ ಯಾರು ಎಂದು ಪುರಷನನ್ನೆ ದೃಷ್ಟಿಯಲ್ಲಿಟ್ಟುಕೊಂಡು ವಿವೇಚಿಸಲಾಗಿದೆ. ಕಾಡುಗೊಲ್ಲ ಬುಡಕಟ್ಟು ಸಂಸ್ಕೃತಿಯ ನಿರ್ಮಾತೃ ಪುರುಷರಾದರೆ ಅದರ ರಕ್ಷಕರು ಮಹಿಳೆಯರು. ಈ ಬುಡಕಟ್ಟಿನಲ್ಲಿ ಸಾಂಸ್ಕೃತಿಕ ಬದುಕಿನ ಒಡೆತನ ಇಬ್ಬರಿಗೂ ಸೇರಿದ್ದು. ಇಲ್ಲಿ ಮಹಿಳೆಯರು ಆದರ್ಶ ಜೀವಿಗಳಾಗಿ ಶೀಲಪಾವಿತ್ರ್ಯಕ್ಕೆ ದಕ್ಕೆ ಬಂದಾಗ ಕೊಂಡವಾಗಿದ್ದಾರೆ. ಇವರನ್ನು ಸಾಂಸ್ಕೃತಿಕ ವೀರರ ಚೌಕಟ್ಟಿನಿಂದ ಹೊರಗಿಡಲಾಗಿದೆ. ಈ ಬುಡಕಟ್ಟಿನಲ್ಲಿ ಒಡೆಯ ಸೇವಕನ ಮಾದರಿಯಲ್ಲಿ ಸಾಂಸ್ಕೃತಿಕ ಒಡೆತನ ಪುರುಷನಿಗೂ ಸೇವಕತನ ಮಹಿಳೆಗೆ ಲಭ್ಯವಾಗಿದೆ. ಹೀಗೆ ಸಾಂಸ್ಕೃತಿಕ ಮುನ್ನಡೆಯಲ್ಲಿ ಪುರುಷಮಾತ್ರ ಗುರುತಿಸಿಕೊಂಡು ಮಹಿಳೆ ಅಗೋಚರವಾಗಿಯೇ ಉಳಿದಿರುವುದು ಸಾಂಸ್ಕೃತಿಕ ರಾಜಕಾರಣ ಎನ್ನಬಹುದು.

ಕೊನೆ ಟಿಪ್ಪಣಿ

1. ಪ್ರಸ್ತಾವನೆ- ಜುಂಜಪ್ಪ (ಸಂ) ಚೆಲುವರಾಜು
2. ಪುಟ 62 ಗೊಲ್ಲಕಡಗ ಡಾ. ಮೀರಾಸಾಬಿಹಳ್ಳಿ ಶಿವಣ್ಣ
3. ಪುಟ 12 ಸಂಸ್ಕೃತಿ ಕಥನ- ಡಾ. ಡಿ.ಆರ್ ನಾಗರಾಜ
4. ಪುಟ 8 ಹೊನ್ನೆಮರದ ಈರಣ್ಣ- ಡಾ. ಶಿವಣ್ಣ ಬೆಳವಾಡಿ
5. ಪುಟ 62 ಕಣಜ- ಡಾ.ಮೀರಾಸಾಬಿಹಳ್ಳಿ ಶಿವಣ್ಣ

6. ಪುಟ 63 ಪಶುಪಾಲಕ ವೀರರ ಕಥೆಗಳು–ಡಾ.ಮೀರಾಸಾಬಿ ಶಿವಣ್ಣ

7. ಪುಟ xii ಅದೇ

8. ಪುಟ xii ಅದೇ

9. ಪುಟ 36 ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು–ಡಾ. ವಿರುಪಾಕ್ಷಿ ಪೂಜಾರಹಳ್ಳಿ

ಅಧ್ಯಾಯ 5

ಕಾಡುಗೊಲ್ಲ ಕಂಟಕಾವರಣ

ಕರ್ನಾಟಕದ ಸಾಂಸ್ಕೃತಿಕ ಮತ್ತು ಭೌಗೋಳಿಕ ಚರಿತ್ರೆಯಲ್ಲಿ ತಮ್ಮ ವಿಶಿಷ್ಟ ಸಂಪ್ರದಾಯ, ಆಚರಣೆ, ನಂಬಿಕೆ ನಿಷೇದ ಮತ್ತು ನೆಲೆಗಳ ಮೂಲಕ ಗುರುತಿಸಿಕೊಂಡಿರುವವರು ಕಾಡುಗೊಲ್ಲ ಬುಡಕಟ್ಟು, ಇಂದಿಗೂ ಹಿಂದುಳಿದ ಬುಡಕಟ್ಟು ಎಂಬ ಹಣೆಪಟ್ಟಿಯೊಂದಿಗೆ ಕಾಡುಗೊಲ್ಲರು ಊರಿನಿಂದ ಪ್ರತ್ಯೇಕವಾಗಿ ಹಟ್ಟಿ ಸಂಸ್ಕೃತಿಯಲ್ಲಿ ವಾಸಿಸುತ್ತಿದ್ದಾರೆ.ನಾಗರೀಕತೆ ಮತ್ತು ಆಧುನಿಕತೆ ಈ ಎರಡು ಸಂಗತಿಗಳು ಕಾಡುಗೊಲ್ಲರ ಇಂದಿನ ಬದುಕನ್ನು ತೀವ್ರವಾಗಿ ಪ್ರಭಾವಿಸುತ್ತಿವೆ. ಕಾಡುಗೊಲ್ಲರ ಸಾಂಸ್ಕೃತಿಕ ವೈಶಿಷ್ಟ್ಯತೆಗಳೇ ಅವರನ್ನು ನಾಗರೀಕತೆಯ ಓಟದಲ್ಲಿ ಹಿಂದುಳಿಯುವಂತೆ ಮಾಡಿವೆ. ಅನಿವಾರ್ಯವಾಗಿ ಇವುಗಳನ್ನು ತ್ಯಜಿಸಿ ನಾಗರೀಕ ಸಮಾಜದಲ್ಲಿ ಉತ್ತಮ ಬದುಕಿಗಾಗಿ ಸೆಣಸುತ್ತಾ ಬುಡಕಟ್ಟಿನಿಂದ ಹೊರಟು ಜಾತಿಯಾಗಲು ಹಠಕ್ಕೆ ಬಿದ್ದಂತೆ ಸಂಘಟನೆ, ಹೋರಾಟಗಳಲ್ಲಿ ತೊಡಗಿಕೊಂಡಿರುವ ಕಾಡುಗೊಲ್ಲರನ್ನು ಕುರಿತುಅಧ್ಯಯನಗಳು ಇಂದು ವ್ಯಾಪಕವಾಗಿ ನಡೆಯುತ್ತಿವೆ.

ತುಮಕೂರು ಮಧ್ಯಕರ್ನಾಟಕದ ಮುಖ್ಯಭಾಗವಾಗಿದ್ದು ವಿಸ್ತಾರವಾದ ಕಾವಲುಗಳು ಬೆಟ್ಟಗುಡ್ಡಗಳಿರುವ ಪ್ರದೇಶವಾಗಿದೆ. ಹೀಗಾಗಿ, ಕಾಡುಗೊಲ್ಲರು ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ.ಪ್ರಾರಂಭದಲ್ಲಿ ಅಲೆಮಾರಿಗಳಾಗಿದ್ದ ಪಶುಪಾಲಕರಾಗಿದ್ದ ಇವರು ಇಂದು ಸ್ಥಿರಬದುಕಿನ ನೆಲೆಗಳನ್ನು ಕಂಡುಕೊಂಡಿದ್ದಾರೆ.

ಕರ್ನಾಟಕದ ಮೂಲನಿವಾಸಿಗಳಲ್ಲಿ ಒಬ್ಬರೆನಿಸುವ ಕಾಡುಗೊಲ್ಲರದು ಮುಖ್ಯ ಬುಡಕಟ್ಟು ಸಮುದಾಯ.ಗ್ರಾಮೀಣ ಪ್ರದೇಶದಲ್ಲಿ ಬಹುಸಂಖ್ಯೆಯಲ್ಲಿ ನಗರದಲ್ಲಿ ವಿರಳವಾಗಿ ನೆಲೆಸಿರುವ ಕಾಡುಗೊಲ್ಲರಲ್ಲಿ ಹಟ್ಟಿ ಸಂಸ್ಕೃತಿ ಇನ್ನೂ ಉಸಿರಾಡುತ್ತಿದೆ. ಪಾವಗಡ ತಾಲ್ಲೂಕಿನಲ್ಲಿ 22 ಗೊಲ್ಲರಹಟ್ಟಿಗಳು ಕಂದಾಯದ ಹಟ್ಟಿಗಳೆಂದು ಪರಿಗಣಿಸಲ್ಪಟ್ಟಿವೆ. ಅವುಗಳೆಂದರೆ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ ಕುಲುಮೆಹಟ್ಟಿ, ಕೆ.ಟಿ.ಹಳ್ಳಿ ಗೊಲ್ಲರಹಟ್ಟಿ, ಲಿಂಗದಹಳ್ಳಿ ಗೊಲ್ಲರಹಟ್ಟಿ, ಕಾರನಾಗನಹಟ್ಟಿ, ಪೊನ್ನಸಮುದ್ರ ಗೊಲ್ಲರಹಟ್ಟಿ, ಹೊಸಹಳ್ಳಿ ಗೊಲ್ಲರ ಹಟ್ಟಿ, ಚಿಕ್ಕತಿಮ್ಮನ ಹಳ್ಳಿ ಗೊಲ್ಲರಹಟ್ಟಿ, ಕೆಂಚಮ್ಮನ ಗೊಲ್ಲರಹಟ್ಟಿ, ಚಿತ್ತಗಾನಹಳ್ಳಿ ಗೊಲ್ಲರಹಟ್ಟಿ, ಕೋಣಸಕುಂಟೆ ಗೊಲ್ಲರಹಟ್ಟಿ, ಜೋಗಾರಹಟ್ಟಿ, ಚನ್ನಸಾಗರದ ಹಟ್ಟಿ, ದೇವರಹಟ್ಟಿ, ಬೊಮ್ಮನಹಟ್ಟಿ ಈರಮುದ್ದನಹಟ್ಟಿ, ಗೌಡಗಾರನಹಟ್ಟಿ, ಜಂಗಮರಹಳ್ಳಿ ಗೊಲ್ಲರಹಟ್ಟಿ, ಕಾಮನಹಟ್ಟಿ, ಕಣವೇನಹಳ್ಳಿ ನಾಯಕನಹಟ್ಟಿ, ಬ್ಯಾಡನೂರ ಗೊಲ್ಲರಹಟ್ಟಿ, ಎರಪಾಳ್ಯಗೊಲ್ಲರಹಟ್ಟಿ. ಈ ಗೊಲ್ಲರಹಟ್ಟಿಗಳ ಊರಿನಿಂದ ಪ್ರತ್ಯೇಕವಾಗಿವೆ. ಅಲ್ಲದೆ ತಮ್ಮದೇ ಆದ ಜೀವನ-ವಿಧಾನ, ಉಡುಗೆ, ತೊಡಿಗೆ, ಆಹಾರ ಪದ್ಧತಿ,

ಕಸುಬು, ಸಂಪ್ರದಾಯ, ಆಚರಣೆಗಳು, ಸಾಹಿತ್ಯ, ಕಲೆ, ಭಾಷೆ, ದೇವರ ಆರಾಧನೆ, ನ್ಯಾಯಪದ್ಧತಿ, ನಂಬಿಕೆ, ನಿಷೇಧಗಳನ್ನು ಹೊಂದಿವೆ. ಇವುಗಳ ಸಮಗ್ರ ಪರಿಚಯವು ಕಾಡುಗೊಲ್ಲರು ಒಂದು ಬುಡಕಟ್ಟು ಸಮುದಾಯವೆಂಬುದನ್ನು ದೃಢೀಕರಿಸುತ್ತದೆ.

ಕಾಡುಗೊಲ್ಲರು ಕರ್ನಾಟಕದ ಮೂಲ ನಿವಾಸಿಗಳೇ?ಅಥವಾ ಕರ್ನಾಟಕಕ್ಕೆ ಬಂದಿರುವ ವಲಸಿಗರೇ?ಎಂಬುದನ್ನು ಕುರಿತು ವಿದ್ವಾಂಸರು ಚರ್ಚಿಸಿದ್ದಾರೆ, ಊಹಿಸಿದ್ದಾರೆ.ಈ ಚರ್ಚೆಯು ವಿಭಿನ್ನ ಅಭಿಪ್ರಾಯಗಳನ್ನು ಹೊರಹಾಕಿದೆ. ಕರ್ನಾಟಕದಲ್ಲಿ ಮೊದಲಿಗೆ ಕಾಡುಗೊಲ್ಲರನ್ನು ಕುರಿತು ಅಧ್ಯಯನ ಮಾಡಿರುವ ತಿ.ನಂ. ಶಂಕರನಾರಾಯಣ ಅವರು ಹಾಗೂ ಮೀರಸಾಬಿಹಳ್ಳಿ ಶಿವಣ್ಣ, ಕೃಷ್ಣಮೂರ್ತಿ ಹನೂರ, ಎಂ.ಗುರುಲಿಂಗಯ್ಯ ಮೊದಲಾದ ವಿದ್ವಾಂಸರು ಕಾಡುಗೊಲ್ಲರು ಉತ್ತರಭಾರತದಿಂದ ವಲಸೆ ಬಂದವರೆಂಬುದನ್ನು ನಿರಾಕರಿಸಿದ್ದಾರೆ. ಆಂಧ್ರ ಕಡೆಯಿಂದ ವಲಸೆ ಬಂದವರೆಂದರೂ, ಕನ್ನಡವೇ ಕಾಡುಗೊಲ್ಲರ ಮಾತೃಭಾಷೆಯಾಗಿರುವುದು ಈ ಅಭಿಪ್ರಾಯವನ್ನು ನಿರಾಕರಿಸುವಂತೆ ಮಾಡುತ್ತದೆ. ಪಶುಪಾಲಕರಾಗಿದ್ದ ಕಾಡುಗೊಲ್ಲರು ಕರ್ನಾಟಕದ ಮೂಲ ನಿವಾಸಿಗಳಾಗಿದ್ದಾರೆ ಎಂಬುದನ್ನು ಸದ್ಯಕ್ಕೆ ಒಪ್ಪಿಕೊಳ್ಳಬಹುದಾಗಿದೆ. ಭಾರತದಾದ್ಯಂತ ಪಶುಪಾಲಕರ ನೆಲೆಗಳಿರುವುದು ಪಶುಪಾಲಕರಾದ ಕಾಡುಗೊಲ್ಲರು ವಲಸಿಗರು ಎಂಬ ಅಭಿಪ್ರಾಯಕ್ಕೆ ಬರುವಂತೆ ಪ್ರೇರೇಪಿಸುತ್ತವೆ. ಅಲೆಮಾರಿಗಳಾದ ಕಾಡುಗೊಲ್ಲರು ಕರ್ನಾಟಕ ಹೊರಗಿನಿಂದ ಬಂದವರು ಎನ್ನುವುದಕ್ಕಿಂತ ಕರ್ನಾಟಕದ ಕಾವಲು ಪ್ರದೇಶಗಳಿಂದ ಕೂಡಿದ ಮಧ್ಯಕರ್ನಾಟಕದಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡು ಕಾವಲಿನಿಂದ ಕಾವಲಿಗೆ ವಲಸೆ ಹೋಗುತ್ತಿದ್ದಿರಬಹುದು. ಪಶುಪಾಲಕರಲ್ಲಿ ಯಾದವರು ಪ್ರತಿಷ್ಠಿತ ಬುಡಕಟ್ಟಾಗಿ ಗುರುತಿಸಿಕೊಂಡಿದ್ದಾರೆ.ಯಾದವರಿಗೆ ಇರುವ ಪೌರಾಣಿಕ ಹಿನ್ನೆಲೆ ಮತ್ತು ಶ್ರೀ ಕೃಷ್ಣನ ನಾಯಕತ್ವ ಪಶುಪಾಲಕರೆಲ್ಲಾ ಯಾದವರು ಎಂದು ಕರೆದುಕೊಳ್ಳುವಂತೆ ಪ್ರೇರೇಪಿಸುತ್ತವೆ. ಯಾದವರಿಗೆ ಇರುವ ರಾಜಕೀಯ ಮತ್ತು ಸಾಮಾಜಿಕ ಸ್ಥಾನಮಾನಗಳು ಸಹಜವಾಗಿ ಕರ್ನಾಟಕದ ಕಾಡುಗೊಲ್ಲರು ತಮ್ಮನ್ನು ಯಾದವರು ಎಂದು ಭಾವಿಸುವಂತೆ ಪ್ರೇರೇಪಿಸಿದೆ.ಆದರೆ ಯಾದವರಿಗೂ ಕಾಡುಗೊಲ್ಲರಿಗೂ ಪಶುಪಾಲಕ ವೃತ್ತಿ ಸಂಬಂಧವನ್ನು ಬಿಟ್ಟರೆ ಯಾವುದೇ ಸಂಬಂಧಗಳಿಲ್ಲ. ಗೋಪಾಲನೆ ಪುರಾಣಕಾಲದಿಂದಲೂ ಭಾರತದಲ್ಲಿ ಪ್ರತಿಷ್ಠಿತ ವೃತ್ತಿಯಾಗಿತ್ತು.ಗೋಸಂಪತ್ತು ಶ್ರೀಮಂತಿಕೆಯನ್ನು ನಿರ್ಧರಿಸುವ ಸಂಗತಿಯಾಗಿತ್ತು. ಮಹಾಭಾರತದಲ್ಲಿ, ಪುರಾಣಗಳಲ್ಲಿ ಲಭ್ಯವಿರುವ ಗೋಗ್ರಹಣ, ಗೋಕಲಹಗಳು, ಶಾಸನಗಳಲ್ಲಿ ಲಭ್ಯವಿರುವ ತುರುಕಾಳಗ ಗೋವುಗಳು ಸಂಪತ್ತಿನ ಮೂಲವೂ, ಆದಾಯ, ಅಧಿಕಾರದ ಸ್ಥಾನಮಾನವನ್ನು ನಿರ್ಧರಿಸುವ ಸಂಗತಿಯಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವ ನೆಲೆಸಿದ ಮೇಲೆ, ಭಾರತದ ಹಲ ಸಂಸ್ಕೃತಿಗಳು ಅನ್ಯ ಸಂಸ್ಕೃತಿಗಳ ದಾಳಿಗೆ ಒಳಗಾದ ಮೇಲೆ, ಅನ್ಯದೇಶಿಗರ ಆಡಳಿತಕ್ಕೆ ಭಾರತ ಒಳಗಾದಾಗ

ಪಶುಪಾಲನೆಯ ವೃತ್ತಿಗೆ ಇದ್ದ ವೈಭವ ಭಾಗಶಃ ತಗ್ಗಿತು. ಅಲ್ಲದೆ ಪಶುಪಾಲನೆಯಿಂದ ಕೃಷಿಯೆಡೆಗೆ ಆದ ವೃತ್ತಿ ಪರಿವರ್ತನೆ ಪಶುಪಾಲಕರಾದಕಾಡುಗೊಲ್ಲರ ಬದುಕಿನ ಮೇಲೆ ಅಪಾರ ಪ್ರಭಾವ ಬೀರಿದೆ.

ಕಾಡುಗೊಲ್ಲರು ಬುಡಕಟ್ಟಿನ ಹೆಸರಲ್ಲಿ ಕಾಡು ಎಂಬುದು ವಾಸದ ನೆಲೆಯನ್ನು, ಗೊಲ್ಲ ಎಂಬುದು ಬುಡಕಟ್ಟಿನ ವೃತ್ತಿಯನ್ನು ಸೂಚಿಸುತ್ತದೆ.ಊರಿನಿಂದ ಹೊರಗೆ ಕಾಡಿನ ಉತ್ಪನ್ನಗಳಿಗೆ ಅವಲಂಬಿತರಾಗಿ ಕಾಡಿಗೆ ಸಮೀಪವಾಗಿ ವಾಸಿಸುತ್ತಾ ಪಶುಪಾಲನೆ ಮಾಡಿಕೊಂಡಿದ್ದ ಸಮಾಜವೇ ಕಾಡುಗೊಲ್ಲ ಬುಡಕಟ್ಟು.ಗೋಸಂಪತ್ತಿನ ರಕ್ಷಣೆ, ಮುಸ್ಲಿಂರ ದಾಳಿ, ಗೋ ಕಳವು, ಕಲಹ ಇವುಗಳಿಂದ ರಕ್ಷಣೆ ಪಡೆಯಲು ಮತ್ತು ಊರಿನವರ ನೆರಳಿಂದ ಹಟ್ಟಿಯ ದೈವ, ಸಂಪ್ರದಾಯ ಮೈಲಿಗೆಯಾಗುತ್ತವೆ ಎಂಬ ಧಾರ್ಮಿಕ ಶ್ರದ್ಧೆಯ ಫಲವು ಕಾಡುಗೊಲ್ಲರು ಊರಿನಿಂದ ದೂರವಾಗಿ ಬದುಕುವಂತೆ ಪ್ರೇರೇಪಿಸಿದೆ.ವೃತ್ತಿಯ ಕಾರಣದಿಂದಲೂ ಅಲೆಮಾರಿಗಳಾಗಿರಬೇಕಾದುದು ಕಾಡುಗೊಲ್ಲರಿಗೆ ಅನಿವಾರ್ಯವಾಗಿತ್ತು.ಹೀಗೆ ಆರ್ಥಿಕ, ಧಾರ್ಮಿಕ, ಸಾಮಾಜಿಕ ಕಾರಣಗಳಿಂದ ಕಾಡುಗೊಲ್ಲರು ಹಟ್ಟಿ ಸಂಸ್ಕೃತಿಯನ್ನು ಅತಿ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿದ್ದಾರೆ.

ಕಾಡುಗೊಲ್ಲರನ್ನು ಕಂಡು ಮೊದಲು ಈ ಬುಡಕಟ್ಟನ್ನು ಕುರಿತು ಬರೆದವರು ಬುಕನಾನ್ 1800 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಸಸ್ಯಶಾಸ್ತ್ರ ವಿಜ್ಞಾನಿಯೂ, ಚರಿತ್ರಕಾರನೂ ಆದ ಫ್ರಾನ್ಸಿಸ್ ಬುಕನಾನ್‌ನನ್ನು ಸರ್ವೇಕ್ಷಣ ಅಧಿಕಾರಿಯನ್ನಾಗಿ ನೇಮಿಸಿತು. ಈತ ದೊಡ್ಡಬಳ್ಳಾಪುರದಿಂದ ಶಿರಾ ಪಟ್ಟಣದ ಮಧ್ಯದಲ್ಲಿ ಪೆನುಗೊಂಡ, ಮಿಡಿಗೇಶಿ, ಚಂದ್ರಗಿರಿ, ಮಧುಗಿರಿ ಪ್ರದೇಶಗಳಲ್ಲಿ ಸಂಚರಿಸುವಾಗ ದಷ್ಟಪುಷ್ಟವಾದ ಪಶುಗಳ ಮಧ್ಯೆ ನಿಂತ ಮನುಷ್ಯರನ್ನು ಕಂಡು A Journey from Madras through the countries of Mysore Canara and Malabar ನಲ್ಲಿ ದಾಖಲಿಸಿರುವಂತೆ ಹೀಗೆ ಪ್ರತಿಕ್ರಿಯಿಸುತ್ತಾರೆ. Cadu Goalas or Goalaru. In this contry the cadu Goalas, or Goalaru, are those who breed cattle. Their families live in small Villages near the skirtsof the woods, where they cultivate a little ground and keep some of their cattle, selling in the towns the produce of the dairy. Their families are very numerous, seven or eight young men in each being common. Two are three of these attend the flocks in the woods while the remainder cultivate their fields, and supply the towns with fire-wood, and with straw for thatch.

They are a very dirty people, much worse than even the gererality of the people of Karnataka ; for they wear no clothing but a blanket and generally sleep among the cattle; which, joined to a warm climate and are ablutions, with vermin itch, ring-worms, and other coetaneous disorders, render them very offensive.

The Gods peculiar their caste are Junjappa and Ramappa, cadu Goalas are on of the Tribes of sudra.

ಜಿ. ಎಲ್ ರೈಸ್ 1876 ರ ಮೈಸೂರು ಗಜೆಟಿಯರ್‌ನಲ್ಲಿ ಕಾಡುಗೊಲ್ಲರು ಪಶುಪಾಲನೆ ಮತ್ತು ಅದರ ಉತ್ಪನ್ನಗಳನ್ನು ಮಾರಾಟ ಮಾಡುವವರು. ತುಮಕೂರು ಚಿತ್ರದುರ್ಗ ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ವಾಸಿಸುವ ಇವರು ಗ್ರಾಮದಿಂದ ದೂರವಾಗಿ ಪ್ರತ್ಯೇಕವಾದ ಸ್ಥಳದಲ್ಲಿ ಹುಲ್ಲಿನ ಹೊದಿಕೆಯುಳ್ಳ ಗುಡಿಸಲುಗಳಲ್ಲಿ ವಾಸಿಸುತ್ತಾರೆ.ಅಲೆಮಾರಿ ಜೀವನ ನಡೆಸುವ ಇವರ ಸಂಪ್ರದಾಯ ಪದ್ಧತಿಗಳು ಕಾಡು ಕುರುಬ ಜನಾಂಗವನ್ನು ಹೋಲುತ್ತವೆ ಎಂದಿದ್ದಾರೆ.

ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರು "Caste and Tribes of Southern India" ಕೃತಿಯಲ್ಲಿ ಕಾಡುಗೊಲ್ಲರನ್ನು ಕುರಿತು ಹೀಗೆ ಹೇಳುತ್ತಾರೆ. their Social customs are akin to those of the Kadu Kurubar ಎಂದಿದ್ದಾರೆ. "The Kadu Gollas are said to have originally migrated from northern India and are still a nomdie Tribe living in thatched huts outside the Villages

ಪಾಸೆಟ್ ಇದೇ ಕೃತಿಯಲ್ಲಿ ಕಾಡುಗೊಲ್ಲರನ್ನು ಕುರಿತು ಕೆಳಗಿನಂತೆ ಉಲ್ಲೇಖಿಸಿದ್ದಾರೆ. The people of every house in the village let loose a sheep, to wander whither it will as a sort of perpetual scapegoat when a women feels the first pains of labour, she is turned out of the village into a little leaf or mat hut about two hundred years away. In this hut she must bring forth her off spring unaided, unless a midwife can be called into with her before the child is born... for ninety days the woman lives in the hut by herself. If anyone fouches her he or she is like the women out casted and cuckold out of the Village for three

months the woman's husband generally makes a little hut about fifty yards from her, and watches over her.

1930 ರಲ್ಲಿ ಪ್ರಕಟವಾದ ಹೆಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್ ರಚಿಸಿದ Mysore Tribes and Castes Vol-III ರಲ್ಲಿ ಕಾಡುಗೊಲ್ಲರನ್ನು ಕುರಿತು ಕೆಳಗಿನಂತೆ ದಾಖಲಿಸುತ್ತಾರೆ. "The Kadu – Gollas are composed of three primary exogamous clans known as chitta muttaru as also styled karadi Gollaru (Bear Tribe) chandranuru (moon Tribe) and Ramegowdana Kuladavaru (Rame Gowda's descendants")

AAD ಲ್ಯೂಜಿ 1963 ರಲ್ಲಿ ವಿಶೇಷವಾಗಿ ಬುಡಕಟ್ಟು ಜನಾಂಗಗಳ ಕುರಿತು ಅಧ್ಯಯನಮಾಡಿ Tribs of Mysore ಕೃತಿ ರಚಿಸಿ ಅದರಲ್ಲಿ 27 ಮೂಲನಿವಾಸಿಗಳನ್ನು ಬುಡಕಟ್ಟುಗಳೆಂದು ಗುರುತಿಸಿ ಪಟ್ಟಿಹಾಕುತ್ತಾರೆ. ಈ ಪಟ್ಟಿಯಲ್ಲಿ 12 ನೇ ಕ್ರಮಸಂಖ್ಯೆಯಲ್ಲಿ ಕಾಡುಗೊಲ್ಲರನ್ನು ಉಲ್ಲೇಖಿಸಿದ್ದಾನೆ.ಕಾಡುಗೊಲ್ಲರ ಬಗ್ಗೆ ಅಧ್ಯಯನ ನಡೆಸಿದ ಇವರು ಪರಿಶಿಷ್ಟ ಪಂಗಡಕ್ಕೆ ಸೇರಲು ಅರ್ಹರೆಂದು ಗುರುತಿಸುತ್ತಾನೆ. (The Kadu-Golla who have culture and dialect of their own, rightly deserve to be classified are schedule Tribe.)

1918 ರಲ್ಲಿ ಮೈಸೂರು ಮಹಾರಾಜರ ಆಡಳಿತದಲ್ಲಿ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಕಲ್ಪಿಸುವ ಯೋಚನೆಯಿಂದ ವೆಸ್ಲಿ ಸಿ ಮಿಲ್ಲರ್ ಒಳಗೊಂಡ ಐದು ಜನ ಸದಸ್ಯರ ಸಮಿತಿಯನ್ನು ರಚಿಸಲಾಯಿತು.ಈ ಸಮಿತಿಯು 1919 ರಲ್ಲಿ ನೀಡಿದ ವರದಿಯಲ್ಲಿ ಅಂದಿನ ಜನರನ್ನು ಜನಸಂಖ್ಯೆಗನುಗುಣವಾಗಿ 3 ಗುಂಪುಗಳಾಗಿ ವಿಭಾಂಗಿಸಿತು ಅವುಗಳೆಂದರೆ 1. ಬ್ರಾಹ್ಮಣರು 2. ಇತರೆ ಜಾತಿಯ ಹಿಂದುಗಳು ಮುಸಲ್ಮಾನರು ಹಾಗೂ ಹಿಂದು ಕ್ರಿಶ್ಚಿಯನ್ನರು 3.ಡಿಪ್ರೆಸ್‌ಡ್ ಕ್ಲಾಸಸ್ / ದಲಿತಜಾತಿಗಳು. ಈ ಮೂರು ಗುಂಪುಗಳಲ್ಲಿ ಕಾಡುಗೊಲ್ಲರನ್ನು ದಲಿತಝಾತಿಗಳಲ್ಲಿ ಗುರುತಿಸಲಾಯಿತು. ಆ ಕಾಲಕ್ಕೆ ಕೆಲವು ಶಿಕ್ಷಿತ ಗೊಲ್ಲರು ತಮ್ಮನ್ನು ದಲಿತಜಾತಿಗಳಲ್ಲಿ ಗುರುತಿಸಿಕೊಳ್ಳಲು ಇಷ್ಟಪಡಲಿಲ್ಲ. 1930 ರಲ್ಲಿ ಮೈಸೂರು ಮಹಾರಾಜರಿಗೆ ತಮ್ಮನ್ನು ಇನ್ನು ಮುಂದೆ ಕಾಡುಗೊಲ್ಲರು ಎಂದು ಕರೆಯದೆ ಯಾದವರು ಎಂದು ಕರೆಯುವಂತೆ ಮನವಿಮಾಡಿತು.

ಕಾಡುಗೊಲ್ಲರನ್ನು ಕುರಿತು ಅಧ್ಯಯನ ನಡೆಸಿರುವ ಬುಕನಾನ್. ಜಿ. ಎಲ್ ರೈಸ್, ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ, ಫಾಸೆಟ್, ಲ್ಯೂಜಿ, ವೆಸ್ಲಿ ಸಿ ಮಿಲ್ಲರ್ ಸಮಿತಿಯು ಕಾಡುಗೊಲ್ಲರನ್ನು ಪಶುಪಾಲಕರೆಂದೂ, ಹಿಂದುಳಿದ ದಲಿತ ಬುಡಕಟ್ಟೆಂದೂ ಗುರುತಿಸಿದ್ದಾರೆ. ಬುಕನನ್ ತನ್ನ ಅಧ್ಯಯನದಲ್ಲಿ ಈ ಬುಡಕಟ್ಟಿನ ಅಸ್ತಿತ್ವವನ್ನು ಕೌತುಕದ ಸಂಗತಿಯಂತೆ ನಿರೂಪಿಸುತ್ತಾರೆ. ಜಿ.ಎಲ್. ರೈಸ್ ಕಾಡುಗೊಲ್ಲರು ಕರ್ನಾಟಕದಲ್ಲಿ ವಾಸಿಸುತ್ತಿರುವ ಒಂದು ಬುಡಕಟ್ಟು ಎಂಬುದಾಗಿ ತಮ್ಮ ಅಧ್ಯಯದಲ್ಲಿ ಗುರುತಿಸುತ್ತಾರೆ.ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ, ಫಾಸೆಟ್, ಅವರು ಕಾಡುಗೊಲ್ಲ ಬುಡಕಟ್ಟಿನ ಹಟ್ಟಿ ಸಂಸ್ಕೃತಿಯನ್ನು ತಮ್ಮ ಅಧ್ಯಯನದಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಲ್ಯೂಜಿಯ ಅಧ್ಯಯನವು ಕಾಡುಗೊಲ್ಲರ ಸಮಾಜ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವುದನ್ನು ಗುರುತಿಸಿ ಅವರನ್ನು ಪರಿಶಿಷ್ಟ ಬುಡಕಟ್ಟಿಗೆ ಸೇರಿಸುವಂತೆ ಶಿಫಾರಸ್ಸು ಮಾಡುತ್ತದೆ. ಹೀಗೆ ಹಲವು ಅಧ್ಯಯನಗಳ ಮೂಲಕ ನಾಗರೀಕ ಸಮಾಜದ ಬೆಳಕುಕಂಡ ಕಾಡುಗೊಲ್ಲರ ಬುಡಕಟ್ಟನ್ನು ಸಮಗ್ರವಾಗಿ ಅಧ್ಯಯನ ಮಾಡಿದವರು ತಿ.ನಂ.ಶಂಕರನಾರಾಯಣರವರು. ಅವರು ತಮ್ಮ ಸಂಶೋಧನಾ ಕೃತಿಯಾದ ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು' ನಲ್ಲಿ ಕಾಡುಗೊಲ್ಲರ ಐತಿಹಾಸಿಕ ಹಿನ್ನೆಲೆಯೊಂದಿಗೆ ಅವರ ಸಾಂಸ್ಕೃತಿಕ ಬದುಕನ್ನು ದಾಖಲಿಸಿದ್ದು, ಮುಂದೆ ಕಾಡುಗೊಲ್ಲರನ್ನು ಕುರಿತ ಹಲವು ಅಧ್ಯಯನಗಳಿಗೆ ದಾರಿ ಮಾಡಿಕೊಟ್ಟಿತು. ಅವುಗಳಲ್ಲಿ ಮೀರಾ ಸಾಬಿಹಳ್ಳಿ ಶಿವಣ್ಣ ಅವರ 'ಕಾಡುಗೊಲ್ಲರ ಬುಡಕಟ್ಟು ವೀರರು' ಮತ್ತು ಕಾಳೇಗೌಡ ನಾಗವಾರರವರ ಕಾಡುಗೊಲ್ಲರ ಹಟ್ಟಿಯೊಂದರ ಅಧ್ಯಯನ ಸಂಶೋಧನಾ ಕೃತಿಗಳನ್ನು ಇಲ್ಲಿ ನೆನೆಯಬಹುದು. ಇಂದಿಗೂ ಕಾಡುಗೊಲ್ಲರನ್ನು ಕುರಿತಂತೆ ವಿಶ್ವವಿದ್ಯಾನಿಲಯಗಲ್ಲಿ, ಸರ್ಕಾರಿ ಸಂಸ್ಥೆಗಲ್ಲಿ ಸಂಶೋಧನಾ ಪ್ರಧಾನ ಅಧ್ಯಯನಗಳು ನಡೆಯುತ್ತಿವೆ.

ಕಾಡುಗೊಲ್ಲರು ಯಾದವರೇ ?

ಕಾಡುಗೊಲ್ಲರನ್ನು ಕುರಿತು ಆರಂಭಿಕ ಅಧ್ಯಯನಕಾರರೂ ವಿದೇಶಿ ವಿದ್ವಾಂಸರೂ ಆದ ಎಡ್ಗರ್ ಥರ್‌ಸ್ಟನ್. ಲೂಯಿಸ್. ದೇಶಿ ವಿದ್ವಾಂಸರುಗಳಾದ ಅನಂತಕೃಷ್ಣ ಅಯ್ಯರ್ ಕಾಡುಗೊಲ್ಲರನ್ನು ಗೊಲ್ಲರೆಂದೇ ಗುರುತಿಸುತ್ತಾರೆ. ಆದರೆ ಕಾಡುಗೊಲ್ಲರಲ್ಲಿಯೇ ಕೆಲ ಶಿಕ್ಷಿತರು. ಪ್ರಜ್ಞಾವಂತರು ತಮ್ಮನ್ನು ಯಾದವರು ಕಾಡು ಯಾದವರು ಎಂದು ಕರೆದುಕೊಂಡಿರುತ್ತಾರೆ. ಆದರೆ ಕರ್ನಾಟಕದಲ್ಲಿ ಯಾದವರು ಕಾಡುಗೊಲ್ಲರಿಗಿಂತ ಅಲ್ಪಸಂಖ್ಯಾತರು. ಭಾರತದಾದ್ಯಂತ ಚದುರಿದಂತೆ ನೆಲೆಸಿರುವ ಯಾದವರು ಅಭಿವೃದ್ಧಿ ಸೌಲಭ್ಯ ಸೌಕರ್ಯಗಳಲ್ಲಿ ಮುಂದಿರುವುದಲ್ಲದೆ ಮತ್ತು

ಬುಡಕಟ್ಟಿನ ಸಾಂಸ್ಕೃತಿಕ ನಾಯಕನಾಗಿ ಪುರಾಣದ ಹಿನ್ನೆಲೆಯುಳ್ಳ ಶ್ರೀಕೃಷ್ಣನ ಆರಾಧನೆಯು ಪಶುಪಾಲನೆಯು ವೃತ್ತಿ ಮಾಡುತ್ತಿದ್ದ ಕಾಡುಗೊಲ್ಲರನ್ನು ಯಾದವರೆಂದು ಕರೆದುಕೊಳ್ಳುವಂತೆ ಪ್ರೇರೇಪಿಸಿರಬಹುದು. ಅಲ್ಲದೆ ಮೈಸೂರ ಮಹಾರಾಜರ ಆಡಳಿತಾವಧಿಯಲ್ಲಿ ವೆಸ್ಲಿ ಸಮಿತಿಯು ಕಾಡುಗೊಲ್ಲರನ್ನು ದಲಿತಜಾತಿಗೆ ಸೇರಿಸಿದ್ದನ್ನು ಇಷ್ಟಪಡಲಿಲ್ಲ. ದಲಿತರನ್ನು ಹಟ್ಟಿಯ ಒಳಗೂ ಸೇರಿಸದ ಕಾಡುಗೊಲ್ಲರು ತಮ್ಮನ್ನೇ ದಲಿತರು ಬುಡಕಟ್ಟು ಎಂದು ಕರೆದಿದ್ದರಿಂದ ಕಸಿವಿಸಿಯನ್ನುಭವಿಸಿತು. ಆದ್ದರಿಂದಲೇ 1930 ರಲ್ಲಿ ಅಂದಿನ ಮೈಸೂರು ಮಹಾರಾಜರಿಗೆ ಯಾದವ ಸಂಘದವರು ಮನವಿ ಮಾಡಿ ತಮ್ಮನ್ನು ಗೊಲ್ಲರ ಬದಲಿಗೆ ಯಾದವರು ಎಂದು ತಿದ್ದುಪಡಿಮಾಡಿ ಆದೇಶ ಹೊರಡಿಸುವಂತೆ ಮನವಿ ಮಾಡಿತು.ಮಹಾರಾಜರು ಇದಕ್ಕೆ ಒಪ್ಪಿಗೆ ಸೂಚಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದರು.Government are pleased to direct that the community know as 'Gollar' be in future called "yadavar in all Government Communication and people belonging to this community may also be writtened as yadava in the ensuing census.

ಈ ಆದೇಶವು ಗೊಲ್ಲರನ್ನು ಯಾದವರಲ್ಲಿ ವಿಲೀನಗೊಳಿಸಿತು. ಯಾದವರಿಗೂ ಕಾಡುಗೊಲ್ಲರಿಗೂ ಯಾವುದೇ ಸಾಂಸ್ಕೃತಿಕ ಸಂಬಂಧವಾಗಲೀ ಭೌಗೋಳಿಕ ಸಂಬಂಧವಾಗಲೀ ಇರಲಿಲ್ಲ. ಆದರೂ ಕಾಡು ಯಾದವರು ಎಂದು ಕರೆದುಕೊಳ್ಳುವಂತೆ ಒತ್ತಾಯ ಹೇರಲಾಯಿತು. ಪಶುಪಾಲನೆ ವೃತ್ತಿ ಸಂಬಂಧವಾದ ಸಾಮ್ಯತೆಯೊಂದನ್ನು ಬಿಟ್ಟರೆ ಕಾಡುಗೊಲ್ಲ ಬುಡಕಟ್ಟಿಗೂ ಯಾದವರಿಗೂ ಯಾವುದೇ ಸಂಬಂಧವಿಲ್ಲ. 1924 ರ ದಶಕದಲ್ಲಿ ಕಾಡುಗೊಲ್ಲರ ಅಭಿವೃದ್ಧಿಯ ಹೋರಾಟದಲ್ಲಿ ಕರ್ನಾಟಕ ಯಾದವ ಸಂಘ, ಯಾದವ ಸಮ್ಮೇಳನಗಳು, ಅಖಿಲ ಭಾರತ ಯಾದವ ಮಹಾಸಭಾ ಮೊದಲಾದವು ಜಿಲ್ಲಾ ಯಾದವ ಸಮ್ಮೇಳನಗಳು, ಯಾದವ ವಿದ್ಯಾರ್ಥಿ ಸಮ್ಮೇಳನಗಳು ಕಾಡುಗೊಲ್ಲರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯ ಬಗ್ಗೆ ಸರ್ಕಾರದ ಗಮನಸೆಳೆದು ಜಾತಿಗೂ ತಮ್ಮ ಬುಡಕಟ್ಟಿಗೂ ಇರುವ ವ್ಯತ್ಯಾಸವನ್ನು ತೋರ್ಪಡಿಸಿ ತಮ್ಮನ್ನು ಪರಿಶಿಷ್ಟ ಬುಡಕಟ್ಟನ್ನಾಗಿ ಸೇರಿಸಬೇಕೆಂಬ ಪಕ್ಕೊತ್ತಾಯ ಮಾಡಿದವು. ಆದರೆ ಇಂದಿಗೂ ಕಾಡುಗೊಲ್ಲರನ್ನು ಪರಿಶಿಷ್ಟ ಬುಡಕಟ್ಟನ್ನಾಗಿ ಗುರುತಿಸಿಲ್ಲ. ಯಾದವ ಹೆಸರಿನಲ್ಲಿ ಸಂಘಟನೆಗೊಂಡ ಕಾಡುಗೊಲ್ಲರು ತಮ್ಮನ್ನು ಯಾದವರೆಂದು ಗುರುತಿಸಿಕೊಳ್ಳುವ ಪ್ರಯತ್ನ ಯಶಸ್ಸನ್ನು ಪಡೆಯಲಿಲ್ಲ. ಇಂದಿಗೂ ಪಾವಗಡದ ಕೆಲ ಗೊಲ್ಲರ ಹಟ್ಟಿಗಳಲ್ಲಿ ಕೃಷ್ಣ ವಿಗ್ರಹ ಆರಾಧನೆ ಶ್ರೀ ಕೃಷ್ಣಜಯಂತಿ, ಶ್ರೀ ಕೃಷ್ಣಯಾದವ ಯುವಕ ಸಂಘಗಳು ಅಸ್ತಿತ್ವದಲ್ಲಿವೆ. ಆದರೆ ಯಾದವ ಸಂಸ್ಕೃತಿಯ ಪ್ರಭಾವವಿದೆಯೇ ಹೊರತು ಕಾಡುಗೊಲ್ಲರು ಯಾದವರಲ್ಲ ಎನ್ನಬಹುದು.

ಊರುಗೊಲ್ಲರು

ಗೊಲ್ಲರಲ್ಲಿ ಕಾಡುಗೊಲ್ಲರು ಮತ್ತು ಊರುಗೊಲ್ಲರು ಎರಡು ಮುಖ್ಯ ಪಂಗಡಗಳಿವೆ. ಇವುಗಳೇ ಅಲ್ಲದೆ ಕೃಷ್ಣಗೊಲ್ಲರು, ನಾಮಗೊಲ್ಲರು, ಎಳವಗೊಲ್ಲರು, ಹಂದಿಗೊಲ್ಲರು, ಹಾವುಗೊಲ್ಲರು, ದಾಸಗೊಲ್ಲರು ಹೀಗೆ ಮೊದಲಾದ ಉಪ ಪಂಗಡಗಳಿವೆ. ಜಾತಿಯಾಗಿ ಪ್ರಬಲವಾಗುತ್ತಿರುವ ಗೊಲ್ಲ ಉಪಪಂಗಡಗಳಲ್ಲಿ ಊರುಗೊಲ್ಲರು ಮುಖ್ಯರು.ಕಾಡುಗೊಲ್ಲರು ಹಟ್ಟಿ ಸಂಸ್ಕೃತಿಯನ್ನು ಪಾಲಿಸಿಕೊಂಡು ಊರಿನಿಂದ ದೂರವಾಗಿ ವಾಸಿಸುತ್ತಾರೆ.ಅರೆ ಅಲೆಮಾರಿಗಳೂ ಹೌದು ಅಲ್ಲದೆ ಕಟ್ಟುನಿಟ್ಟಿನ ಸಂಪ್ರದಾಯ ಆಚರಣೆ, ದೈವಶ್ರದ್ಧೆಯನ್ನು ಹೊಂದಿರುವವರು.ಊರುಗೊಲ್ಲರು ಇತರೆ ಜಾತಿಯ ಜನರಂತೆ ಊರಿನಲ್ಲಿ ವಾಸಿಸುತ್ತಾರೆ. ಸಮುದಾಯ ಜೀವನಪದ್ಧತಿ ಇಲ್ಲ. ಸಂಪ್ರದಾಯ ಆಚಾರ-ವಿಚಾರಗಳು ಊರಿನ ಇತರೆ ಜಾತಿಯ ಜನರಂತೆ ಇವೆ. ಊರುಗೊಲ್ಲರು ಸಮುದಾಯ ಜೀವನ ನಿರಾಕರಿಸಿ ಊರಿನಲ್ಲಿ ಸ್ವತಂತ್ರವಾಗಿ ನೆಲೆ ನಿಲ್ಲಲು ಕಾರಣಗಳೇನು ಎಂದು ಹುಡುಕುತ್ತಾ ಹೋದರೆ ಕೆಲವು ಸಂಗತಿಗಳು ಗಮನಕ್ಕೆ ಬರುತ್ತವೆ. ಕಾಡುಗೊಲ್ಲರು ಬುಡಕಟ್ಟಿನಿಂದ ಊರುಗೊಲ್ಲರು ಸಿಡಿದು ನಿಲ್ಲಲು ಕೆಲವು ಕಾರಣಗಳಿವೆ. ಅವುಗಳೆಂದರೆ. ಒಂದು ಕಾಲಕ್ಕೆ ಊರುಗೊಲ್ಲರು ಕಾಡುಗೊಲ್ಲರೇ ಆಗಿದ್ದಿರಬಹುದು. ಬುಡಕಟ್ಟಿನ ಸಂಪ್ರದಾಯ ಪದ್ಧತಿಗಳನ್ನು ಆಚರಿಸಲು ನಿರಾಕರಿಸಿರುವುದು ಅಥವಾ ಮೀರಿರುವುದು. ಇತರೆ ಸಮುದಾಯದವರೊಡನೆ ಏರ್ಪಟ್ಟ ಅಂತರ್ಜಾತಿ ವಿವಾಹ. ಈ ಕಾರಣದಿಂದ ಹಟ್ಟಿಯಿಂದ ಬಹಿಷ್ಕರಿಸಲ್ಪಟ್ಟವರು. ವೃತ್ತಿಯಲ್ಲಿ ಆದ ಬದಲಾವಣೆ, ಜಗಿ ನಿರ್ಬಂಧಗಳು, ಕಾನೂನು, ಸಂಪ್ರದಾಯಗಳಿಗೆ ತೋರಿದ ಪ್ರತಿಭಟನೆಯ ಫಲವಾಗಿ ಊರುಗೊಲ್ಲರು ಊರಿನಲ್ಲಿ ನೆಲೆಸಿ ತಮ್ಮ ಅನುಕೂಲಕ್ಕೆ ತಕ್ಕ ವೃತ್ತಿಯನ್ನು ಅನುಸರಿಸಿ, ಊರಿನವರೊಟ್ಟಿಗೆ ಅವರಂತೆಯೇ ಸಂಪ್ರದಾಯ ಆಚರಣೆಗಳನ್ನು ಅನುಸರಿಸಿ ಬದುಕಿ ಇಂದು ಜಾತಿಯಾಗಿ ಬೃಹತ್ತಾಗಿಯೂ ವಿಸ್ತರಿಸಿಕೊಂಡಿದ್ದಾರೆ. ಬುಡಕಟ್ಟಿನ ಸಂಪ್ರದಾಯ ಪದ್ಧತಿಗಳು ಕಠಿಣವಾದವು. ಉದಾಹರಣೆಗೆ ಚಪ್ಪಲಿ ಹಾಕದಿರುವುದು. ಬಸ್ಸಿನಲ್ಲಿ ಪ್ರಯಾಣಿಸದಿರುವುದು, ಮಾದಿಗರ ಮನೆ ಪ್ರವೇಶ ನಿಷೇದ, ಅನ್ಯ ಸಮುದಾಯದವರೊಂದಿಗೆ ಸಹಭೋಜನ ನಿಷೇದ, ಕೋಳಿ ಸಾಕುವಂತಿಲ್ಲ, ತಿನ್ನುವಂತಿಲ್ಲ, ವಿದ್ಯುತ್ ದೀಪ ಬಳಸುವಂತಿಲ್ಲ, ಅನ್ಯಜಾತಿಯವರೊಂದಿಗೆ ವಿವಾಹವಾಗುವಂತಿಲ್ಲ. ಹಟ್ಟಿಯ ನ್ಯಾಯ-ತೀರ್ಮಾನಗಳಿಗೆ ಬದ್ಧರಾಗಿರಬೇಕು. ಇಲ್ಲದಿದ್ದರೆ ಹಟ್ಟಿಯಿಂದ ಬಹಿಷ್ಕಾರ ಹಾಕಲಾಗುತ್ತದೆ.ಹೀಗೆ ಹಟ್ಟಿಯಿಂದ ಹೊರಬಂದವರೇ, ಕ್ರಮೇಣ ಊರುಗೊಲ್ಲರಾಗಿರಬಹುದು.ಆದರೂ ಹೀಗೆ ಹೊರಬಂದ ಕಾಡುಗೊಲ್ಲರು ತಮ್ಮದೇ ಹಟ್ಟಿಯನ್ನು ನಿರ್ಮಿಸಿಕೊಂಡು ವಾಸಿಸುವವರು ಇದ್ದರು.ಇವರನ್ನು "ಕೆಟ್ಟ ಹಟ್ಟಿ ಗೊಲ್ಲರು" ಎಂದೂ ಕರೆಯುತ್ತಾರೆ.

ಕಾಡುಗೊಲ್ಲರು ಮತ್ತು ಮ್ಯಾಸಬೇಡರು.

ಬೇಟೆಯನ್ನು ಮೂಲ ಕಸುಬನ್ನಾಗಿ ಹೊಂದಿದ ಸಮುದಾಯ ಬೇಡರು ಅಥವಾ ಮ್ಯಾಸಬೇಡರು. ಕಾಡುಗೊಲ್ಲರಂತೆಯೇ ಮ್ಯಾಸಬೇಡರು ಊರಿನಿಂದ ದೂರವಾಗಿ ತಮ್ಮದೇ ಪ್ರತ್ಯೇಕ ವಾಸನೆಲೆಯನ್ನು ಕಂಡುಕೊಂಡವರು.ಬೇಟೆ ಮತ್ತು ಪಶುಪಾಲನೆ ಇವರ ಮುಖ್ಯ ಕಸುಬಾಗಿತ್ತು.ಅಲ್ಲದೆ ಪಾಳೆಗಾರರಾಗಿ ಸೈನಿಕರಾಗಿ ಶೌರ್ಯ ಮೆರೆದವರು ಆಗಿದ್ದಾರೆ. ಕಾಡಿನಂಚಿನಲ್ಲಿ ವಾಸಮಾಡುವ ಇವರಿಗೂ ಇವರಂತೆ ಹಟ್ಟಿಯಲ್ಲಿ ವಾಸಿಸುತ್ತಾ ಪಶುಪಾಲನಾ ವೃತ್ತಿ ಹೊಂದಿದ ಕಾಡುಗೊಲ್ಲರಿಗೂ ಕುರಿತಂತೆ ಹಲವು ಕಥೆಗಳಿವೆ. ಒಂದು ಕಾಲಕ್ಕೆ ಕಾಡುಗೊಲ್ಲರು ಮ್ಯಾಸಬೇಡರು ದಾಯಾದಿಗಳಾಗಿದ್ದವರು. ಪಶುಪಾಲಕರಾಗಿದ್ದರು.ಒಂದೇ ತಾಯಿ ಮಕ್ಕಳಾಗಿದ್ದರು, ಇವರು ಒಂದು ದಿನ ಪಶುಪಾಲನೆಗೆ ತೆರಳಿದ್ದಾಗ ಹಿರಿಯನಾದವನ್ನು ದನಗಳನ್ನು ಮೇಯಿಸುವುದಕ್ಕೆ ಕಾಡಿಗೆ ಹೋದ ಸಂದರ್ಭದಲ್ಲಿ ಕಿರಿಯವನು ಹಸಿವಿನಿಂದಾಗಿ ಕರುವಿನ ಕಾಲು ಕಡಿದು ತಿನ್ನುತ್ತಿದ್ದನು. ಹಿಂದಿರುಗಿದ ಹಿರಿಯವನು ಕರುವಿನ ಕಾಲು ತಿನ್ನಬೇಡ ಎಂದರೂ ಕೇಳದೆ ಕಿರಿಯವನು ಗೋಮಾಂಸ ತಿಂದುದರಿಂದ ಇಬ್ಬರ ನಡುವೆ ಒಡಕು ಉಂಟಾಯಿತು. ಬೇಡವೆಂದರೂ ಗೋಮಾಂಸ ತಿಂದ ಕಿರಿಯವನು ಬೇಡನಾದ.ಈ ಕಥೆ ಕಾಡುಗೊಲ್ಲರಿಗೂ ಮ್ಯಾಸಬೇಡರಿಗೂ ಏರ್ಪಡುತ್ತಿದ್ದ ಆಹಾರದ ಸಂಘರ್ಷದ ಕಥೆಯನ್ನು ಹೇಳುತ್ತದೆ.

ಮತ್ತೊಂದು ಕಥೆಯಂತೆ ದ್ವಾಪರಯುಗದಲ್ಲಿ ಮ್ಯಾಸಬೇಡರ ಮೂಗನಾಯಕ ಎಂಬುವನು ಬೇಟೆ ಮಾಡಿ ಜೀವನ ಸಾಗಿಸುತ್ತಿದ್ದನು.ಕಾಡಿಗೆ ಬೇಟೆಗೆ ಹೋಗಿದ್ದಾಗ ಪೊದೆಯಲ್ಲಿ ಗಿಂಡಗಂಟೆ ಅಲ್ಲಾಡುವುದನ್ನು ಕಂಡು ಪ್ರಾಣಿ ಇರಬೇಕೆಂದು ತಿಳಿದು ಬಾಣ ಪ್ರಯೋಗಿಸುತ್ತಾನೆ. ಆದರೆ ಕಾಲು ಅಲ್ಲಾಡಿಸುತ್ತಾ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಶ್ರೀ ಕೃಷ್ಣನ ಕಾಲಿಗೆ ಈ ಬಿಲ್ಲು ನಾಟುತ್ತದೆ.ಕೃಷ್ಣ ನೋವಿನಿಂದ ನರಳುತ್ತಿರುವಾಗ ಅಪರಾಧಭಾವದಿಂದ ತತ್ತರಿಸಿದ ಮೂಗನಾಯಕನ ತಪ್ಪನ್ನು ಕ್ಷಮಿಸಿ ಅವನಿಗೆ ತನ್ನ ದನಗಳನ್ನು ಕಾಯುವುದನ್ನು ವಹಿಸಿ ತಾನು ಪ್ರಾಣ ತ್ಯಜಿಸಿದವನು. ಇವನಿಂದಲೇ ಮುಂದೆ ಬೇಡ ಜನಾಂಗ ಪಶು ಪಾಲನ ವೃತ್ತಿಯಲ್ಲಿ ಮುಂದುವರಿಯಿತು.

ಕಾಡುಗೊಲ್ಲರು ಮತ್ತು ಮ್ಯಾಸಬೇಡರ ನಡುವೆ ಸಂಬಂಧದ ಕಥೆಗಳಿಗಿಂತ ಸಂಘರ್ಷದ ಕಥೆಗಳೇ ಹೆಚ್ಚಿವೆ. ಈ ಸಂಘರ್ಷಗಳು ವಿವಾಹ ಸಂಬಂಧದ ಕಾರಣಕ್ಕೆ ಉಂಟಾದವು. ಬೇಡ ಹೆಣ್ಣುಗಳು ಕಾಡುಗೊಲ್ಲರ ಪುರುಷರನ್ನು ಇಷ್ಟಪಟ್ಟು ವಿವಾಹಗವಾಗುವಂತೆ ಒತ್ತಾಯಿಸಿದಾಗ, ಬೇಡರಿಗೂ ಕಾಡುಗೊಲ್ಲರಿಗೂ ಕಲಹಗಳು ಏರ್ಪಟ್ಟಿವೆ. ಕೆಲವೊಮ್ಮೆ ಬೇಡರೇ ತಮ್ಮ ಹೆಣ್ಣಿಗಳನ್ನು ಆಮಿಷ ಒಡ್ಡಿ ಕಾಡುಗೊಲ್ಲರ ಹಸುಗಳನ್ನು ಅಪಹರಿಸಲು ಪ್ರಯತ್ನಿಸಿದ್ದು ಉಂಟು.

ಕಾಡುಗೊಲ್ಲರ ಹಟ್ಟಿ.

ಪಾವಗಡ ತಾಲ್ಲೂಕಿನ ಕಾಡುಗೊಲ್ಲ ಹಟ್ಟಿಗಳ ಸ್ಥೂಲ ಪರಿಚಯ ಈ ಕೆಳಕಂಡಂತಿವೆ.

ಗೌಡಗಾರನ ಹಟ್ಟಿಯು ಪಾವಗಡದಿಂದ 18 ಕೀ.ಮಿ ಗಳ ಅಂತರದಲ್ಲಿದೆ. ಹಟ್ಟಿಯಲ್ಲಿ 40 ಮನೆಗಳು ಇವೆ. ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆಗೆ ಈರಮುದ್ದಿನ ಹಟ್ಟಿಗೆ ಬರಬೇಕಾಗಿದೆ. ಆಶ್ರಯ ಮನೆ ಯೋಜನೆ ಅಡಿಯಲ್ಲಿ ಗುಡಿಸಲು ಮನೆ ಇದ್ದವರು ಆರ್.ಸಿ.ಸಿ. ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಮನೆಗಳಲ್ಲಿ ಶೌಚಾಲಯ ಮತ್ತು ಸ್ನಾನಗೃಹಗಳು ಇಲ್ಲ. ಆರೋಗ್ಯ ಮತ್ತು ಇತರೆ ಚಿಕಿತ್ಸೆಗೆ ಪಾವಗಡಕ್ಕೆ ತೆರಳಬೇಕಾಗುತ್ತದೆ. ಉನ್ನತ ಶಿಕ್ಷಣವನ್ನು ಪಡೆದ ಮಹಿಳೆಯರು ಇಲ್ಲ. ಕೃಷ್ಣ ಕುಟೀರವನ್ನು ಹಟ್ಟಿಯು ಹೊಂದಿಲ್ಲ. ಒಬ್ಬ ಮಹಿಳೆ ಮಾತ್ರ ಗ್ರಾಮಪಂಚಾಯತಿ ಸದಸ್ಯೆ ಇದ್ದಾರೆ. ಕುರಿ ವ್ಯಾಪಾರ ಮತ್ತು ಕೂಲಿ ಇವರ ಮುಖ್ಯ ಕಸುಬು ಆಗಿದೆ. ಇಂದಿಗೂ ಹಲವು ಆಚರಣೆಗಳು ಪ್ರಾಚೀನ ನಂಬಿಕೆಗಳ ಹಿನ್ನಲೆಯಲ್ಲಿ ಸಂಪ್ರದಾಯಗಳು ಹಟ್ಟಿಯಲ್ಲಿ ಮುಂದುವರಿಯುತ್ತಿವೆ.

ಸೂಲ`ನಾಯಕನ ಹಳ್ಳಿ ಗೊಲ್ಲರಹಟ್ಟಿಯು ಪಾವಗಡದಿಂದ 25 ಕಿ.ಮೀ ಅಂತರದಲ್ಲಿದೆ. ಇದು 50 ಮನೆಗಳನ್ನು ಹೊಂದಿದೆ. ಹಟ್ಟಿಯು ಊರಿಗೆ ಹೊಂದಿಕೊಂಡಂತೆ ಇದೆ. ಹಟ್ಟಿಯಲ್ಲಿ ಎರ್ರಣ್ಣ, ಈರಣ್ಣ ದೇವಾಲಯಗಳಿವೆ. ಹಟ್ಟಿಯಲ್ಲಿ ಕುರಿ ವ್ಯಾಪಾರ ಮತ್ತು ಕೂಲಿ ಮುಖ್ಯ ಕಸುಬುಗಳಾಗಿವೆ. ಹಟ್ಟಿಯಲ್ಲಿ ಅಂಗನವಾಡಿ ಕೇಂದ್ರವಿದ್ದು ವಿಶೇಷವೆಂದರೆ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯು ಅಂಗನವಾಡಿ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪದವಿಯವರೆಗೆ ಶಿಕ್ಷಣವನ್ನು ಪಡೆದ ಯುವಕ ಯುವತಿಯರು ಇದ್ದಾರೆ. ವಿದೇಶದಲ್ಲಿ ಕೆಲಸಕ್ಕೆ ತೆರಳಿದ ಇಬ್ಬರು ಈ ಹಟ್ಟಿಯಲ್ಲಿದ್ದಾರೆ. ಹಟ್ಟಿಯಲ್ಲಿ ಹಾಡುಗಳನ್ನು ಹೇಳುವ ಹಾಡುಗಾರರು ಇದ್ದಾರೆ.

ಕಣಿವೇನಹಳ್ಳಿ ಗೊಲ್ಲರ ಹಟ್ಟಿಯು ಪಾವಗಡದಿಂದ 7 ಕಿ.ಮೀ. ಅಂತರದಲ್ಲಿ ಇದೆ. ಹಟ್ಟಿಯಲ್ಲಿ 60 ಮನೆಗಳು ಇವೆ. ಇವರ ಮಾತೃಭಾಷೆ ಕನ್ನಡ. ಕೂಲಿ, ವ್ಯವಸಾಯ, ಕುರಿ ವ್ಯಾಪಾರ ಇವರ ಮುಖ್ಯ ಕಸುಬು ಆಗಿದೆ. ಬಹುತೇಕ ಕರಡಿ ಗೊಲ್ಲರು ಹೆಚ್ಚಾಗಿ ನೆಲಸಿದ್ದಾರೆ. ವೃದ್ಧಾಪ್ಯ ವೇತನ, ವಿಧವಾ ವೇತನವನ್ನು ಪಡೆದವರು ಇದ್ದಾರೆ, ಸ್ತ್ರೀಶಕ್ತಿ ಸಂಘ, ಸ್ತ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸಂಘ ಹಟ್ಟಿಯಲ್ಲಿ ಇವೆ. ಈ ಹಟ್ಟಿಯು ಊರಿಗೆ ಹೊಂದಿಕೊಂಡಂತೆ ಇರುವುದರಿಂದ, ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆಗೆ ಕಣಿವೇನ ಹಳ್ಳಿಗೆ ತೆರಳುತ್ತಾರೆ.

ಚಿತ್ತಗಾನಹಳ್ಳಿ, ಗೊಲ್ಲರ ಹಟ್ಟಿಯು ಚಿತ್ತಗಾನ ಹಳ್ಳಿಯ ಪಕ್ಕದಲ್ಲಿಯೇ ಇದೆ. 50 ಮನೆಗಳನ್ನು ಹೊಂದಿರುವ ಈ ಗೊಲ್ಲರ ಹಟ್ಟಿ ಪಾವಗಡದಿಂದ ಸುಮಾರು 12 ಕಿ.ಮೀ. ದೂರದಲ್ಲಿ ಇವೆ. ಹಟ್ಟಿಯೊಳಗಿನ ಎಲ್ಲರು ಉತ್ತಮ ಮನೆಗಳನ್ನು ಹೊಂದಿದ್ದಾರೆ. ಕೂಲಿ, ಕುರಿ ವ್ಯಾಪಾರ,

ವ್ಯವಸಾಯ ಇವರ ಮುಖ್ಯ ವೃತ್ತಿಯಾಗಿದೆ. ಹಟ್ಟಿಯೊಳಗೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆ ಇವೆ, ಹಟ್ಟಿಯ ಹೊರಗೆ ಕೃಷ್ಣಕುಟೀರ ಇಲ್ಲ. ಶೌಚಾಲಯ ಮತ್ತು ಚರಂಡಿ ವ್ಯವಸ್ಥೆ ಅಸಮರ್ಪಕವಾಗಿದೆ. ಹಟ್ಟಿಯ ಒಳಗೆ ಚಿತ್ತಯ್ಯ ದೇವರ ದೇವಾಲಯ ಇದೆ.

ಚಿನ್ನಸಾಗರದ ಹಟ್ಟಿಯು ಪಾವಗಡದಿಂದ 18 ಕಿ.ಮೀ. ದೂರದಲ್ಲಿ ಇದೆ. ಹಟ್ಟಿಯೊಳಗೆ ಕರಿಯಮ್ಮ ದೇವಿಯ ದೇವಸ್ಥಾನವಿದೆ. ಇಲ್ಲಿಯ ಬಹುತೇಕ ಜನರ ವೃತ್ತಿ ವ್ಯವಸಾಯ, ಕೂಲಿ, ಕುರಿ ವ್ಯಾಪಾರ ಆಗಿದೆ. ಆಶ್ರಯ ಮನೆ ಯೋಜನೆಯಡಿಯಲ್ಲಿ ಮನೆ ಇಲ್ಲದವರು ಮನೆ ಪಡೆದಿದ್ದಾರೆ. ಪ್ರಾಥಮಿಕ ಶಾಲೆ ಇದ್ದು ಪ್ರತ್ಯೇಕವಾದ ಅಂಗನವಾಡಿ ಕೊಠಡಿ ವ್ಯವಸ್ಥೆ ಇಲ್ಲ. ಹಟ್ಟಿಯಲ್ಲಿ ಕೃಷ್ಣಕುಟೀರವು ಇಲ್ಲ. ವಿಶೇಷವೆಂದರೆ ಈ ಹಟ್ಟಿಯೊಳಗೆ ಮುಸ್ಲಿಂರನ್ನು ಮದುವೆಯಾಗಿರುವ 2 ಕಾಡುಗೊಲ್ಲ ಕುಟುಂಬಗಳು ಇವೆ.

ದೇವರ ಹಟ್ಟಿ ಪಾವಗಡ ಪಾವಗಡ ತಾಲ್ಲೂಕಿನಲ್ಲಿಯೇ ಹೆಚ್ಚು ಒಕ್ಕಲನ್ನು ಹೊಂದಿರುವ ದೊಡ್ಡ ಗೊಲ್ಲರ ಹಟ್ಟಿಯಾಗಿದೆ. ಸುಮಾರು 1500 ಕ್ಕೂ ಹೆಚ್ಚು ಒಕ್ಕಲು ದೇವರ ಹಟ್ಟಿಗೆ ಸೇರಿದೆ: ಹಟ್ಟಿಯ ಒಳಗಡೆ 120 ಮನೆಗಳು ಇವೆ. ಆಶ್ರಯ ಮನೆಗಳು ಕಾಮಗಾರಿ ಹಂತದಲ್ಲಿದೆ. ಇವರ ಮಾತೃಭಾಷೆ ಕನ್ನಡವಾಗಿದೆ. ಹಟ್ಟಿಯ ವೃತ್ತಿಯು ಬಹುತೇಕ ಕೂಲಿ ಇಲ್ಲವೆ ಕುರಿ ವ್ಯಾಪಾರವಾಗಿದೆ. ಹಟ್ಟಿಯಲ್ಲಿ ಚಿತ್ತಯ್ಯ ದೇವರ ದೇವಾಲಯ ಇದ್ದು ಇಂದಿಗೂ ಗೊಲ್ಲರು ಹೆಚ್ಚು ಶ್ರದ್ಧಾ ಭಕ್ತಿಗಳಿಂದ ನಡೆದುಕೊಳ್ಳುವ ಧಾರ್ಮಿಕ ಕೇಂದ್ರವಾಗಿದೆ. ಹಟ್ಟಿಯೊಳಗೆ ಕೃಷ್ಣಕುಟೀರ ಇದ್ದು ಇದು ಪಾಳು ಬಿದ್ದಿದೆ.

ಪಾವಗಡದಿಂದ 22 ಕಿ.ಮೀ. ಅಂತರದಲ್ಲಿರುವ ಕೆಂಚಮನ ಹಳ್ಳಿ ಕಾಡುಗೊಲ್ಲರ ಹಟ್ಟಿಯಲ್ಲಿ 110 ಮನೆಗಳು ಇವೆ. ಇವರ ಮಾತೃಭಾಷೆ ಕನ್ನಡ. ಹಟ್ಟಿಯೊಳಗೆ ರಂಗಪ್ಪ ಮತ್ತು ಚಿತ್ರ ದೇವರ ದೇವಾಲಯವಿದೆ. ಹಟ್ಟಿಯ ಬಹುತೇಕ ವೃತ್ತಿ ಕೂಲಿ ಮತ್ತು ಕುರಿ ಸಾಕಾಣಿಕೆಯಾಗಿದೆ. ಇಂದಿಗೂ ಸಂಪ್ರದಾಯಗಳನ್ನು ಅತ್ಯಂತ ಕಟ್ಟುನಿಟ್ಟಿನಿಂದ ಆಚರಿಸುವ ಪದ್ಧತಿ ಹಟ್ಟಿಯಲ್ಲಿದೆ.

ಕಾಮನ ಹಟ್ಟಿಯು ಪಾವಗಡದಿಂದ 20 ಕಿ.ಮೀ. ದೂರದಲ್ಲಿ ಇದೆ. ಹಟ್ಟಿಯಲ್ಲಿ 70 ಮನೆಗಳಿವೆ. ಹಟ್ಟಿಯೊಳಗೆ ಈರಣ್ಣ ಮತ್ತು ಚಿತ್ರಲಿಂಗೇಶ್ವರ ದೇವಾಲಯವಿದೆ. ಇವರ ಮಾತೃಭಾಷೆ ಕನ್ನಡವಾಗಿದೆ. ಹಟ್ಟಿಯೊಳಗೆ ಪ್ರಾಥಮಿಕ ಮತ್ತು ಅಂಗನವಾಡಿ ಕೇಂದ್ರಗಳಿವೆ. ಹಟ್ಟಿಯ ಜನರು ಆಶ್ರಯ ಮನೆಗಳನ್ನು ಪಡೆದುಕೊಂಡಿದ್ದಾರೆ. ಒಬ್ಬರು ಪ್ರಾಥಮಿಕ ಶಾಲಾ ಶಿಕ್ಷಕಿಯು ಮತ್ತು ಒಬ್ಬರು ಗ್ರಾಮ ಪಂಚಾಯತಿ ಸದಸ್ಯರು ಇದ್ದಾರೆ. ಹಳ್ಳಿಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಇವೆ.

ಹೊನ್ನ ಸಮುದ್ರ ಗೊಲ್ಲರ ಹಟ್ಟಿಯಲ್ಲಿ 35 ಮನೆಗಳಿವೆ. ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮ ವಾತಾವರಣ ಇದೆ. ಬಹುತೇಕರಿಗೆ ವ್ಯವಸಾಯ ಭೂಮಿ ಇದ್ದು ವ್ಯವಸಾಯದೊಂದಿಗೆ ಕುರಿ ವ್ಯಾಪಾರವನ್ನು ಮಾಡುತ್ತಾರೆ. ಹಟ್ಟಿಯಲ್ಲಿ ಪ್ರಾಥಮಿಕ ಮತ್ತು ಅಂಗನವಾಡಿ ಕೇಂದ್ರಗಳಿವೆ ಕೃಷ್ಣಕುಟೀರ ಇಲ್ಲ. ಮನೆಗಳು ಆಧುನಿಕ ರೀತಿಯಲ್ಲಿ ವ್ಯವಸ್ಥಿತವಾಗಿ ಕಟ್ಟಿಕೊಂಡಿರುತ್ತಾರೆ. ಶಿಕ್ಷಣಕ್ಕೆ ಆದ್ಯತೆ ಇದೆ.

ಪಾವಗಡದಿಂದ 25 ಕಿ.ಮೀ. ಅಂತರದಲ್ಲಿ ಚಿಕ್ಕ ತಿಮ್ಮನ ಹಟ್ಟಿ ಇದೆ. ಹಟ್ಟಿಯಲ್ಲಿ 45 ಮನೆಗಳು ಇವೆ. ಹಟ್ಟಿಯೊಳಗೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆ ಇದೆ. ಕೂಲಿ ವ್ಯವಸಾಯ ಕುರಿ ವ್ಯಾಪಾರ ಇವರ ಪ್ರಮುಖ ವೃತ್ತಿಯಾಗಿದೆ. ಕೆಲಸಕ್ಕಾಗಿ ಬೆಂಗಳೂರಿಗೆ ವಲಸೆಯೂ ಹೋಗಿದ್ದಾರೆ. ಆಶ್ರಯ ಮನೆ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದು ಉತ್ತಮ ಮನೆ ನಿರ್ಮಿಸಿಕೊಂಡಿದ್ದಾರೆ.

ಪಾವಗಡದಿಂದ 25 ಕಿ.ಮೀ. ಅಂತರದಲ್ಲಿರುವ ಲಿಂಗದಹಳ್ಳಿ ಗೊಲ್ಲರ ಹಟ್ಟಿ ಅಭಿವೃದ್ಧಿ ದೃಷ್ಟಿಯಲ್ಲಿ ಮುಂದಿದೆ. ಲಿಂಗದಹಳ್ಳಿಗೆ ಹೊಂದಿಕೊಂಡಂತೆ 20 ಮನೆಗಳ ಗೊಲ್ಲರ ಹಟ್ಟಿ ಇದೆ. ಆಶ್ರಯ ಮನೆ ಹೋಜನೆ ಅಡಿಯಲ್ಲಿ ಉತ್ತಮ ಮನೆಯನ್ನು ನಿರ್ಮಿಸಿಕೊಂಡಿದ್ದಾರೆ. ಕುರಿ ವ್ಯಾಪಾರ, ಕೂಲಿ ಮಾತ್ರ ಅಲ್ಲದೆ ಬಟ್ಟೆ ಅಂಗಡಿ, ದಿನಸಿ ಅಂಗಡಿ, ಹಣ್ಣಿನ ಅಂಗಡಿ ಇತರೆ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಲಿಂಗದ'ಹಳ್ಳಿಯಲ್ಲಿ ಪದವಿಪೂರ್ವ ಹಂತದವರೆಗೂ ಶಿಕ್ಷಣ ಲಭ್ಯವಿರುವುದರಿಂದ ಶಿಕ್ಷಣ ಪಡೆಯಲು ಪ್ರೋತ್ಸಾಹವಿದೆ. ಹಟ್ಟಿಯಲ್ಲಿ ಕೃಷ್ಣ ಕುಟೀರ ಇಲ್ಲ.

ಎರಳಪಾಳ್ಯ ಗೊಲ್ಲರ ಹಟ್ಟಿಯು ಪಾವಗಡದಿಂದ 35 ಕಿ.ಮೀ. ಅಂತರದಲ್ಲಿದೆ. ಅಭಿವೃದ್ಧಿಯ ದೃಷ್ಟಿಯಿಂದ ಸಾಧಾರಣವಾಗಿರುವ ಗೊಲ್ಲರ ಹಟ್ಟಿ ಇದು. ಹಟ್ಟಿಯಲ್ಲಿ ವ್ಯವಸಾಯ, ಕೂಲಿ, ಕುರಿ ವ್ಯಾಪಾರ ಮುಖ್ಯ ವೃತ್ತಿಯಾಗಿದೆ. ಆಶ್ರಯ ಯೋಜನೆಯ ಅಡಿ ಹಲವರು ಹೊಸ ಮನೆಗಳನ್ನು ಕಟ್ಟಿ ಕೊಂಡಿದ್ದಾರೆ. ಹಟ್ಟಿಯೊಳಗೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆ ಇದೆ. ಹಟ್ಟಿಯೊಳಗೆ ಸಾಂಪ್ರದಾಯಿಕ' ಆಚರಣೆಗಳು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ.

ಜ್ಯಾಡನೂರು ಸಮೀಪ ಇರುವ ದೊಡ್ಡ ಹಟ್ಟಿ 120 ಮನೆಗಳನ್ನು ಹೊಂದಿದೆ. ಹಟ್ಟಿಯೊಳಗೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆಯೂ ಇದೆ. ಬಾಲ್ಯವಿವಾಹ ಇಂದಿಗೂ ಹಟ್ಟಿಯಲ್ಲಿ ಅಸ್ತಿತ್ವದಲ್ಲಿದೆ. ಆಶ್ರಯ ಮನೆಗಳು, ಕಾಮಗಾರಿ ಹಂತದಲ್ಲಿವೆ. ಹಟ್ಟಿಯೊಳಗೆ ಕುರಿ ವ್ಯಾಪಾರ, ಕೋಳಿ ವ್ಯಾಪಾರ, ವ್ಯವಸಾಯ, ಕೂಲಿ ಮುಖ್ಯ ವೃತ್ತಿಯಾಗಿವೆ. ಕೂಲಿಗಾಗಿ ಬೆಂಗಳೂರು ಮತ್ತಿತರ ಕಡೆಗೆ ವಲಸೆ ಹೋಗುವುದು ವ್ಯಾಪಕ'ವಾಗಿದೆ.

ಪಳುವಳ್ಳಿ ಗೊಲ್ಲರ ಹಟ್ಟಿಯು ಪಾವಗಡದಿಂದ 20 ಕಿ.ಮೀ. ಅಂತರದಲ್ಲಿದೆ. ಇಲ್ಲಿ 60 ಗೊಲ್ಲರ ಮನೆಗಳಿವೆ. ಪಳುವಳ್ಳಿಗೆ ಹೊಂದಿಕೊಂಡಂತೆಯೆ ಗೊಲ್ಲರ ಹಟ್ಟಿ ಇದೆ. ಊರೊಳಗಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಇವರು ತೆರಳುತ್ತಾರೆ. ವ್ಯವಸಾಯ, ಕುರಿ ವ್ಯಾಪಾರ, ಕೂಲಿ ಇವರ ಮುಖ್ಯ ವೃತ್ತಿಯಾಗಿದೆ. ಶಿಕ್ಷಣಕ್ಕೆ ಆದ್ಯತೆ ಇದೆ. ಹಟ್ಟಿಯೊಳಗೆ ತಿಮ್ಮಯ್ಯ, ಕಾಟುಮಯ್ಯನ ದೇವಾಲಯವಿದೆ. ಕೃಷ್ಣ ಕುಟೀರ ಇದ್ದು ಅದು ಪಾಳು ಬಿದ್ದಿದೆ. ವೃತ್ತಿಗಾಗಿ ಬೆಂಗಳೂರು ಕಡೆಗೆ ವಲಸೆ ಹೋಗುವುದು ಹೆಚ್ಚಾಗಿಯೇ ಇದೆ. ಇವರ ಮಾತೃಭಾಷೆ ಕನ್ನಡ. ಹಟ್ಟಿಯೊಳಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸಂಘ, ಸ್ತ್ರೀಶಕ್ತಿ ಸಂಘಗಳಿವೆ. ಆಶ್ರಯ ಮನೆ ಯೋಜನೆಯಡಿಯಲ್ಲಿ ಮನೆಗಳನ್ನು ಪಡೆದು ಫಲಾನುಭವಿಗಳು ಇದ್ದಾರೆ. ಹಟ್ಟಿಯ ಪಕ್ಕಕ್ಕೆ ಹೊಂದಿಕೊಂಡಂತೆ ಬೇಡರ ಹಟ್ಟಿಯು ಇದೆ.

ಪಾವಗಡದಿಂದ 18 ಕಿ.ಮೀ. ಅಂತರದಲ್ಲಿ ಕೊಂಡತಿಮ್ಮನಹಳ್ಳಿ ಇದೆ. ಹಳ್ಳಿಯಿಂದ ಒಂದು ಕಿ.ಮೀ. ದೂರದಲ್ಲಿ ಕಾಡುಗೊಲ್ಲರ ಹಟ್ಟಿ ಇದೆ. ಈ ಹಟ್ಟಿಯಲ್ಲಿ 65 ಕಾಡುಗೊಲ್ಲರ ಮನೆಗಳಿವೆ. ಕೆ.ಟಿ ಹಳ್ಳಿ ರಾಜಕೀಯದಲ್ಲಿ ಗುರುತಿಸಿಕೊಂಡಿರುವ ಹಳ್ಳಿಯಾಗಿದೆ. ಹಾಗೂ ಹಳ್ಳಿಯಲ್ಲಿ ಅಂದಾಜು ಸಾವಿರ ಮನೆಗಳಿವೆ. ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಇದೆ. ಪ್ರಾಥಮಿಕ ಆರೋಗ್ಯಕೇಂದ್ರವನ್ನು ಹೊಂದಿದ್ದು, ಬಸ್ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. ಹಳ್ಳಿಯಲ್ಲಿರುವ ಈ ವ್ಯವಸ್ಥೆಗಳು ಈ ಹಟ್ಟಿಯ ಮೇಲೆ ಪ್ರಭಾವಬೀರಿವೆ ಈ ಕಾರಣದಿಂದಾಗಿ ಹಳ್ಳಿಯವರಂತೆ ನಾಗರೀಕತೆಯನ್ನು ಹಟ್ಟಿಯವರೂ ಹೊಂದಿದ್ದಾರೆ. ಆಶ್ರಯ ಯೋಜನೆಯಡಿಯಲ್ಲಿ ಎಲ್ಲರೂ ಮನೆಯನ್ನು ಪಡೆದಿದ್ದಾರೆ. ಹಟ್ಟಿಯಲ್ಲಿ ಗುಡಿಸಲ ಮನೆಯು ಇಲ್ಲ. ಒಂದೇ ಒಂದು ಗುಡಿಸಲು ಇದ್ದು ಆಶ್ರಯಮನೆಯೋಜನೆಯಡಿ ಹಣ ನೀಡುತ್ತೇವೆಂದರೂ ಕಟ್ಟಿಕೊಳ್ಳುವ ಶಕ್ತಿ ಇಲ್ಲವೆನ್ನುತ್ತಾರೆ. ಹಟ್ಟಿಯ ಮಧ್ಯೆ ರಂಗಪ್ಪನ ಗುಡಿ ಆಧುನಿಕ ರೀತಿಯಲ್ಲಿ ಅಂದರೆ ಸಿಮೆಂಟ್ ಇಟ್ಟಿಗೆ ಬಳಸಿ ಕಟ್ಟಿದ್ದಾರೆ. ಹಟ್ಟಿಯಲ್ಲಿ ಬಹುತೇಕ ಕೂಲಿ, ವ್ಯವಸಾಯ, ಕುರಿವ್ಯಾಪಾರ ಮುಖ್ಯ ವೃತ್ತಿಯಾಗಿದೆ. ಶಿಕ್ಷಣಕ್ಕಾಗಿ ಪಾವಗಡಕ್ಕೆ ತೆರಳುತ್ತಾರೆ. ಹಟ್ಟಿಯೊಳಗೆ, ಶೌಚಾಲಯದ ವ್ಯವಸ್ಥೆಯನ್ನು ಎಲ್ಲರೂ ಹೊಂದಿಲ್ಲ. ವಿಧವಾ ವೇತನ, ವೃದ್ಧಾಪ್ಯವೇತನವನ್ನು ಹೊಂದಿರುವ ಫಲಾನುಭವಿಗಳಿದ್ದಾರೆ. ಮಾತೃಭಾಷೆ ಕನ್ನಡವೇ ಆಗಿದೆ. ಕರಡಿಗೊಲ್ಲರು, ಮಾರನೋರುಗೊಲ್ಲರು ಹೆಚ್ಚಾಗಿ ಹಟ್ಟಿಯಲ್ಲಿ ನೆಲೆಸಿದ್ದಾರೆ. ಧರ್ಮಸ್ಥಳ ಮಂಜುನಾಥ ಸಂಘ, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಹಟ್ಟಿಯ ಜನರಿಗೆ ಸಾಲ ಸೌಲಭ್ಯ ನೀಡುವ ಆರ್ಥಿಕ ಸಂಘಟನೆಗಳಾಗಿವೆ. ಹಟ್ಟಿಯೊಳಗೆ ಅಂಗನವಾಡಿ ಇದೆ. ಅದಕ್ಕೆ ಹೊಂದಿಕೊಂಡಂತೆ ಕೃಷ್ಣಕುಟೀರವೂ ಇದೆ. ಸ್ತ್ರೀಶಿಕ್ಷಣಕ್ಕೆ ಆದ್ಯತೆ ಇಲ್ಲ. ಅನುಕೂಲ ಇದ್ದವರು ಮಾತ್ರ ಹೆಚ್ಚಿನ ಶಿಕ್ಷಣಕ್ಕೆ ಪಾವಗಡ, ತುಮಕೂರಿಗೆ ತೆರಳುತ್ತಾರೆ. ಬಹುತೇಕ

ಮನೆಗಳಲ್ಲಿ ಒಡತನ ಇರುವುದರಿಂದ ಎಸ್.ಎಸ್.ಎಲ್.ಸಿ., ಪಿ.ಯು.ಸಿ.ಗೇ ಶಿಕ್ಷಣ ಕೊನೆಗೊಳಸುತ್ತಾರೆ. ಹಟ್ಟಿಗೆ ಅಸ್ಪಶ್ಯರ ಪ್ರವೇಶ ಇಂದಿಗೂ ಇಲ್ಲ.

ಕಾರನಾಗನ ಹಟ್ಟಿ ಪಾವಗಡದಿಂದ ಸುಮಾರು 22 ಕಿ.ಮೀ. ಅಂತರದಲ್ಲಿದೆ. ಊರಿನಿಂದ ಪ್ರತ್ಯೇಕವಾಗಿಯೇ ಗೊಲ್ಲರ ಹಟ್ಟಿಯು ಇದೆ. ಹಟ್ಟಿಯಲ್ಲಿ 85 ಮನೆಗಳಿವೆ. ಹಟ್ಟಿಯಲ್ಲಿ ಅಕ್ಕಮಹಾದೇವಿ, ಚಿತ್ರಲಿಂಗೇಶ್ವರ, ನರಸಿಂಹಸ್ವಾಮಿ ದೇವರುಗಳ ದೇವಾಲಯಗಳಿವೆ. ದೇವಾಲಯಗಳು ಕಾಮಗಾರಿ ಹಂತದಲ್ಲಿದ್ದು ಪೂರ್ಣಗೊಂಡಿಲ್ಲ. ಹಟ್ಟಿಯಲ್ಲಿ ಮನೆ ಇಲ್ಲದವರು ಆಶ್ರಯ ಯೋಜನೆಯಡಿ ಮನೆಯನ್ನು ಪಡೆದು ಕಟ್ಟಿಕೊಂಡಿದ್ದಾರೆ. ಹಟ್ಟಿಗೆ ಪ್ರತ್ಯೇಕವಾಗಿ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆಯು ಇದೆ. ಹಟ್ಟಿಯಲ್ಲಿ ಕೂಲಿ, ವ್ಯವಸಾಯ, ಕುರಿವ್ಯಾಪಾರ, ತರಕಾರಿ ವ್ಯಾಪಾರ, ಹೂವಿನ ವ್ಯಾಪಾರ ವೃತ್ತಿಗಳಿವೆ. ಇವರ ಮಾತೃಭಾಷೆ ಕನ್ನಡವಾಗಿದೆ. ಹಟ್ಟಿಯೊಳಗೆ ಶ್ರೀ ಮಂಜುನಾಥೇಶ್ವರ ಸಂಘ, ಸ್ತ್ರೀಶಕ್ತಿ ಸಂಘಗಳಿವೆ. ಉನ್ನತ ಶಿಕ್ಷಣ ಪಡೆದ ಸ್ತ್ರೀಯರು ಇಲ್ಲ. ಅಂಗನವಾಡಿ ಕಾರ್ಯಕರ್ತೆಯೊಬ್ಬರು ಮಾತ್ರ ಸಮಾಜಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಶೌಚಾಲಯ ವ್ಯವಸ್ಥೆ, ಚರಂಡಿ ವ್ಯವಸ್ಥೆಯು ಹಟ್ಟಿಯಲ್ಲಿ ಅವ್ಯವಸ್ಥಿತವಾಗಿದೆ

ಜುಂಜಪ್ಪನ ಹಟ್ಟಿಯು ಕೋಣನಕುರಿಕೆ ಗ್ರಾಮಕ್ಕೆ ಹೊಂದಿಕೊಂಡಂತೆ ಇದೆ. ಹಟ್ಟಿಯಲ್ಲಿ 25 ಮನೆಗಳಿವೆ. ಹಟ್ಟಿಯಲ್ಲಿ ಆಶ್ರಯ ಮನೆಗಳು ನಿರ್ಮಾಣ ಹಂತದಲ್ಲಿವೆ. ಈ ಮನೆಗಳು ಶೌಚಾಲಯ, ಸ್ನಾನ ಗೃಹಗಳನ್ನು ಹೊಂದಿಲ್ಲ. ಹಟ್ಟಿಯಲ್ಲಿ ಯಾವುದೇ ಅಂಗನವಾಡಿ ಇಲ್ಲ ಕೋಣನಕುರಿಕೆ, ಜೋಗಾರ ಹಟ್ಟಿ ಅಂಗನವಾಡಿಗಳು ಸಮೀಪದಲ್ಲಿರುವುದರಿಂದ ಮಕ್ಕಳು ಅಲ್ಲಿಗೆ ತೆರಳುತ್ತಾರೆ. ಕೋಣನಕುರಿಕೆ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಹೆಚ್ಚಿನ ಶಿಕ್ಷಣಕ್ಕೆ ಕೆ.ಟಿ. ಹಳ್ಳಿ ಇಲ್ಲವೆ ಪಾವಗಡಕ್ಕೆ ತೆರಳಬೇಕಾಗುತ್ತದೆ. ಹಟ್ಟಿಯಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಯಾರೂ ವ್ಯವಸಾಯ ಭೂಮಿಯನ್ನು ಹೊಂದಿಲ್ಲ. ಕುರಿವ್ಯಾಪಾರ, ಕೂಲಿ, ಮುಖ್ಯ ವೃತ್ತಿಯಾಗಿದೆ. ಹಟ್ಟಿಯೊಳಗೆ ಜುಂಜಪ್ಪ ಮತ್ತು ಕಾವಲಮ್ಮ ದೇವಸ್ಥಾನಗಳಿವೆ. ಇಲ್ಲಿ ಕೃಷ್ಣಕುಟೀರಗಳು ಇಲ್ಲ. ಋತು ಸೂತಕವಾದ ಹೆಣ್ಣುಮಕ್ಕಳು ಊರಿನ ಒಕ್ಕಲಿಗರ ಜಗಲಿಯ ಮೇಲೆ ಇರಬೇಕಾಗಿದೆ. ಹಟ್ಟಿಯಲ್ಲಿ ಒಬ್ಬರು ಮಾಜಿ ಗ್ರಾಮಪಂಚಾಯತಿ ಸದಸ್ಯೆ ಇದ್ದಾರೆ. ಹಟ್ಟಿಯಲ್ಲಿ ಸರ್ಕಾರದ ಸಹಾಯಧನದಿಂದ ಜುಂಜಪ್ಪನ ಗುಡಿಗೆ ಕಾಂಪೌಂಡ್ ಗೋಡೆ ನಿರ್ಮಿಸಲಾಗಿದೆ. ಬಹುತೇಕ ಯುವಕರು ಕೆಲಸಕ್ಕಾಗಿ ಬೆಂಗಳೂರು ಇತರೆ ಕಡೆ ವಲಸೆ ಹೋಗಿದ್ದಾರೆ.

ಜೋಗಾರ ಹಟ್ಟಿಯೂ ಕೋಣನಕುರಿಕೆ ಗ್ರಾಮದಿಂದ ಅರ್ಧ ಕಿ.ಮೀ. ದೂರದಲ್ಲಿದೆ. ಹಟ್ಟಿಯಲ್ಲಿ 34 ಮನೆಗಳಿವೆ. ಈರಣ್ಣ ಸ್ವಾಮಿಯ ದೇವಾಲಯವು ಇಲ್ಲಿ ಇದೆ. ಅಂಗನವಾಡಿ

ಕೇಂದ್ರವು ಇದ್ದು ಪ್ರಾಥಮಿಕ ಶಾಲೆಗೆ ಕೋಣನಕುಂಕೆಗೆ ಬರಬೇಕಿದೆ. ಕುರಿವ್ಯಾಪಾರ, ವ್ಯವಸಾಯ, ಕೂಲಿ ಮುಖ್ಯ ವೃತ್ತಿಯಾಗಿದೆ. ಶಿಕ್ಷಣಕ್ಕೆ ಆದ್ಯತೆ ಇಲ್ಲ. ಸ್ತ್ರೀಶಕ್ತಿ ಸಂಘಗಳು ಹಟ್ಟಿಯಲ್ಲಿವೆ. ಕುರಿವ್ಯಾಪಾರ ಇವರ ಮುಖ್ಯ ಕಸುಬು ಇದನ್ನು ಬಿಟ್ಟರೆ ಅಲ್ಪ ಸ್ವಲ್ಪ ವಿದ್ಯಾವಂತರಾದವರು ಕೆಲಸಕ್ಕಾಗಿ ಬೆಂಗಳೂರಿಗೆ ವಲಸೆ ಹೋಗುತ್ತಿದ್ದಾರೆ. ಹಟ್ಟಿಯೊಳಗೆ ಶೌಚಾಲಯದ ವ್ಯವಸ್ಥೆ ಇಲ್ಲ. ವೃದ್ಧಾಪ್ಯವೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ. ಉನ್ನತ ಶಿಕ್ಷಣ ಹೊಂದಿದ್ದ ಮಹಿಳೆಯರು ಇಲ್ಲ.

ಈರಮುದ್ದನಹಟ್ಟಿಯು ಪಾವಗಡದಿಂದ 20 ಕಿ.ಮೀ. ಅಂತರದಲ್ಲಿದೆ ಪೆಮ್ಮನಹಳ್ಳಿ ಊರಿನಿಂದ ಒಂದೂವರೆ ಕಿ.ಮೀ. ಅಂತರದಲ್ಲಿ ಪ್ರತ್ಯೇಕವಾಗಿ ಈ ಗೊಲ್ಲರ ಹಟ್ಟಿ ಇದೆ. ಇಲ್ಲಿ 65 ಮನೆಗಳಿವೆ. ಹಟ್ಟಿಯಲ್ಲಿ ಈರಣ್ಣನ ದೇವಸ್ಥಾನವಿದೆ. ಹಟ್ಟಿ ಹೊಂದಿಕೊಂಡಂತೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆ ಇದೆ. ಕುರಿವ್ಯಾಪಾರ, ವ್ಯವಸಾಯ ಇಲ್ಲಿನ ಮುಖ್ಯ ವೃತ್ತಿಯಾಗಿದೆ. ಅಲ್ಪ ಸ್ವಲ್ಪ ವಿದ್ಯಾವಂತ ಯುವಕ-ಯುವತಿಯರು ಬೆಂಗಳೂರಿಗೆ ಕೆಲಸಕ್ಕೆ ತೆರಳಿದ್ದಾರೆ. ಸ್ತ್ರೀಯರ ಹೆಚ್ಚಿನ ಶಿಕ್ಷಣವು ಪಿ.ಯು.ಸಿ. ಗೆ ಕೊನೆಯಾಗಿದೆ. ಆಶ್ರಯ ಯೋಜನೆಯಡಿಯಲ್ಲಿ ಮನೆ ಇಲ್ಲದವರು ಮನೆ ಪಡೆದಿದ್ದಾರೆ.

ವಡ್ಡರ ಹಟ್ಟಿ ಪಾವಗಡದಿಂದ 25 ಕಿ.ಮೀ. ಅಂತರದಲ್ಲಿದೆ ಈ ಹಟ್ಟಿಯಲ್ಲಿ 40 ಗೊಲ್ಲರ ಮನೆ ಇದೆ. ಹಟ್ಟಿಯಲ್ಲಿ ಆಶ್ರಯ ಮನೆಯನ್ನು ಪಡೆದ ಫಲಾನುಭವಿಗಳು ಇದ್ದಾರೆ. ಹಳ್ಳಿಯೊಳಗೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲಾ ಕೇಂದ್ರಗಳಿವೆ. ಅಭಿವೃದ್ಧಿ ದೃಷ್ಟಿಯಿಂದ ಸಾದರಣ ಮಟ್ಟವನ್ನು ಹೊಂದಿರುವ ಹಟ್ಟಿ. ಹಟ್ಟಿಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘ. ಶ್ರೀ ಧರ್ಮಸ್ಥಳ ಮಂಜನಾಥೇಶ್ವರ ಸ್ವಸಹಾಯ ಸಂಘಗಳಿವೆ. ವೃತ್ತಿಗಾಗಿ ಬೆಂಗಳೂರಿಗೆ ತೆರಳುವುದು ವ್ಯಾಪಕ್ವಾಗಿದೆ. ವಿಧವಾ ವೇತನ ವೃದ್ಧಾಪ್ಯ ವೇತನ ಪಡೆದ ಫಲಾನುಭವಿಗಳು ಇದ್ದಾರೆ. ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ಇಲ್ಲ. ಬಾಲ್ಯ ವಿವಾಹಗಳು ಇಂದಿಗೂ ನಡೆಯುತ್ತಿವೆ.

ಹೊಸಹಟ್ಟಿ 16 ಮನೆಗಳನ್ನು ಹೊಂದಿರುವ ಚಿಕ್ಕ ಹಟ್ಟಿಯಾಗಿದೆ. ಹಟ್ಟಿಯಲ್ಲಿ ಪ್ರಾಥಮಿಕ ಮತ್ತು ಅಂಗನವಾಡಿ ಕೇಂದ್ರಗಳು ಇಲ್ಲ. ಶಿಕ್ಷಣಕ್ಕೆ ಈರ ಮುದ್ದನಹಟ್ಟಿ ಗೊಲ್ಲರ ಹಟ್ಟಿಗೆ ಬರಬೇಕಾಗುತ್ತದೆ. ಹೊಸಹಳ್ಳಿ ಹಟ್ಟಿಯಲ್ಲಿ ಆಶ್ರಯ ಮನೆಗಳನ್ನು ಪಡೆದ ಫಲಾನುಭವಿಗಳು ಇದ್ದಾರೆ. ಕೃಷ್ಣ ಕುಟೀರ ಇಲ್ಲ ಮತ್ತೆ ಯಾವುದೇ ದೇವಾಲಯವು ಹಟ್ಟಿಯೊಳಗೆ ಇಲ್ಲ. ಹಟ್ಟಿಯಲ್ಲಿ ಸಂಪ್ರದಾಯಿಕ ಆಚರಣೆಗಳು ಅತ್ಯಂತ ಕಟ್ಟುನಿಟ್ಟಾಗಿ ಆಚರಿಸಲ್ಪಡುತ್ತಿವೆ.

ಕಾಡುಗೊಲ್ಲರ ಹಟ್ಟಿ:

ಕಾಡುಗೊಲ್ಲರು ವಾಸಿಸುವ ನೆಲೆಗಳನ್ನು ಹಟ್ಟಿ ಎಂದು ಕರೆಯಲಾಗುತ್ತದೆ. ಊರವರ ನೆರಳು ಮೈಲಿಗೆ ಎಂದು ಭಾವಿಸಿದ್ದ ಕಾಡುಗೊಲ್ಲರು ಊರಿನಿಂದ ಅರ್ಧ ಅಥವಾ ಒಂದು ಕಿ.ಮೀ. ದೂರದಲ್ಲಿ ತಮ್ಮದೇ ಆದ ವಾಸದ ನೆಲೆಯನ್ನು ಮಾಡಿಕೊಂಡರು. ಅಲ್ಲದೆ ಅನ್ಯ ಸಂಸ್ಕೃತಿ, ಸಮುದಾಯಗಳಿಂದ ತಮ್ಮ ಸಮುದಾಯದ ಸಂಸ್ಕೃತಿಯನ್ನು ತಮ್ಮನ್ನು ರಕ್ಷಿಸಿಕೊಳ್ಳುವುದು ಮತ್ತು ಪಶುಪಾಲನೆಯ ವೃತ್ತಿಯ ಕಾರಣದಿಂದ ಕಾಡಿನ ಸಮೀಪವಾಗಿ ಊರಿನಿಂದ ದೂರವಾಗಿ ಇರುವುದು ಕಾಡುಗೊಲ್ಲರಿಗೆ ಅನಿವಾರ್ಯವಾಗಿರಬಹುದು.ಕಾಡುಗೊಲ್ಲರು ಹಟ್ಟಿಗಳಲ್ಲಿ ಕನಿಷ್ಠ 10 ರಿಂದ 150 ವರೆಗೆ ಮನೆಗಳಿರುತ್ತದೆ.ಈ ಮನೆಗಳ ಸಮೂಹವನ್ನೇ 'ಹಟ್ಟಿ' ಎಂದು ಕರೆಯಲಾಗುತ್ತದೆ. ಗೊಲ್ಲರ ಹಟ್ಟಿಯ ಸುತ್ತಲೂ ಕಳ್ಳಿ ಅಥವಾ ಜಾಲಿಯ ಮುಳ್ಳನ್ನು ಹಾಕಿ ಹಟ್ಟಿಯ ಗಡಿಯನ್ನು ಸ್ಪಷ್ಟಪಡಿಸಲಾಗಿರುತ್ತದೆ. ಈ ಬೇಲಿಯನ್ನು ದಾಟ ಊರಿನವರು ಹಟ್ಟಿಯವರ ಒಪ್ಪಿಗೆಯಿಲ್ಲದೆ ಒಳಬರುವಂತಿಲ್ಲ. ಹಟ್ಟಿಯ ಮನೆಗಳು ಪ್ರಕೃತಿಯ ವಿಪುಲವಾಗಿ ದೊರೆಯುವ ವಸ್ತುಗಳಿಂದ ರಚಿತವಾಗಿರುತ್ತವೆ. ಬಾದೆಹುಲ್ಲು, ತೆಂಗಿನಗರಿ, ಸೊಪ್ಪು, ಬಿದಿರು ಮಣ್ಣನ್ನು ಬಳಸಿ ಗುಡಿಸಲಿನಂತೆ ಮನೆಯನ್ನು ನಿರ್ಮಿಸುತ್ತಾರೆ. ಹಟ್ಟಿ ಒಳಗಿನ ದೇವರ ಗುಡಿಗಳು ಬಾದೆಹುಲ್ಲಿನ ಮೇಲ್ಛಾವಣಿ ಹೊಂದಿರುವಂತಹ ರಚನೆಗಳೇ ಆಗಿವೆ. ಮನೆಗಳು ನೆಲಮಟ್ಟದಿಂದ 5 ರಿಂದ 6 ಅಡಿ ಎತ್ತರವಿರುತ್ತವೆ. 10 ರಿಂದ 12 ಅಡಿ ಸುತ್ತಳತೆಯನ್ನು ಹೊಂದಿರುತ್ತವೆ. 2 ರಿಂದ 3 ಅಡಿಗಳು ಅಗಲದ ಬಾಗಿಲಿರುತ್ತದೆ.ಕಿಟಕಿಗಳು ಸಾಮಾನ್ಯವಾಗಿ ಇರುವುದಿಲ್ಲ. ಮನೆಯ ಒಳಗೆ ಯಾವುದೇ ಪ್ರತ್ಯೇಕ ಕೋಣೆಗಳು ಇರುವುದಿಲ್ಲ. 4 ಅಡಿ ಎತ್ತರ ಮಣ್ಣಿನಗೋಡೆ ಅಡಿಗೆ ಮನೆಯನ್ನು ಪ್ರತ್ಯೇಕಿಸುತ್ತದೆ. ಮನೆಯ ಇಂತಹ ರಚನೆಗಳು ಅಲೆಮಾರಿಗಳಾಗಿ ಕಾಡುಗೊಲ್ಲರು ಇದ್ದ ಸಂದರ್ಭದಲ್ಲಿ ಹೆಚ್ಚು ಇದ್ದವು. ಇಂದು ಹಟ್ಟಿಯಲ್ಲಿ ಇಂತಹ ರಚನೆಗಳು ಪಳೆಯುಳಿಕೆಯಂತೆ ಅಲ್ಲೊಂದು ಇಲ್ಲೊಂದು ಉಳಿದಿವೆ. ಕಾಡುಗೊಲ್ಲರು ಸ್ಥಿರ ನೆಲೆಗಳನ್ನು ಕಂಡುಕೊಂಡ ಮೇಲೆ ಕಸುಬು ಪಶುಪಾಲನೆಯಿಂದ ಕೃಷಿಯತ್ತ ಹೊರಳಿದ ಮೇಲೆ ಮನೆಗಳ ರಚನೆಗಳು ವೈವಿಧ್ಯತೆಯನ್ನು ಪಡೆದುಕೊಂಡವು. ಗುಡಿಸಲು ಹೆಂಚಿನ ಮೇಲ್ಛಾವಣಿ ಹೊಂದಿರುವ ಸಿಮೆಂಟ್ ಕಾಂಕ್ರೀಟ್‌ನಿಂದ ನಿರ್ಮಿಸಿದ ಗಟ್ಟುಮುಟ್ಟಾದ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಮನೆಯ ಒಳಗೆ ಪ್ರತ್ಯೇಕ ಅಡಿಗೆ ಮನೆ, ಕೋಣೆ, ಹಜಾರ ಮುಖ್ಯ ಭಾಗಗಳಿವೆ. ಸ್ನಾನದ ಮನೆ ಬಹುತೇಕ ಮನೆಯಿಂದ ಹೊರಗೆ ಮನೆಗೆ ಹೊಂದಿಕೊಂಡು ಇಲ್ಲವೆ ಸ್ವಲ್ಪದೂರದಲ್ಲಿ ನಿರ್ಮಿಸಲಾಗಿದೆ. ಪಾವಗಡದಲ್ಲಿ ಬಂಡೆಗಲ್ಲುಗಳು ಹೇರಳವಾಗಿ ಲಭ್ಯವಿರುವುದರಿಂದ ಮನೆಗಳ ರಚನೆಯಲ್ಲಿ ಅವುಗಳ ಬಳಕೆ ಸಹಜವಾಗಿ ಹೆಚ್ಚೇ ಇದೆ.ಶೌಚಾಲಯದ ವ್ಯವಸ್ಥೆಯು ಇಲ್ಲದೆ ಬಹುತೇಕ ಬಯಲಿನ ಶೌಚಾಲಯಗಳನ್ನು ಬಳಸುವ ಪದ್ಧತಿ ಇದೆ.ಮನೆಗೆ ಹೊಂದಿಕೊಂಡಂತೆ ಕುರಿ ರೊಪ್ಪಗಳು, ದನದರೊಪ್ಪವನ್ನು ನಿರ್ಮಿಸಿಕೊಳ್ಳಲಾಗಿದೆ.ಗೊಲ್ಲರ ಹಟ್ಟಿಗಳು ಸರ್ಕಾರದ ದಾಖಲೆಯಲ್ಲಿ ನಮೂದುಗೊಂಡಿರುವ

ಫಲವಾಗಿ ಹಿಂದುಳಿದ ಬುಡಕಟ್ಟು ಎಂದು ಗುರುತಿಸಲ್ಪಟ್ಟು ಗೊಲ್ಲರಹಟ್ಟಿಗಳಿಗೆ ಸರ್ಕಾರವು ಮನೆಗಳನ್ನು ನಿರ್ಮಿಸಲು ಆರ್ಥಿಕನೆರವು ನೀಡಲಾಗುತ್ತದೆ. ಹೀಗಾಗಿ ಗೊಲ್ಲರ ಹಟ್ಟಿಗಳು ಆರ್.ಸಿ.ಸಿ. ಮನೆಗಳು ಆಧುನಿಕ ಮಾದರಿಯಲ್ಲಿ ನಿರ್ಮಾಣಗೊಳ್ಳುತ್ತವೆ. ಜಾದೆಹುಲ್ಲಿನ ಗುಡಿಸಲು ಹಟ್ಟಿಯ ಸುತ್ತಲು ಕಳ್ಳೆಬೇಲಿ ಇಡಲೇ ಬೇಕೆಂಬ ಬಿಗಿಕಟ್ಟಿನ ನಿಯಮ ಸಡಿಲವಾಗಿದೆ. ಆಧುನಿಕ ಬದುಕಿಗೆ ತೆರೆದುಕೊಳ್ಳುತ್ತಿರುವ ಕಾಡುಗೊಲ್ಲರು ಇತರ ಜನಸಮುದಾಯದವರಂತೆ ಮನೆ ನಿರ್ಮಿಸಿಕೊಂಡು ರಸ್ತೆ, ಚರಂಡಿ, ಶೌಚಾಲಯ, ಮೊದಲಾದ ಮೂಲಭೂತ ಸೌಕರ್ಯಗಳನ್ನು ಹೊಂದಿ ಉತ್ತಮ ಬದುಕು ಕಟ್ಟಿಕೊಳ್ಳುವತ್ತ ಮುಖಮಾಡಿದ್ದಾರೆ.ಹಟ್ಟಿಯೊಳಗೆ ಯಾವುದೇ ವಾಣಿಜ್ಯ ಮಳಿಗೆಗಳು, ಅಂಗಡಿಗಳು ಇರುವುದಿಲ್ಲ. ದಿನನಿತ್ಯದ ಬಳಕೆಯ ದಿನಸಿ ಇತರೆ ವಸ್ತುಗಳಿಗೆ ಗ್ರಾಮದ ಒಳಗಿರುವ ಅಂಗಡಿಗಳಿಗೆ ತೆರಳಬೇಕು. ಹಟ್ಟಿಯೊಳಗೆ ಅಂಗನವಾಡಿ ಪ್ರಾಥಮಿಕ ಶಾಲೆಯ ವ್ಯವಸ್ಥೆಯೂ ಇದೆ. ಪ್ರೌಢ ಮತ್ತು ಉನ್ನತಶಿಕ್ಷಣಕ್ಕೆ ಪಟ್ಟಣಕ್ಕೆ ತೆರಳಬೇಕಾಗಿದೆ. ಗೊಲ್ಲರಹಟ್ಟಿಯ ಮಧ್ಯಭಾಗದಲ್ಲಿ ದೇವಸ್ಥಾನಗಳಿರುತ್ತವೆ. ಈ ಮೊದಲು ಈ ದೇವಸ್ಥಾನಗಳು ಜಾದೆಹುಲ್ಲಿನ ಗುಡಿಸಲಿನದಿದ್ದವು. ಇಂದು ದೇವಸ್ಥಾನಗಳು ಗುಡಿಸಲು ಬಿಟ್ಟು ದೃಢವಾದ ಕಟ್ಟಡಗಳನ್ನು ಹೊಂದುತ್ತಿವೆ.

ಜೀವನ ವಿಧಾನ

ಶಾರೀರಿಕ ಲಕ್ಷಣ :-

ಕಾಡುಗೊಲ್ಲರು ದೃಢಕಾಯವನ್ನು ಹೊಂದಿದ್ದು, ಪುರುಷರು 5.5 ರಿಂದ 6 ಅಡಿ ಮಹಿಳೆಯರು 5 ರಿಂದ 5.5 ಅಡಿ ಎತ್ತರವನ್ನು ಹೊಂದಿರುತ್ತಾರೆ.ಕಾಡುಗೊಲ್ಲರಲ್ಲಿ ಬಹುಸಂಖ್ಯಾತರು ಕಪ್ಪು ಮೈ ಬಣ್ಣವನ್ನು ಹೊಂದಿದ್ದಾರೆ. ವಿರಳವಾಗಿ ಬಿಳಿ ಮತ್ತು ಬಿಳಿ ಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತಾರೆ. ಪಾವಗಡ ಬಿಸಿಲ ತಾಪ ಹೆಚ್ಚಿರುವ ಉಷ್ಣವಲಯವಾದ್ದರಿಂದ ಇಲ್ಲಿನ ಕಾಡುಗೊಲ್ಲರು ಬಿಸಿಲಲ್ಲಿ ದುಡಿಯುವ ಶ್ರಮಜೀವಿಗಳಾದ್ದರಿಂದ ಚರ್ಮ ಒರಟಾಗಿದ್ದು, ತಿಳಿಕಪ್ಪು ಬಣ್ಣವನ್ನು ಹೊಂದಿದೆ. ನೀಳಕಾಯದವರು ಹೆಚ್ಚಾಗಿರುವ ಈ ಪ್ರದೇಶದ ಕಾಡುಗೊಲ್ಲರಲ್ಲಿ ಅಪೌಷ್ಠಿಕತೆಯ ಮತ್ತು ನೀರಿನ ಸಮಸ್ಯೆಗಳು ದೇಹದ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತಿವೆ ಫ್ಲೋರೈಡ್ ನೀರಿನ ಕಾರಣದಿಂದ ಹಲ್ಲುಗಳು ಹಳದಿ ಮಿಶ್ರಿತವಾಗಿವೆ. ಇದು ಫ್ಲೋರೈಸಿಸ್ ರೋಗದ ಆರಂಭದ ಲಕ್ಷಣವೂ ಆಗಿದೆ.ಕೃಶಕಾಯ ಅಪೌಷ್ಠಿಕತೆಯ ಪರಿಣಾಮವಾಗಿದೆ.

ಉಡಿಗೆ-ತೊಡುಗೆ :-

ಅಲೆಮಾರಿ ಪಶುಪಾಲಕರಾಗಿದ್ದ ಕಾಡುಗೊಲ್ಲರ ಉಡುಗೆಗಳು ತೀರ ಸರಳವಾಗಿವೆ. ಆರ್ಥಿಕವಾಗಿ ಹಿಂದುಳಿದ ಜನಾಂಗವಾದ ಇವರು ಉಡುಪು ಖರ್ಚುದಾಯಕವಲ್ಲದ್ದು. ಗಂಡಸರು ಸೊಂಟಕ್ಕೆ ಧರಿಸುವ ಚಲ್ಲಣ, ತಲೆಗೆ ಮುಂಡಾಸು ಹೆಗಲಲ್ಲಿ ಒಂದು ಕರಿಕಂಬಳಿ ಧರಿಸಿದರೆ, ಹೆಂಗಸರು ಸೀರೆಯನ್ನು ಧರಿಸುತ್ತಿದ್ದರು.ರವಿಕೆ ತೊಡುವ ಸಂಪ್ರದಾಯವಿಲ್ಲದ ಕಾಡುಗೊಲ್ಲ ಮಹಿಳೆಯರು ರವಿಕೆ ತೊಡುವುದಕ್ಕೆ ನಿಷೇದವಿದೆ.' ಸೀರೆಯನ್ನು ಮೈ ತುಂಬಾ ಹೊಂದಿದಂತೆ ಧರಿಸುತ್ತಿದ್ದರು. ರವಿಕೆ ತೊಟ್ಟರೆ ಹುಟ್ಟುವ ಮಕ್ಕಳಿಗೆ ಹಾಲು ಬತ್ತಿ ಹೋಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಪಾವಗಡದ ವಾತಾವರಣವು ಉಷ್ಣವಲಯವಾದ್ದರಿಂದ ಉಡುಗೆಯು ತುಂಬಾ ಸರಳವಾಗಿದೆ. ಅಲೆಮಾರಿಗಳಾದ್ದರಿಂದ ದಪ್ಪ ಬಟ್ಟೆ ಬಳಸುತ್ತಾರೆ. ಕಾಲಿಗೆ ಚರ್ಮದ ಇಲ್ಲವೆ ಪ್ಲಾಸ್ಟಿಕ್' ಚಪ್ಪಲಿ ಬಳಸುತ್ತಾರೆ. ಕಾಡುಗೊಲ್ಲರು ನಾಗರೀಕ ಸಮಾಜಕ್ಕೆ ಹತ್ತಿರವಾದಂತೆ ಊರಿನ ಇತರ ಜನರಂತೆ ಉಡುಗೆಯಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ ಗಂಡಸರು ಶರ್ಟ್, ಪಂಚೆ, ಬನಿಯನ್, ಪ್ಯಾಂಟ್, ಹೆಂಗಸರು ಸೀರೆ, ಚೂಡಿದಾರ್, ನೈಟಿ ನವೀನ ಮಾದರಿಯ ಉಡುಪುಗಳನ್ನು ಇಂದು ಕಾಡುಗೊಲ್ಲರು ಬಳಸುತ್ತಾರೆ.ರವಿಕೆ ರಹಿತ ಸಂಪ್ರದಾಯ ಹಟ್ಟಿಯ ಹಿರಿಯ ತಲೆಮಾರಿನ ಒಬ್ಬಬ್ಬರು ಹೆಂಗಸರು ಬಿಟ್ಟರೆ ಉಳಿದವರು ಸಂಪ್ರದಾಯಕ್ಕೆ ವಿದಾಯ ಹಾಡಿದ್ದಾರೆ. ವೃತ್ತಿಯೂ ಬದಲಾಗಿರುವುದರಿಂದ ಕರಿಕಂಬಳಿಗಿದ್ದ ಮಾನ್ಯತೆಯೂ ತಗ್ಗಿದೆ.

ಸ್ತ್ರೀಯರು ಕೈಯಲ್ಲಿ ಧರಿಸುವ ಗೊಲ್ಲಕಡಗ ಪುರುಷರು ಕೈಯಲ್ಲಿ ಧರಿಸುವ ನಾಗಚಿಹ್ನೆಗಳಿರುವ ಬಳೆ ಕಾಡುಗೊಲ್ಲರ ಬುಡಕಟ್ಟಿನ ಪುರುಷ ಮತ್ತು ಮಹಿಳೆಯರು ಧರಿಸುವ ವಿಶೇಷ ಬುಡಕಟ್ಟಿನ ಆಭರಣಗಳು. ಗೊಲ್ಲಕಡಗನ್ನು ಮದುವೆಯಾದ ಹೆಣ್ಣು ಮಕ್ಕಳು ಧರಿಸುವುದು ಪದ್ಧತಿ. ಬಳೆಯ ಮೇಲೆ ಗೋಕುಲ, ಗೋಪಾಲನೆಗೆ ಸಂಬಂಧಿಸಿದ ಚಿತ್ತಾರವಿದೆ. ಸಾಮಾನ್ಯವಾಗಿ ಹಿತ್ತಾಳೆಯ ಲೋಹದಿಂದ ಇದನ್ನು ಮಾಡಲಾಗಿರುತ್ತದೆ. ಗೊಲ್ಲಕಡಗ ಧರಿಸಿದ ಮಹಿಳೆ ಕೃಷ್ಣನ ಪತಿಯೆಂದು ಸ್ವೀಕರಿಸಿದಂತೆ. ಇವುಗಳೇ ಅಲ್ಲದೇ ಹೆಂಗಸರು ಬಂಗಾರದ ಮೂಗುತಿ, ಉಂಗುರ, ಕೈಬಂಧಿ, ಬೆಂಡೋಲೆ, ತಾಳಿ, ಅಡಿಕೆ ಸರ, ಮೊದಲಾದವು ಹಾಗೂ ಇತ್ತೀಚಿನ ಆಧುನಿಕ ಆಭರಣಗಳನ್ನು ತೊಡುತ್ತಿದ್ದಾರೆ. ಪುರುಷರು ಕುಲದ ಸಂಕೇತವಾಗಿ ನಾಗನ ಬಳೆಯನ್ನು ಧರಿಸುತ್ತಾರೆ. ಇದು ಬೆಳ್ಳಿ ಅಥವಾ ಹಿತ್ತಾಳೆಯಿಂದ ಮಾಡಲಾಗಿರುತ್ತದೆ. ಕಾಡುಗೊಲ್ಲರು ಒಂದು ಹಟ್ಟಿಯಿಂದ ಇನ್ನೊಂದು ಹಟ್ಟಿಗೆ ಪ್ರವೇಶ ಪಡೆಯಬೇಕಾದರೆ ಈ ನಾಗ ಬಳೆ ಮತ್ತು ಗೊಲ್ಲ ಕಡಗ ಪ್ರಮುಖ ಪಾತ್ರವಹಿಸುತ್ತಿದ್ದವು. ಇದನ್ನು ಧರಿಸಿದವರಿಗೆ ಮಾತ್ರ ಹಟ್ಟಿಗೆ ಪ್ರವೇಶ ಇದ್ದಿತು. ಇವುಗಳನ್ನು ಧರಿಸದವರು ಹಟ್ಟಿಯ ಆಚೆಯೆ ಉಳಿಯಬೇಕಾಗಿತ್ತು. ಕುಲಚಿಹ್ನೆಯಾಗಿ ಈ ಎರಡೂ ತೊಡುಗೆಗಳು

ಗುರುತಿಸಿಕೊಂಡಿವೆ. ಹಾಗ ಒಳೆಯಲ್ಲದೆ ಪುರುಷರು, ಕಾಯಿಸಾಣೆ, ಕಿವಿಓಲೆ, ಧರಿಸುತ್ತಾರೆ. ಇಂದಿನ ಕಾಡುಗೊಲ್ಲರ ಉಡುಗೆ ತೊಡುಗೆ ಬುಡಕಟ್ಟಿನ ವಿಶಿಷ್ಟತೆಯನ್ನು ಬಿಟ್ಟುಕೊಟ್ಟಿವೆ. ಆಧುನಿಕ ಬದುಕಿಗೆ ಹೊಂದುವಂತೆ ಉಡುಗೆ-ತೊಡುಗೆ ಬದಲಾಗಿವೆ. ಇತರ ಜನರಿಗೆ ಸಮಾನರಂತೆ ಉಡುಗೆ-ತೊಡುಗೆಯನ್ನು ಆಧುನಿಕತೆಯನ್ನು ಕಾಡುಗೊಲ್ಲರು ಒಪ್ಪಿ ಅಳವಡಿಸಿಕೊಂಡಿದ್ದಾರೆ.

ಆಹಾರಪದ್ಧತಿ :

ಕಾಡುಗೊಲ್ಲರು ಸಸ್ಯಹಾರಿಗಳೂ ಹೌದು, ಮಾಂಸಹಾರಿಗಳೂ ಹೌದು. ಕಾಡಿನ ಸಮೀಪ ವಾಸಿಸುತ್ತಿದ್ದರಿಂದ ಕಾಡುಮೂಲದ ಉತ್ಪನ್ನಗಳಾದ ಸೊಪ್ಪು ಗೆಡ್ಡೆಗೆಣಸು ಉಪಯೋಗಿಸುವಂತೆ ಜಿಂಕೆ, ಮೊಲಗಳನ್ನು ಮಾಂಸಕ್ಕಾಗಿ ಉಪಯೋಗಿಸುತ್ತಿದ್ದರು. ಕೃಷಿಯಾಧಾರಿತ ಬದುಕಿನಿಂದಾಗಿ ರಾಗಿ, ಜೋಳ, ಸಜ್ಜೆ, ಭತ್ತ, ಹುರುಳಿ, ತೊಗರಿ, ಆಹಾರದಲ್ಲಿ ಬಳಸುತ್ತಿದ್ದಾರೆ. ಕುರಿ, ಮೇಕೆಯನ್ನು ಸಾಕುವ ವೃತ್ತಿಯಿಂದ ಅವುಗಳನ್ನು ಮಾಂಸಾಹಾರಕ್ಕಾಗಿ ಬಳಸುತ್ತಿದ್ದಾರೆ.

ಪಾವಗಡ ಗೊಲ್ಲರಹಟ್ಟಿಗಳಲ್ಲಿ ಬಹುಸಂಖ್ಯಾತರು ಬಡತನ ರೇಖೆಯಲ್ಲಿ ಗುರುತಿಸಿಕೊಂಡವರು. ದಿನನಿತ್ಯ ಬಗೆ ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿ ಬಳಸುವ ಅನುಕೂಲತೆ ಇಲ್ಲ. ಅನ್ನ ಸೊಪ್ಪಿನಸಾರು, ಮುದ್ದೆ ನಿತ್ಯದ ಊಟ. ಅಪರೂಪಕ್ಕೆ, ಬಯಕೆಯಾದಾಗ ತಿಂಡಿಯನ್ನು ತಯಾರಿಸಿ ತಿನ್ನುತ್ತಾರೆ. ಮಾಂಸಾಹಾರ ಹಬ್ಬದ ದಿನಗಳಲ್ಲಿ, ಅತಿಥಿಗಳು ಆಗಮಿಸಿದ ದಿನಗಳಲ್ಲಿ ತಯಾರಿಸುತ್ತಾರೆ.ಕೋಳಿಮಾಂಸವನ್ನು ಹಿಂದಿನ ಕಾಡುಗೊಲ್ಲ ಸಮುದಾಯ ನಿಷೇದಿಸಿತ್ತು.ಇಂದು ಕಾಡುಗೊಲ್ಲರಲ್ಲಿ ಕೋಳಿ ವ್ಯಾಪಾರವು ವೃತ್ತಿಯಾಗಿದೆ. ಹಟ್ಟಿಗೆ ಕೋಳಿ ಪ್ರವೇಶವೂ ಆಗಿರುವುದರಿಂದ ಬಹುತೇಕ ಕೋಳಿಮಾಂಸವನ್ನು ಬಳಸುತ್ತಾರೆ. ಗೋಮಾಂಸ ನಿಷೇದ ಮತ್ತು ಹಂದಿ ಮಾಂಸ ನಿಷೇದ, ಮಾತ್ರ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಗಾಣಿಕೆಸೊಪ್ಪು ಅಣ್ಣೆ ಸೊಪ್ಪು, ಬಡ್ಡಿಸೊಪ್ಪು, ದಂಟು, ಚಿಲ್ಲಿ, ಹಾಲೇ, ಕೀರೆ, ಜಣಿಬೆ , ಮುಂಗರೊಳ್ಳಿ, ಸಬಾಕ್ಷಿ, ಹುಣಸೆ ಸೊಪ್ಪುಚಿಗುರು, ಮೊದಲಾದ ಸೊಪ್ಪುಗಳನ್ನುಹೆಚ್ಚು ಬಳಸುತ್ತಾರೆ. ಉಳಿದಂತೆ ಕ್ಯಾರೆಟ್, ಟಮೋಟ, ಉರುಳಿಕಾಯಿ, ಬದನೆಕಾಯಿ ಮೊದಲಾದ ತರಕಾರಿಗಳನ್ನು ಕೊಂಡುತರುತ್ತಾರೆ. ರಾಗಿ, ಜೋಳ ಭತ್ತ, ಸಜ್ಜೆ, ಗೋಧಿ, ನವಣೆ, ತೊಗರಿ, ಹೆಸರು, ಬಟಾಣಿ, ಕಡಲೆ, ಉದ್ದು ಧಾನ್ಯಗಳನ್ನು ಬಳಸುತ್ತಾರೆ. ತುಪ್ಪ ಮೊಸರು ನಿತ್ಯವೂ ಆಹಾರದಲ್ಲಿ ಬಳಸುತ್ತಾರೆ.

ಕಸುಬು :

ಕಾಡುಗೊಲ್ಲರು ಕುಲನಾಮವೇ ಹೇಳುವಂತೆ ಗೋಪಾಲಕರು ಇಂದು ಕುರಿ, ಮೇಕೆ, ಕೋಳಿ ಸಾಕಾಣೆ, ಕೃಷಿ, ವ್ಯಾಪಾರ, ಕೂಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ವಿವಿಧ ಉದ್ಯೋಗಗಳಲ್ಲಿರುವ ಕಾಡುಗೊಲ್ಲರ ಮೂಲ ಕುಲ ಕಸುಬು ಗೋಪಾಲನೆಯೇ ಕಾಡುಗೊಲ್ಲರ ಸಾಹಿತ್ಯದಲ್ಲಿ ದಾಖಲಿಸುವಂತೆ ಮುಖ್ಯ ನಾಯಕರೆಲ್ಲಾ ಗೋಪಾಲಕರೇ ಆಗಿದ್ದಾರೆ. (ಎತ್ತಪ್ಪ, ಜುಂಜಪ್ಪ ಇತ್ಯಾದಿ) ಕಾಡುಗೊಲ್ಲರು ಗೋಪಾಲನೆಗಾಗಿಯೇ ಊರಿಗೆ ದೂರವಾಗಿ ಕಾಡಿಗೆ ಸಮೀಪವಾದವರು, ಅಲೆಮಾರಿಗಳಾದವರು ತಮ್ಮ ಗೋವುಗಳನ್ನು ಮಾತ್ರವಲ್ಲದೆ, ಸ್ಥಿತಿವಂತರ ಮನೆಯ, ಊರಿನ ಗೋವುಗಳನ್ನೇ ಮೇಯಿಸುತ್ತಿದ್ದ ವಿವರಗಳು ಸಿಗುತ್ತವೆ. ಕಾಡುಗೊಲ್ಲ ಮಹಿಳೆಯರು ಹಾಲು, ಮೊಸರು, ತುಪ್ಪ, ಮಾರಿ ಜೀವನ ಸಾಗಿಸುತ್ತಿದ್ದ ವಿವರಗಳು ಸಿಗುತ್ತವೆ.

ಪಶುಪಾಲನೆ ದುಬಾರಿ ಎನಿಸಿದ ಮೇಲೆ ಹುಲ್ಲುಗಾವಲಿನ ಕೊರತೆಯಿಂದಾಗಿ ಇಂದು ಮೇಕೆ, ಕುರಿ ಸಾಕಾಣೆಯತ್ತ ಹೆಚ್ಚು ಗಮನ ಕೊಟ್ಟಿದ್ದಾರೆ. ಕೃಷಿ ಮತ್ತು ಕೂಲಿಯ ಕಸುಬನ್ನು ಆರಂಭಿಸಿ ಒಂದು ಕಡೆ ನೆಲೆ ನಿಂತ ಮೇಲೆ ಮೂಲ ಕಸುಬಾದ ಪಶುಪಾಲನೆ ಕಡಿಮೆಯಾಯಿತು. ಹೈನುಗಾರಿಕೆ ಉದ್ದೇಶದಿಂದ ಹಸು ಎಮ್ಮೆಯನ್ನು ಸಾಕುತ್ತಾರೆ. ಕುರಿ, ಮೇಕೆಗಳ ಸಾಕಾಣಿಕೆ ಪ್ರಮುಖ ಆದಾಯದ ಮೂಲವಾಗಿದೆ.ಕುರಿ, ಪಶುಗಳ ಮೇವಿಗಾಗಿ ಕಾವಲುಗಳಿಂದ ಕಾವಲಿಗೆ ಅಲೆಯುತ್ತಿದ್ದ ಕಾಡುಗೊಲ್ಲರು ಇಂದು ಮಳೆ ಅಭಾವ, ಕಾವಲುಗಳ ಮೇವಿನ ಕೊರತೆಯಿಂದ ಕುರಿ, ಮೇಕೆ ಸಾಕಾಣಿಕೆಗೆ 'ಕೊಟ್ಟಿಗೆ ಪದ್ಧತಿಯನ್ನು' ಅನುಸರಿಸುತ್ತಿದ್ದಾರೆ. ಬಹುತೇಕರು ಸಿಡಿಲುಬಡಿದು ಕುರಿ ಮೇಕೆಗಳ ಸಾವು, ಕುರಿ ಮೇಕೆಗಳಿಗೆ ಬರುವ ಸಿಡಿರೋಗ, ಚಪ್ಪೆರೋಗ ಮೊದಲಾದ ತೊಂದರೆಗಳನ್ನು ಅನುಭವಿಸುತ್ತಿರುವುದರಿಂದ ಕೆಲವೊಮ್ಮೆ ಕೂಲಿಗಾಗಿ ವಲಸೆ ಹೋಗುತ್ತಿರುವುದು ಸಾಮಾನ್ಯವಾಗಿದೆ. ಪಾವಗಡಕ್ಕೆ ಬೆಂಗಳೂರು, ಆಂಧ್ರ ಪಟ್ಟಣ ಪ್ರದೇಶಗಳು ಹತ್ತಿರವಿರುವುದರಿಂದ ಕಾರ್ಖಾನೆ, ಗಾರ್ಮೆಂಟ್ಸ್‌ಗಳಲ್ಲಿ ದುಡಿಯಲು ಯುವಕರು ಯುವತಿಯರು ವಲಸೆ ಹೋಗುತ್ತಿರುವುದು ಕಂಡುಬರುತ್ತದೆ. ಕುಟುಂಬದ ಇತರೆ ಹಿರಿಯರು ಇವರು ಕಳಿಸುವ ಹಣವನ್ನು ಪಡೆದು ಯಾವುದೇ ಇತರೆ ವೃತ್ತಿಯನ್ನು ತೊಡಗದೆ ಇರುವುದು ವಿರಳವಾಗಿ ಕಂಡುಬರುತ್ತದೆ. ಉಳಿದಂತೆ ಕೃಷಿ. ಪಶುಪಾಲನೆ. ಕುರಿಸಾಕಾಣಿಯನ್ನು. ಕೂಲಿ ಆಧರಿಸಿ, ಜೀವನ ನಡೆಸುತ್ತಿದ್ದಾರೆ.ಪಾವಗಡಬರಪೀಡಿತ ಪ್ರದೇಶವು ಕೈಗಾರಿಕೆಗಳಿಲ್ಲದ ಪ್ರದೇಶವೂ ಆಗಿರುವುದರಿಂದ ಕೂಲಿ ಸೃಷ್ಟಿಯಾಗುತ್ತಿಲ್ಲ ಕೃಷಿಯಾಧಾರಿತ ಕೂಲಿಗಳು ಮಾತ್ರ ಲಭ್ಯವಿವೆ. ಅವೂ ಅನಿರ್ದಿಷ್ಟವಾಗಿವೆ. ಮಳೆಯ ಅಭಾವ ಕೃಷಿ ಅವಲಂಬನೆಯಲ್ಲಿ ಸಮಸ್ಯೆಗಳನ್ನು, ಮೇವಿನ ಕೊರತೆಯು ಪಶುಪಾಲನೆ,

ಕುರಿ.ಮೇಕೆ ಸಾಕಾಣಿಕೆಯಲ್ಲಿ ತೊಂದರೆಯನ್ನು ಪದೇ ಪದೇ ಈ ಜನಾಂಗ ಎದುರಿಸಬೇಕಾದ ಸವಾಲಾಗಿದೆ.

ಕುಟುಂಬ ಪದ್ಧತಿ :

ಸಮುದಾಯದ ಬದುಕಿಗೆ ಹಟ್ಟಿಯ ಸಂಸ್ಕೃತಿಗೆ ಮಾನ್ಯತೆ.ನೀಡುವ ಕಾಡುಗೊಲ್ಲರಲ್ಲಿ ಕುಟುಂಬ ಪದ್ಧತಿ ವ್ಯವಸ್ಥಿತವಾಗಿದೆ.ಅವಿಭಕ್ತ ಕುಟುಂಬ ಪದ್ಧತಿ ಅಳವಡಿಸಿಕೊಂಡ ಇವರಲ್ಲಿ ಪಿತೃಪ್ರಧಾನ ವ್ಯವಸ್ಥೆಯು ಇದೆ.ಕುಟುಂಬದಲ್ಲಿ ಹಿರಿಯ ಪುರುಷ ಮನೆಯ ಯಜಮಾನನಾಗುತ್ತಾನೆ. ಅವನ ಅಣತಿಯನ್ನು ಮನೆಯ ಉಳಿದ ಸದಸ್ಯರು ಗೌರವದಿಂದ ಪಾಲಿಸುತ್ತಾರೆ.ಇಂದು ಒಂದೇ ಸೂರಿನಡಿ ವಾಸಿಸುವ ಅವಿಭಕ್ತ ಕುಟುಂಬಗಳಿಲ್ಲ. ಹಟ್ಟಿಯ ಒಳಗೆ ಸ್ವತಂತ್ರ ಮನೆಗಳನ್ನು ಕಟ್ಟಿಕೊಂಡಿರುವ ವಿಭಕ್ತ ಕುಟುಂಬಗಳಾಗಿವೆ.ಹತ್ತರಿಂದ ಹದಿನೈದು ಜನರಿರುತ್ತಿದ್ದ ಮನೆಗಳಲ್ಲಿ ಇಂದು ನಾಲ್ಕು-ಐದು ಜನರಿದ್ದಾರೆ.ಸಣ್ಣಗಾತ್ರದ ಕುಟುಂಬಗಳಿಂದ ಮಕ್ಕಳ ಸಂಖ್ಯೆಯೂ ಕಡಿಮೆಯಾಗಿದೆ.ಹಿಂದೆ ಹತ್ತರಿಂದ ಹನ್ನೆರಡು ಮಕ್ಕಳು ಅವಿಭಕ್ತ ಕುಟುಂಬದ ಮನೆಯಲ್ಲಿರುತ್ತಿದ್ದರೆ ಇಂದು ಎರಡರಿಂದ ಮೂರು ಮಕ್ಕಳಷ್ಟೇ ಇದ್ದಾರೆ.

ಕಾಡುಗೊಲ್ಲರಲ್ಲಿ ಬಹುಪತಿತ್ವ ವ್ಯವಸ್ಥೆ ಇಲ್ಲ. ಬಹು ಪತ್ನಿತ್ವ ವ್ಯವಸ್ಥೆಇದೆ. ಪುರುಷರು ಇಬ್ಬರು ಹೆಂಡತಿಯರನ್ನು ಹೊಂದಬಹುದಾಗಿದೆ. ಹೆಂಡತಿ ಸತ್ತರೆ, ಹೆಂಡತಿಗೆ ಮಕ್ಕಳಾಗದಿದ್ದರೆ ಅಥವಾ ಹೆಂಡತಿ ಮಕ್ಕಳೂ ಇದ್ದಾಗ ಎರಡನೇ ಮದುವೆಗೆ ಪುರುಷರಿಗೆ ಮುಕ್ತ ಅವಕಾಶವಿದೆ. ಇಬ್ಬರೂ ಹೆಂಡತಿಯರ ಒಟ್ಟಿಗೆ ಇಲ್ಲವೆ ಕೆಲವೊಮ್ಮೆ ಬೇರೆ ಬೇರೆ ಮನೆಯಲ್ಲಿ ವಾಸಿಸುತ್ತಾರೆ. ಈ ಕಾರಣಕ್ಕಾಗಿ ಪುರುಷರಿಗೆ ಯಾವುದೇ ಬಹಿಷ್ಕಾರ ದಂಡ ವಿಧಿಸುವುದು ಕಂಡು ಬರುವುದಿಲ್ಲ. ಮಹಿಳೆಯರಿಗೆ ಗಂಡ ಸತ್ತರೂ ಮತ್ತೊಂದು ಮದುವೆ ಆಗುವ ಅವಕಾಶ ಇಲ್ಲ. ಗಂಡ ಸತ್ತರೂ ಕೃಷ್ಣನೇ ಗಂಡನೆಂದು ಭಾವಿಸಿ ಬದುಕುವಂತೆ ಧಾರ್ಮಿಕ ನಂಬಿಕೆಯನ್ನು ಹುಟ್ಟಿಸಲಾಗಿದೆ. ಒಟ್ಟಾರೆ, ವಿಧವಾ ವಿವಾಹಕ್ಕೆ ನಿಷೇದವಿದೆ.ಒಂದು ವೇಳೆ ವಿಧವೆಯನ್ನು ವಿವಾಹವಾದರೆ ಹಟ್ಟಿಯಿಂದ ಬಹಿಷ್ಕರಿಸಲಾಗುತ್ತದೆ. ವಿಧವೆಯರನ್ನು ಸೀರುಡಿಕೆ, ಕೂಡಿಕೆ ರೀತಿಯಲ್ಲಿ ವಿವಾಹವಾಗದೆ ಅವರೊಟ್ಟಿಗೆ ಬದುಕುವ ಅವಕಾಶಗಳನ್ನು ಪುರುಷರು ಸೃಷ್ಟಿಸಿಕೊಂಡಿದ್ದಾರೆ. ಇದಕ್ಕೆ ಹಟ್ಟಿಯಲ್ಲಿ ಮುಕ್ತ ಅವಕಾಶವಿಲ್ಲ. ಯಾರಿಗೂ ತಿಳಿಯದಂತೆ ನಡೆದುಕೊಳ್ಳಲಾಗುವುದು ಎಂದು ಕಾಡುಗೊಲ್ಲರು ಅಭಿಪ್ರಾಯ ಪಡುತ್ತಾರೆ.

ಕಾಡುಗೊಲ್ಲರಲ್ಲಿ ಅಂತರ್ಜಾತಿ ವಿವಾಹಕ್ಕೆ ನಿಷೇಧವಿದೆ.ಕುಲದ ಶುದ್ಧತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಕಾಡುಗೊಲ್ಲರು ಅನ್ಯಜಾತಿಯವರೊಂದಿಗೆ ವಿವಾಹವಾದರೆ, ಹಟ್ಟಿಯಿಂದ ಬಹಿಷ್ಕರಿಸುತ್ತಾರೆ. ಪುರುಷರು ಊರುಗೊಲ್ಲರೊಂದಿಗೆ ಸಂಬಂಧ ಬೆಳೆಸಿದರೆ, ಅವರು ಗುಡಿಕಟ್ಟೆಗೆ ದಂಡ ಕಟ್ಟಿ, ಶುದ್ಧೀಕರಿಸುವ ಶಾಸ್ತ್ರ ಮಾಡಿಕೊಂಡು ಹಟ್ಟಿ ಸೇರಬಹುದು. ಆದರೆ ಇವರು ಹಟ್ಟಿಯ ಯಾವುದೇ ಶುಭಕರವಾದ, ಹಬ್ಬ ಹರಿದಿನ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲ. ಕಾಡುಗೊಲ್ಲ ಪುರುಷ ಅನ್ಯಜಾತಿಯ ಹೆಣ್ಣನ್ನು ವಿವಾಹವಾಗಿ ಹಟ್ಟಿಸೇರಬೇಕೆಂದು ಬಯಸಿದರೆ ಮದುವೆಯಾದ ಹೆಣ್ಣನ್ನು ತ್ಯಜಿಸಬೇಕಾಗುತ್ತದೆ. ಮಹಿಳೆಯರಿಗೆ ಇಂತಹ ಅವಕಾಶಗಳು ಇಲ್ಲ. ಊರುಗೊಲ್ಲ ಪುರುಷನನ್ನೇಆಗಲಿ, ಅನ್ಯಜಾತಿಯ ಪುರುಷರನ್ನೇ ಆಗಲಿ ಮಹಿಳೆಯರು ಮದುವೆಯಾಗುವಂತಿಲ್ಲ. ಒಂದುವೇಳೆ ಆದರೆ ಅವರನ್ನು ಹಟ್ಟಿಯಿಂದ ಆಚೆ ಹಾಕಲಾಗುತ್ತದೆ. ಅವರ ಕುಟುಂಬಕ್ಕೂ ಬಹಿಷ್ಕಾರವಾಗುತ್ತದೆ. ಇಂದು ಈ ಬಿಗಿಕಟ್ಟಿನ ನಿಲುವು ಸಡಿಲವಾಗುತ್ತದೆ. ಕೂಲಿಕಾರ್ಮಿಕರಾಗಿ ಪಟ್ಟಣ ಸೇರುತ್ತಿರುವ ಯುವಕ ಯುವತಿಯರಲ್ಲಿ ಅಂತರ್‌ಜಾತಿ ವಿವಾಹ. ಪ್ರೇಮ ವಿವಾಹಗಳು ಸಹಜವಾಗಿವೆ. ಇವರು ಹಟ್ಟಿಗೆ ಬರುವುದು ಕಡಿಮೆ.ಅಂತರ್ಜಾತಿ ವಿವಾಹವಾದ ಮಹಿಳೆಯರು ಬರಲು ಅವಕಾಶವಿಲ್ಲ. ಆದರೆ ಪುರುಷರು ಬಂದು ತಂದೆ-ತಾಯಿಗಳನ್ನು ಬೇಟಿ ಮಾಡಿ ಮಾತನಾಡಿಸಿ ಹೋಗುತ್ತಾರೆ.ಇವರನ್ನು ಹಿಂದಿನಂತೆ ಹಟ್ಟಿ ಪ್ರವೇಶಿಸಲು ನಿರ್ಬಂಧಿಸುವುದಿಲ್ಲ.

ವೈವಾಹಿಕ ಸಂಬಂಧಗಳು ಕಾಡುಗೊಲ್ಲರಲ್ಲಿ ಹೆಚ್ಚು ಸೋದರ ಮಾವ ಸೋದರ ಅತ್ತೆಯ ಮಕ್ಕಳ ನಡುವೆ ಏರ್ಪಡುತ್ತದೆ. ಹುಟ್ಟಿದಾಗಲೇ ಸೋದರ ಮಾವ - ಅತ್ತೆಯವರ ಮಗ - ಮಗಳಿಗೆ ಮದುವೆ ನಿಶ್ಚಯವಿರುತ್ತದೆ. ಪ್ರಾಪ್ತ ವಯಸ್ಕರಾದಂತೆ ಅವರಿಗೆ ವಿವಾಹ ಏರ್ಪಡಿಸುತ್ತಾರೆ. ಸೋದರ ಸಂಬಂಧಕ್ಕೆ ಪ್ರಮುಖ ಆದ್ಯತೆ. ವಿರಳವಾಗಿ ನೆಂಟರೊಂದಿಗೆ ವಿವಾಹ ಸಂಬಂಧಗಳೂ ಏರ್ಪಡುತ್ತವೆ. ಸೋದರತ್ತೆಯ ಮಗ ಮಧ್ಯವಯಸ್ಕನಾಗಿದ್ದರೂ ಮಗಳು 12-13 ಕಿಶೋರಿಯಾಗಿದ್ದರೂ ವಿವಾಹ ಮಾಡುವ ವ್ಯಾಮೋಹ ವ್ಯಾಪಕವಾಗಿದೆ.ಬಾಲ್ಯವಿವಾಹ ಇನ್ನೂ ಜೀವಂತವಾಗಿದೆ. ಶಿಕ್ಷಣ ಮತ್ತು ಬಡತನ. ಆಧುನಿಕ ಬದುಕು. ವಲಸೆ ವಿವಾಹದ ವಯಸ್ಸನ್ನು ಮುಂದೂಡಿದೆ. ಪಿತೃಪ್ರಧಾನ ವ್ಯವಸ್ಥೆಯಿರುವುದರಿಂದ ಮನೆಯ ಹಿರಿಯ ನಿಂದ -ಮಗನಿಗೆ ಆಸ್ತಿಯ ಹಕ್ಕು ವರ್ಗಾವಣೆಯಾಗುತ್ತದೆ. ಮಹಿಳೆಯರಿಗೆ ಆಸ್ತಿಯ ಮೇಲೆ ಅಧಿಕಾರವಿರುವುದಿಲ್ಲ. ಗಂಡ ಅಥವಾ ಗಂಡು ಮಕ್ಕಳಿಲ್ಲದಿದ್ದರೆ ಆಕೆಯ ಕುಟುಂಬದ ಆಸ್ತಿಗೆ ಹಕ್ಕುದಾರಳಾಗಿರುತ್ತಾಳೆ. ಇವನ್ನು ಬಿಟ್ಟರೆ ಹೆಂಡತಿ. ತಾಯಿ. ಮಗಳಿಗೆ ಆಸ್ತಿಯಲ್ಲಿ ಈ ಯಾವುದೇ ಹಕ್ಕಿಲ್ಲ.

ನ್ಯಾಯಪದ್ಧತಿ :

ಹಟ್ಟಿಯಲ್ಲಿ ಒಂದೇ ಕಡೆ ನೆಲೆಸುವ ಕಾಡುಗೊಲ್ಲರಲ್ಲಿ ತಂಟೆ-ತಕರಾರು ಸಮಸ್ಯೆಗಳು ಭಿನ್ನಾಭಿಪ್ರಾಯಗಳು ಉಂಟಾದಾಗ ತಮ್ಮದೇ ರೀತಿ ಪಂಚಾಯಿತಿ ಕಟ್ಟೆ, ನ್ಯಾಯದ ಕಟ್ಟೆಯ ಮೂಲಕ ಬಗೆಹರಿಸಿಕೊಳ್ಳುತ್ತಾರೆ. ಪ್ರತಿಯೊಂದು ಗೊಲ್ಲರಹಟ್ಟಿಗಳೂ, ಕಟ್ಟೆಮನೆಗಳನ್ನು ಹೊಂದಿರುತ್ತವೆ. ಈ ಕಟ್ಟೇಮನೆಯು ನ್ಯಾಯದಾನ ಮಾಡುವ ಕೆಲಸವನ್ನು ಮಾಡುತ್ತದೆ. ನ್ಯಾಯತೀರ್ಮಾನ ಮಾಡಲು ಬುಡುಕಟ್ಟಿನ ಜನರೇ ಮಾಡಿಕೊಂಡ ಪಂಚಾಯ್ತಿಯಾಗಿದೆ. ಕಳ್ಳತನ, ಮೋಸ, ಜಗಳ, ಹಣ ಮದುವೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಕಲಹಗಳು ಏರ್ಪಡಬಹುದು. ಯಾವುದೇ ರೀತಿಯ ಕಲಹಗಳನ್ನು ಮನವಿ ಮಾಡಿದಾಗ, ಹಟ್ಟಿಯ ಗೊಲ್ಲಗೌಡ ನ್ಯಾಯತೀರ್ಮಾನ ಮಾಡುತ್ತಾರೆ. ಜೊತೆಯಲ್ಲಿ ಪೂಜಾರಿಯೂ ಸೇರಿರುತ್ತಾನೆ. ಇವರಿಂದ ಬಗೆಹರಿಯದ ಸಮಸ್ಯೆಯನ್ನು ಗುಡಿಕಟ್ಟು, ಕಟ್ಟೆಮನೆಗೆ' ಕೊಂಡೊಯ್ದರೆ ಯಜಮಾನ ಗೌಡ ಸಮಸ್ಯೆ ಪರಿಶೀಲಿಸಿ ಅಂತಿಮ ತಿರ್ಮಾನ ನೀಡುತ್ತಾರೆ. ತೀರ್ಪಿನಲ್ಲಿ ತಪ್ಪಿಗೆ ತಕ್ಕ ದಂಡವನ್ನು ವಿಧಿಸುತ್ತಾರೆ. ತೀರ್ಪು ಒಪ್ಪಿ ದಂಡ ಕಟ್ಟಿದರೆ ಹಟ್ಟಿಯಲ್ಲಿ ವಾಸಿಸಲು ಅವಕಾಶ ಮಾಡಿಕೊಡಲಾಗುತ್ತದೆ. ನ್ಯಾಯ ತೀರ್ಮಾನಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಹಟ್ಟಿಯಿಂದ ಬಹಿಷ್ಕರಿಸುತ್ತಾರೆ. ಪುರುಷರೆ ನ್ಯಾಯದ ಸ್ಥಾನಗಳನ್ನು ಹೊಂದಿದ್ದಾರೆ. ನ್ಯಾಯ ಮಂಡಳಿಗೆ 'ಕಣತೆ' ಎಂದು ಪೆಸರಿದೆ.ಕಣತಿಯ ಮುಖ್ಯಸ್ಥ ಗೌಡ, ಪೂಜಾರಿ ಇರುತ್ತಾರೆ. ಹಟ್ಟಿಯ ಪೂಜಾರಿ ಮುಖಂಡನಾಗಿರುತ್ತಾನೆ. ಪೂಜಾರಿಯ ಅಧೀನದಲ್ಲಿ ಗೌಡ ಅಧಿಕಾರಪಡೆದಿರುತ್ತಾನೆ. ಇವನ ನಂತರ ಸ್ಥಾನದಲ್ಲಿ ತಳವಾರ ಕಾಣಿಸುತ್ತಾನೆ. ಸುಮಾರು ಮುನ್ನೂರು ಮನೆಗಳಿಗೆ ಒಂದು ಕಣತಿ ಇರುತ್ತದೆ. ದಂಡದ, ಬಹಿಷ್ಕಾರದ ಹೊರತಾಗಿಯೂ ಅಮಾನವೀಯ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ನೆಲದಲ್ಲಿ ಗುಂಡಿ ತೋಡಿ ಅಂಬಲಿ ಹಾಕಿ ನಾಲಿಗೆಯಿಂದ ಕುಡಿಯುವಂತೆ ಮಾಡವುದು. ಗುಡಿಸಲು ನಿರ್ಮಿಸಿ ತಪ್ಪಿತಸ್ಥರನ್ನು ಕೂರಿಸಿ ಬೆಂಕಿ ಹಚ್ಚಿ ಹೊರಬರುವಂತೆ ಹೇಳುವುದು. ನಾಲಗೆಯ ಮೇಲೆ ಸಣ್ಣ ಕಬ್ಬಿಣದ ತಂತಿಯಿಂದ ಬರೆಹಾಕುವುದು ಇತ್ಯಾದಿ. ದೇವರನ್ನು ಜಲಧಿಗೆ ಕರೆದು ಉತ್ಸವದ ಖರ್ಚು ಊಟದ ಖರ್ಚು ಅಪರಾಧಿಯೇ ಭರಿಸುವುದು ಸಾಮಾನ್ಯವಾಗಿ ವಿಧಿಸುವಂತಹ ಶಿಕ್ಷೆಗಳಾಗಿದ್ದವು. ಶಿಕ್ಷೆ ಅನುಭವಿಸಿ ಹಟ್ಟಿಯಲ್ಲಿ ಉಳಿಯಬಹುದು. ಇಲ್ಲದಿದ್ದರೆ ಹಟ್ಟಿಯಿಂದ ಹೊರ ನಡೆಯಬೇಕಾಗುತ್ತದೆ. ಸಮುದಾಯದಲ್ಲಿ ಜೀವನ ನಡೆಸುವ ವ್ಯಕ್ತಿಯನ್ನು ಬುಡಕಟ್ಟಿನಿಂದ ಹೊರಗಿಡುವುದು, ಮಾತನಾಡದಿರುವುದು, ಆತನೊಟ್ಟಿಗೆ ಬೆರೆಯದಿರುವುದು. ಯಾವುದೇ ಸಂಬಂಧ ಬೆಳೆಸದಿರುವುದು ಹಟ್ಟಿಯ ಜನರ ಪಾಲಿಗೆ ಘೋರ ಶಿಕ್ಷೆಯಂತೆಯೇ ಸರಿ. ಇತ್ತೀಚೆಗೆ ಪೋಲಿಸ್ ಮತ್ತು ಕಾನೂನು ವ್ಯವಸ್ಥೆಯ ಮೂಲಕ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಯಸುತ್ತಿದ್ದಾರೆ. ಸಣ್ಣ ಪುಟ್ಟ ಜಗಳಗಳು ಇಂದು ಪೋಲಿಸ್ ಠಾಣೆಯ ಮೆಟ್ಟಿಲೇರುತ್ತಿವೆ. ಶಿಕ್ಷಣ ಮತ್ತು

ಅನ್ಯಸಮುದಾಯದೊಂದಿಗಿನ ಸಹಜೀವನ ಕಾಡುಗೊಲ್ಲರ ಬದ್ಧಿಮಟ್ಟವನ್ನು ಹೆಚ್ಚಿಸಿವೆ. ಕಟ್ಟೆಮನೆ ತೀರ್ಮಾನಗಳನ್ನು ಒಪ್ಪಿಕೊಳ್ಳಬೇಕೆಂಬ ನಿಯಮಕ್ಕೆ ಅವರಿಂದು ಬದ್ಧವಾಗಿಲ್ಲ.

ಧಾರ್ಮಿಕ ಪದ್ಧತಿ :

ಕಾಡುಗೊಲ್ಲರು ಪ್ರಕೃತಿಯಾರಾಧಕರು ಮತ್ತು ಸತ್ತ ಪೂರ್ವಿಕರನ್ನು (ಹಿರಿಯರನ್ನು), ಬುಡಕಟ್ಟಿಗೆ ಸೇವೆಸಲ್ಲಿಸಿ ಮರಣವನ್ನಪ್ಪಿದವರನ್ನು ಆರಾಧಿಸುವ ಪದ್ಧತಿಯಿರುವವರು.ಶಿವನ ಆರಾಧಕರೂ ಹೌದು.ಪುರ್ಲಳ್ಳಿ ಭೂತ, ಗೌರಸಂದ್ರದಮಾರಿ, ಚಿತ್ರಲಿಂಗ, ಕಾಟಮಲಿಂಗ, ಪಾತೆಲಿಂಗ, ಕ್ಯಾತೇಲಿಂಗ, ಎತ್ತಪ್ಪ ಜುಂಜಪ್ಪ, ಸಿದ್ಧಪ್ಪ, ಬುಡಕಟ್ಟಿನ ಹಿತಕ್ಕಾಗಿ ಮಡಿದ ವೀರರು, ಆರಾಧನೆಗೆ ಒಳಗಾಗುತ್ತಾರೆ. ಸತ್ತ ಹಿರಿಯರು, ವೀರರ ಹೆಸರಿನಲ್ಲಿ ಅಲುಗು ಹೊಯ್ದು, ಕತ್ತಿಯ ರೂಪದಲ್ಲಿ ಪೂಜಿಸುತ್ತಾರೆ. ಸ್ತ್ರೀ ಹಟ್ಟಿದೇವತೆಗಳು ಮತ್ತು ದೇವಾಲಯಗಳು ಕಡಿಮೆಯೆ. ಸ್ತ್ರೀ ದೈವಗಳು ಇದ್ದರೂ ಸ್ಥಳೀಯವಾದ ಅನ್ಯ ಸಂಸ್ಕೃತಿಯಿಂದ ವಲಸೆ ದೈವವಾಗಿ ಬಂದಿರುತ್ತವೆ. ಸ್ತ್ರೀ ದೈವಗಳು ಇಲ್ಲದಿರಲು ಕಾರಣ ಕೊಂಡವಾಗುವ ಪದ್ಧತಿ. ಇಲ್ಲದಿರುವುದು ಇದ್ದರೂ ವಿರಳವಾಗಿರುವುದು ಮತ್ತು ಅಂತರ್ಜಾತಿವಿವಾಹ ಪದ್ಧತಿ ಇಲ್ಲದಿರುವುದು.

ಎತ್ತಪ್ಪ, ಜುಂಜಪ್ಪ, ಕ್ಯಾತೇದೇವರು ಮೊದಲಾದ ಕಾಡುಗೊಲ್ಲರ ದೇವರಿಗೆ ಬೇಯಿಸಿದ ಆಹಾರ ನೈವೇದ್ಯ ಮಾಡುವುದಿಲ್ಲ. ಇದು ಆದಿಮಾನವನ ಜೀವನ ಪದ್ಧತಿ ಪ್ರತಿನಿಧಿಸುತ್ತದೆ. ಪ್ರಾಣಿಬಲಿ ಪದ್ಧತಿಯೂ ಇಲ್ಲ. ಇವರು ಸ್ಥಳೀಯ ದೇವರುಗಳಿಗೂ ನಡೆದುಕೊಳ್ಳುತ್ತಾರೆ. ತಿಮ್ಮಪ್ಪ, ರಂಗಪ್ಪನ ದೇವಾಲಯಗಳೂ ಹಟ್ಟಿಯಲ್ಲಿವೆ. ದೇವತೆಗಳನ್ನು ಆರಾಧಿಸಲು ತಮ್ಮದೇ ಬುಡಕಟ್ಟಿನ ಪೂಜಾರಪ್ಪ ಇರುತ್ತಾರೆ. ಈ ಅಧಿಕಾರ ಪುರುಷರಿಗೆ ಸೀಮಿತ ಹಾಗೂ ವಂಶಪಾರಂಪರ್ಯವೂ ಆಗಿರುತ್ತದೆ. ಪೂಜಾರಪ್ಪ ಹಟ್ಟಿಯ ಮುಖ್ಯಸ್ಥನೂ ಆಗಿರುತ್ತಾನೆ. ಯಾರು ಬುಡಕಟ್ಟಿನ ನಿಯಮಗಳನ್ನು ಪಾಲಿಸದಿದ್ದರೂ ಪೂಜಾರಿ ಮತ್ತು ಮನೆಯವರು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಜನನ, ಮದುವೆ, ಮಸಣ, ಎಲ್ಲಾ ಕಾರ್ಯಗಳಲ್ಲೂ ಪೂಜಾರಪ್ಪನ ಭಾಗವಹಿಸುವಿಕೆ ಇರುತ್ತದೆ. ಇದು ಬುಡಕಟ್ಟಿನ ಒಂದು ಪ್ರಮುಖ ಲಕ್ಷಣವೂ ಹೌದು.

ಕಾಡುಗೊಲ್ಲರು ಮುಖ್ಯವಾಗಿ ಶಿವ ಮತ್ತು ಸಾಂಸ್ಕೃತಿಕ ವೀರರ ಆರಾಧನೆ ಮಾಡುತ್ತಾರೆ. ಅವರು ಆರಾಧಿಸುವ ಪಾತೇಲಿಂಗ, ಕಾಟೇಲಿಂಗ, ಕಾಟಮಲಿಂಗ, ಶಿವನ ಪರಂಪರೆಯನ್ನು ಪ್ರತಿನಿಧಿಸುವ ದೈವಗಳಾದರೆ. ಜುಂಜಪ್ಪ, ಎತ್ತಯ್ಯ, ಈರಣ್ಣ ಈ ಮೊದಲಾದವರು ಸಮುದಾಯಕ್ಕಾಗಿ ಸೇವೆ ಸಲ್ಲಿಸಿದ ಸಾಂಸ್ಕೃತೀಕ ಪುರುಷರಾಗಿದ್ದು ಅವರ ಆರಾಧನೆಯೂ ಇದೆ. ಇವರುಗಳೇ ಅಲ್ಲದೆ

ಗೌರಸಂದ್ರದ ಮಾರಮ್ಮ ಕರಿಯೋಬೆನಹಳ್ಳಿ ಅಮ್ಮ ಬೇವಿನಹಳ್ಳಿ ಕರಿಯಮ್ಮನನ್ನು ಆರಾಧಿಸುತ್ತಾರೆ. ಇತ್ತೀಚೆಗೆ ಕಾಡುಗೊಲ್ಲರ ಬುಡಕಟ್ಟಿನೊಳಗೆ ಕೃಷ್ಣನ ಅರಾಧನೆ, ಶ್ರೀ ಕೃಷ್ಣ ಜಯಂತಿ ನಡೆಯುತ್ತವೆ. ಆದರೆ ಕೃಷ್ಣನ ದೇವಾಲಯಗಳು ಗೊಲ್ಲರ ಹಟ್ಟಿಯಲ್ಲಿ ಇಲ್ಲ.

ಕಾಡುಗೊಲ್ಲರ ಹಟ್ಟಿಯ ದೈವಗಳು ಸಾಮಾನ್ಯವಾಗಿ ಹಟ್ಟಿಯ ಮಧ್ಯಭಾಗದಲ್ಲಿ ಸ್ಥಾಪಿತವಾಗಿರುತ್ತವೆ. ಈ ದೇವಾಲಯಗಳು ಕಾಡುಗೊಲ್ಲರ ಮನೆಗಳಂತೆ ಗುಬ್ಬದಿಂದ ಮಾಡಲ್ಪಟ್ಟಿರುತ್ತವೆ. ಅಥವಾ ವೃತ್ತಾಕಾರವಾಗಿ ಕಟ್ಟಿದ ಮಣ್ಣಿನ ಗೋಣೆಯ ಮೇಲೆ ಹುಲ್ಲಿನ ಹೊದಿಕೆಯನ್ನು ಹಾಕಲಾಗುತ್ತದೆ. ಈ ದೇವಾಲಯ ತುಂಬ ಚಿಕ್ಕದಾಗಿದ್ದು ಕಿಟಕಿಗಳನ್ನು ಹೊಂದಿರುವುದಿಲ್ಲ ಹಟ್ಟಿಯ ಪೂಜಾರಿ ಮಾತ್ರ ಪ್ರವೇಶಿಸುವಷ್ಟು ಬಾಗಿಲು ಮತ್ತು ಗುಬ್ಬದ ಒಳಗೆ ಸ್ಥಳವಿರುತ್ತದೆ. ಗುಬ್ಬದ ಒಳಗೆ ದೇವರನ್ನು ಆರಾಧಿಸುವ ಸಂಕೇತವಾಗಿ ಕತ್ತಿ, ಅಲಗು, ಪೆಟ್ಟಿಗೆ ಇರುತ್ತವೆ. ಇತ್ತೀಚೆಗೆ ವಿಗ್ರಹವನ್ನ ಮಾಡಿ ಇಡುವ ಪದ್ಧತಿಯೂ ಇದೆ. ಈ ದೇವಾಲಯದ ಸುತ್ತ ಕಳ್ಳಿ ಬೇಲಿಯನ್ನು ಹಾಕಲಾಗಿರುತ್ತದೆ. ಮೈಲಿಗೆ ಆದವರು ಮಡಿ ಆಗುವವರೆಗೂ ದೇವಸ್ಥಾನ ಪ್ರವೇಶಿಸುವಂತಿಲ್ಲ. ಹಟ್ಟಿಯಲ್ಲಿ ಸೂತಕವಾದವರ ನೆರಳು ದೇವಸ್ಥಾನದ ಮೇಲೆ ಬೀಳಬಾರದೆಂಬ ನಿಷೇಧವಿದೆ. ಕೆಲವೊಮ್ಮೆ ಸೂತಕವಾದವರ ಸೂತಕ ಕಳೆಯುವವರೆಗೂ ದೇವಸ್ಥಾನದ ಬಾಗಿಲನ್ನು ಮುಚ್ಚಲಾಗುತ್ತದೆ. ದೇವಸ್ಥಾನದ ಪೂಜೆಯ ಅಧಿಕಾರ ಹಟ್ಟಿಯ ಪೂಜಾರಿಗೆ ಮಾತ್ರ ಸೇರಿರುತ್ತದೆ. ಹಟ್ಟಿಯಲ್ಲಿ ಯಾವುದೇ ಶುಭಕಾರ್ಯಗಳು ನಡೆದರೂ ಈ ದೇವಸ್ಥಾನಗಳಲ್ಲಿ ಮೊದಲಿಗೆ ಪೂಜೆಯನ್ನು ಸಲ್ಲಿಸಿ ದೇವರ ಆಶೀರ್ವಾದ ಪಡೆಯಬೇಕಾಗುತ್ತದೆ. ಇತ್ತೀಚೆಗೆ ಕಾಡುಗೊಲ್ಲರ ಹಟ್ಟಿಯ ದೇವಸ್ಥಾನಗಳು ಕಾಡುಗೊಲ್ಲರ ಮನೆಯಂತೆಯೆ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಆಧುನಿಕವಾಗಿ ಸಿಮೆಂಟ್ ಇಟ್ಟಿಗೆಯಿಂದ ನಿರ್ಮಿಸಿದ ಕಟ್ಟಡವನ್ನು ಹೊಂದಿದೆ. ಸರ್ಕಾರದಿಂದ ಪಡೆದ ಧನ ಸಹಾಯದಿಂದ ಹಟ್ಟಿಯ ದೇವಸ್ಥಾನಗಳಿಗೆ ಕಾಂಪೌಡ್ ನಿರ್ಮಿಸಲಾಗಿದೆ ಇಂದು ಸಂಘಟಿತರಾಗುತ್ತಿರುವ ಕಾಡುಗೊಲ್ಲರು ಮೊದಲ ಆದ್ಯತೆ ನೀಡುವುದು ದೇವಸ್ಥಾನದ ಕೆಲಸ ಕಾರ್ಯಗಳಿಗೆ.

ಕಾಟೇಲಿಂಗ ಕಾಡುಗೊಲ್ಲರಿಗೆ ಒಲಿದು ಬಂದ ದೈವವಾಗಿದೆ. ರೆಡ್ಡಿಗಳ ಮನೆಯಲ್ಲಿ ಹುರಿಳಿ ನವಣೆಯ ವಾಡೆಯಲ್ಲಿ ಇರಿಸದ್ದ ಕ್ಯಾಟೇಲಿಂಗ ಗೊಲ್ಲರ ಹುಡುಗನೊಬ್ಬನಿಗೆ ಒಲಿದು ಅವನಿಂದ ಪೂಜಿಸಿಕೊಂಡಿತು. ಈ ದೇವರ ಆರಾಧನೆಯ ಕಾರಣದಿಂದ ಇಂದಿಗೂ ಕೆಲವು ಕಾಡುಗೊಲ್ಲರು ಹುರುಳಿನವಣೆಗಳನ್ನು ಬಳಸಬಾರದೆಂಬ ನಿಯಮವಿದೆ.

ಓಬಳನರಸಿಂಹ, ಚಿತ್ತಯ್ಯ, ಕಾಟಯ್ಯ ಈ ಮೂರು ದೇವರುಗಳು ಈಶ್ವರ ಬೆವರಿನಿಂದ ಜನಿಸಿದವರು ಎಂಬ ನಂಬಿಕೆಯಿದೆ. ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದ ಈಶ್ವರ ಪಾರ್ವತಿಯರು

ಕಾಡಿನಲ್ಲಿ ಬೆಂಕಿ ಬಿದ್ದ ಪರಿಣಾಮ ಕಾಡು ಪ್ರಾಣಿಗಳ ಆಕ್ರಂದನವನ್ನು ಕೇಳಿ ಬೆಂಕಿಯನ್ನು ಆರಿಸಲು ಮುಂದಾದಾಗ ಶಿವನು ಬೆವರಿದನು ಆ ಬೆವರು ನೆಲಕ್ಕೆ ಬಿದ್ದು ಮೇಲಿನ ಮೂರುದೈವಗಳು ಜನಿಸಿದವು. ಈ ದೈವಗಳ ಆರಾಧನೆಯನ್ನು ಕಾಡು ಗೊಲ್ಲರು ನಡೆಸುತ್ತಾರೆ.

ಎತ್ತಯ್ಯ ಕಾಡುಗೊಲ್ಲರ ಮೂಲ ಪುರುಷನೆಂಬ ನಂಬಿಕೆ ಇದೆ. ಪಶುಪಾಲಕನಾಗಿದ್ದ ಈತ ಬೇಡರ ಹೆಣ್ಣಿನ ಆಮಿಷಕ್ಕೆ ಒಳಗಾಗಿ ಸತ್ತು ವೀರಪುರುಷನಾಗಿ ಆರಾಧನೆಗೊಳ್ಳುತ್ತಿದ್ದಾನೆ. ಜುಂಜಪ್ಪ ಕಾಡುಗೊಲ್ಲರಲ್ಲಿಯೇ ಪ್ರಸಿದ್ಧನಾದ ಸಾಂಸ್ಕೃತಿಕ ಪುರುಷ. ತನ್ನ ಜೀವಿತಾವಧಿಯನ್ನು ಹಲವು ಪವಾಡಗಳನ್ನು ಮೆರೆಯುವ ಈತ ಸೋದರ ಮಾವಂದಿರ ಸಂಚಿಗೆ ಬಲಿಯಾಗಿ ಸಾವನ್ನು ಅಪ್ಪುತ್ತಾನೆ. ಈತನನ್ನು ಹಾವು ಚೇಳು ರೂಪದಲ್ಲಿ ಇಂದಿಗೂ ಕಾಡುಗೊಲ್ಲರು ನಿಷ್ಠೆಯಿಂದ ಆರಾಧಿಸುತ್ತಾರೆ. ಗೌರಸಂದ್ರದ ಮಾರಿ ಕಣಿ ಹೇಳುವ ದೇವತೆಯಾಗಿ, ಸಂತಾನ ನೀಡುವ ಮಾತೆಯಾಗಿ ಕಾಡುಗೊಲ್ಲರಲ್ಲಿ ಪ್ರಸಿದ್ಧ ದೇವತೆಯಾಗಿದ್ದಾಳೆ. ಈಕೆಯನ್ನು ಹುತ್ತದ ರೂಪದಲ್ಲಿ ಆರಾಧಿಸುವ ಕ್ರಮ ಹೆಚ್ಚು ಪ್ರಚಲಿತದಲ್ಲಿದೆ. ಪಾವಗಡದ ತಾಲ್ಲೂಕಿನ ಮುಗುದಾಳ ಬೆಟ್ಟದ ಸಮೀಪ ಇರುವ ಕರಿಯಮ್ಮ ದೇವರಿಗೆ ಕಾಡುಗೊಲ್ಲರು ಮತ್ತು ನಾಯಕರು ಇಬ್ಬರು ನಡೆದುಕೊಳ್ಳುತ್ತಾರೆ.

ಕಾಡುಗೊಲ್ಲರಲ್ಲಿ ಆರಾಧಿಸಲ್ಪಟ್ಟಿರುವ ದೈವಗಳಾದ ಪಾತೆಲಿಂಗ, ಕಾಟುಮಲಿಂಗ, ಚಿತ್ತಯ್ಯ, ಹೆತ್ತಯ್ಯ, ಜುಂಜಪ್ಪ, ಶೈವ ಮೂಲ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆ ಹಾಗೆಯೇ ಕಾಡುಗೊಲ್ಲರಲ್ಲಿಯೆ ಆರಾಧಿಸಲ್ಪಡುವ ದೈವಗಳಾದ ತಿಮ್ಮಪ್ಪ, ರಂಗಪ್ಪ, ಓಬಳ ನರಸಿಂಹ, ನರಸಿಂಹ ಸ್ವಾಮಿ, ವೈಷ್ಣವ ಮೂಲ ಸಂಸ್ಕೃತಿಯನ್ನ ಪ್ರತಿನಧಿಸುತ್ತಾರೆ. ಕರ್ನಾಟಕದಲ್ಲಿ ಕಾಡುಗೊಲ್ಲರು ಶೈವ ಪರಂಪರೆಯನ್ನು ಅನುಸರಿಸಿದವರು ಆನಂತರದಲ್ಲಿ ವೈಷ್ಣವ ಮತದ ಪ್ರಭಾವಕ್ಕೆ ಒಳಗಾಗಿ ಅಲ್ಲಿನ ದೈವಗಳನ್ನು ಆರಾದಿಸಿದ್ದಾರೆ. ಸ್ತ್ರೀದೈವಗಳ ಆರಾಧನೆ ಕಾಡುಗೊಲ್ಲರಲ್ಲಿ ವಿರಳ. ಸ್ಥಳಿಯವಾಗಿ ಇರುವ ಮಾರಮ್ಮ ಮೊದಲಾದ ದೇವತೆಗಳಿಗೆ ಕಾಡುಗೊಲ್ಲರು ನಡೆದುಕೊಳ್ಳುತ್ತಾರೆ.

ಎತ್ತಿನ ಹಬ್ಬ :

ದೀಪಾವಳಿ ಆಗಿ ಮರುದಿವಸಕ್ಕೆ ಎತ್ತಿನ ಹಬ್ಬ ಆಚರಿಸಲಾಗುತ್ತದೆ. ಎತ್ತನ್ನು ತೊಳೆದು ಪೂಜಿಸಿ ಹೊರಗಡೆ ಹಾಕಿದ ಸೂಡಿನ ಬಳಿ ಎತ್ತುಗಳನ್ನು ಮೂರುಬಾರಿ ಸುತ್ತಿಸುವರು. ಬಸವಣ್ಣ(ಹಸು)ನನ್ನು ಮನೆ ಒಳಗೆ ಬಲಗಾಲಿಡುವಂತೆ ನುಗ್ಗಿಸಿ ಪ್ರಸಾದ ತಿನ್ನಿಸುವರು. ಅದು ತಿಂದು ಉಳಿದಿದ್ದನ್ನು ಪ್ರಸಾದವೆಂದು ಸ್ವೀಕರಿಸುವರು.

ನಾಗಪಂಚಮಿ:

ಶ್ರಾವಣಮಾಸದಲ್ಲಿ ಕಾಡುಗೊಲ್ಲರು ನಾಗಪ್ಪನಹಬ್ಬ ಆಚರಿಸುತ್ತಾರೆ. ಹುತ್ತಕ್ಕೆ ಹಾಲನೆರೆದು, ಮಡಿಯಿಂದ ತಂಬಿಟ್ಟು, ಚಿಗಳಿ ತೆಗುದುಕೊಂಡು ಎಡೆಮಾಡಿ ಊಟ ಮಾಡುವರು ಪದ್ಧತಿಯಿದೆ. ಯಾವುದೇ ಶುಭಕಾರ್ಯಕ್ಕೂ ಮೊದಲಿಗೆ ನಾಗನ ಆರಾಧನೆ ಮಾಡುವುದು ಇವರ ವಿಶೇಷ.

ಹಾಲುಯ್ಯುವ ಹಬ್ಬ :

ಈ ಹಬ್ಬ ಕಾಡುಗೊಲ್ಲರಿಗೆ ದೊಡ್ಡ ಹಬ್ಬ. ಎರಡು ಮೂರುದಿನ ಹಾಲನ್ನು ಕೂಡಿಡುತ್ತಾರೆ. ಗುಡಿಯ ಮುಂದೆ ಸಗಣಿಯಿಂದ ಕಟ್ಟೆ ಕಟ್ಟಿ ಹೂವಿನಿಂದ ಅಲಂಕರಿಸುತ್ತಾರೆ. ಪ್ರತಿ ಮನೆಯಿಂದ ಕೂಡಿಟ್ಟ ಹಾಲು ಮೊಸರು ತಂದು ಕಟ್ಟೆಗೆ ಸುರಿಯುತ್ತಾರೆ. ಅದು ತುಂಬಿ ಹರಿಯುತ್ತದೆ. ಹಾಲಿನ ಕಟ್ಟೆ ತುಂಬಿ ಹರಿಯುವುದು ಸಮೃದ್ಧಿಯ ಸಂಕೇತ. ಹಬ್ಬದ ದಿನ ಬಂದು ಬಾಂದವರು ಸೇರುತ್ತಾರೆ. ಆ ದಿನ ಕಟ್ಟೆಗೆ ಹಾಲನೆರೆಯುವವರೆಗೂ ಎಲ್ಲರೂ ಉಪವಾಸವಿರುತ್ತಾರೆ.

ಕಾಡುಗೊಲ್ಲರು ಇವುಗಳೇ ಅಲ್ಲದೆ ಶಿವರಾತ್ರಿ, ಮಹಾಲಯ ಅಮಾವಾಸ್ಯೆ, ಯುಗಾದಿ, ಗೌರಿಗಣೇಶ, ಸಂಕ್ರಾಂತಿ, ಆಯುಧ ಪೂಜೆ, ನವರಾತ್ರಿ ಹಬ್ಬಗಳನ್ನು ಊರಿನ ಜನರಂತೆ ಆಚರಿಸುವುದು ಕಂಡು ಬರುತ್ತದೆ.ವಿಶೇಷವಾಗಿ ಹಟ್ಟಿಯಲ್ಲಿ ನೆಲೆಸಿರುವ ದೇವರುಗಳ ಉತ್ಸವವನ್ನು ಸಂಭ್ರಮದಿಂದ ಆಚರಿಸುತ್ತಾರೆ.ಇದನ್ನು ಜಲಧಿನೆ ಹೋಗುವುದು ಎನ್ನುತ್ತಾರೆ.

ಸಂಪ್ರದಾಯ, ನಂಬಿಕೆ ಮತ್ತು ನಿಷೇಧಗಳು

ಪಶುಪಾಲನೆಯ ಹಿನ್ನೆಲೆಯಲ್ಲಿ ಕಾಡುಗೊಲ್ಲರು ಹಲವು ಸಂಪ್ರದಾಯ ನಂಬಿಕೆ ನಿಷೇಧಗಳನ್ನು ಹೊಂದಿದ್ದಾರೆ.ಕಾಡುಗೊಲ್ಲರು ಆಚರಿಸುವ ಋತುಶಾಂತಿ, ಮದುವೆ, ನಾಗಾರಾಧನೆ, ರಪಿಕೆರಹಿತ ಸಂಪ್ರದಾಯ, ಕಂಟಕಾವರಣ ಜೆನಿಗೆ, ಗಣೆ, ಸಂಪ್ರದಾಯಗಳು ಕಾಡುಗೊಲ್ಲರ ಬುಡಕಟ್ಟಿನಲ್ಲಿ ಮಾತ್ರವೇ ಇದ್ದು ಇವು ಸಂಸ್ಕೃತಿಯ ಅನನ್ಯತೆಯನ್ನು ಎತ್ತಿ ಹಿಡಿಯುತ್ತವೆ.

ಜನನ:-

ಜನನ ಸಂಸ್ಕಾರಗಳು ಕಾಡುಗೊಲ್ಲ ಬುಡಕಟ್ಟಿನ ಕಟ್ಟುನಿಟ್ಟಿನ ಮಡಿಯಾಚರಣೆಯಾಗಿದೆ. ದಿನಗಳು ಹತ್ತಿರವಾದಂತೆ ಗರ್ಭಿಣಿಯನ್ನು ಆಕೆಗಾಗಿಯೇ ಹಟ್ಟಿಯಾಚೆಗೆ ನಿರ್ಮಿಸಿದ ಹುಲ್ಲು, ಅಡಿಕೆಗರಿ,

ಜಡಿರು, ಸೋಗೆಯಿಂದ ತಯಾರಿಸಿದ 'ಗುಬ್ಬ' ದಲ್ಲಿ ಇಡಲಾಗುತ್ತದೆ. ಗರ್ಭಿಣಿಯ ಮನೆಯಲ್ಲಿ ಯಾರಾದರೂ ಒಬ್ಬರುಗುಬ್ಬಕ್ಕೆ ಸ್ವಲ್ಪದೂರದಲ್ಲಿ ಗುಡ್ಲುಹಾಕಿಕೊಂಡು ವಾಸಿಸುತ್ತಾ ಗರ್ಭಿಣಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಮಗು ಹಡೆಯಲು ಊರಿನಿಂದ ಪ್ರಸೂತಿ ಮಾಡುವ ಹೆಂಗಸು ನೆರವಾಗುತ್ತಾಳೆ. ಹೆರಿಗೆಯಾಗುವವರೆಗೆ ಹಟ್ಟಿಯ ದೇವರ ಗುಡಿಯನ್ನು ಮುಚ್ಚಲಾಗುತ್ತದೆ. ಮಗು ಹಡೆದ ಮೇಲೆ ಗುಬ್ಬವನ್ನು ಬದಲಿಸುತ್ತಾರೆ. ಅಗಸರ ಹೆಣ್ಣು ಈ ಸಂದರ್ಭದಲ್ಲಿ ಸೂಲಗಿತ್ತಿಯಾಗಿ ನೆರವಾಗುತ್ತಾಳೆ. ಗುಬ್ಬ ಹಾಕಿದ ಮೇಲೆ ಸಗಣಿಯಿಂದ ನೆಲ ಸಾರಿಸುತ್ತಾರೆ. ಗುಬ್ಬದಲ್ಲಿ ಒಂದು ಚಿಕ್ಕಬಾಗಿಲು ಇರುತ್ತದೆ. ಒಬ್ಬ ಮಹಿಳೆ ಇರುವಷ್ಟು ಮಾತ್ರ ಜಾಗವಿರುತ್ತದೆ. ಹೆರಿಗೆಯಾದ ನಂತರ ಮೂರು ತಿಂಗಳು ಮಗುವಿನೊಂದಿಗೆ ಗುಬ್ಬದಲ್ಲಿಯೇ ವಾಸಿಸಬೇಕು. ಅಲ್ಲಿಯವರೆಗೂ ಸೂತಕವಿರುತ್ತದೆ. ವಾರದಿಂದ ವಾರಕ್ಕೆ ಗುಬ್ಬವನ್ನು ಬದಲಿಸುತ್ತಾರೆ. ಗುಬ್ಬದೊಳಗೆ ಮಗು ಬಾಣಂತಿಗೆ ಅಗತ್ಯ ವಸ್ತುಗಳ ಇಟ್ಟಿರುತ್ತಾರೆ. ಊಟವನ್ನು ಬಾಣಂತಿಯ ಮನೆಯವರೇ ನೀಡುತ್ತಾರೆ. ಮಗುವಿನ ಸ್ನಾನ ತಾಯಿಯೇ ಮಾಡಿಸಬೇಕು. ಸೂತಕ ಕಳೆಯುವವರೆಗೂ .ಆಕೆಯನ್ನು ಮುಟ್ಟಿಸಿಕೊಳ್ಳುವುದಿಲ್ಲ. ಮೂರು ತಿಂಗಳ ಬದಲು ಇಂದು 11 ದಿನಗಳು ಮಾತ್ರ ಇಂದು ಬಾಣಂತಿಯರು ಹೊರಗಿರುತ್ತಾರೆ. ಸೂತಕ ಕಳೆಯುವ ದಿನ ಆಕೆಯು ತಾನು ವಾಸಮಾಡಿದ ಗುಬ್ಬವನ್ನು ಕಿತ್ತು ದೂರದಲ್ಲಿ ಎಸೆಯುತ್ತಾಳೆ ಇಲ್ಲವೆ ಸುಡುತ್ತಾಳೆ. ಬಳಸುತ್ತಿದ್ದ ಮಡಿಕೆ ಪಾತ್ರೆಗಳನ್ನು ಒಡೆಯುತ್ತಾಳೆ. ಬಾಣಂತಿ ಮತ್ತು ಮಗುವನ್ನು ಹುದಿ ಬಾಗಿಲಲ್ಲಿ ಕೂರಿಸಿ ಪುಜಾರಿಯಿಂದ ಬಾಣಂತಿಯ ನಾಲಿಗೆ ಸುಡಿಸಿ ಬಾಣಂತಿ ಮತ್ತು ಮಗುವಿನ ಸ್ನಾನದ ನಂತರ ಗೋಮೂತ್ರ ಚಿಮುಕಿಸುವರು ಮತ್ತು ಜನಿಗೆ ಹಾಲನ್ನು ಕುಡಿಸುವರು. ಇದನ್ನು ಹೊರಜನಿಗೆ ಎಂದು ಕರೆಯುತ್ತಾರೆ. ಹಟ್ಟಿಯ ಒಳ ಬಂದ ಮೇಲೆ ಮತ್ತೊಮ್ಮೆ ಜನಿಗೆ ನೀಡಲಾಗುತ್ತದೆ. ಇದನ್ನು ಕಿರುಜನಿಗೆ ಎಂದು ಕರೆಯುತ್ತಾರೆ. ನಂತರ ಬಾಣಂತಿ ಮಗು ದೇವಸ್ಥಾನದ ಒಳಗೆ ಪಡೆಯುವ ಜನಿಗೆಯನ್ನು ಒಳಜನಿಗೆ ಎಂದು ಕರೆಯುತ್ತಾರೆ. ನಂತರವೇ ಆಕೆಗೆ ಮನೆ ಪ್ರವೇಶಕ್ಕೆ ಅವಕಾಶ ಮಾಡಿ ಕೊಡಲಾಗುತ್ತದೆ. ಮಗುವಿನ ಗಂಡನ ಮನೆಯವರು ಪೂಜಾರಿಗೆ ಎಲೆ ಅಡಿಕೆ ನೀಡುತ್ತಾರೆ. ಎಲೆ ಅಡಿಕೆ ಪಡೆದ ಪೂಜಾರಿ ಮಗುವಿಗೆ ಹೆಸರಿಡುತ್ತಾನೆ. ಸಿಹಿಯನ್ನು ಹಂಚಲಾಗುತ್ತದೆ. ಇಂದು ಆಸ್ಪತ್ರೆಯಲ್ಲಿ ಬಹುಮಟ್ಟಿಗೆ ಹೆರಿಗೆ ನಡೆಯುವುದರಿಂದ 11 ದಿವಸಗಳ ನಂತರ ಸೂತಕದ ದಿನಗಳನ್ನು ಕಳೆದುಕೊಂಡು ಜೊತೆಗೆ ಜೆನಿಗೆಕುಡಿದು ಹಟ್ಟಿ ಒಳಗೆ ಬರುತ್ತಾರೆ. ಅನುಕೂಲವಿರುವವರು ದುಡ್ಡುಕೊಟ್ಟು ಖಾಸಗಿ ಆಸ್ಪತ್ರೆಯಲ್ಲೇ ಕೆಲವುದಿನ ಉಳಿದು ಬರುತ್ತಾರೆ. ಹಟ್ಟಿಯ ಹೊರಗಿರಬೇಕೆಂಬ ಮೊದಲಿದ್ದ ಬಿಗಿ ನಿಲುವು ಕಡಿಮೆಯಾಗುತ್ತಿದೆ.

ಸೀಮಂತ ಬಸಿರೂಟ:-

ಚೊಚ್ಚಲ ಬಸರಿಯಾದ ಹೆಣ್ಣಿಗೆ ಸೀಮಂತಕಾರ್ಯಗಂಡನ ಮನೆಯವರೇ ನಡೆಸುತ್ತಾರೆ. 5, 7, 9 ತಿಂಗಳುಗಳಲ್ಲಿ ಅನುಕೂಲವಾದ ದಿನ ಬಸಿರೂಟದ ಕಾರ್ಯಕ್ರಮವನ್ನು ನಡೆಸುತ್ತಾರೆ.ಸೀಮಂತದ ನಂತರ ತವರಿಗೆ ಹೆರಿಗೆಗೆ ಕಳುಹಿಸುತ್ತಾರೆ.ಸೀಮಂತದ ದಿನ ಹೊಸ ಸೀರೆ. ಬಳೆ. ಹೂವು ತೊಡಿಸಿ ಅಕ್ಕಿ, ಅಡಿಕೆ, ಎಲೆಯನ್ನು ಮಡಿಲು ತುಂಬುವರು. ಕರಿಕಂಬಳಿ ಗಾದಿ ಮೇಲೆ ಕೂರಿಸಿ ಆರತಿ ಎತ್ತುವರು. ಆದಿನ ಆಗಮಿಸಿದ ಬಂದು ಬಳಗದವರಿಗೆ ಸಿಹಿಊಟ ಹಾಕುವರು.

ಋತುಮತಿ:-

ಕಾಡುಗೊಲ್ಲ ಕಿಶೋರಿಯವರು ಯೌವ್ವನಕ್ಕೆ ಕಾಲಿರಿಸುವುದನ್ನು ದೊಡ್ಡವರಾಗುವುದು, ಮೈನೆರೆಯುವುದು, ಋತುಮತಿಯಾಗುವುದು ಎನ್ನಲಾಗುತ್ತದೆ. ಇದು ಒಂದು ಸೂತಕದವಾಗಿದೆ. ಹುಡುಗಿ ಋತುಮತಿಯಾಗಿದ್ದಾಳೆಂದು ತಿಳಿದಾಗ ಹಟ್ಟಿಯ ಹೊರಗೆ ಸುಂದರವಾದಂತಹ ಹೊಂಗೆಸೊಪ್ಪಿನ ಗುಡಿಸಲು ಹಾಕಿಸುತ್ತಾರೆ. ಅಗಸರನ್ನು ಕರೆಸಿ ಹುಡುಗಿಗೆ ನೀರು ಹಾಕಿಸಿ ಹೊಸ ಬಟ್ಟೆ ಕೊಡುವರು ಗುಡಿಸಲಿನ ಒಳಗೆ ಸುಮಾರು 12 ದಿನಗಳ ಕಾಲ (ಹಸಿರು ಸೊಪ್ಪಿನ ಗುಡಿಸಲು) ಹುಡುಗಿ ಇರಬೇಕಾಗುತ್ತದೆ. ಕಾಡುಗೊಲ್ಲ ಹಿರಿಯ ಮಹಿಳೆಯರು ಹುಡುಗಿಗೆ ತಿಳುವಳಿಕೆ ಹೇಳುವಂತ ಹಾಡುಗಳನ್ನು ಹೇಳುತ್ತಾ ಆರತಿ ಮಾಡುತ್ತಾರೆ.ಆ ದಿನ ರಾತ್ರಿ ಕಳೆಯುತ್ತಾರೆ. ಪ್ರತಿದಿನವೂ ಹಟ್ಟಿಯ ಬೇರೆ ಬೇರೆ ಮನೆಯಲ್ಲಿನ ಹೆಂಗಸರು ದಿನನಿತ್ಯ ಆರತಿ ಎತ್ತುತ್ತಾರೆ. ಸೂತಕ ಕಳೆಯುವ ದಿನ ಮನೆಯನ್ನು ಶುಚಿಗೊಳಿಸಿ. ಹುಡುಗಿಗೆ ಅರಿಶಿನದ ನೀರು ಹಾಕಿ ಹೊಸ ಬಟ್ಟೆ ಹಾಕಿಸಿ ಆಕೆಗೆ ಗೋಮೂತ್ರ ಚಿಮುಕಿಸಿ ಹಟ್ಟಿಯ ಹುದಿ ಬಾಗಿಲಿಗೆ ಕರೆತರುತ್ತಾರೆ. ಆಕೆಯ ಕೈಯಲ್ಲಿ ಹಚ್ಚಿದ ಮಣ್ಣಿನ ಹಣತೆ ನೀಡುತ್ತಾರೆ. ದೇವರ ಗುಡಿಗೆ ಕರೆತಂದು ಜೆನಿಗೆ ಹಾಕಿ ಶುದ್ಧೀಕರಿಸುವ ಆಚರಣೆಗಳನ್ನು ಮಾಡುವರು. ನಂತರ ಇತರ ಹೆಂಗಸರು ನೆಂಟರಜೊತೆ ಇವರ ಸೋದರಮಾವನ ಸಂಬಂಧದವರು ಹುಡುಗಿಯನ್ನು ಮನೆ ಸೇರಿಸುತ್ತಾರೆ. ಅಂದು ವಸಗೆ ಹಾಕಲಾಗುತ್ತದೆ. ಸೋದರಮಾವ ಕೊಟ್ಟ ಹೊಸ ಸೀರೆ ಹೂವು ತೊಟ್ಟು ವಸಗೆಯಲ್ಲಿ ಕೂರಿಸಿದ ಹುಡುಗಿಗೆ ಆರತಿ ಮಾಡುವರು. ನಂತರ ಎಲ್ಲರಿಗೂ ಊಟ ಹಾಕುವರು.

ಮದುವೆ :

ಕಾಡುಗೊಲ್ಲರಲ್ಲಿ ಇಂದು ಮೂರು ದಿನಗಳ ಕಾಲ ಮದುವೆಕಾರ್ಯವನ್ನು ನಡೆಸಲಾಗುತ್ತದೆ. ಆ ದಿನಗಳಲ್ಲಿ ನಿಶ್ಚಿತಾರ್ಥ, ಚಪ್ಪರಶಾಸ್ತ್ರ, ಅರುಣಿತರುವಶಾಸ್ತ್ರ, ಮದಲಿಂಗನಶಾಸ್ತ್ರ, ಧಾರಾ ಮೂಹೂರ್ತ, ಬಾದೋ ಅಕ್ಕಿ ಶಾಸ್ತ್ರ, ಬೂವ ಮಾಡುವಶಾಸ್ತ್ರ, ಜಾಡಿತೀರಿಸುವ ಶಾಸ್ತ್ರ, ಮುಖ್ಯವಾಗಿ ಆಚರಿಸುತ್ತಾರೆ. ಮೊದಲಿಗೆ ಹೆಣ್ಣು ನೋಡಲು ಹೊರಟಾಗ ಒಂದು ಸೋರೆ ಅಥವಾ ಪುಟ್ಟಿಯಲ್ಲಿ ವೀಳ್ಯದೆಲೆ, ಅಡಿಕೆ, ಬಾಳೆಹಣ್ಣು, ಹಾರ ತೆಗೆದುಕೊಂಡು ಶುಭಶಕುನಗಳನ್ನು ನೋಡಿಕೊಂಡು ಹೆಣ್ಣಿನಮನೆಗೆ ಹೋಗುತ್ತಾರೆ. ಹೆಣ್ಣಿನ ಮನೆಯವರಾದರೂ ಗಂಡಿನ ಕಡೆಯವರು ಬರುವ ದಿನ ಮನೆಯಲ್ಲಿ ದೀಪ ಹಚ್ಚಿಡುತ್ತಾರೆ. ಗಂಡಿನವರು ಬಂದ ತಕ್ಷಣ ನೇರ ಮನೆಗೆ ಹೋಗದೆ ದೀಪವನ್ನು ಮತ್ತು ಕೊಟ್ಟಗೆಗೆ ಹೋಗಿ ದನಗಳಿಗೆ ನಮಸ್ಕರಿಸುತ್ತಾರೆ. ಕೊಟ್ಟಿಗೆಯಲ್ಲಿ ದನಕರುಗಳು ಕಿವಿನಿಮಿರಿಸಿದ್ದರೆ ಶುಭ ಶಕುನವೆಂದು ಭಾವಿಸುವರು. ಬೆಕ್ಕು, ಖಾಲಿಕೊಡ ಎದುರು ಬಂದರೆ ಅಶುಭವೆಂದು ಭಾವಿಸುವರು. ಹೆಣ್ಣಿನ ಮನೆಯವರು ಗಂಡಿನ ಮನೆಯವರು ಮನೆಗೆ ಬಂದಾಗ ಹಚ್ಚಿಟ್ಟದೀಪ ಆರದೆ ಉರಿದರೆ ಶುಭವೆಂದು ಭಾವಿಸುವರು. ಶುಭಶಕುನಗಳು ಸರಿಯಾದರೆ ಹೆಣ್ಣು ಗಂಡಿನ ಕಡೆಯವರಿಗೆ ಒಪ್ಪಿಗೆಯಾದರೆ ಮದುವೆಯ ದಿನ ಗೊತ್ತು ಮಾಡುವರು. ಮದುವೆಗೆ ಮೂರುದಿನ ಇರುವಾಗಲೇ ಹೆಣ್ಣಿನ ಮನೆಯಲ್ಲಿ ಅರುಣಿಗುಡ್ಲು ನಿರ್ಮಾಣಮಾಡಿ ಊರಿನಲ್ಲಿರುವ ಕುಂಬಾರರಿಗೆ ಎಲೆ, ಅಡಿಕೆ, ತೆಂಗಿನಕಾಯಿ, ನೀಡಿ ಅರುಣಿ ಕುಡಿಕೆಗಳನ್ನು ತಂದು ಅವುಗಳಿಗೆ ಕೆಮ್ಮಣ್ಣು ಬಳಿದು ವಿವಿಧ ಚಿತ್ರಗಳನ್ನು ಬಿಡಿಸಿ ಶೃಂಗರಿಸಿ, ನೀರು ತುಂಬಿ ಅದರೊಳಗೆ ಬೆಲ್ಲ, ಕೊಬ್ಬರಿ, ಅಕ್ಕಿ, ಅರಿಶಿಣ, ಬೆಳ್ಳುಳ್ಳಿ ಹಾಕಿ ಬಾಯಿಯನ್ನು ಬಟ್ಟೆಯಿಂದ ಮುಚ್ಚಿ ಅರುಣಿಗುಡ್ಲುನಲ್ಲಿಟ್ಟು ಪೂಜಿಸುತ್ತಾರೆ. ಹಸಿ ತೆಂಗಿನಗರಿಯಿಂದ ಚಪ್ಪರಹಾಕಿದ ದಿನ ಹೆಣ್ಣಿನ ಮನೆಯವರು ಹುತ್ತದಪೂಜೆಯನ್ನು, ಹಟ್ಟಿಯ ದೇವರ ಪೂಜೆಯನ್ನು ಹೆಣ್ಣಿನಿಂದ ಮಾಡಿಸುವರು. ಈ ದಿನವೇ ಹೆಣ್ಣಿಗೆ ಬಳೆಯನ್ನು ತೊಡಿಸುವ ಶಾಸ್ತ್ರವು ಇರುತ್ತದೆ. ದೇವರ ಗುಡಿಯಲ್ಲಿ ಹೆಣ್ಣಿನ ತಲೆಗೆ ಪೂಜಾರಿಯಿಂದ ತಲೆಗೆ ಹಾಲು ಒತ್ತಿಸುತ್ತಾರೆ. ನಂತರ ಹೆಣ್ಣಿನ ಸಂಬಂಧಿಕರು ಹಾಲೊತ್ತುವ ಶಾಸ್ತ್ರ ಮಾಡುವರು. ಕರಿಕಂಬಳಿಯ ಮೇಲೆ ಅಕ್ಕಿಯಿಂದ ಬರೆದ ಹಸೆಯ ಮೇಲೆ ಕುಳಿತ ಹೆಣ್ಣಿಗೆ ಹಾಲೊತ್ತುವ ಶಾಸ್ತ್ರ ಆಕೆಯನ್ನು ಮದುವಣಗಿತ್ತಿಯನ್ನಾಗಿ ಮಾಡುವುದು. ಹಟ್ಟಿಯ ಹಿರಿಯ ಹೆಂಗಸರು ಸೋಬಾನೆ ಹೇಳುತ್ತಿರುವಾಗಲೇ ಹೆಣ್ಣಿಗೆ ಅರಿಶಿನ ಎಣ್ಣೆಯನ್ನು ಕೈಕಾಲು ಮುಖಕ್ಕೆ ಹಚ್ಚಿ ಅಕ್ಷತೆ ಹಾಕಿ ಹರಸುವರು. ಈ ಶಾಸ್ತ್ರದ ನಂತರ ಊಟದ ವ್ಯವಸ್ಥೆ ಇರುತ್ತದೆ.

ಮದುವೆಗೆ ಮೂಹೂರ್ತದ ದಿನದ ಹಿಂದಿನ ದಿನವೇ ಬಂದ ಗಂಡಿನವರನ್ನು ಹೆಣ್ಣಿನ ಮನೆಯವರು ಕಳಸದೊಂದಿಗೆ ಎದುರುಗೊಳ್ಳುತ್ತಾರೆ. ಅಂದು ದೇವರಊಟವನ್ನು ಗಂಡಿನವರಿಗೆ

ವಿಸರ್ಜಿಸುವರು. ಮುಹೂರ್ತದ ದಿನ ಧಾರೆಗೆ ಮೊದಲು ಮತ್ತೊಮ್ಮೆ ಹೆಣ್ಣು ಗಂಡಿಗೆ ಅರಿಶಿನ ಹಚ್ಚೆ ಶಾಸ್ತ್ರಮಾಡುತ್ತಾರೆ. ಹೆಣ್ಣು ಗಂಡಿಗೆ ಕರಿಕಂಬಳಿ ಗದ್ದುಗೆ ಮೇಲೆ ಕೂರಿಸಿ ಹಸೆ ಬರೆದು ತಲೆಗೆ ಹಾಲನ್ನು ಒತ್ತಿ ಅಕ್ಷತೆಹಾಕಿ ಆಶೀರ್ವದಿಸುವರು. ಅರುಣೆಯ ಗುಡ್ಡನಲ್ಲಿ ಇಟ್ಟ ಅರುಣೆಗಳನ್ನು ತಂದು ನಾಲ್ಕು ಮೂಲೆಗೂ ಚೌಕಾಕಾರದಲ್ಲಿ ಇಟ್ಟು ಅದರ ಕಂಟಕ್ಕೆ ದಾರ ಸುತ್ತಿ ಮಧ್ಯೆ ಹಸೆಮಣೆ ಇಟ್ಟು ಹೆಣ್ಣನ್ನು ಕೂರಿಸಿ ಬಂದು-ಬಳಗದವರು ಅರುಣೆಯ ಸುತ್ತಾ ಸುತ್ತುತ್ತಾ ಕುಡಿಕೆಗಳಿಗೆ ನೀರು ಹಾಕುತ್ತಾರೆ. ಇದನ್ನು ಸುರಗೆ ಶಾಸ್ತ್ರವೆಂದು ಕರೆಯುತ್ತಾರೆ.

ಹೂವಿನಿಂದ ತಲೆಯನ್ನು ಶೃಂಗರಿಸಿಕೊಂಡ ಹೆಣ್ಣಿಗೆ ಬಾಸಿಂಗವನ್ನು ಕಟ್ಟುತ್ತಾರೆ. ಗಂಡು ಬಟ್ಟೆಯ ಪೇಟವನ್ನು ತೊಡುತ್ತಾನೆ. ಹೆಣ್ಣು ಜಿಳಿ ಸೀರೆ ಬಟ್ಟೆ ತೊಡುತ್ತಾಳೆ. ಚಪ್ಪರದ ಮಧ್ಯದಲ್ಲಿ ಕಳ್ಳಿಗೂಟ ನೆಡಲಾಗಿರುತ್ತದೆ. ಇದು ಧಾರೆ ಎರೆಯುವ ಸ್ಥಳವಾಗಿರುತ್ತದೆ. ಹೆಣ್ಣಿನ ಸೋದರ ಮಾವ ಚಪ್ಪರಕ್ಕೆ ಹೆಣ್ಣನ್ನು ಕರೆದುಕೊಂಡು ಬಂದ ಮೇಲೆ ಹಟ್ಟಿಯ ಪೂಜಾರಿ ಪುರೋಹಿತನ ಸ್ಥಾನದಲ್ಲಿ ನಿಂತು ತಾಳಿ ಕಟ್ಟಿಸುವ ಶಾಸ್ತ್ರ ಮಾಡಿಸುವನು. ನಂತರ ಹೆಣ್ಣು ಗಂಡಿನ ಕೈಗಳನ್ನು ಜೊಗಸೆಯಾಕಾರದಲ್ಲಿ ಇಡಿಸಿ ಹಾಲನ್ನು ಎರೆಯುವ ಶಾಸ್ತ್ರ ಮಾಡಿಸುವರು ನಂತರ ಗಂಡು ಹೆಣ್ಣು ಸೂರ್ಯನಿಗೆ ನಮಸ್ಕರಿಸುವರು. ಧಾರೆ ಮುಗಿದ ನಂತರ ಬಂಧು ಬಳಗಕ್ಕೆ ಬೂವ ಅನ್ನದ ಮುದ್ದೆ ತಿನ್ನಿಸುವರು. ಐದು ಅನ್ನದ ಮುದ್ದೆಗಳನ್ನು ಮಡಿಯಿಂದ ತಯಾರಿಸಿ ಎರಡನ್ನು ಹೆಣ್ಣಿನ ಕಡೆಯವರಿಗೆ ಎರಡನ್ನು ಗಂಡಿನ ಕಡೆಯವರಿಗೆ ನೀಡುವರು ಉಳಿದ ಒಂದು ಪೂಜಾರಿಗೆ ಕೊಡುತ್ತಾರೆ. ಈ ಮುದ್ದೆಗಳನ್ನು ಪಡೆದವರು ಅವುಗಳನ್ನು ಯಾರಿಗೂ ಕಾಣದಂತೆ ತಿನ್ನಬೇಕು. ಇದನ್ನು ಬೂವದ ಶಾಸ್ತ್ರ ಎನ್ನುತ್ತಾರೆ.

ಕರಡಿಗೊಲ್ಲ ವಂಶಕ್ಕೆ ಸೇರಿದ ಗೊಲ್ಲರಿಂದ ಚಾಡಿತೀರಿಸುವ ಶಾಸ್ತ್ರವನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಆಚರಿಸುತ್ತಾರೆ. ಗಂಡಿನ ಮನೆಗೆ, ಮನೆದೇವರಿಗೆ, ಗ್ರಾಮದ ಪಟೇಲನಿಗೆ, ಶಾನುಭೋಗರಿಗೆ, ಕುಲದೇವರಿಗೆ, ಪೂಜಾರಿಗೆ ಹೆಣ್ಣಿನ ಕಡೆಯವರು ಮೂರು ಕಟ್ಟೆ ಮನೆಯ ಗೌಡರು ಮುದ್ರೆಯೊತ್ತಿದ ಎಲೆ ಅಡಿಕೆಯನ್ನು ತುಂಬಿದ ಗಡಿಗೆಯ ಮೇಲೆ ವಿಳ್ಯವಿಟ್ಟು ಕರೆದು ಕೊಡುತ್ತಾರೆ. ನಂತರ ಹೆಣ್ಣಿನಿಂದ ಗಂಗಾಪೂಜೆ ಮಾಡಿಸುತ್ತಾರೆ. ಗಡಿಗೆ ಹೊತ್ತ ಬಂದು ಹೆಣ್ಣಿನಿಂದ ಗಡಿಗೆಯನ್ನು ಪೂಜಿಸಿ ಕೆಳಗಿಳಿಸುವ ಕಾರ್ಯ ಗಂಡಿನದು. ಮದುವೆಯಾದ ದಿನವೇ ಗಂಡಿನ ಮನೆಯವರು ಹೆಣ್ಣನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಹೆಣ್ಣನ್ನು ಮನೆ ತುಂಬಿಸಿಕೊಳ್ಳುವ ಮೊದಲು ಮನೆ ಬಾಗಿಲ ಒಳಗೆ ಎದುರಿಗೆ ಕಂಚಿನ ತಟ್ಟೆಯಲ್ಲಿ ಸಗಣಿ ಉಂಡೆಯ ಮೇಲೆ ದೀಪವನ್ನಿಟ್ಟು ಗಂಡು ಹೆಣ್ಣಿನ ಕೈಲಿ, ಮನೆಗೆ ಒಳ್ಳೆಯದಾಗಲೆಂದು ಬಯಸಿ ಅಕ್ಕಿ ವಿಳ್ಯವನ್ನು ಹಾಕಿಸುತ್ತಾರೆ. ನಂತರ ಇಬ್ಬರೂ ಬಲಗಾಲಿಟ್ಟು ಮನೆ ಪ್ರವೇಶ ಮಾಡುವರು. ಮನೆ ತುಂಬಿದ ಹೆಣ್ಣಿನಿಂದ ಮೊಸರು ಕಡೆಸುವ ಶಾಸ್ತ್ರ ಮಾಡಿಸುವರು. ಹೀಗೆ ಹಲವು ಶಾಸ್ತ್ರಗಳ ಮೂಲಕ

ನಿಷ್ಠೆಯಿಂದ ಮದುವೆಯ ಕಾರ್ಯ ನೆರವೇರುವುದು. ಇವರು ಮದುವೆಗೆ ಬ್ರಾಹ್ಮಣ ಪುರೋಹಿತರನ್ನು ಕರೆಸುವುದಿಲ್ಲ. ಹಟ್ಟಿಯ ಪೂಜಾರಿಯೇ ಮದುವೆಯ ಕಾರ್ಯಗಳನ್ನು ನಡೆಸಿಕೊಡುವನು. ಸೋದರ ಸಂಬಂಧಿಕೆಯಲ್ಲಿ ಮದುವೆ ಏರ್ಪಡುವುದರಿಂದ ವರದಕ್ಷಿಣೆಯ ಹಾವಳಿ ಇಲ್ಲ. ಕೆಲವೊಮ್ಮೆ ಗಂಡಿನ ಮನೆಯವರೇ ತೆರದ ರೂಪದಲ್ಲಿ ಹಣ ಕೊಡುವ ಪದ್ಧತಿ ಇದೆ.

ಕಾಡುಗೊಲ್ಲರಲ್ಲಿ ಬಾಲ್ಯವಿವಾಹ ಜೀವಂತವಾಗಿದೆ. 12 ರಿಂದ 18 ನೇ ವಯಸ್ಸಿನ ಒಳಗೆ ವಿವಾಹವಾದ ಹೆಣ್ಣು ಮಕ್ಕಳೇ ಹೆಚ್ಚು ಇದ್ದಾರೆ. ಪ್ರತಿಹೆಣ್ಣಿಗೆ ಸಂಬಂಧಿಗಳಲ್ಲೇ ಗಂಡು ಗೊತ್ತಾಗಿರುವುದರಿಂದ ಹುಡುಗಿ ದೊಡ್ಡವಳಾಗುತ್ತಲೇ ಮದುವೆಗೆ ಸಿದ್ಧತೆ ನಡೆಸುವರು. ಕೆಲವೊಮ್ಮೆ ವಯಸ್ಸಿನ ಅಂತರವುಳ್ಳ ಮದುವೆ ಹೆಚ್ಚು ನಡೆಯುತ್ತವೆ. ಹೆಣ್ಣಿನ ವಯಸ್ಸಿಗಿಂತ 20–25 ವರ್ಷ ಹಿರಿಯ ಗಂಡನ್ನು ವಿವಾಹ ಮಾಡುವುದು ವ್ಯಾಪಕವಾಗಿದೆ. ಜೊತೆಗೆ ಕದ್ದು ಮದುವೆಯಾಗುವುದು, ಅಪಹರಿಸಿ ವಿವಾಹಮಾಡುವುದೂ ಕೆಲವು ಹಟ್ಟಿಗಳಲ್ಲಿ ಕಂಡು ಬರುತ್ತದೆ.

ಕಾಡುಗೊಲ್ಲರಲ್ಲಿ ಸಾಮಾನ್ಯವಾಗಿ ಹಟ್ಟಿಯ ಒಳಗೆ ವಿವಾಹಗಳು ಹೆಚ್ಚಾಗಿ ನಡೆಯುತ್ತವೆ. ಇಂದು ಆಧುನಿಕತೆಯ ಪ್ರಭಾವದಿಂದ ಕೆಲವರು ಛತ್ರ ಕಲ್ಯಾಣಮಂಟಪದಲ್ಲಿ ಬ್ರಾಹ್ಮಣ ಪುರೋಹಿತರನ್ನು ಕರೆಸಿ ವಿವಾಹ ನೆರವೇರಿಸುತ್ತಿದ್ದಾರೆ.

ಕಾಡುಗೊಲ್ಲರಲ್ಲಿ ಬಹುಪತ್ನಿತ್ವ ವ್ಯವಸ್ಥೆಯಿದೆ. ಗಂಡಿಗೆ ಇಬ್ಬರನ್ನು ವಿವಾಹವಾಗುವ ಅವಕಾಶವಿದೆ.. ಹೆಂಡತಿ ಮರಣಿಸಿದರೆ, ಮಕ್ಕಳಾಗದಿದ್ದರೆ, ಹೆಣ್ಣುಮಕ್ಕಳೇ ಇದ್ದರೆ ಹೀಗೆ ವಿವಿಧ ಕಾರಣಗಳಿಗೆ ಎರಡನೇ ಮದುವೆಯಾಗಬಹುದು. ಆದರೆ ಹೆಣ್ಣು ಗಂಡನನ್ನು ಕಳೆದುಕೊಂಡರೂ ಇನ್ನೊಂದು ಮದುವೆಯಾಗುವುದಿಲ್ಲ ಏಕೆಂದರೆ ದೇವರಾದ ಶ್ರೀ ಕೃಷ್ಣ ಅವರಿಗೆ ಗಂಡನಾಗಿರುತ್ತಾನೆ.

ಕಾಡುಗೊಲ್ಲರಲ್ಲಿ ಅಂತರ್ಜಾತಿ ವಿವಾಹಕ್ಕೆ ನಿಷೇಧವಿದೆ. ಕೆಲವೊಮ್ಮೆ ಊರುಗೊಲ್ಲರಲ್ಲಿ ವಿವಾಹವಾದರೆ ಹಟ್ಟಿ ಒಳಗೆ ದಂಡವಿಧಿಸಿ ಶುದ್ಧೀಕರಿಸಿ, ಸೇರಿಸುತ್ತಾರೆ. ಆದರೆ ಇವರು ಯಾವುದೇ ರೀತಿಯ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತಿಲ್ಲ. ಹೆಣ್ಣುಮಕ್ಕಳು ಅಂತರ್ಜಾತಿ ವಿವಾಹವಾದರೆ ಎಂದಿಗೂ ಅವರಿಗೆ ಹಟ್ಟಿಗೆ ಬರುವ ಅವಕಾಶವಿಲ್ಲ. ಇಂದು ಕೂಲಿ ಅಥವಾ ಇತರೆ ಕೆಲಸಕ್ಕಾಗಿ ದೂರ ದೂರದ ಊರು ಪಟ್ಟಣಗಳಿಗೆ ತೆರಳುತ್ತಿರುವ ಕಾಡುಗೊಲ್ಲರು ಅಲ್ಲಿಯೇ ವಿವಾಹವಾಗಿ ನೆಲೆಸುತ್ತಿರುವುದು ಕಂಡುಬರುತ್ತದೆ. ಹಟ್ಟಿಯ ಹಿರಿಯರನ್ನು ನೋಡಲು ಆಗೊಮ್ಮೆ – ಈಗೊಮ್ಮೆ ಬರುತ್ತಾರೆ. ಹೀಗೆ ಬಂದು ಹೋಗಲು ಮೊದಲಿನಂತೆ ಕಟ್ಟುನಿಟ್ಟಾಗಿ ಅಡ್ಡಿಪಡಿಸುವುದು ಕಂಡು ಬರುವುದಿಲ್ಲ.

ಮರಣ :-

ಕಾಡುಗೊಲ್ಲರಲ್ಲಿ ಸಾವಿನ ನಂತರ ಆಚರಣೆಗಳು ವಿಭಿನ್ನವಾಗಿವೆ. ವ್ಯಕ್ತಿ ಮರಣ ಹೊಂದಿದಾಗ ಕರಿ ಕಂಬಳಿಯ ಗದ್ದುಗೆಯ ಮೇಲೆ ಪೂರ್ವಕ್ಕೆ ತಲೆ ಬರುವಂತೆ ಮಲಗಿಸುತ್ತಾರೆ. ತಲೆಯ ಹಿಂಭಾಗಕ್ಕೆ ಒಂದು ಚೆಂಬು ನೀರು, ತೆಂಗಿನಕಾಯಿ, ವಿಭೂತಿ, ಬಟ್ಟಲಲ್ಲಿ ಅಕ್ಕಿ, ಸಗಣಿ ಉಂಡೆಯ ಮೇಲೆ ಹಚ್ಚಿದ ಮಣ್ಣಿನ ದೀಪ ಇಡುತ್ತಾರೆ. ಬಂಧು ಬಾಂಧವರಿಗೆ ಸತ್ತ ಸುದ್ದಿಯನ್ನು ತಿಳಿಸಲಾಗುತ್ತದೆ. ಬಂಧುಗಳೆಲ್ಲಾ ಆಗಮಿಸಿದ ನಂತರ ಸತ್ತ ವ್ಯಕ್ತಿಗೆ ಸ್ನಾನ ಮಾಡಿಸಿ ಮತ್ತೆ ಕರಿಕಂಬಳಿಯ ಮೇಲೆ ಮಲಗಿಸಿ ದೇಹವನ್ನು ವಿಭೂತಿ, ಕುಂಕುಮ ಹೂಗಳಿಂದ ಅಲಂಕರಿಸುತ್ತಾರೆ. ಕುಟ್ಟಿದ ಎಲೆ ಅಡಿಕೆಯನ್ನು ಬಾಯಿಗೆ ಇಡುತ್ತಾರೆ. ಸತ್ತ ವ್ಯಕ್ತಿಯ ಮನೆಯವರು ಮೊದಲು ನಂತರ ಬಂಧುಗಳು ಶವಕ್ಕೆ ಪೂಜೆ ಸಲ್ಲಿಸಿ ನಂತರ ಚಟ್ಟದ ಮೇಲೆ ಹೆಣವನ್ನು ನಾಲ್ಕು ಜನ ಹೊತ್ತುಕೊಂಡು ಈ ಮೊದಲೇ ಹೂಳಲು ನಿರ್ಧರಿಸಿದ ಗುಂಡಿಯ ಬಳಿ ತೆರಳುವರು. ಕಾಡುಗೊಲ್ಲರಲ್ಲಿ ಸತ್ತವರನ್ನು ಮಣ್ಣಿನ ಗುಂಡಿಯಲ್ಲಿ ಹೂಳುವ ಪದ್ಧತಿ ಇದೆ.

ಗುಂಡಿಯ ಬಳಿ ಹೆಣವನ್ನು ಇಳಿಸಿ ಮತ್ತೊಮ್ಮೆ ಪೂಜೆಯನ್ನು ಸಲ್ಲಿಸಿ ಹೆಣದ ಮೇಲೆ ಬಟ್ಟೆಗಳನ್ನು ತೆಗೆದು ಗುಂಡಿಯಲ್ಲಿಟ್ಟು ಸೊಪ್ಪುಗಳಿಂದ ಮುಚ್ಚುತ್ತಾರೆ. ಪಾದದ ಕಡೆಯಿಂದ ಸತ್ತ ವ್ಯಕ್ತಿಯ ಮನೆಯವರು ಮತ್ತು ಬಂದು-ಬಾಂಧವರು ಮೂರು ಹಿಡಿ ಮಣ್ಣನ್ನು ಹಾಕುವರು. ನಂತರ ಗುದ್ದಲಿಯಿಂದ ಮಣ್ಣನ್ನು ಮುಚ್ಚಿ ಗದ್ದುಗೆಯನ್ನು ಮಾಡುವರು. ಹೆಣದ ಮೇಲೆ ಇರಿಸಿದ ಹೂಗಳನ್ನೇ ಗದ್ದುಗೆಯ ಮೇಲೆ ಇರಿಸಿ ಪೂಜೆಯನ್ನು ಆರಂಭಿಸುತ್ತಾರೆ. ಸತ್ತ ವ್ಯಕ್ತಿಯ ಮಗನಿಗೆ ನೀರಿನ ಮಡಿಕೆ ಹೊರಿಸಿ ಗದ್ದುಗೆ ಸುತ್ತ ಮೂರು ಸುತ್ತು ಹಾಕಿಸಲಾಗುತ್ತದೆ. ಪ್ರತಿ ಸುತ್ತಿನಲ್ಲೂ ಮಡಿಕೆಗೆ ಒಂದೊಂದು ತೂತು ಮಾಡಲಾಗುತ್ತದೆ. ಮೂರು ಸುತ್ತಿನ ನಂತರ ಶವದ ತಲೆಯ ಭಾಗದಲ್ಲಿ ಇರಿಸಿದ ಕಲ್ಲಿನ ಮೇಲೆ ಗಡಿಗೆಯನ್ನು ಬೀಳಿಸಿ ಹಿಂದಿರುಗಿ ನೋಡದೆ ಮುಂದೆ ನಡೆಯುತ್ತಾನೆ. ನಾಯಿಗಳು ಗದ್ದುಗೆ ಹಾಳುಮಾಡುವಂತೆ ಗದ್ದುಗೆ ಸುತ್ತ ಕಳ್ಳೆಯನ್ನು ಹಾಕುತ್ತಾರೆ. ಬಂದವರಿಗೆ ಎಲೆ-ಅಡಿಕೆ ಕೊಟ್ಟು ಕಾಲು ತೊಳದು ಹೊರಡುತ್ತಾರೆ. ಸತ್ತ ದೇಹವನ್ನು ಹೂಳಲು ತೆಗೆದುಕೊಂಡು ಹೋದ ನಂತರ ಸತ್ತವನ ಮನೆಯಲ್ಲಿ ಉಳಿದವರು ಮನೆಯನ್ನು ನೀರಿನಿಂದ ತೊಳೆದು ಒರೆಸುವರು. ತಯಾರಿಸಿಟ್ಟದ್ದ ಆಹಾರ, ನೀರನ್ನು ಹೊರಹಾಕುವರು, ಮನೆಯ ಒಳಗಡೆ ಸಗಣಿ ಉಂಡೆಮಾಡಿ ಅದರ ಮೇಲೆ ಮಣ್ಣಿನ ದೀಪ ಹಚ್ಚಿಟ್ಟು ಹೊರಗೆ ಸ್ವಲ್ಪ ನೀರು ಇಡುವರು. ಹೆಣವನ್ನು ಸಂಸ್ಕರಿಸಿ ಬಂದ ಬಂಧುಗಳು ದೀಪವನ್ನು ನೋಡಿಕೊಂಡು ಹಿಂದಿರುಗುವರು. ಸತ್ತ ವ್ಯಕ್ತಿಯ ತಿಥಿ ಅಥವಾ ಬಳಗದ ಊಟದ ಆಚರಣೆಯನ್ನು ವ್ಯಕ್ತಿ ಸತ್ತ ಮೂರು ದಿವಸಕ್ಕೆ ಆಚರಿಸುತ್ತಾರೆ. ಆ ದಿವಸ ಮನೆಯನ್ನು ಶುದ್ಧಿಕರಿಸಿ ಸುಣ್ಣಬಳಿದು ಗೋಮೂತ್ರದಿಂದ ಮನೆಯನ್ನು

ಪವಿತ್ರಗೊಳಿಸುವರು. ಆ ದಿನವೇ ಅಂಗಡಿಯಿಂದ ಅಕ್ಕಿ, ಬೇಳೆ, ಹುಣಸೇಹಣ್ಣು ಮೆಣಸಿನಕಾಯಿ ಮೊದಲಾದ ಪದಾರ್ಥಗಳನ್ನು ತಂದು ಮನೆಯ ಹೊರಗಡೆ ಮಡಿಯಿಂದ ಎಡೆ ತಯಾರಿಸಿ ಸತ್ತ ವ್ಯಕ್ತಿಯ ಸಂಸ್ಕಾರದ ಸಂದರ್ಭದಲ್ಲಿ ಮಡಕೆ ಹೊತ್ತ ವ್ಯಕ್ತಿಯ ಕೈಯಲ್ಲಿ ಕೊಟ್ಟು ಗದ್ದುಗೆ ಬಳಿ ತೆರಳಿ ಅದನ್ನು ಗದ್ದುಗೆ ಮೇಲಿಟ್ಟು ಸುತ್ತಲೂ ನೀರುಚಿಟ್ಟು ಪೂಜಿಸುವರು. ಆ ದಿನ ಬಂಧು-ಬಳಗದವರು ಗದ್ದುಗೆಗೆ ಹಾಲು-ತುಪ್ಪ ಎಡುವರು. ಮಾಡಿದ ಎಡೆಯನ್ನು ಹಸಿರು ಗಿಡದ ಬಳಿ ಇರಿಸಿ ಕಾಗೆ ತಿನ್ನುವವರೆಗೂ ಕಾಯುವರು. ಕಾಗೆ ಅನ್ನ ತಿಂದ ಬಳಿಕ ಮನೆ ತೆರಳುವರು. ಅಂದು ದಾಸಯ್ಯನನ್ನು ಕರೆಸಿ ಪೂಜೆಯನ್ನು ಮಾಡಿಸುವರು. ಸತ್ತ ವ್ಯಕ್ತಿಗೆ ಇಷ್ಟವಾದ ಪದಾರ್ಥಗಳನ್ನು ತಯಾರಿಸಿ ಇಡುವರು. ಅಂದು ಸಸ್ಯಾಹಾರ, ಅನುಕೂಲವಿದ್ದರೆ ಮಾಂಸದ ಊಟವನ್ನು ಸಿದ್ಧಪಡಿಸಿ ಬಂದ ಬಂದುಗಳಿಗೆ ಇಡುವರು. ಸತ್ತ ವ್ಯಕ್ತಿಯ ಮನೆಯಲ್ಲಿ ಮೀಸಲು ಅಕ್ಕಿಯನ್ನು ಹಟ್ಟಿಯ ಗುಡಿಯಲಿ ಇರಿಸಿ ವರ್ಷದ ನಂತರ ಓಂದಕ್ಕೆ ಪಡೆದು ವರ್ಷದ ದಿನ ಗದ್ದುಗೆ ಬಳಿ ತೆರಳಿ ಅದರ ಮೇಲಿಟ್ಟು ಪೂಜೆಮಾಡಿ ಮನೆಗೆ ತೆಗೆದುಕೊಂಡು ಹೋಗಿ ಸತ್ತ ವ್ಯಕ್ತಿಯ ಹೆಸರಿನಲ್ಲಿ ದಿನ ನಿತ್ಯ ಪೂಜಿಸುವರು. ವರ್ಷಕ್ಕೊಮ್ಮೆ ಹಿರಿಯರ ಹಬ್ಬದ ದಿನ ಸತ್ತ ವ್ಯಕ್ತಿಗೆ ಎಡೆ ಇಟ್ಟು ಪೂಜಿಸುವರು. ಇದನ್ನು ಸತ್ತ ವ್ಯಕ್ತಿಯ ಮನೆಯವರು ಮುಂದುವರೆಸಿಕೊಂಡು ಬರುವರು. ಸತ್ತ ವ್ಯಕ್ತಿಯ ಬಳಗದ ಊಟಕ್ಕೆ ಬಂಧುಗಳೆಲ್ಲಾ ತಮ್ಮ ಕೈಲಾದ ಮಟ್ಟಿಗೆ ಹಣ, ಧವಸ, ಧಾನ್ಯ ನೀಡಿ ನೆರವಾಗುವರು. ಸಮುದಾಯದ ಒಗ್ಗಟ್ಟನ್ನು ಸಾವಿನ ಆಚರಣೆಗಳಲ್ಲಿ ಕಾಣಬಹುದಾಗಿದೆ.

ನಂಬಿಕೆಗಳು:

ಮಾನವನು ನೆಮ್ಮದಿಯುತ, ಆರೋಗ್ಯಯುತ ಬದುಕಿಗೆ ಕಂಡುಕೊಂಡ, ನಿರ್ಮಿಸಿಕೊಂಡ, ಆಚರಣೆಗಳಲ್ಲಿ 'ನಂಬಿಕೆ'ಗಳಿಗೆ ಆದ್ಯಸ್ಥಾನವಿದೆ. ಕಾಡುಗೊಲ್ಲರು ತಮ್ಮ ಹಟ್ಟಿಯಲ್ಲಿ ತಮ್ಮ ಬದುಕಿನೊಳಗೆ ಹಲವು ನಂಬಿಕೆಗಳಿಗೆ ಆದ್ಯತೆ ನೀಡಿದ್ದಾರೆ. ಈ ನಂಬಿಕೆಗಳೇ ಅವರಿಗೆ ಒಳಿತು ಕೆಡುಕುಗಳನ್ನು ತಿಳಿಸಿಕೊಡುವ ಅದೃಶ್ಯಶಕ್ತಿಗಳಾಗಿದ್ದವು. ಶುಭ ಶಕುನಗಳು ಒಳಿತನ್ನು ಅಶುಭ ಶಕುನಗಳು ಕೆಡುಕನ್ನು ಹೇಳುವ ಅಶರೀರವಾಣಿಯಾಗಿದ್ದವು.

ಕಾಡುಗೊಲ್ಲರು ಮಳೆಯಾಗದಿದ್ದರೆ ದೇವರನ್ನು ಜಲಧಿಗೆ ಕೊಂಡೊಯ್ಯುತ್ತಾರೆ. ಹಟ್ಟಿಯ ದೇವರನ್ನು ಮೆರವಣಿಗೆಯಲ್ಲಿ ಹೊಳೆಯ ಬಳಿಗೆ ಕರೆದುಕೊಂಡು ಹೋಗಿ ಹೊಳೆಯಲ್ಲಿ ದೇವರನ್ನು, ಒಡವೆಗಳನ್ನು ಶುಚಿಗೊಳಿಸಿ, ಹಟ್ಟಿಯೊಳಗೆ ತರುತ್ತಾರೆ. ಕರಿಕಂಬಳಿ ಗದ್ದುಗೆ ಮೇಲೆ ಕೂರಿಸಿ ಪೂಜಿಸಿ ಗುಡಿ ತುಂಬಿಸುತ್ತಾರೆ.

ಊರಿನಲ್ಲಿ ಸೋಂಕು ರೋಗಗಳು, ಸಿಡುಬು, ದಢಾರ, ಬಂದರೆ ಮಾರಮ್ಮನಿಗೆ ಹರಕೆಕಟ್ಟಿ ಪೂಜೆಯನ್ನು ಮಡಿಯಿಂದ ಸಲ್ಲಿಸುತ್ತಾರೆ। ಯಾವುದೇ ರೀತಿಯ ಜ್ವರ, ಸಮಸ್ಯೆಗೆ ದೇವರ ಗುಡಿಯಲ್ಲಿ ತಾಯಿತ, ಚೀಟಿ ಕಟ್ಟಿಸಿಕೊಳ್ಳುವರು.

ಶುಭಕಾರ್ಯಕ್ಕೆ ಹೊರಟಾಗ ಮುತ್ತೈದೆಯರು ಎದುರು ತುಂಬಿದ ಕೊಡ ಹೊತ್ತು ಬಂದರೆ ಹೊರಟ ಕೆಲಸ ಶುಭವಾಗುತ್ತದೆ. ದಾರಿಯಲ್ಲಿ ನರಿ, ಮುಂಗುಸಿ ಅಡ್ಡ ಬಂದರೂ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿದೆ.ಎರಡು ಮಣ್ಣಿನ ಉಂಡೆಗೆ ಕಟ್ಟಿ ಅದನ್ನು ಮಾಡುವ ಕಾರ್ಯಕ್ಕೆ ಸಂಬಂಧಿಸಿದಂತೆ ಶುಭ ಅಶುಭ ಎಂದು ಎರಡು ಚೀಟಿ ಬರೆದು ಕಟ್ಟಿ ನೀರಿಗೆ ಹಾಕುತ್ತಾರೆ. ಯಾವ ಮಣ್ಣು ಉಂಡೆ ಮೊದಲು ಕರಗಿ ನೀರ ಮೇಲೆ ಚೀಟಿ ಬರುತ್ತದೋ ಅದರಂತೆ ಕಾರ್ಯ ಮಾಡುವರು.

ನಾಯಿಗಳು ಆಕಾಶಕ್ಕೆ ಮುಖಮಾಡಿ ಬೊಗಳಿದರೆ ಮಳೆ ಬರುತ್ತದೆ. ನಾಯಿ ಬೆಕ್ಕು ಅತ್ತರೆ ಸತ್ತ ಸುದ್ದಿ ಬರುವುದು, ಸೂರ್ಯ ಚಂದ್ರನ ಸುತ್ತ ಆಕಾಶದಲ್ಲಿ ಗೂಡುಕಟ್ಟಿದರೆ ಮಳೆ ಬರುವುದು, ಅಡಿಗೆ ಮಾಡುವಾಗ ಒಲೆ ಶಬ್ದ ಮಾಡಿದರೆ ನೆಂಟರು ಬರುವರು, ಮನೆ ಮುಂದೆ ಕಾಗೆ ಅರಚಿದರೆ ನೆಂಟರು ಬರುವರು, ಕಾಗೆಗಳು ಕಿತ್ತಾಡಿದರೆ ಯಾವುದಾದರೂ ಸಾವಿನಸುದ್ದಿ ಬರುವುದು. ಏನಾದರೂ ಅಂದುಕೊಂಡಾಗ ಹಲ್ಲಿ ಲೊಚಗುಟ್ಟಿದರೆ ಅಂದುಕೊಂಡಂತೆ ಆಗುವುದು ಎಂಬ ನಂಬಿಕೆಗಳು ಈ ಹಟ್ಟಿಬದುಕಿನಲ್ಲಿವೆ. ಆರೋಗ್ಯ ಮತ್ತು ಹಣಕಾಸಿನ ಸಮಸ್ಯೆ ಬಂದರೆ ಪರಿಹಾರಕ್ಕಾಗಿ ಮನೆಯಲ್ಲಿ ಹಾಲು ಮೊಸರಿನ ಗಡಿಗೆಗೆ ದೇವರ ಹೆಸರು ಹೇಳಿ ಹರಕೆ ಕಟ್ಟುವರು.

ಬೆಕ್ಕು ಅಡ್ಡ ಬಂದರೆ, ಕಟ್ಟಿಗೆ ಅಡ್ಡ ಬಂದರೆ, ವಿಧವೆ ಎದುರಾದರೆ, ಹಲ್ಲಿ ಮೈಮೇಲೆ ಬಿದ್ದರೆ, ನಕ್ಷತ್ರ ಮುಳುಗುವುದು ಕಂಡರೆ, ಮನೆಯ ಹಸುಗಳು ಸದ್ದು ಮಾಡಿದರೆ, ಮಧ್ಯರಾತ್ರಿ ಕೂಗುವ ಹಾಲಕ್ಕಿ ಅಶುಭ ಶಕುನಗಳೆಂದು ನಂಬಿಕೆಯಿದೆ.

ನಿಷೇಧಗಳು:

ಕಾಡುಗೊಲ್ಲರು ಹಟ್ಟಿ ಸಂಸ್ಕೃತಿಗೆ ಚ್ಯುತಿ ಬರದಂತಿರಲು ಹಲವು ನಿಷೇದಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ತಮ್ಮನ್ನು ಮಡಿಯ ಜನರೆಂದು ಭಾವಿಸುವ ಕಾಡುಗೊಲ್ಲರು ದಲಿತರನ್ನು ಹಟ್ಟಿಯ ಒಳಗೆ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದಾರೆ. ಕಾಡುಗೊಲ್ಲರೂ ದಲಿತರೊಟ್ಟಿಗೆ ಬೆರೆಯುವಂತಿಲ್ಲ ಮತ್ತು ಊಟಮಾಡುವಂತಿಲ್ಲ. ಕಾಡುಗೊಲ್ಲರು ಹಂದಿ ಮತ್ತು ಕೋಳಿಯನ್ನು ಹಟ್ಟಿಯ ಒಳಗೆ ಬಿಡುವುದಿಲ್ಲ. ಸಾಕುವುದಿಲ್ಲ. ಅದರ ಮಾಂಸವನ್ನು ಬಳಸುವಂತಿಲ್ಲ. ಕಾಡುಗೊಲ್ಲರಿಗೆ

ಅನ್ಯಜಾತಿಯವರೊಂದಿಗೆ ವಿವಾಹ ಸಂಬಂಧ ನಿಷಿದ್ಧ. ಕಾಡುಗೊಲ್ಲ ಮಹಿಳೆಯರಿಗೆ ರವಿಕೆ ತೊಡುವುದಕ್ಕೆ ನಿಷೇಧವಿದೆ. ಕಾಡುಗೊಲ್ಲರು ಗೋಮಾಂಸ ಬಳಸಲು ನಿಷೇಧವಿದೆ. ಕಾಡುಗೊಲ್ಲ ಹೆಣ್ಣುಗಳು ಋತುಮತಿಯಾದಾಗ, ತಿಂಗಳ ಋತುಚಕ್ರದ ಅವಧಿಯಲ್ಲಿ, ಮಹಿಳೆಯರು ಬಾಣಂತಿಯರಿದ್ದಾಗ ಹಟ್ಟಿಯಿಂದ ಕೆಲದಿನ ಹೊರಗಿರಬೇಕು. ಕುರಿ ಹಾಲನ್ನು ಕಾಲಿನಿಂದ ಒದೆಯಬಾರದು. ಕಾಡುಗೊಲ್ಲರು ಚಪ್ಪಲಿಯನ್ನು ಉಪಯೋಗಿಸುವಂತಿಲ್ಲ. ಚಪ್ಪಲಿಯಿಂದ ಹೊಡೆಸಿಕೊಳ್ಳಬಾರದು.

ಅಧ್ಯಾಯ 6

ಕಾಡುಗೊಲ್ಲ ಮಹಿಳಾ ಸಾಮಾಜಿಕ ಸಂಕಥನ

ಕಾಡುಗೊಲ್ಲ ಬುಡಕಟ್ಟಿನ ಸಮಾಜದಲ್ಲಿ ಸಾಂಸ್ಕೃತಿಕವಾಗಿ ಗೌರವಿಸಲ್ಪಡುವ ಮಹಿಳೆ ಸಾಮಾಜಿಕವಾಗಿ ಅಂತಹ ಸ್ಥಾನದಿಂದ ವಂಚಿತಳಾದವಳು. ಸಂಸ್ಕೃತಿಯ ರಕ್ಷಕಳಾಗಿ ಪಡೆದುಕೊಂಡ ಜಿನತ್ವವನ್ನು ಸಾಮಾಜಿಕ ಆಚರಣೆಗಳ ಮೂಲಕ ಮಹಿಳೆಯರು ಉಳಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಕಾಡುಗೊಲ್ಲರು ತಮ್ಮ ಬುಡಕಟ್ಟು ಅನ್ಯ ಸಂಸ್ಕೃತಿಗಳಿಂದ ತಮ್ಮ ಸಂಸ್ಕೃತಿಯು ಭಿನ್ನ ವಿಶಿಷ್ಟ ಎಂದು ಗುರುತಿಸಿಕೊಳ್ಳಲು ಬುಡಕಟ್ಟಿನೊಳಗಿರುವ ಕೆಲವು ವಿಶಿಷ್ಟ ಸಂಪ್ರದಾಯಗಳನ್ನು ಉಲ್ಲೇಖಿಸುತ್ತಾರೆ. ಗೊಲ್ಲ ಗೋಣಿಯ ಒಳಗೆ ವಾಸಿಸುವ ಹೆಣ್ಣು, ಗಂಡ ಸತ್ತರೂ ಶ್ರೀಕೃಷ್ಣನೆ ಗಂಡ ಎಂದು ಏಕಪತಿನಿಷ್ಠಳಾಗಿ ಬದುಕುವ ಹೆಣ್ಣು. ಋತುಮತಿ, ಬಾಣಂತಿಯಾದಾಗ ಮೈಲಿಗೆಯು ಹಟ್ಟಿಯ ಮೇಲೆ ಬೀಳದಂತೆ ಹಟ್ಟಿಯ ಆಚೆಗಿರುವ ಹೆಣ್ಣು ಇತ್ಯಾದಿ. ಈ ಎಲ್ಲವೂ ಸಮಾಜದೊಳಗೆ ಬದುಕುತ್ತಿರುವ ಹೆಣ್ಣಿನ ಬದುಕೇ ಆಗಿದೆ.ಸಾಂಸ್ಕೃತಿಕ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಈ ಸಂಗತಿಗಳು ಮಹಿಳೆಯರ ಬದುಕಿನ ನಡೆಗಳಿಗೆ ಎಡರಾಗಿರುವುದು ಸುಳ್ಳಲ್ಲ.

ಸಂಸ್ಕೃತಿ ಮತ್ತು ಸಮಾಜದ ನಡುವಿನ ಅಂತರ ತೀರ ತೆಳುವಾದುದು. ಸಂಸ್ಕೃತಿಯಲ್ಲಿ ಗೌರವಕ್ಕೆ ಪಾತ್ರವಾದುದೆಲ್ಲಾ ಸಮಾಜದಲ್ಲಿ ಸರಿಯಾದುದು ಎಂಬ ಮಾನ್ಯತೆಯನ್ನು ಪಡೆಯಬೇಕೆಂದೇನೂ ಇಲ್ಲ. ಸಂಸ್ಕೃತಿಯು ಅಭೌತಿಕವಾದರೆ. ಸಮಾಜ ಭೌತಿಕವಾದುದು. ಸಮಾಜದ ಆಚಾರಗಳೇ ಕಾಲ ಕಳೆದಂತೆ ಸಂಸ್ಕೃತಿಯ ಪ್ರತಿನಿಧಿಗಳಾಗುತ್ತವೆ. ಇಲ್ಲಿ ಸಮಾಜ ನಿರಂತರ ಬದಲಾವಣೆಗೆ ಒಳಪಡುತ್ತಲೇ ಇರುತ್ತದೆ. ಅದಕ್ಕೆ ಪೂರಕವಾಗಿ ಸಂಸ್ಕೃತಿಯು ಬದಲಾಗಬೇಕು. ಇದು ಸಾಧ್ಯವಿಲ್ಲದೇ ಹೋದರೆ ಅಂತಹ ಸಮಾಜ ಇತರೆ ಸಮಾಜಗಳೊಟ್ಟಿಗೆ ಬೆರೆಯಲಾರದೆ, ಸ್ಪರ್ಧಿಸಲಾರದೆ ಅಳಿವಿನ ಅಂಚಿಗೆ ತಲುಪಬಹುದು. ನಿರ್ಲಕ್ಷಕ್ಕೆ ತುತ್ತಾಗಬಹುದು, ಬೆಳವಣಿಗೆಯೇ ಇಲ್ಲದೆ ಬದುಕ ಬೇಕಾಗುಬಹುದು.

ಕಾಡುಗೊಲ್ಲ ಬುಡುಕಟ್ಟಿನ ಸಮಾಜ ಇಂದು ಹಲವು ಬದಲಾವಣೆಗಳಿಗೆ ತನ್ನನ್ನು ಮುಕ್ತವಾಗಿ ತೆರೆದುಕೊಂಡಿದೆ. ವಿಶಿಷ್ಟ ಸಂಸ್ಕೃತಿಯ ಕಾರಣದಿಂದ ಬುಡಕಟ್ಟಿನ ಸಮಾಜವಾದ ಕಾಡುಗೊಲ್ಲರು ತಮ್ಮ ಸಾಂಸ್ಕೃತಿಕ ಅನನ್ಯತೆಯ ಜೊತೆಗೆ ಹೊಸ ಬದಲಾವಣೆಗೆ ತೆರೆದುಕೊಳ್ಳಲು ಬಯಸುತ್ತಾರೆ. ವಿಶೇಷವೆಂದರೆ ಕಾಡುಗೊಲ್ಲ ಪುರುಷ ಸಮಾಜ ಈ ಬದಲಾವಣೆಯನ್ನು ಒಪ್ಪಿ ಸ್ವೀಕರಿಸಿ ಮುನ್ನಡೆಯಲು ಸಾಧ್ಯವಾಗಿದ್ದರೆ ಕಾಡುಗೊಲ್ಲ ಮಹಿಳಾ ಸಮಾಜ ಈ ಬದಲಾವಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ಬುಡಕಟ್ಟಿನ ಒಳಗೆ ಪುರುಷಸಮಾಜ ಅಭಿವೃದ್ಧಿಯ

ಹಾದಿಯಲ್ಲಿ ಮೇಲ್ಪಟ್ಟವಲ್ಲಿದ್ದರೆ. ಮಹಿಳೆಯರು ಅಭಿವೃದ್ಧಿಯ ಹಾದಿಗೆ ವಿಮುಖವಾಗಿ ಹಜ್ಜೆಯಿಡುತ್ತಿದ್ದಾರೆ. ಉದಾಹರಣೆಗೆ ಕಾಡುಗೊಲ್ಲರಲ್ಲಿ ಪುರುಷರು ಚಪ್ಪಲಿಹಾಕುವಂತಿಲ್ಲ, ಬಸ್ ಹತ್ತುವಂತಿಲ್ಲ, ಸಾರಾಯಿ ಕುಡಿಯುವಂತಿಲ್ಲ, ವಿದ್ಯುತ್ ಉಪಯೋಗಿಸುವಂತಿಲ್ಲ, ಅಂತರ್ಜಾತಿ ವಿವಾಹವಾಗುವಂತಿಲ್ಲ, ದಲಿತರೊಂದಿಗೆ ಊಟ ಮಾಡುವಂತಿಲ್ಲ, ಬೆರೆಯುವಂತಿಲ್ಲ. ಇತ್ಯಾದಿ ಸಂಸ್ಕೃತಿಯೊಳಗೆ ನಿಷೇದಕ್ಕೆ ಕಾರಣವಾದ ಈ ಮೇಲಿನ ಸಂಗತಿಗಳನ್ನು ಇಂದು ಅಭಿವೃದ್ಧಿ ಕಡೆ ಮುಖಾಮುಖಿಯಾಗಿರುವ ಪುರಷ ಸಮಾಜ ಬದಲಾಯಿಸಿಕೊಂಡಿದೆ. ಇಲ್ಲಿ ಜೀವನ ವಿಧಾನದ ಆದ ಬದಲಾವಣೆಯು ಸಾಂಸ್ಕೃತಿಕ ವಿಶಿಷ್ಟತೆಯನ್ನು ಪಲ್ಲಟಿಸಿದೆ. ಆದರೆ ಮಹಿಳೆಯರಿಗೆ ಸಂಬಂಧಿಸಿದ ಹಲವು ಸಂಗತಿಗಳಲ್ಲಿ ಕಾಡುಗೊಲ್ಲ ಬುಡಕಟ್ಟಿನ ಬಿಗಿನಿಲುವು ಸಡಿಲಿಸಿಲ್ಲ ಅವುಗಳಲ್ಲಿ ಬದಲಾವಣೆಯನ್ನು ನಿರಾಕರಿಸುತ್ತದೆ. ಋತುಮತಿಯಾದಾಗ ಹಟ್ಟಿಯ ಆಚೆಗಿರುವುದು, ಬಾಣಂತಿಯರಾದಾಗ ಸೂತಕ ಕಳೆದು ಮನೆಗೆ ಬರುವುದು, ವಿಧವಾ ವಿವಾಹ ಇಲ್ಲದಿರುವುದು, ಬಾಲ್ಯವಿವಾಹ, ಇತ್ಯಾದಿಗಳು ಇಂದಿಗೂ ಈ ಸಮಾಜದ ಒಳಗೆ ಜೀವಂತವಾಗಿರುವುದನ್ನು ಕಾಣಬಹುದು. ಇವು ಮಹಿಳಾ ಬದುಕಿನೊಳಗೆ ಮಹತ್ತರ ಪಾತ್ರವಹಿಸುವ ಸಂಗತಿಗಳಾಗಿವೆ. ವಿವಾಹ, ಹೆರಿಗೆ, ಸೂತಕ ಬದುಕಿನ ಹಲವು ಪರಿವರ್ತನೆಗಳಿಗೆ ಕಾರಣವಾಗುವ ವಿಚಾರ. ಈ ಮಹಿಳಾ ಸಾಂಸ್ಕೃತಿಕ ವಿಚಾರಗಳಲ್ಲಿ ಕಾಡುಗೊಲ್ಲ ಬುಡಕಟ್ಟು ತನ್ನ ಹಿಂದಿನ ಅನನ್ಯತೆಯನ್ನು ಮುಕ್ತವಾಗಿ ಬಿಟ್ಟುಕೊಡಲು ತಯಾರಾಗಿಲ್ಲ. ಕಾಡುಗೊಲ್ಲ ಬುಡಕಟ್ಟಿನೊಳಗೆ ಮಹಿಳೆ ಬದುಕುವಲ್ಲಿ ಏರ್ಪಡದ ಹೊಸ ಬದಲಾವಣೆಗಳ ಸ್ವೀಕಾರದಿಂದ ಹೊಸ ಸಂಸ್ಕೃತಿಯನ್ನು ಸೃಷ್ಟಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ಬದಲಾದ ಹೊಸ ಪುರುಷ ಸಂಸ್ಕೃತಿಯಲ್ಲಿ ಹೊಸದೊಂದು ಬದುಕು ಮಹಿಳೆಯರಿಗೆ ಸಾಧ್ಯವಾಗಿಲ್ಲ.

ಕಾಡುಗೊಲ್ಲ ಬುಡಕಟ್ಟು ಪಿತೃಪ್ರಧಾನ ಸಮಾಜ. ಇಲ್ಲಿ ಮಹಿಳೆ ಎರಡನೆ ದರ್ಜೆಯ ಪ್ರಜೆಯಾಗಿಯೇ ಗುರುತಿಸಿಕೊಳ್ಳುತ್ತಾಳೆ. ಬುಡಕಟ್ಟಿನ ಸಮಾಜವಾದ ಕಾಡುಗೊಲ್ಲರ ಮೂಲ ಕಸುಬು ಪಶುಪಾಲನೆಯಾದ್ದರಿಂದ ಇವರು ಮಾತೃಪ್ರಧಾನ ವ್ಯವಸ್ಥೆಗೆ ಹೊರಳಕೊಳ್ಳದೆ ಇಲ್ಲದಿರಬಹುದು. ಆದರೆ ಕಾಡುಗೊಲ್ಲರಲ್ಲಿ ಮಾತೃ-ಅಧಿಕಾರದ ಸಮಾಜ ಒಂದು ಕಾಲಕ್ಕೆ ಜೀವಂತವಾಗಿದ್ದಿರಬಹುದು ಎಂಬುದನ್ನು ಹಲವು ಸಾಂಸ್ಕೃತಿಕ ದಾಖಲೆಗಳು ಸ್ಪಷ್ಟಪಡಿಸುತ್ತದೆ . ಪಶುಪಾಲನೆಗಾಗಿ ಕುಟುಂಬದ ವಲಸೆಗಿಂತ ವ್ಯಕ್ತಿಗತ ವಲಸೆ ಇಲ್ಲಿ ಮುಖ್ಯವಾಗಿತ್ತು. ಕುಟುಂಬದ ಯಜಮಾನ ಪಶುಪಾಲನೆಗೆ ತೆರಳಿದ ಸಂದರ್ಭವಲ್ಲಿ ಕುಟುಂಬದ ಜವಾಬ್ದಾರಿ ಹೊರುವವಳೂ ಮಹಿಳೆಯೇ ಆಗಿದ್ದಳು. ಆಕೆ ಮಕ್ಕಳು, ವೃದ್ಧರನ್ನು ಪೋಷಿಸುವ ಸಲುವಾಗಿ ದುಡಿಮೆಯಲ್ಲಿ ಭಾಗವಹಿಸಲೇಬೇಕಿತ್ತು. ಈ ದುಡಿಮೆಯು ಆಕೆಯನ್ನು ಸ್ವಾವಲಂಬಿಯನ್ನಾಗಿಸಿದರೂ ಕುಟುಂಬದೊಳಗೆ ಅಧಿಕಾರದ ಸ್ಥಾನಗಳು ಲಭ್ಯವಾಗಲಿಲ್ಲ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಇಂದಿಗೂ ಸೋದರಿಕೆ ಸಂಬಂಧದ ವಿವಾಹಗಳಿಗೆ ಮೊದಲ ಆದ್ಯತೆಯಿದೆ. ಇದು ಮಾತೃ ಪ್ರಾಧಾನ್ಯತೆಯನ್ನು ನಿರೂಪಿಸುವಂತದ್ದು. "ಸೋದರ ಮಾವನ ಅಥವಾ ಸೋದರತ್ತೆಯ ಮಗಳನ್ನೇ ಒಬ್ಬ ಗಂಡಸು ಮದುವೆಯಾಗಬಹುದೆ?ಎಂದು ಅದು ಮಾತೃ ಪ್ರಧಾನ ಹಂತ ಪದ್ಧತಿ."[1] ಮಾತೃ ಪ್ರಾಧಾನ್ಯತೆಯನ್ನು ಅಳೆಯುವಲ್ಲಿ ಮೂರು ಸಂಗತಿಗಳನ್ನು ಗಮನಿಸಬೇಕು. ಅವುಗಳೆಂದರೆ ಬುಡಕಟ್ಟಿನಲ್ಲಿರುವ ಅತಿವಿವಾಹ, ಶಿಶುವಿವಾಹ ಮತ್ತು ವಿಧವಾ ವಿವಾಹ ನಿಷೇಧಗಳು. ಬುಡಕಟ್ಟಿನೊಳಗಿಗೆ ಇಂದಿಗೂ ಜೀವಂತವಾಗಿರುವ ಈ ಮೂರು ಸಂಗತಿಗಳು ಮಾತೃ ಮೂಲ ಅಧಿಕಾರವನ್ನು ಶಕ್ತಿಯುತವಾಗಿತ್ತು ಎಂಬುದನ್ನು ತಿಳಿಸುತ್ತದೆ. ಈ ಮಾತೃ ಪ್ರಧಾನತೆಯನ್ನು ಮುರಿಯಲು ಹಲವು ಪ್ರಯತ್ನಗಳು ಸಮಾಜದೊಳಗೆ ಏರ್ಪಟ್ಟವು ಇವು ಸಂಘರ್ಷಾತ್ಮಕವಾಗಿರದೆ ಸಂಸ್ಕೃತಿಯ ಮೂಲಕ ಅಡಿ ಇಟ್ಟವು. "ತಾಯಿತಕ್ಕ ಸಂಪ್ರದಾಯವು ಸಂಪೂರ್ಣವಾಗಿ ಮುರಿದು ಬಿದ್ದುದು ಹೇಗೆ? ಅದನ್ನು ಬಲವಂತದಿಂದ ಉಚ್ಚಾಟಿಸಲಾಯಿತು. ಅಂತಹ ಬಲವಂತ ಉಚ್ಚಾಟನೆಯ ಪರಿಣಾಮಗಳು ಮೂರು: ಅತಿವಿವಾಹ (ಬಹು ಹೆಣ್ಣುಗಳೊಡನೆ ಮದುವೆ) ಶಿಶುವಿವಾಹ ಮತ್ತು ಸತಿ (ವಿಧವೆಯರ ಸಹಗಮನ ಪದ್ಧತಿ). ಪಿತೃಪ್ರಾಧಾನ್ಯವಿರುವ ಸಮಾಜದಲ್ಲಿ ಗಂಡು ಹೆಣ್ಣಿಗಿಂತಲೂ ಉನ್ನತವಾದವನೆಂದು ತೋರಿಸಲು ಹಳೆಯ ಮಾತೃ ಪ್ರದಾನ ವ್ಯವಸ್ಥೆಯಲ್ಲಿ ಮಹಿಳೆಯರಿಗಿದ್ದ ಸ್ವಾತಂತ್ರ್ಯ ಮತ್ತು ಆತ್ಮವಿಶ್ವಾಸವನ್ನು ಕುಂದುಗೊಳಿಸಲಾಗುತ್ತದೆ."[2] ಬುಡಕಟ್ಟಿನೊಳಗೆ ಅತಿವಿವಾಹ, ಬಾಲ್ಯವಿವಾಹ, ವಿಧವಾ ವಿವಾಹ ನಿಷೇಧ ಇವುಗಳು ಸಾಂಸ್ಕೃತಿಕ ಹೇರಿಕೆಗಳಾಗಿ ಈ ಬುಡಕಟ್ಟು ಮಹಿಳೆಗೆ ಇದ್ದ ಪ್ರಧಾನ್ಯತೆಯನ್ನು ಅಳಿದವು.

ಇಂದಿಗೂ ಕಾಡುಗೊಲ್ಲ ಸಮಾಜದೊಳಗೆ ಜೀವಂತವಾಗಿರುವ ಬಾಲ್ಯವಿವಾಹ, ಬಹುಪತ್ನಿತ್ವ ವಿಧವಾವಿವಾಹ ನಿಷೇಧಗಳು ಮಹಿಳೆಯರ ಸ್ವಾತಂತ್ರ್ಯ ಮತ್ತು ಆತ್ಮವಿಶ್ವಾಸವನ್ನು ನಿಯಂತ್ರಿಸಿದೆ. ಮಾತೃ ಅಧಿಕಾರದ ಉಚ್ಚಾಟನೆಗೆ ಜಾರಿಯಾದ ಸಾಂಸ್ಕೃತಿಕ ಆಚಾರಗಳು ಪಿತೃ ಪ್ರಧಾನ ಸಮಾಜದ ಮೂಲ ಬೇರುಗಳು ಆಗಿವೆ. ಹೀಗಾಗಿ ಸಮಾಜದಲ್ಲಿ ಪುರುಷರು ಅಭಿವೃದ್ಧಿಯ ಕಡೆಗೆ ಮುಕ್ತವಾಗಿ ತೆರೆದುಕೊಂಡಿದ್ದಾರೆ. ಮಹಿಳೆಯು ಹಾಗೆ ತೆರೆದುಕೊಳ್ಳಲು ಸಾಧ್ಯವಾಗಿಲ್ಲ. ಪಿತೃ ಪ್ರಧಾನತೆಯನ್ನು ಸಮರ್ಥಿಸುವ ಸಂಸ್ಕೃತಿಯ ಬೇರುಗಳನ್ನು ನಾಶಮಾಡಲು ಈ ಸಂಸ್ಕೃತಿಯು ಒಪ್ಪುವುದಿಲ್ಲ. ಇದರಿಂದಾಗಿಯೇ ಮಹಿಳಾ ಸಮಾಜವು ಬುಡಕಟ್ಟಿನೊಳಗೆ ಮೌಢ್ಯ ಆಚಾರಗಳ ಭಾಗವಾಗೇ ಉಳಿದುಕೊಳ್ಳಬೇಕಾಗಿದೆ. ಸಂಸ್ಕೃತಿಯ ಅನನ್ಯತೆಯನ್ನು ಕಾಪಾಡಿಕೊಳ್ಳಬೇಕಾಗಿದೆ.

ಸಂಸ್ಕೃತಿಯ ಅನನ್ಯತೆ ಮತ್ತು ಅಭಿವೃದ್ಧಿ ಎಂದೂ ಒಂದೇ ಅಳಿಯಲ್ಲಿ ಚಲಿಸಲಾರವು. ಸಂಸ್ಕೃತಿಯ ಅನನ್ಯತೆ ಮತ್ತು ಅಭಿವೃದ್ಧಿ ನಡುವಿನ ಹಾದಿ ಸಂಘರ್ಷಣಾತ್ಮಕವಾಗಿರುತ್ತದೆ. ಸಂಸ್ಕೃತಿ ಅನನ್ಯತೆ ಅಳಿಯದೆ ಅಭಿವೃದ್ಧಿ ಕಾಲಿಡಲು ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯಡೆ ಮುಖ ಮಾಡಿದರೆ

ಸಾಂಸ್ಕೃತಿಕ ಅನನ್ಯತೆಯನ್ನು ಬಿಟ್ಟುಕೊಡದೆ ಗತ್ಯಂತರವಿಲ್ಲ. ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಮಾಡಲಾಗುವ ಅಭಿವೃದ್ಧಿ ಪರ ಯೋಜನೆಗಳು ಸಂಸ್ಕೃತಿಯ ಅನನ್ಯತೆಯ ಆಧುನಿಕ ರೂಪವಷ್ಟೇ ಆಗಿರುತ್ತದೆ. ಅದರಲ್ಲಿ ಯಾವುದೇ ಹೊಸ ಬದಲಾವಣೆಗಳು ಇರುವುದಿಲ್ಲ. ಉದಾಹರಣೆಗೆ ಕಾಡುಗೊಲ್ಲ ಬುಡಕಟ್ಟಿನೊಳಗೆ ಋತುಮತಿ, ಬಾಣಂತಿಯರಾದಾಗ ಹಟ್ಟಿಯ ಹೊರಗೆ ದಿನಗಳು, ತಿಂಗಳುಗಳ ಕಾಲ ಹೊರಗೆ ಇರಬೇಕಾಗಿರುವುದು ಸಾಂಸ್ಕೃತಿಕವಾದ ಅನನ್ಯತೆ. ಇದನ್ನು ಮೌಢ್ಯ ಎಂದು ನಂಬಿರುವ ಅಭಿವೃದ್ಧಿ ಯೋಜನೆಗಳು ಅದನ್ನು ನಿರ್ಮೂಲನೆ ಮಾಡಬೇಕಿತ್ತು ಆದರೆ ಅಭಿವೃದ್ಧಿ ಪರ ಯೋಜನೆಗಳು ಗುಬ್ಬದ ಬದಲು ಹಟ್ಟಿಯ ಆಚೆಗೆ ಕೃಷ್ಣಕುಟೀರಗಳನ್ನು ಸ್ಥಾಪಿಸಿತು. ಕೃಷ್ಣಕುಟೀರಗಳು ಸಂಸ್ಕೃತಿಯ ಅನನ್ಯತೆಯ ಆಧುನಿಕ ರೂಪವಷ್ಟೆ ಅಭಿವೃದ್ಧಿಯ ಲಕ್ಷಣವಲ್ಲ.

ಕಾಡುಗೊಲ್ಲ ಸಮಾಜದಲ್ಲಿ ಮಾತ್ರ ಅಧಿಕಾರವನ್ನು ಸಂಕೇತಿಸುವ ಮತ್ತೊಂದು ಸಾಂಸ್ಕೃತಿಕ ಸಂಗತಿಯೆಂದರೆ ಮಾರಿಯ ಆರಾಧನೆ. ಕಾಡುಗೊಲ್ಲ ಬುಡಕಟ್ಟಿನಲ್ಲಿ ಏರ್ಪಡದ ಅಂತರ್ಜಾತಿ ವಿವಾಹ, ಸತಿ ಸಹಗಮನ ಪದ್ಧತಿಗಳು ಮಾರಿಯ ಆರಾಧನೆಯನ್ನು ನಿರಾಕರಿಸುತ್ತವೆ. ಆದರೆ ಬುಡಕಟ್ಟಿನ ಮಹಿಳಾ ಸಮಾಜ ಸಂತಾನಕ್ಕಾಗಿ, ಆರೋಗ್ಯಕ್ಕಾಗಿ ಸ್ಥಳೀಯವಾಗಿರುವ ಮಾರಿಯನ್ನು ಆರಾಧಿಸುವ ಪದ್ಧತಿ ಇಂದಿಗೂ ಇದೆ. ಮಾರಿಯ ಉಚ್ಚಾಟನೆ ಮಾತ್ರ ಅಧಿಕಾರದ ಉಚ್ಚಾಟನೆಯ ಒಂದು ಭಾಗವಾಗಿಯೇ ಕಾಣುತ್ತದೆ. ಅಂಬಳಿಕೆ ಹಿರಿಯಣ್ಣನವರು ಸಂಗ್ರಹಿಸಿರುವ 'ಕಾಡುಗೊಲ್ಲರ ಜನಪದ ಗೀತೆಗಳು'[3] ಕೃತಿಯಲ್ಲಿನ ಗೀತೆಗಳಲ್ಲಿ ಬರುವ ಪಾತೇಲಿಂಗ, ಕಾಟುಮಲಿಂಗ, ಮಾಲಿಂಗ ಧಾರ್ಮಿಕ ಗೀತೆಗಳಲ್ಲಿ, "ಮಾರಿಯ ಒಡೆಯುವ" ಪ್ರಸಂಗವೂ ಇದ್ದು ಈ ಮೇಲಿನ ಪುರುಷ ದೈವಗಳೆಲ್ಲಾ ಮಾರಿಯನ್ನು ಹಟ್ಟಿಯಿಂದ ಹೊಡೆದು ಉಚ್ಚಾಟಿಸುತ್ತಾರೆ ಇಲ್ಲವೇ ಕೊಂದು ಒಳಮಾಲೆ ಹಾಕಿಕೊಳ್ಳುತ್ತಾರೆ.

ಅಪ್ಪಯ್ಯ ದುರಿಗ್ಯರನ ಮತ್ತೆಂಗೆ ನೀನ್ಹೊಡೆದೂ
ನೆತ್ತೀಯ ಸೀಳಿ ಒಳಮಾಲೆ – ಹಾಕ್ಕೊಂಡು
ಅಪ್ಪಯ್ಯ ದುರುಗ್ಯರನ ಹೊಡುದೆನೊ

ಏಗೀನೆ ಮಾಲಿಂಗ ನೀನೆಂಗೆ ಹೊಡುದ್ಯಪ್ಪ
ನಾಲೀಗೆ ಸೀಳಿ ಒಳಮಾಲೆ- ಹಾಕ್ಕೊಂಡು
ಮಾಲಿಂಗ ಮಾರೆರ್ನ ಹೊಡುದೇನೊ

ಮುತ್ತೀನ ಉರುಬಾಣ ನೆತ್ತೀಗು ಬಿಡುಬ್ಯಾಡಯ್ಯ
ಕೆಟ್ಟ ಬಂದೆ ಬಾಯ ಬಿಡುತಾರೆ – ದುರಿಗ್ಯಾರು
ಊರು ಮಾಲಿಂಗ ಬಿಡುತಿವ್ರೊ

ದುರುಗ್ಯೆನ ಹೊಡಕೊಂಡು ಎದುರೀಗೆ ಬರುತಾನೆ
ಮಕ್ಕಳುಳ್ಳಮ್ಮ ಒಳುಗೀರೆ – ಇಕ್ಕಾನೂರಾ
ಮತ್ತೆ ದುರಿಗೆರನಾ ಹೊಡುದೀಗ – ಮಾಲಿಂಗ
ಹಟ್ಟಿಗ ತಾನೀಗ ಬರುತಾನೆ.[3]

ಹೀಗೆ ದುರಿಗ್ಯೆರನ್ನ ಮಾಲಿಂಗ ಹಟ್ಟಿ ಆಚೆಗೆ ಬೆದರಿಸಿ ಅಟ್ಟುತ್ತಾನೆ. ಈ ದುರಿಗ್ಯರು ಮಾತೃಸಂಸ್ಕೃತಿಯನ್ನು ಹೇಳುವ ಸಾಂಸ್ಕೃತಿಕ ಪ್ರತಿನಿಧಿಗಳು. ಹಾಗೂ ಪುರುಷಾಧಿಕಾರವನ್ನು ಹತ್ತಿಕ್ಕುವ ಬಲವುಳ್ಳವರು. ಇವರ ಈ ಉಚ್ಚಾಟನೆಯು ಮಾತೃ ಅಧಿಕಾರವನ್ನು ಬಲವಂತವಾಗಿ ಉಚ್ಚಾಟಿಸಿರುವುದನ್ನು ಹೇಳುತ್ತದೆ.

ಊರೂನೆ ಬೆದಕಿ ಬರುತಾನೆ – ಮಾಲಿಂಗ
ಯಾವಲ್ಲೆಂದಾರೊ ದುರಿಗೇರು – ಹೂವೀನ್ಹೊಳೆಯ
ಊರಾ ಬಾಗಿಲಾಗಿ ಅಡಿಗ್ಯವ್ರೆ.

ಮತ್ತೆ ದುರಿಗೇರನ ಅಪ್ಪಯ್ಯ ಹೊಡಿದಾನೆ
ದೊಕ್ಕೆಯ ಸೀಳಿ ಒಳಮಾಲೆ ಹಾಕಿಕೊಂಡು
ಅಪ್ಪಯ್ಯ ದುರುಗೇರ್ನ ಹೊಡುದಾನೆ[4]

ಲಕ್ಕಪ್ಪನ ತಿಪ್ಪೇಗೆ ಕೋಳೀಯ ಬೆಂಚೀಗೆ
ಆಷು ನಿನ್ನ ಬಾಣ ಗನುವಾಗಿ – ಆ ದುರುಗಿ
ಬೆಡ್ಯಾಳೆ ಮೂಡಾ ಮಕುವಾಗಿ[5]

ಹತ್ತು ಕುರಿಯಟ್ಟೆ ಹದಿನಾರು ಮರಿಯಟ್ಟೆ
ಸೆಟ್ಟೆ ಪಜಿಗೊಲ್ಲರ ಕುರಿಹಟ್ಟೆ– ಉದಿಯಾಗೆ

ಅಕ್ಕ ಕರಿಯಮ್ಮಗೆ ಶಿವ ಪೂಜೆ
ಅತ್ತೀಯ ಮರದ ಹತ್ತೋಗ ಸರುಪಾನ
ನೆತ್ತೀಯ ಹಿಡಿದು ನೆಲಕ್ಕೊಡೆದು - ಹುತ್ತಾನಿಟ್ಟು
ನೆಟ್ಟು ಪದುಗೊಲ್ಲರಿಗೆ ಒಲಿದಾಳು

ಎಲ್ಲಾರ ಸಾಸಾನ – ಕಲ್ಲಿನ ಮ್ಯಾಲೆ ಹೊಯ್ಸಾರೆ
ಮಾರವ್ವ ನಿನ್ನ ಸಾಹಸ ಕಂಚೀನ ಹೊತ್ತಿಗ್ಗೆ ಹೊಯ್ಸಾರೆ
ಎಂತಾರ ಸಾಸನ ಕಲ್ಲಿನ ಮ್ಯಾಲೆ ಹೊಯ್ಸಾರ
ಸತ್ಯವ್ವ ನಿನ್ನ ಸಾಸಾನ ಬೆಳ್ಳಿ ಹೊತ್ತಿಗ್ಗೆ ಹೊಯ್ಸಾರೆ[6]

ದೇವಿ ತಾಯಿ ತಾಯವ್ವ, ಸತ್ಯವ್ವ, ಅಕ್ಕ, ಹೀಗೆ ಹಲವು ಹೆಸರುಗಳಿಂದ ಕರೆಯಿಸಿಕೊಂಡು ಆರಾಧನೆಗೊಳ್ಳುತ್ತಿರುವ ಮಾಯಸಂದ್ರದ ಕರಿಯಮ್ಮ, ಕರಿಬೇವಿನಮ್ಮ, ಮಹಿಳೆಯರು ಆರಾಧಿಸುವ ಸ್ತ್ರೀ ದೇವರುಗಳು ನಿಸ್ತ್ರೀಯರ ಕೊರಳಮಣಿ ಬೆಳಕಾದವರು. ಇಂದಿಗೂ ಯಾವುದೇ ಶುಭ ಕಾರ್ಯದಲ್ಲಿ ಮೊದಲು ಹುತ್ತದ ಪೂಜೆ ಮಾಡುವುದು ಕಾಡುಗೊಲ್ಲರ ಸಂಪ್ರದಾಯ. ಹುತ್ತವು ಮಾತೆಯ, ಸ್ತ್ರೀ ದೇವತೆಯ ರೂಪವಾಗಿದೆ. ಅಂದರೆ ಗೌರಸಂದ್ರದ ಮಾರಿಯು ನೆಲೆಸಿರುವ ಸ್ಥಾನವಾಗಿದೆ. ಇಲ್ಲಿ ಮಾತೃವಿಗೆ ಮೊದಲ ಪೂಜೆಯು ಸಲ್ಲುತ್ತಿದೆ. ಮಾರಿಯನ್ನು ಶಕ್ತಿಯ ಅವತಾರವಾದ ದುರ್ಗೆ ಎಂದು ಭಾವಿಸದೆ ಮಹಿಳೆಯರು ಅವರನ್ನು ದೇವಿ, ತಾಯಿ, ಅಕ್ಕ ಸತ್ಯವ್ವ ಎಂದು ಕರೆಯುವುದು ಮಾತೃ ದೇವತೆಯ ಬಗೆಗಿದ್ದ ಗೌರವ, ಆತ್ಮೀಯ ಸಂಬಂಧವನ್ನು ಸಾದರ ಪಡಿಸುತ್ತದೆ. ಕ್ರಮೇಣ ಪಿತೃ ಪ್ರಧಾನ ಮೌಲ್ಯಗಳು, ಪಿತೃ ದೇವರ ಆರಾಧನೆ ಪ್ರಬಲವಾಗತೊಡಗಿದಾಗ ಮಾತೃ ದೇವತೆಯನ್ನು ಮುಂಚಿನ ಸ್ಥಾನದಿಂದ ಕೆಳಗಿಳಿಸಲಾಯಿತು. ಕಾಡುಗೊಲ್ಲನ ಪುರುಷ ದೈವಗಳಾದ ಕಾಟುಮಲಿಂಗ, ಪಾತೇಲಿಂಗ, ಮಾಲಿಂಗ ಗೀತೆಗಳಲ್ಲಿ ಮಾರಿಯನ್ನು ಶಕ್ತಿಯ ಪ್ರತಿರೂಪವಾಗಿ ದುರ್ಗೆಯೆಂದು ಭಾವಿಸಿ ಆಕೆಯನ್ನು ಹಟ್ಟಿಯ ಆಚೆಗೆ ಅಟ್ಟಲು ಕೊಂದು ಒಳಮಾಲೆ ಹಾಕುವ ಪ್ರಸಂಗಗಳೂ ಈ ಕಾರಣದಿಂದಲೇ ಹುಟ್ಟಿಕೊಂಡವು.

ಕಾಡುಗೊಲ್ಲ ಸಾಹಿತ್ಯ ದಾಖಲಿಸುವಂತೆ ಕಾಡುಗೊಲ್ಲ ಸಮಾಜದಲ್ಲಿ ಮಾತೃ ಆರಾಧನೆಗೆ ಆದ್ಯತೆ ಇತ್ತು ಕ್ರಮೇಣ ಅದು ಪಿತೃ ಪ್ರಧಾನತೆಯನ್ನು ಗಟ್ಟಿಗೊಳಿಸಿಕೊಂಡಿತು. ವೈರುಧ್ಯವೆಂದರೆ ಮಾತೃ ಆರಾಧನೆಯಿದ್ದರೂ ಮಾತೃವು ಶಕ್ತಿಯ, ಅಧಿಕಾರದ, ಸ್ವಾತಂತ್ರ್ಯದ, ಆತ್ಮವಿಶ್ವಾಸದ ಪ್ರತಿರೂಪವಾಗಿರಲಿಲ್ಲ. ಸಂತಾನ ಕರುಣಿಸುವ, ಆರೋಗ್ಯ ನೀಡುವ ದೇವತೆಯಾಗಿದ್ದಳು.

ಕಾಡುಗೊಲ್ಲ ವರ್ತಮಾನದ ಮಹಿಳಾ ಸಮಾಜದಲ್ಲಿ ಮಹಿಳೆಗೆ ಅದ್ಯತೆ ಸಲ್ಲುತ್ತಿರುವುದು ಸಂತಾನದ ಮಹತ್ವ ಕಾರಣಕ್ಕಾಗಿಯೇ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶಿಕ್ಷಣ ವಂಚಿತ ಜೀವನ, ಉದ್ಯೋಗ, ಸ್ವತಂತ್ರ್ಯ ಬದುಕಿನ ಬಗೆಗೆ ಮಹಿಳೆಯ ಗಮನ ಸೆಳೆದು ಹಟ್ಟಿಯೊಳಗೆ ಏಕಿಲ್ಲ ಎಂದು ಪ್ರಶ್ನಿಸಿದಾಗ ಅವರು ಹೇಳಿದ ಉತ್ತರ ಬಹುತೇಕ "ಮಕ್ಕಳ ಹೆತ್ಕಂಬಕ್ಕೆ ಇಟ್‌ಕೊಂಡಿದ್ರು" ಎಂಬುದೇ ಆಗಿತ್ತು.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳಾಸಮಾಜದ ಘಟಕಗಳಾಗಿ ವಿವಾಹ, ಕುಟುಂಬ, ಅಧಿಕಾರಗಳು ಮುಖ್ಯವಾಗಿವೆ. ಈ ಮೂರು ಸಂಗತಿಗಳು ಮಹಿಳೆಯ ಬದುಕಿನಲ್ಲಿ ಹಲವು ಪರಿವರ್ತನೆಗಳಿಗೆ ಕಾರಣವಾಗುತ್ತದೆ. ಆಕೆಯ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಈ ಸಂಗತಿಗಳಿಗೆ ಬಹುಮುಖ್ಯವಾದ ಸ್ಥಾನವಿದೆ. ಈ ನೆಲೆಗಳಲ್ಲಿ ಕಾಡುಗೊಲ್ಲ ಮಹಿಳೆಯ ಜೀವನವನ್ನು ಗಮನಿಸುವ ಮೂಲಕ ಆಕೆಯ ವರ್ತಮಾನದ ಬದುಕನ್ನು ಅರಿಯಬಹುದಾಗಿದೆ. ವರ್ತಮಾನದಿಂದಲೇ ಇತಿಹಾಸ ನಿರ್ಮಾಣವಾಗುತ್ತಿರುವುದು ಸತ್ಯವೆಂದಾದರೆ, ಇತಿಹಾಸವಾಗುವ ಮಹಿಳೆಯ ಇಂದಿನ ಬದುಕಿನ ಬಗ್ಗೆ ಅರಿವು ಅತ್ಯಗತ್ಯ. ಕ್ಷೇತ್ರಕಾರ್ಯದಲ್ಲಿ ಕಾಡುಗೊಲ್ಲ ಮಹಿಳೆಯರಿಂದ ಸಂಗ್ರಹಿಸಿದ ಮಾಹಿತಿಗಳಿಂದ ಅವರ ವಿವಾಹ, ಕುಟುಂಬ, ಅಧಿಕಾರ ಯಾವ ರೀತಿಯಾಗಿದೆ ಎಂಬುದನಿಲ್ಲಿ ದಾಖಲಿಸಿದೆ. ಈ ಮಾಹಿತಿಯು ಮಹಿಳೆಯ ಅಭಿಪ್ರಾಯಗಳು ಮಾತ್ರವಲ್ಲ ಅವರ ಹಕ್ಕೋತ್ತಾಯಗಳು ಆಗಿರುವುದು ವಿಶೇಷ. ಪ್ರಸ್ತುತ ಬದುಕಿನ ಬಗೆಗಿನ ಅವರ ನಿರಾಶೆ ನೋವುಗಳು, ಉತ್ತಮ ಬದುಕಿನ ಬಯಕೆಗಳು, ಅವರಿಗೆ ಅಗತ್ಯವಿರುವ ಬದಲಾವಣೆಗಳ ಬಗ್ಗೆ ಗಮನ ಸೆಳೆಯುತ್ತದೆ.

ವಿವಾಹ

ವಿವಾಹ ಕಾಡುಗೊಲ್ಲ ಮಹಿಳೆಯ ಸಾಮಾಜಿಕ ಬದುಕಿನಲ್ಲಿ ಅತಿ ಮುಖ್ಯ ಪಟ್ಟ. ಗೃಹಸ್ಥ ಜೀವನ ಇಲ್ಲಿ ಎಲ್ಲಾ ಹೆಣ್ಣುಗಳಿಗೂ ಖಡ್ಡಾಯ. ವಿವಾಹವಾಗದೇ ಅಂದರೆ ವಿವಾಹದ ವಯಸ್ಸಿಗೆ ಬಂದು ಮದುವೆಯಾಗದೆ ಮುಪ್ಪಾಗಿ ಉಳಿದ ಯಾವ ಹೆಣ್ಣನ್ನೂ ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ನೋಡಲು ಸಿಗಲಿಲ್ಲ. ಆದರೆ ಗಂಡ ಬಿಟ್ಟಿರುವವರು, ವಿಧವೆಯರ ಸಂಖ್ಯೆ ಅಪಾರವಾಗಿಯೇ ಇದೆ. ವಿವಾಹ ಹೆಣ್ಣುಮಕ್ಕಳ ಜೀವನದ ಬಹು ದೊಡ್ಡ ಗುರಿ.ಅವರ ಬದುಕಿನ ವಿಸ್ತಾರ ವಿವಾಹದ ಆಚೆಗೆ ಹೆಚ್ಚು ಸರಿದಿಲ್ಲ. ವಿವಾಹ ಈ ಹೆಣ್ಣಿನ ಜೀವನದ ಅಂತಿಮ ಗುರಿಯೆನಿಸುತ್ತದೆ. ಕುಟುಂಬದಲ್ಲಿ ಹೆಣ್ಣು ವಿವಾಹಗೊಳ್ಳುವ ಮೊದಲಗಿತ್ತಿಯಾಗಿಯೇ ಬೆಳೆಸಲ್ಪಡುತ್ತಾಳೆ. ಈ ಕಾರಣದಿಂದ ಕಾಡುಗೊಲ್ಲ ಮಹಿಳಾ ಬದುಕು, ಸ್ವತಂತ್ರ, ಆತ್ಮವಿಶ್ವಾಸದ ಬದುಕಿನಿಂದ ವಂಚಿತವಾಗಿದೆ. ಮದುವೆ, ಮಕ್ಕಳ

ಲಾಲನೆ, ಪೋಷಣೆ ಜೊತೆಗೆ ಕುಟುಂಬದ ಒಳಗೂ ಹೊರಗೂ ದುಡಿಮೆ ಇವುಗಳ ಒಳಗೆ ಆಕೆಯ ಬದುಕು ಹಚ್ಚು ಸುತ್ತುತ್ತದೆ. ವಿವಾಹದ ಕಾರಣದಿಂದ ಉನ್ನತ ಶಿಕ್ಷಣದಿಂದ ವಂಚಿತಳಾಗುತ್ತಿದ್ದಾಳೆ. ಶಿಕ್ಷಣದ ಮೂಲಕ ದೊರೆಯಬಹುದಾಗಿದ್ದ ಹೊಸ ಅರಿವು ಇಲ್ಲವಾಗಿ ಸಂಪ್ರದಾಯಿಕ ಸಮಾಜದೊಳಗೆ ಇಷ್ಟವಿಲ್ಲದಿದ್ದರೂ ಇದೇ ಜೀವನವೆಂದು ಸಹಿಸಿ ಬದುಕಬೇಕಾದ ಸನ್ನಿವೇಶವಿದೆ.

ವಿವಾಹವಾಗುವ ಪತಿಯನ್ನು ಈ ಸಮಾಜದೊಳಗೆ ನಿರ್ಧರಿಸುವುದು ವಿವಾಹವಾಗಲಿರುವ ಹೆಣ್ಣಲ್ಲ ಯಾರನ್ನು ವಿವಾಹವಾಗಬೇಕು? ಯಾವ ವಯಸ್ಸಿಗೆ ವಿವಾಹವನ್ನು ಮಾಡಬೇಕು? ಎಂದು ನಿರ್ಧಾರ ಮಾಡುವವನು ಮನೆಯ ಹಿರಿಯ ವ್ಯಕ್ತಿ ಅಥವಾ ಯಜಮಾನ ಇವರ ಆಣತಿಯಂತೆ ಹೆಣ್ಣು ಒಪ್ಪಿ ವಿವಾಹವಾಗಬೇಕು ಇಲ್ಲದಿದ್ದರೆ ಬಲವಂತವಾಗಿಯಾದರೂ ವಿವಾಹ ನೆರವೇರಿಸುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ಹೆಚ್ಚು ಈ ಸಂಗತಿಯನ್ನು ಗಮನಿಸಿದ್ದೇನೆ ನೀವು ಒಪ್ಪಿ ಮದುವೆಯಾದವರೇ ಎಂದು ಕೇಳಿದ್ದಕ್ಕೆ – 'ಹಿರಿಯರು ನೋಡಿ ಮಾಡಿದ್ದು' ಎಂಬ ಉತ್ತರ ಮಾತ್ರ ಸಿಗುತ್ತದೆ. "ನಮಗೆ ಇಷ್ಟವಿಲ್ಲದಿದ್ದರು ನಮ್ಮ ಮಾತು ಯಾರು ಕೇಳ್ತಾರೆ. ಒಪ್ಪದಿದ್ದರೆ ಬಲವಂತವಾಗಿ ತಾಳಿ ಕಟ್ಟಿಸ್ತಾರೆ. ಕಟ್ಟಿಗೆಯಲ್ಲಿ ಉಯ್ತಾರೆ. ಮನೇಲಿ ಊಟ ಹಾಕಲ್ಲ ಅದಕ್ಕೆ ಒಪ್ಕೊಂತೀವಿ" ಎನ್ನುತ್ತಾರೆ. ವಿವಾಹ ಮಹಿಳೆಯ ಜೀವನಕ್ಕೆ ಮುಖ್ಯವೇ ಆದರೂ ಅದು ಅವಳ ಒಪ್ಪಿಗೆ, ಆಯ್ಕೆಯೇ ಇಲ್ಲದೇ ನಡೆಯುವ ಸಂಗತಿಯಾಗಿದೆ.

ಒಪ್ಪಿಗೆ ಇಲ್ಲದ ವಿವಾಹವನ್ನು ನಿರಾಕರಿಸದಿರಲು ಈ ಮಹಿಳೆಯರಿಗೆ ಇರುವ ತೊಡಕುಗಳನ್ನು ಹೀಗೆ ಗುರುತಿಸಬಹುದು :

1) ಸಮುದಾಯದ ಒಳಗೆ ಬದುಕುಬೇಕಾದ ಅನಿವಾರ್ಯತೆ

2) ಅಂತರ್ಜಾತಿ ವಿವಾಹಕ್ಕೆ ಇರುವ ನಿಷೇಧ

3) ಉನ್ನತಶಿಕ್ಷಣ ಇಲ್ಲದಿರುವುದು

4) ಕೂಲಿ, ವ್ಯವಸಾಯದ ಹೊರತಾಗಿ ಉದ್ಯೋಗ ಕೌಶಲ್ಯ ಇಲ್ಲದಿರುವುದು

5) ನಾಗರೀಕ ಸಮಾಜದೊಳಗೆ ಕಡಿಮೆ ಸಂಪರ್ಕ

6) ಕಾಡುವ ಕೀಳರಿಮೆ

ಹಟ್ಟಿ ಸಂಸ್ಕೃತಿಯಲ್ಲಿ ಬುಡಕಟ್ಟಿನ ಜೀವಾಳ ಸಮುದಾಯ ಕೇಂದ್ರಿತ ಬದುಕು. ಹಟ್ಟಿಯಿಂದ ಬಹಿಷ್ಕಾರಗೊಳ್ಳುವುದು ತೀವ್ರ ಅಪಮಾನದ ಸಂಗತಿ. ಈ ಬುಡುಕಟ್ಟು ಸಮುದಾಯದ ಬದುಕನ್ನು ಪೋಷಿಸುತ್ತದೆ. ಇಲ್ಲಿ ಎಲ್ಲರಿಗೂ ಒಂದೇ ನಿಯಮ, ನೀತಿ, ಸಂಪ್ರದಾಯ, ಆಚಾರಗಳಿರುತ್ತವೆ ಯಾರೂ ಅವುಗಳನ್ನು ಉಲ್ಲಂಘಿಸುವುದಿಲ್ಲ. ವೈಯಕ್ತಿಕ ಸ್ವಾತಂತ್ರ್ಯಕ್ಕೆ ಆದ್ಯತೆಯೂ ಇಲ್ಲ

ಅವಕಾಶವೂ ಇಲ್ಲ. ಏನೇ ತೀರ್ಮಾನಗಳನ್ನು ಕೈಗೊಂಡರೆ ಅದಕ್ಕೆ ಬುಡಕಟ್ಟಿನ ಎಲ್ಲರೂ ತಲೆಬಾಗಲೇಬೇಕು. ಈ ಸಮುದಾಯದ ಒಗ್ಗಟ್ಟು ಜೀವನ ಅತ್ಯುತ್ತಮ ಸಾಮಾಜಿಕ ವಾತಾವರಣವೆಂದು ಮಾನ್ಯ ಮಾಡಬಹುದು. ಆದರೆ ಈ ಒಗ್ಗಟ್ಟು ಮಹಿಳೆಯ ಬದುಕಿನ ಹಲವು ಬಿಕ್ಕಟ್ಟುಗಳಿಗೆ ಕಾರಣವಾಗುತ್ತದೆ.ಅದರಲ್ಲಿ ವಿವಾಹವೂ ಒಂದು. ಈ ಬುಡಕಟ್ಟಿನೊಳಗೆ ಮಹಿಳೆಯರು ವಿವಾಹದ ವಿಷಯದಲ್ಲಿ ಸ್ವತಂತ್ರರಲ್ಲ. ಹಿರಿಯರ ಒಪ್ಪಿಗೆಯಂತೆ ಆಕೆ ವಿವಾಹವಾದರೆ ಹಟ್ಟಿಯ ಒಳಗೆ ಆಕೆ ಬದುಕಲು ಅವಕಾಶವಿರುತ್ತದೆ. ಇಲ್ಲದಿದ್ದರೆ ಹಟ್ಟಿಯಿಂದ ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆ.

ಕಾಡುಗೊಲ್ಲ ಮಹಿಳೆ ಕಾಡುಗೊಲ್ಲ ಪುರುಷನನ್ನು ಬಿಟ್ಟು ಅನ್ಯ ಜಾತಿಯ ಪುರುಷರನ್ನು ವಿವಾಹವಾಗುವಂತಿಲ್ಲ. ಒಂದು ವೇಳೆ ಅನ್ಯ ಜಾತಿಯ ಪುರುಷರನ್ನು ವಿವಾಹವಾದರೆ ಹಟ್ಟಿಯಿಂದ ಹೊರ ಹಾಕಲಾಗುತ್ತದೆ. ಪುರುಷನು ಅನ್ಯ ಜಾತಿಯಲ್ಲಿ ವಿವಾಹವಾದರೆ ಕೆಲವು ಸಂಸ್ಕಾರಗಳೊಂದಿಗೆ ಶುದ್ಧೀಕರಣ ಮಾಡಿ ಹಟ್ಟಿಗೆ ಸೇರಿಸಿಕೊಳ್ಳಲಾಗುತ್ತದೆ. ಕೆಲವೊಮ್ಮೆ ಅಂತಹ ಪುರುಷನಿಗೆ ಆತ ಕಟ್ಟಿದ ತಾಳಿ ಕೀಳಿಸಿ ಹಟ್ಟಿಯ ಹೆಣ್ಣನ್ನು ನೀಡಿ ಎರಡನೆಯ ಮದುವೆ ಮಾಡಿರುವ ಉದಾಹರಣೆಗಳು ಇವೆ, ಇದು ಕಾಡುಗೊಲ್ಲ ಸಮಾಜದಲ್ಲಿ ಪುರುಷ ಮತ್ತು ಮಹಿಳೆಯ ವಿವಾಹಕ್ಕೆ ಸಂಬಂಧಿಸಿದಂತೆ ವಿರುದ್ಧ ನೀತಿ ಅನುಸರಿಸುವುದನ್ನು ತೋರಿಸುತ್ತದೆ. ವಿವಾಹದ ಆಚರಣೆ, ನಿಯಮಗಳು ಪುರುಷ ನಿಷ್ಠಯನ್ನುಳ್ಳವು ಮತ್ತು ಮಹಿಳಾ ಹಕ್ಕುಗಳನ್ನು ದಮನಿಸಿದವುಗಳಾಗಿವೆ. ವಿವಾಹದ ನಿಯಮಗಳು ಪುರುಷನಿಗೆ ಸಮ್ಯವಾಗಿ ವರ್ತಿಸಿದರೆ ಮಹಿಳೆಗೆ ಕಠಿಣವಾಗಿ ಹೇರಲ್ಪಡುತ್ತವೆ. ಇದು ಲಿಂಗಭೇಧ ನೀತಿಯನ್ನು ನಿರೂಪಿಸುತ್ತಿದ್ದಾದರೂ ಕಾಡುಗೊಲ್ಲ ಸಮಾಜವು ಅದನ್ನು ಲಿಂಗಬೇಧ ತಾರತಮ್ಯವೆಂದು ಭಾವಿಸದೆ ಸಂಸ್ಕೃತಿಯ ಅನನ್ಯತೆಯೆಂದು ಭಾವಿಸುತ್ತದೆ. ಕಾಡುಗೊಲ್ಲ ಮಹಿಳೆಯ ಅನ್ಯ ಜಾತಿಯ ಪುರುಷನಲ್ಲಿ ಸಂತಾನ ಪಡೆಯುವುದನ್ನು ಅಂತಹ ಬಂಧುತ್ವವನ್ನು ಈ ಬುಡಕಟ್ಟು ತೀವ್ರವಾಗಿ ವಿರೋಧಿಸುತ್ತದೆ. ತಮ್ಮ ರಕ್ತದ ಮತ್ತು ಸಂತಾನದ ಮಡಿಯನ್ನು ಕಾಯ್ದುಕೊಳ್ಳುವ ಪ್ರಜ್ಞೆ ಇಲ್ಲಿ ಸದಾ ಜಾಗೃತವಾಗಿದೆ. ಅದೇ ಪುರುಷನು ಮಡಿ ಕೆಟ್ಟರೂ ತನ್ನ ಕುಲದ ಹೆಣ್ಣನ್ನು ವಿವಾಹ ಮಾಡಿಸಿ ಅದನ್ನು ಸರಿಪಡಿಸಿಕೊಳ್ಳುವ ಪ್ರಯತ್ನವಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿದಾಗ ದೊರೆತ ಮಾಹಿತಿಗಳು ಅಧ್ಯಯನ ಯೋಗ್ಯವಾಗಿವೆ. ಈ ಸಂಗತಿಗಳು ವಿವಾಹದ ಬಗೆಗಿನ ಮಹಿಳೆಯ ಅಭಿಪ್ರಾಯ ಮಾತ್ರವಾಗಿಲ್ಲ ಬದಲಿಗೆ ಆಯ್ಕೆ ಮತ್ತು ಸ್ವಾತಂತ್ರ್ಯವಿಲ್ಲದ ವಿವಾಹ ಬಗೆಗಿನ ಅಸಹನೆಯೂ ಆಗಿದೆ. ಕೆಲವು ಮಹಿಳೆಯರ ಮಾತಿನಲ್ಲಿಯೇ ಅದನ್ನು ಹೀಗೆ ದಾಖಲಿಸಲಾಗಿದೆ.

'ಗೋಕುಲಿದಾಗ ಬೇರೆ ಜಾತ್ಯಾಗೆ ಮದುವೆ ಮಾಡೋಲ್ಲ ಒಂದೂ ನಡದಿಲ್ಲ.'[7]

'ಎಷ್ಟು ಬೇಕೋ ಅಷ್ಟು ಓದ್ತಾರೆ 7-8 ಕ್ಲಾಸ್‌ಗೆ ಮದುವೆ ಮಾಡ್ತೀವಿ. ಸ್ಕೂಲುಗೋಗ ಮಕ್ಕಳು ಅಂಗೇ ಹೋಗ್ತಾರೆ ಅದ್ಕೆ ಬೇಗ ಮದ್ವೆ ಮಾಡ್ತೀವಿ[8]

'ಸಂಬಂಧ ಬಿಟ್ಹೋಗುತ್ತಲ್ಲ ಅಂತ ಮದುವೆ ಮಾಡ್ತಾರೆ ಹೇಳಿದ್ರೂ ಕೇಳಲ್ಲ' [9]

'ನಾನು 12-13 ವರ್ಷಕ್ಕೆ ಮದುವೆ ಆದೆ. ಹಿರಿಯರು ನೋಡಿ ಮಾಡಿದ್ರು' [10]

'ಚಿಕ್ಕ ಮಕ್ಕಳಿಗೆ ಮಾಡಿದ್ರು, ನಮ್ಮ ಇಷ್ಟದಂಗೆ ಅವರು ಬರಲ್ಲ ನಂಗೆ ಈಗ 35 ಅವರಿಗೆ 50. ಆಗಲ್ಲ ಅಂದ್ರೆ ಕಟ್ಟಗೇಲಿ ಹೊಯ್ತಾರೆ. ಸಂಬಂಧ ಹೋಗ್ತದೆ ಅಂತ ಮಾಡ್ತಾರೆ. ಈಗ ಎಸ್.ಎಸ್.ಎಲ್.ಸಿ ತಾಕ ಓದಿಸ್ತಾರೆ ಮದುವೆ ಮಾಡ್ತಾರೆ. ಈಕ ಇಲ್ಲೆ 9 ಕ್ಲಾಸ್ ಹುಡ್ಗೀಗೆ ಮದ್ವೆ ಮಾಡಿದ್ರು, ವರ್ಷಕ್ಕೆ ಹುಡುಗ ಸತ್ತ ಅವಳ ಬಾಳು ಹೆಂಗೆ?' [11]

'ಬಳಗ ಹೋಗ್ತದೆ ಅಂತ ಮದ್ವೆ ಮಾಡಿದ್ರ, 6 ಮಕ್ಕಳು ನಂಗೆ ಗಂಡಿಲ್ಲ ಅಣ್ಣನ ಮಗ್ಗೆ ಕೊಟ್ರು. ವಯಸ್ಸು ಹೋಗ್ತಿತ್ತು ಅಂತ ಮದ್ವೆ ಆಯ್ತು.'[12]

'ದೊಡ್ಡವರಾದ್ರೆ ವರ್ಷ ಆಗೋದ್ರೊಳ್ಗೆ ಸೋದರ ಮಾವನ ಕೈಲಿ ತಾಳಿ ಕಟ್ಟಿಸ್ತಾರೆ. ವಯಸ್ಸಾಗಿದ್ರೂ ಕೇಳಲ್ಲ. ಇಷ್ಟ ಇಲ್ಲ ಬಿಟ್ಟು ಬಂದ್ರೆ ಮನೆಲಿ ಊಟಹಾಕಲ್ಲ ಬಯ್ತಾರೆ. ಹೆಂಗೋ ಸುದಾರಿಸಿಕೊಂಡು ಸಂಸಾರನ ಮಾಡು ಅಂತಾರೆ.' [13]

'ಯೇಜಾಗಿರೋಗೆ ಕೊಟ್ಟು ಮದುವೆ ಮಾಡ್ತಾರೆ'. [14]

'ಗಂಡ ಸತ್ರೆ ಅಣ್ಣ-ತಮ್ಮಗಳಿದ್ರೆ ನೋಡ್ಕಂಬ್ತರೆ'. [15]

'ಕೆಟ್ಹೋದ್ರೇ ಅಂತ ಬೇಗ ಮಾಡ್ತಾರೆ. ಅಂದ್ರೆ ಲವ್-ಗಿವ್ ಮಾಡ್ತಾರಲ್ಲ ಅಂಬ್ರ.' [16]

'ನಮಗೆ ಇಷ್ಟ ಇಲ್ಲದಿದ್ರೂ ಮದುವೆ ಮಾಡ್ತಾರೆ. ಆಗಲ್ಲ ಅಂದ್ರೆ ಅವರೆ ಕರಕೊಂಡೋಗೆ ತಾಳಿ ಕಟ್ಟಿಸ್ತಾರೆ. ಅಪ್ಪಅಮ್ಮನೂ ಬಿಡಿಸ್ಕೊಂಬಲ್ಲ. ನಮ್ಮನೆ ನಮ್ಮುಡಗ್ರ ಅಂತ ಕಟ್ಟೆ ಮನೆಗೂ ಕೊಡೋಲ್ಲ.' [17]

'ನಂಗೆ ಮದುವೆ ಆಗಿ ವರ್ಷಕ್ಕೆ ಗಂಡ ಸತ್ತ ನಾ ಏನು ಮಾಡಬೇಕು? ಅಣ್ಣ ಮನೇಲಿ ಇದ್ದೀನಿ.'[18]

'ನಂಗೆ 5 ವರ್ಷದಾಗ್ಲೆ ಲಗ್ನ ಮಾಡಿದ್ರು' [19]

'ಇಕ ಈ ಹುಡುಗಿ ಅದ್ಯಲ್ಲ 9ನೇ ಕ್ಲಾಸ್ ಓದ್ತಾತೆ ಮದುವೆ ಮಾಡವರೆ. ಈ ಮಗೀನ ಮಾವನೋರು ಬೇರೆ ಕಡೆ ಮದುವೆ ಆಗ್ತಾರೆ ಅಂತ. ಈಯಮ್ಮ ಆವಾಗ ಏನಂಬ್ಲು ಅಪ್ಪ ಆಗಿದಾನೆ, ಒಗ್ಗಿದಾನೆ ನಾನು ಮಾಡ್ಕಳಲ್ಲ ಅಂತ. ಈ ಯಮ್ಮ ಅಪ್ಪ ಕುಡುಕ ಹುಡುಗ ಅಮ್ಮ ಅಜ್ಜಿಗೆ ವಯಸ್ಸಾಗದೆ ನೋಡೋರಿಲ್ಲ. ಹುಡುಗ ಬೆಂಗಳೂರಲ್ಲಿ ಕೆಲಸಕ್ಕೆ ಹೋಗ್ತಾವ್ನೆ. ಈಯಮ್ಮಗೇ ಈಗ್ಲೆ ಮಾಡ್ತೀಲಿಲ್ಲ. ಒಳ್ಳೆ ಅಂತಿದ್ಲು ಮಾಡಿದ್ವಿ, ಬೆಂಗಳೂರಿಗೆ ಹೆಚ್ಚು ಕಮ್ಮಿ ಆದ್ರೆ ಅಂತನೂ.'[20]

'ಹೆಂಗಾರ ಮದ್ವೆ ಮಾಡ್ತಾರೆ. ಅವರವರೆ ಚಚ್ಚಿಕೊಳ್ಳಲಿ ಅಂತ ಬಿಡ್ತಾರೆ. ನಮ್ಮ ಜೀವನ ಹಾಳಾದ್ರೆ ನಾವೇ ನೋಡ್ಕಬೇಕು. ಬೆಂಗಳೂರಾಗೆ ಬೇರೆ ಗಂಟಾಕಂದ್ರೆ ಅಂತ ಮಾಡ್ತಾರೆ ನಂಗೂ 17ಕ್ಕೆ ಮದ್ವೆ ಆಯ್ತು.'[21]

'ಕಲೆತು ಬಂದ್ರೆ ವಯಸ್ಸು ನೋಡಲ್ಲ ಮದ್ವೆ ಮಾಡ್ತೀವಿ.'[22]

"ಇದುವರ್ಗೆ ಬೇರೆ ಜಾತಿರೋರ್ಗೆ ಹೆಣ್ಣಂತೂ ಕೊಟ್ಟಿಲ್ಲ. ಗೊಲ್ಲಗಣ್ಯಾಗೆ ಆಗಬೇಕು" [23]

'ಮದುವೆ ಆಗೋತನಕ ದುಡೀತಾರೆ ಅವರು ದುಡಿದ ದುಡ್ಡಲ್ಲಿ ಮದುವೆ ಆಗ್ತಾರೆ'. [24]

'ಇನ್ನೊಂದು ಮದ್ವೇನಾ! ಗಂಡುಮಕ್ಕಳಿಗೆ ಮಾಡ್ತೀವಿ. ಹೆಣ್ಣಿಗೆ ಮಾಡಲ್ಲ ಗೋಕುಲದಾಗೆ ನಡೆಯಲ್ಲ'[25]

'ಓದೋಕೆ ಇಷ್ಟ, ಮದುವೆ ಆಗೋಕೆ ಇಷ್ಟ ಇಲ್ಲ. ಆದ್ರೆ ಮದುವೆ ಮಾಡ್ತೀವಿ ಅಂತಾರೆ'. [26]

'ಮೊದಲ ಊಟಾನೆ ಊಟ ಮೊದಲ ಮದುವೇನೆ ಮದುವೆ. ಗಂಡ್ಸು ಎಷ್ಟು ಜನ ಬೇಕಾದ್ರು ಮಾಡ್ಕಳ್ಳಿ. ಹೆಂಗ್ಸಿಗೆ ಇಲ್ಲ. ಗಂಡ ಸತ್ತೋರು ಹೆಸರಿಗೆ ಆಗಲ್ಲ ಇನ್ ಡೈರಕ್ಟಾಗಿ ಮಾಡ್ಕತ್ತಾರೆ.'[27]

'ಹೆಂಗ್ಸಗೆ ಗಂಡ ಸತ್ರೆ ಇನ್ನೊಂದಿಲ್ಲ. ಅಷ್ಟೆ ಅವಳ ಅದೃಷ್ಟ' [28]

ಕಾಡುಗೊಲ್ಲ ಮಹಿಳೆಯರ ಈ ಅಭಿಪ್ರಾಯಗಳು ವಿವಾಹ ಬಗೆಗಿನ ಹಲವು ವಿಚಾರಗಳನ್ನು ತೆರೆದಿಡುತ್ತವೆ. ಸಮಾಜದೊಳಗೆ ಜೀವಂತವಾಗಿರುವ ಬಾಲ್ಯವಿವಾಹ, ಬಲವಂತದ ವಿವಾಹ, ಆಯ್ಕೆ ರಹಿತ ವಿವಾಹ ವಯಸ್ಸಿನ ಅಂತರವುಳ್ಳ ವಿವಾಹ, ವಿಧವಾ ವಿವಾಹಕ್ಕೆ ಒಪ್ಪಿಗೆ ಇಲ್ಲದ ಸಂಗತಿಗಳನ್ನು ಇದರಿಂದ ತಿಳಿಯಬಹುದಾಗಿದೆ.

ಬಾಲ್ಯವಿವಾಹ ಕಾಡುಗೊಲ್ಲ ಮಹಿಳೆ ಬದುಕನ್ನು ಪ್ರಭಾವಿಸಿರುವ ಬಹುದೊಡ್ಡ ಸಂಗತಿ. ಶಿಕ್ಷಣ ಉದ್ಯೋಗ, ಸ್ವತಂತ್ರ ಬದುಕಿನ ಮಜಲುಗಳನ್ನು ಈ ಬಾಲ್ಯ ವಿವಾಹ ಮುರುಟಕಾಕಿದೆ. 1. ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ.' 18 ವರ್ಷದ ಬಾಲಕಿಯು ಮತ್ತು 21 ವರ್ಷದೊಳಗಿನ ಬಾಲಕ ಈ ವಿವಾಹಗಳಿಗೆ ಬೆಂಬಲಿಸುವವರೆಲ್ಲರ ಮೇಲೆ ಮೊಕದ್ದಮೆ ಹೂಡಲಾಗುವುದು. 2. ಬಾಲ್ಯ ವಿವಾಹಗಳಿಗೆ ಸಹಕರಿಸಿದ ಯಾರೇ ಆಗಲಿ ಅವರನ್ನು ಬಾಲ್ಯವಿವಾಹ ಕಾಯ್ದೆ 2006 ರಂತೆ ಶಿಕ್ಷಿಸಲಾಗುತ್ತದೆ. 3. ಬಾಲ್ಯ ವಿವಾಹಗಳನ್ನು ನಡೆಸುವುದು ಕಾನೂನು ಬಾಹಿರ. 4. ಬಾಲ್ಯ ವಿವಾಹ ಜಾಮೀನು ರಹಿತ ಹಾಗೂ ವಿಚಾರಣಾರ್ಹ ಅಪರಾಧವಾಗಿರುತ್ತದೆ. 5. 2 ವರ್ಷದವರೆಗೆ ಕಠಿಣ ಕಾರಾಗೃಹ ಅಥವಾ ರೂ. 1 ಲಕ್ಷದ ವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿರುತ್ತದೆ ಎಂಬ ಫಲಕಗಳನ್ನು ಬರೆದು ಎಚ್ಚರಿಸಿದರೂ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಶಿಶುವಿಹಾರದ ಅಂಗನವಾಡಿ ಕಾರ್ಯ ಕರ್ತೆಯರ ಮೂಲಕ ಜನರಿಗೆ ತಿಳಿಯ ಪಡಿಸುತ್ತಿದ್ದರೂ ಬಾಲ್ಯವಿವಾಹಗಳು ನಿಂತಿಲ್ಲ. ಇದುವರೆಗೂ ಯಾರಿಗೂ ಶಿಕ್ಷೆಯಾಗಿಲ್ಲ. ಕಾನೂನು ನಿಯಮಗಳು ಸಾಂಸ್ಕೃತಿಕ ಪರಿಸರದ ಮುಂದೆ ದೃಢವಾಗಿ ನಿಲ್ಲಲಾರವು. ಬಾಲ್ಯವಿವಾಹಗಳು ನಡೆದರೂ ಅದನ್ನು ಅಪರಾಧವೆಂದು ಪರಿಗಣಿಸಿ ಪ್ರಕರಣವನ್ನು ಪೋಲೀಸ್ ಮೆಟ್ಟಿಲೇರಿಸುವುದು ಸಾಧ್ಯವೇ ಇಲ್ಲ ಏಕೆಂದರೆ ಮದುವೆಯಾದ ಮೇಲೆ ನಮ್ಮುಡಗರು ಎಂದು ಸಮುದಾಯ ಒಪ್ಪಿಕೊಂಡಿರುತ್ತದೆ. ಇಷ್ಟವಿಲ್ಲದೆ ಮದುವೆಯಾದ ಹುಡುಗಿಯು ಅಪ್ರಾಪ್ತಳು, ಉನ್ನತ ಶಿಕ್ಷಣ ಇಲ್ಲದವಳು ಹಟ್ಟಿಯ ಆಚೆಗೆ ಪ್ರತಿಭಟಿಸಿ ಹೊರಬಂದು ಸ್ವತಂತ್ರ್ಯ ಜೀವನ ನಡೆಸಲು ಅಸಮರ್ಥಳು. ಅನಿವಾರ್ಯವಾಗಿ ಅಕೆಯೂ ತನ್ನ ವಿವಾಹವನ್ನು ತನ್ನ ಹಣೆಬರಹವೆಂದು ಒಪ್ಪಿಕೊಳ್ಳುತ್ತಾಳೆ. ಇಂತಹ ಸಂಧರ್ಭದಲ್ಲಿ ಕಾನೂನು ನಿರುತ್ತರವಾಗಬೇಕಾಗುತ್ತದೆ. ಈ ಸಮಾಜದಲ್ಲಿ ಬಾಲ್ಯವಿವಾಹಕ್ಕೆ ಕಾರಣಗಳನ್ನು ಹೀಗೆ ಗುರುತಿಸಬಹುದು.

1) ಉದ್ಯೋಗಕ್ಕೆ ವಲಸೆ ಹೋಗುತ್ತಿರುವ ಗಂಡು ಮಕ್ಕಳು ಅಂತರ್ಜಾತಿ ವಿವಾಹವಾಗದಂತೆ ತಡೆಯುವುದು.

2) ಹೆಣ್ಣಿನ ಸ್ವತಂತ್ರ ಆಯ್ಕೆಯ ಮದುವೆಯನ್ನು ನಿರಾಕರಿಸುವುದು

3) ಸೋದರ ಸಂಬಂಧ ಉಳಿಸಿಕೊಳ್ಳುವ ಬಯಕೆ.

4) ಓದಿದ ಹೆಣ್ಣು ಒಪ್ಪುವುದಿಲ್ಲ ಎಂದು ಆಕೆಯ ಬುದ್ಧಿ ಬಲಿಯುವ ಮುನ್ನವೇ ಮದುವೆ.

ಹಟ್ಟಿಯೊಳಗೆ ಸಮುದಾಯದ ಜೀವನವನ್ನು ಕಾಪಾಡಿಕೊಳ್ಳುವ ಬಯಕೆ ಮತ್ತು ರಕ್ತದ ಮಡಿವಂತಿಕೆ ಕಾಯುವ ಮೌಲ್ಯಗಳೆರಡೂ ಹೆಣ್ಣಿನ ಬಾಲ್ಯವಿವಾಹವನ್ನು ಇಂದಿಗೂ

ಪ್ರೋತ್ಸಾಹಿಸುತ್ತವೆ. ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಭೇಟಿಯಾದ 12 ರಿಂದ 80 ವರ್ಷದ ವರೆಗಿನ ಮಹಿಳೆಯವರೆಗೂ ತಮ್ಮ ವಿವಾಹದ ಬಗ್ಗೆ ಸಂತೃಪ್ತ ಹಾಗೂ ಸಂತೋಷವನ್ನು ಹೊಂದಿಲ್ಲ. ಬಾಲ್ಯವಿವಾಹ ಬಗ್ಗೆ ಅಸಹನೆಯು ವ್ಯಕ್ತವಾಗುತ್ತದೆ. ವಿವಾಹವು ಬಲವಂತವಾಗಿ ಒಪ್ಪಿಸುವ ಕಾರ್ಯವಾಗಿದೆ.ಇಷ್ಟವಿಲ್ಲದೆ ಮದುವೆಯಾಗಿ ಕಷ್ಟವೆಂದು ತೊರೆದು ಬಂದರೆ ಅಂತಹ ಹೆಣ್ಣಿಗೆ ಈ ಸಮಾಜ ಒಳಗೆ ಯಾವುದೇ ಗೌರವ ಪುರಸ್ಕಾರಗಳಿಲ್ಲ. ಈ ಅಪಮಾನ, ನಿಂದನೆಗಳಿಗೆ ಜೆದರಿಯಾದರೂ ಹೆಣ್ಣು ಮಕ್ಕಳು ವಿವಾಹ ಬಂಧನದಲ್ಲಿ ಮುಂದುವರಿಯುತ್ತಾರೆ.

ಈ ಬುಡಕಟ್ಟಿನ ಮಹಿಳೆಯನ್ನು ಕಾಡುವ ಮತ್ತೊಂದು ಸಮಸ್ಯೆ ಎಂದರೆ ಬಹುಪತ್ನಿತ್ವ. ಕಾಡುಗೊಲ್ಲ ಪುರುಷನು ಎರಡರಿಂದ ನಾಲ್ಕು ಮದುವೆಯಾಗಿರುವ ಉದಾಹರಣೆಗಳು ಸಿಗುತ್ತವೆ. ಆದರೆ ಇಲ್ಲಿ ಮಹಿಳೆಯು ಗಂಡ ದುಷ್ಟನಾದರೂ, ಸೋಮಾರಿಯಾದರೂ, ದುಶ್ಚಟಗಳ ದಾಸನಾದರೂ ಅವನನ್ನು ತೊರೆದು ಮತ್ತೊಂದು ಮದುವೆಯಾಗುವಂತಿಲ್ಲ. ಹೆಣ್ಣಿನ ಜೀವನದಲ್ಲಿ ಒಂದೇ ಮದುವೆ ಇಲ್ಲಿ ಅಘೋಷಿತ ನಿಯಮ. ಹೆಣ್ಣಿನ ವಿವಾಹೇತರ ಸಂಬಂಧ ಹಟ್ಟಿಯಲ್ಲಿ ಶಿಕ್ಷಾರ್ಹ ಅಪರಾಧ. ವಿಧವೆಯಾದರೂ ಆಕೆಗೆ ಮತ್ತೊಂದು ಮದುವೆ ಮಾಡುವಂತಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದದ್ದೆಂದರೆ60-80 ವರ್ಷದ ಹಿರಿಯ ಮಹಿಳೆಯರು ಮರು ಮದುವೆಯನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಆದರೆ 16-17-18-20 ವರ್ಷದ ಬಾಲವಿಧವೆಯರು ಮುಂದೇನು?ಎಂಬ ಪ್ರಶ್ನೆಯನ್ನು ಇಡುತ್ತಾರೆ. ಈ ಬಾಲ ವಿಧವೆಯರು ಮರುವಿವಾಹಕ್ಕೆ ಅಥವಾ ಹೊಸ ಜೀವನಕ್ಕಾಗೆ ಪರೋಕ್ಷವಾಗಿ ತಮ್ಮ ಬಯಕೆ ವ್ಯಕ್ತಪಡಿಸುತ್ತಾರೆ. ನೇರವಾಗಿ ತಮ್ಮ ಬಯಕೆ ಕನಸುಗಳನ್ನು ಹಂಚಿಕೊಳ್ಳುವ ಮುಕ್ತವಾತಾವರಣವೂ ಇಲ್ಲಿ ಇಲ್ಲ. ಗಂಡ ಸತ್ತರೆ ಅವರ ಬದುಕನ್ನು ಅವರೇ ನೋಡಿಕೊಳ್ಳಬೇಕು. ಗಂಡ ಸತ್ತರೂ ಶ್ರೀ ಕೃಷ್ಣನೇ ಗಂಡನೆಂದು ತೋರಿಸಿ ಅವರನ್ನು ವಂಚಿಸಲಾಗುತ್ತದೆ. ಯಾವ ಕೃಷ್ಣನೂ ಅವಳಿಗೆ ಲೌಕಿಕ ಗಂಡನ ಸಂಗಾತಿತನವನ್ನು ನೀಡಲಾರವು.

ವಿಧವೆಯರು, ವಿವಾಹೇತರ ಸಂಬಂಧ ಇಟ್ಟುಕೊಂಡರೆ ಅವರಿಗೆ ಶುದ್ಧೀಕರಣ ಸಂಸ್ಕಾರದಿಂದ ಹಟ್ಟಿಯೊಳಗೆ ಸೇರಿಸುತ್ತಾರೆ. ವಿಧುವೆಯು ತನ್ನ ಜಾತಿಯನ್ನು ಬಿಟ್ಟು ಅನ್ಯ ಜಾತಿಯ ಪುರುಷನೊಂದಿಗೆ ಸಂಬಂಧ ಇರಿಸಿಕೊಂಡರೆ ಅವಳನ್ನು ಹಳ್ಳಿಯಿಂದಲೇ ಹೊರ ಹಾಕಲಾಗುತ್ತದೆ. ಆದ್ದರಿಂದಾಗಿ ಕಾಡುಗೊಲ್ಲ ಮಹಿಳೆ ಮರುವಿವಾಹಕ್ಕೆ ಹಿಂಜರಿಯುತ್ತಾಳೆ. ಕಾಡುಗೊಲ್ಲ ಪುರುಷ ಹೆಂಡತಿ ಜೀವಂತ ಇರುವಾಗಲೇ ಮತ್ತೊಂದು ಮದುವೆಯಾಗಲು ಅವಕಾಶವಿದೆ. ಇಲ್ಲಿ ಹೆಂಡತಿಯ ವಿರೋಧಕ್ಕೆ ಬೆಲೆ ಇಲ್ಲ ಆಕೆಯೊಟ್ಟಿಗೆ ಸಹಜೀವನ ನಡೆಸಬೇಕು ಅಷ್ಟೇ. ಇಲ್ಲವೆ ಹೆಂಡತಿಯರಿಬ್ಬರೂ ಬೇರೆ ಬೇರೆ ಮನೆಯಲ್ಲಿ ವಾಸಿಸಬೇಕು. ಅದು ಶಿಕ್ಷಾರ್ಹವೆನಿಸಲ್ಲ. ಆದರೆ

ಮಹಿಳೆ ಗಂಡ ಬದುಕಿದ್ದಾಗಲೇ ಎರಡನೆ ಮದುವೆ ಇರಲಿ ಗಂಡ ಸತ್ತರೂ ಎರಡನೆ ಮದುವೆಗೆ ಅವಕಾಶ ನೀಡುವುದಿಲ್ಲ. ಇದು ಆಕೆಯ ಮೇಲೆ ಬದುಕಿನ ಒತ್ತಡವನ್ನು ಅತಿಯಾಗಿಸಿದೆ. ತನ್ನ ಹಣೆಬರಹ, ಕರ್ಮ ಎಂದುಕೊಳ್ಳುವ ಮೂಲಕ ಮಹಿಳೆಯರು ತಮ್ಮ ಸಮಾಧಾನವನ್ನು ತಾನೇ ಕಂಡುಕೊಂಡಿದ್ದಾರೆ.

ಬುಡಕಟ್ಟಿನಲ್ಲಿ ಮಹಿಳೆಯರಿಗೆ ತಾನು ವಿವಾಹವಾಗುವ ಪುರುಷನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಇಲ್ಲ. ಅದು ಹಿರಿಯರು ನಿರ್ಧರಿಸಿದ್ದು ಬಹುತೇಕ ಮಹಿಳೆಯರು ನೀಡುವ ಮಾಹಿತಿಯಂತೆ ಇಷ್ಟವಿಲ್ಲದಿದ್ದರೂ ಮದುವೆ ಮಾಡುತ್ತಾರೆ. ಒತ್ತಾಯದ ಮದುವೆ ಬುಡಕಟ್ಟಿನ ಅಸಂತೋಷಕ್ಕೆ ಕಾರಣವಾಗಿರುವ ಮತ್ತೊಂದು ಮುಖ್ಯ ಸಂಗತಿಯಾಗಿದೆ. ಅಷ್ಟೇ ಅಲ್ಲ ವಯಸ್ಸಿನ ಅಂತರವುಳ್ಳ ಮದುವೆಗಳೂ ಇಲ್ಲಿ ವ್ಯಾಪಕವಾಗಿದ್ದು ಸಂಬಂಧ ಬಿಟ್ಟು ಹೋಗುತ್ತದೆ ಅಂತಲೂ, ಆಸ್ತಿ ತಮ್ಮಲ್ಲೇ ಉಳಿಯಲಿ ಎಂದೂ 12-13ರಿಂದ 18 ವರ್ಷದ ಹೆಣ್ಣುಮಕ್ಕಳನ್ನು 40-45-50 ವರ್ಷವಾಗಿರುವ ಸಂಬಂಧಿಕರಿಗೆ ಕೊಟ್ಟು ವಿವಾಹ ಮಾಡುತ್ತಾರೆ. ಈ ವಿವಾಹವು ಆಕೆಯ ಆಯ್ಕೆಯ ಬದುಕನ್ನು ಬಲವಂತವಾಗಿ ಹತ್ತಿಕ್ಕುತ್ತವೆ. ಅವಳು ಪ್ರಾಪ್ತ ವಯಸ್ಕಳಾಗುವ ಹೊತ್ತಿಗೆ ಆಕೆಯ ಗಂಡ ಮೂಲೆ ಸೇರಿರುತ್ತಾನೆ ಇಲ್ಲವೇ ಮರಣ ಹೊಂದಿರುತ್ತಾನೆ. ಇಂತಹ ಸಂಧರ್ಭದಲ್ಲಿ ಮನೆಯ ಜವಾಬ್ದಾರಿ ವಹಿಸಿಕೊಂಡು ದುಡಿಮೆಯನ್ನು ಮಾಡಿ ಸಾಕಬೇಕಾದ ಹೊಣೆಗಾರಿಗೆ ಅವಳ ಹೆಗಲೇರುತ್ತದೆ. ಮಕ್ಕಳು, ಗಂಡ, ಸಂಸಾರ, ದುಡಿಮೆ ಇಷ್ಟನ್ನು ಅವಳು ಏಕಾಂಗಿಯಾಗಿ ನಿರ್ವಹಿಸಬೇಕಾಗುತ್ತೆ. 30 ವರ್ಷಕ್ಕೆ ತಾನು ಮುದುಕಿ ಎಂದು ಭಾವಿಸಿರುವ ಹೆಣ್ಣು ಮಕ್ಕಳನ್ನು ನಾನು ಈ ಸಂಧರ್ಭದಲ್ಲಿ ಭೇಟಿ ಮಾಡಿದ್ದೇನೆ. ವಯಸ್ಸಿನಲ್ಲಿರುವಾಗಲೇ ಈ ಜೇಡದ ಹೊಣೆಗಾರಿಕೆ ವಯಸ್ಸಿನ ಮುದಿತನಕ್ಕಿಂತ ಮನಸ್ಸಿನ ಮುದಿತನವನ್ನು ಹೆಚ್ಚಿಸಿದೆ.

ಮುತ್ತೈದೆತನ ಇಲ್ಲಿನ ಮಹಿಳೆಯರ ಸಕಲ ಸೌಭಾಗ್ಯವು ಆಗಿದೆ. ಶ್ರೀಕೃಷ್ಣನನ್ನೇ ಗಂಡನಾಗಿ ಪಡೆಯುವ ವಿಧವೆಯರಿಗೂ ಇಲ್ಲಿನ ಸಂಪ್ರದಾಯದಲ್ಲಿ ಬೆಲೆಯಿಲ್ಲ. ಹೆಣ್ಣಿನ ಸ್ಥಾನ ಮಾನಗಳು ಪ್ರಾಪ್ತವಾಗುವುದು ಆಕೆಯ ಪತಿಯಿಂದ. ಇದಕ್ಕೆ ಪೂರಕವಾಗಿ ಚಳ್ಳಕೆರೆ ಗೊಲ್ಲರ ಹಟ್ಟಿ ಸಿರಿಯಜ್ಜಿ ಹಾಡಿರುವ ಗೀತೆಗಳನ್ನು ಇಲ್ಲಿ ಗಮನಿಸಬಹುದು.[29]

ಗಂಡಾಸಿಲ್ಲದ ಗಂಬೀರೆಯ ನೋಡೀರಿ
ಗಂದಾರ ಬಾವಿಯವಳ ಮುನಿಮುಂದೆ
ಗಂದಾರ ಬಾವಿಯಳ ಮನಿಮುಂದೆ ಕಾಡಮ್ಮ
ಗಂಡ ನಿದ್ದರೆನ್ನೆಷ್ಟು ಮೆರೆದಿಯೆ

ಮರಸಾ ಇಲ್ಲದೋಳ ಸರಸಾನ ನೋಡಲಿ
ಅರಿಸಣದ ಬಾಪಿಯವಳ ಮನಿಮುಂದ
ಅರಿಸಿಣದ ಬಾಪಿಯವಳ ಮನೆ ಮುಂದೆ ಕಾಡಮ್ಮ
ಪುರುಷನಿದ್ದರೆಷ್ಟು ಮೆರದೀಯ

ಮುತ್ತು ಕೊಡುತೀನಿ ಮಾಣಿಕವ ಕೊಡುತಿನಿ
ಮತ್ತೆ ಭಾಗ್ಯವ ಕೊಡುತಿನಿ
ಮತ್ತೆ ಭಾಗ್ಯವ ಕೊಡುತಿನಿ ಅಪ್ಪಗಳು
ಮುತ್ತೈದೆ ತನವ ಉಳುವರೋ

ಮೇಲಿನ ಪದ್ಯಗಳು ಗಂಡನಿಲ್ಲದಿದ್ದರೆ ಬುಡಕಟ್ಟಿನೊಳಗೆ ಮಹಿಳೆಯರಿಗೆ ಅಸಹನೀಯವಾದ ಬದುಕಿನ ಬಗ್ಗೆ ಹೇಳುತ್ತವೆ. ಆದ್ದರಿಂದ ತನ್ನ ಮುತ್ತೈದನದ ಭಾಗ್ಯಕ್ಕಾಗಿ ಬೇಡುತ್ತಾಳೆ. ವಿಧವೆಯಾಚರಣೆ ಇಲ್ಲದ ಈ ಬುಡಕಟ್ಟು ಪ್ರಗತಿಪರವಾಗಿದಿದ್ದರೆ ಮಹಿಳೆಯರು ಮುತ್ತೈದೆತನಕ್ಕಾಗಿ ಹಲುಬುತ್ತಿರಲಿಲ್ಲ. ಗಂಡ ಸತ್ತರೆ ಶ್ರೀಕೃಷ್ಣನೇ ಗಂಡ ಎಂದು ತೋರಿಸುವ ವಂಚನಾ ಸಂಪ್ರದಾಯವನ್ನು ಈ ಬುಡಕಟ್ಟು ಕೈಬಿಡಬೇಕಿದೆ. ಇಲ್ಲದಿದ್ದರೆ ಮುಂದೆ ನಡೆಯಲಿರುವ ಅನರ್ಥಗಳ ಹೊಣೆಯನ್ನು ಹೊರಬೇಕಾಗುತ್ತದೆ.

ದ್ವಿಪತ್ನಿತ್ವ ಬುಡಕಟ್ಟಿನ ಮಹಿಳೆಯರ ಬದುಕಿಗೆ ಎರವಾಗಿರುವ ಮತ್ತೊಂದು ಸಂಗತಿಯಾಗಿದೆ. ಬುಡಕಟ್ಟಿನೊಳಗೆ ಕೃಷಿ ಅವಲಂಬನೆಯು ವಿರಳವಾಗಿದೆ. ಕೃಷಿ ಸಮಾಜವಾಗಿದ್ದರೆ ಕೆಲಸದ ಹೊರೆ ತಗ್ಗಿಸಿಕೊಳ್ಳಲು ದ್ವಿಪತ್ನಿತ್ವವನ್ನು ಸ್ವಾಗತಿಸುತ್ತಿದ್ದರು. ಇವರ ವೃತ್ತಿ ಬಹುತೇಕ ಕುರಿ ವ್ಯಾಪಾರ, ಕೂಲಿ ಯಾಗಿರುವುದರಿಂದ ದ್ವಿಪತ್ನಿತ್ವ ಕುಟುಂಬದ ಆರ್ಥಿಕ ಹೊರೆಯನ್ನು ಹೆಚ್ಚಿಸಿ ಮಹಿಳೆಯರು ಕಷ್ಟಪಡುವಂತಾಗಿದೆ. ಚಳ್ಳಕೆರೆ ಗೊಲ್ಲರ ಹಟ್ಟಿ ಸಿರಿಯಜ್ಜಿ ಹಾಡಿರುವ ಗಂಗೆ ಗೌರಿ ಗೀತೆಯಲ್ಲಿ ಶಿವನ ಮಡದಿಯಾದ ಗೌರಮ್ಮ ಶಿವನು ಎರಡನೇ ವಿವಾಹವಾದ ವಿಷಯ ತಿಳಿದು ಕೋಪದಿಂದ ಕುದಿಯುತ್ತಾಳೆ ಆ ಸಮಯದಲ್ಲಿ ತನ್ನ ಮಗನಿಗೆ ಹೀಗೆ ಹೇಳುತ್ತಾಳೆ.

ಇಲ್ಲಿ ಬಾರೋ ಈರಣ್ಣ ನಾನೊಂದು ಹೇಳೇನು
ಆಲಾದ ಕೊನಿಯ ಕಡುತಾರೋ-ನಿಮ್ಮಪ್ಪ
ಮೋವಾದ ಹೆಂಡತಿಯ ತರುಲ್ಹೋದ[30]

ಹಾಗಿದ್ದರೂ ಇನ್ನೊಂದು ಹೆಣ್ಣನ್ನು ಶಿವ ಮದುವೆಯಾಗುವುದನ್ನು ಗೌರಮ್ಮ ವಿರೋಧಿಸುತ್ತಾಳೆ. ಇದು ಆಕೆಯ ಅಸ್ತಿತ್ವದ ಪ್ರಶ್ನೆಯಾಗಿದೆ. ಆದರೆ ತನ್ನ ಕೋಪವನ್ನು ಗಂಡನ ಮೇಲೆ ತೋರಿಸಲು ಅಸಹಾಯಕಳು. ಏಕೆಂದರೆ ಬುಡಕಟ್ಟಿನಲ್ಲಿ ಪುರುಷನಿಗೆ ಎರಡನೇ ಮದುವೆಯಾಗುವ ಮುಕ್ತ ಅವಕಾಶವಿದೆ. ಮಹಿಳೆಯರಿಗಿಲ್ಲವಷ್ಟೇ. ಹಾಗಾಗಿ ಗಂಗೆ ತನ್ನ ಕೋಪವನ್ನು ಮುನಿಸಿನ ಮೂಲಕ ವ್ಯಕ್ತಪಡಿಸುತ್ತಾಳೆ.

ಅಗಣಿ ತಗಿಯಾಕೆ ನಾನು ಒಬ್ಬಾಳಿಲ್ಲ
ದೊರಿಮಾಗ ಈರಣ್ಣ ತೊಡಿಮ್ಯಾಲೆ-ಐದಾನೆ
ಹೋಗಯ್ಯ ಸೂಳೇರರಮನಿಗೆ.

ಗೌರಿಯ ಈ ಮಾತುಗಳು ಗಂಡಿನ ಎರಡನೇ ವಿವಾಹವನ್ನು ಅಕ್ರಮ, ಅನೈತಿಕವೆಂದು ಭಾವಿಸುವಂತಿದೆ. ಪ್ರಸ್ತುತ ವರ್ತಮಾನದ ಮಹಿಳೆಯರಲ್ಲೂ ಕಾಡುಗೊಲ್ಲ ಪುರುಷರಿಗಿರುವ ಬಹುವಿವಾಹದ ಅವಕಾಶದ ಬಗ್ಗೆ ಇಂಥ ಅಭಿಪ್ರಾಯಗಳಿರುವುದು ಸುಳ್ಳಲ್ಲ.

ಕುಟುಂಬ

ಕಾಡುಗೊಲ್ಲ ಬುಡಕಟ್ಟು ಸಮುದಾಯ ಬದುಕಿಗೆ ಆಧ್ಯತೆ ನೀಡಿದೆ. ಇಡೀ ಬುಡಕಟ್ಟು ಒಂದೇ ಕುಟುಂಬದಂತೆ ಗೋಚರಿಸುತ್ತದೆ. ಒಂದೇ ಸೂರಿನಡಿ ವಾಸಿಸುವ ಮೂರು ತಲೆಮಾರುಗಳ ಬಹುಸಂಖ್ಯಾತರನ್ನು ಹೊಂದಿರುವ ಅವಿಭಕ್ತ ಕುಟುಂಬಗಳು ಅಪರೂಪ. ವಾಸಿಸುವ ಮನೆ, ಗುಡಿಸಲು ಚಿಕ್ಕದಾಗಿರಲು ಕಾರಣ ವೃತ್ತಿಯ ಕಾರಣದಿಂದ ಸಣ್ಣ ಕುಟುಂಬಗಳ ಸಂಖ್ಯೆ ಹೆಚ್ಚಿದೆ ಆದರೆ, ಹಲವು ತಲೆಮಾರುಗಳು ತಮ್ಮ ಮೂರಕ್ಕಿಂತ ಹೆಚ್ಚು ತಲೆಮಾರುಗಳ ಜನರು ಒಂದೇ ಹಟ್ಟಿಯಲ್ಲಿ ಒಂದೇ ಕುಟುಂಬದಂತೆ ವಾಸಿಸುತ್ತಾರೆ. ಹಟ್ಟಿಯಲ್ಲಿ ಅನ್ಯ ಜಾತಿಯವರು ವಾಸಿಸುವಂತಿಲ್ಲ. ಬಂದು ಬಳಗ ಸೋದರ ಸಂಬಂಧಗಳ ಒಂದೇ ಹಟ್ಟಿಯೊಳಗೆ ವಾಸಿಸುವ ಪದ್ಧತಿಯಿದೆ. ಅಪರೂಪಕ್ಕೆ ಬೇರೆ ಹಟ್ಟಿಗಳಲ್ಲಿ ಸಂಬಂಧಿಕರನ್ನು ಹೊಂದಿರುತ್ತಾರೆ.

ಕಾಡುಗೊಲ್ಲ ಬುಡಕಟ್ಟಿನ ಸಮಾಜದಲ್ಲಿ ಕುಟುಂಬದ ಅಂತಃಶಕ್ತಿಯಾಗಿ ಕಾಣುವುದು ಇಲ್ಲಿನ ಮಹಿಳೆಯರು. ಕುಟುಂಬದ ಪುರುಷ ವೃತ್ತಿಯ ಕಾರಣದಿಂದ ವಲಸೆ ಹೋದಾಗ, ಬೇಸಾಯಕ್ಕೆ ತೆರಳಿದಾಗ ಕುಟುಂಬ ವ್ಯವಸ್ಥೆಯನ್ನು ಉಳಿಸಿ ಪೋಷಿಸುತ್ತಿರುವವರು ಈ ಮಹಿಳೆಯರು.ಇಂದಿಗೂ

ಇಲ್ಲಿನ ಕುಟುಂಬಗಳಲ್ಲಿ ವ್ಯವಸ್ಥಿತ ಸಮುದಾಯ ಜೀವನ ಸಾಧ್ಯವಾಗಿರುವುದು ಈ ಮಹಿಳೆಯರ ಕಾರಣದಿಂದ.

ಕುಟುಂಬ ಕಾಡುಗೊಲ್ಲ ಮಹಿಳೆಯ ಕೇಂದ್ರ ಘಟಕ. ಆಕೆಯ ಬದುಕು ಅರಳುವುದು, ಬೆಳೆಯುವುದು, ಬಾಳುವುದು ಈ ಮೂಲಕವೇ. ಆದರೂ ಇದು ಆವರಿಗೆ ಕುಟುಂಬ ಸ್ವತಂತ್ರ್ಯ ಅಸ್ತಿತ್ವವನ್ನು ಕೊಟ್ಟಿಲ್ಲ. ಕುಟುಂಬವು ಆಕೆಯ ನಡಿಗೆಯ ಗಡಿಯನ್ನು ನಿಯಂತ್ರಿಸುತ್ತದೆ. ಕುಟುಂಬದೊಳಗೆ ಈ ಮಹಿಳಾ ಬದುಕಿನ ಅರಿವಿನ ಎಲ್ಲೆಗಳ ಮಿತಿಯು ಅವರ ಬದುಕಿನ ಮಿತಿಯೂ ಆಗಿದೆ. ಕಾಡುಗೊಲ್ಲರ ಕುಟುಂಬದಲ್ಲಿ ಮಹಿಳೆ ಹೆಣ್ಣಾಗಿ, ಮಗಳಾಗಿ ಹೆಂಡತಿ ತಾಯಿಯಾಗಿ ಕುಟುಂಬದ ಆಧಾರ ಶಕ್ತಿಯಾಗಿ ಕಂಗೊಳಿಸುತ್ತಾಳೆ. ಕುಟುಂಬದ ನಿರ್ವಹಣೆಯ ಜೊತೆಗೆ ದುಡಿಮೆಗೆ ಹೋಗುವುದು ಮಹಿಳೆಯರ ಬದುಕಿನ ಭಾಗವೇ ಆಗಿದೆ ಆದ್ದರಿಂದ ದುಡಿಮೆಯು ಅವರಿಗೆ ಆಯ್ಕೆಯಲ್ಲ ಅನಿವಾರ್ಯವಾಗಿದೆ. ದುಡಿದರೂ ಕುಂಟುಂಬದಲ್ಲಿ ಯಾವ ಅಧಿಕಾರವನ್ನು ಹೊಂದದೆ ಕುಟುಂಬದೊಳಗೆ ತನಗಿರುವ ಎರಡನೇ ದರ್ಜೆಯ ಸ್ಥಾನವನ್ನು ಪ್ರಶ್ನೆ ಮಾಡದೆ ಒಪ್ಪಿಕೊಳ್ಳುತ್ತಾಳೆ. ಕುಟುಂಬವನ್ನು ಹೊರತು ಪಡಿಸಿ, ಸಮುದಾಯವನ್ನು ಹೊರತು ಪಡಿಸಿ, ಮಹಿಳೆಗೆ ಬದುಕುವ ಸಾಮಥ್ಯಗಳಿದ್ದರೂ ಬುಡಕಟ್ಟು ಅಂತಹ ಬೆಳವಣಿಗೆಗೆ ಅವಕಾಶ ನೀಡುವುದಿಲ್ಲ. ಆ ಸಾಮರ್ಥ್ಯಗಳನ್ನು ಅರಿಯುವ ಭೌದ್ಧಿಕ ಮಾಧ್ಯಮಗಳನ್ನು ಅದು ಅವರಿಗೆ ನಿಷೇಧಿಸುತ್ತದೆ.

ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯು ಈ ಸಮಾಜದಲ್ಲಿ ತನ್ನನ್ನು ತೆರೆದುಕೊಳ್ಳುವುದು ಕೌಟುಂಬಿಕ ಜೀವನದ ಮೂಲಕವೇ. ಹುಟ್ಟುವ ಪ್ರತಿ ಹೆಣ್ಣು ತಂದೆ ತಾಯಿ ಪೋಷಕರ ಜೊತೆ ತಮ್ಮ ಮದುವೆಯಾದ ನಂತರ ಗಂಡ ನಂತರ ಮಕ್ಕಳೊಟ್ಟಿಗೆ ಜೀವಿಸುತ್ತಾಳೆ. ಎಂದಿಗೂ ಆಕೆ ಒಂಟಿಯಾಗಿ, ಅನಾಥವಾಗಿ, ಸ್ವತಂತ್ರಳಾಗಿ ಬದುಕುವುದಿಲ್ಲ. ಈ ಓಂದೆ ಪ್ರಸ್ತಾಪಿಸಿದಂತೆ ಹಟ್ಟಿಯೇ ಒಂದು ಕುಟುಂಬವಾಗಿರುವುದರಿಂದ ಇಲ್ಲಿನ ಮಹಿಳೆಯನ್ನು ಹಟ್ಟಿಯ ಸಮುದಾಯವು ತನ್ನ ರಕ್ಷಣೆಯಲ್ಲಿಡಬಯಸುತ್ತದೆ.

ಪಿತೃ ಪ್ರಧಾನ ವ್ಯವಸ್ಥೆಯನ್ನು ಹೊಂದಿರುವ ಈ ಬುಡಕಟ್ಟಿನಲ್ಲಿ ಕುಟುಂಬದ ಅಧಿಕಾರ ಮನೆಯ ಯಜಮಾನನದ್ದಾಗಿರುತ್ತದೆ. ಯಜಮಾನನಿಲ್ಲದಿದ್ದಲ್ಲಿ ಹಿರಿಯ ಗಂಡು ಮಕ್ಕಳು ವಹಿಸಿಕೊಳ್ಳುತ್ತಾರೆ. ತಾಯಿ ಮುಖ್ಯಸ್ಥಳಾದರೂ ಹೆಚ್ಚಿನ ಅಧಿಕಾರ ಸ್ವಾತಂತ್ರ್ಯಗಳು ಇರುವುದಿಲ್ಲ. ಈ ಮಹಿಳೆಯರು ಪರಾವಲಂಬಿಗಳಲ್ಲ ಬಹುತೇಕ ಮಹಿಳೆಯರ ದುಡಿಮೆಯನ್ನು ಮಾಡಲೇಬೇಕಾದ ಅನಿವಾರ್ಯತೆ ಇದೆ.ಈ ದುಡಿಮೆಯಿಂದ ಆಕೆಗೆ ಬರುವ ಹಣ ಆರ್ಥಿಕ ಸ್ವಾತಂತ್ರ್ಯವನ್ನು, ಬೌದ್ಧಿಕ ಅಸ್ತಿತ್ವವನ್ನು ನೀಡಿಲ್ಲ. ಇಲ್ಲಿ ಆಕೆಯ ದುಡಿಮೆ ಪರಿಗಣಿಸಲ್ಪಡುವುದು ಕುಟುಂಬದ ಆರ್ಥಿಕತೆಯ ಒಂದು

ಭಾಗವಾಗಿ. ಈ ಬುಡಕಟ್ಟಿನ ಮಹಿಳೆಯರನ್ನು ಪೋಷಿಸುವ ಹೊಣೆಗಾರಿಕೆ ಪುರುಷನದಾಗಿರುತ್ತದೆ. ಆದರೆ ಕ್ಷೇತ್ರಕಾರ್ಯದಿಂದ ದೊರೆತ ಮಾಹಿತಿಯನ್ನು ವಿವೇಚಿಸಿದರೆ ಕುಟುಂಬವನ್ನು ಪೋಷಿಸುತ್ತಿರುವುದು ಬಹುಪಾಲು ಮಹಿಳೆಯರೇ ಆಗಿರುತ್ತಾರೆ.

ಕಾಡುಗೊಲ್ಲ ಮಹಿಳೆಯು ಕುಟುಂಬ ಕೇಂದ್ರಿತ ಬದುಕು ಆಕೆಯ ಜೀವನ ಆಲೋಚನೆ ಆಕೆ ಬಯಕೆಗಳು, ಉದ್ದೇಶ, ತಮ್ಮ ಸಾಧನೆ, ಗುರಿ ಎಲ್ಲವೂ ಕುಟುಂಬವೇ ಆಗಿರುತ್ತದೆ. ಕುಟುಂಬದೊಳಗೆ ಮನೆಯೊಳಗೆ ಹೆಂಡತಿಯಾಗಿ ತಾಯಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಾಳೆ. ಈ ಬುಡಕಟ್ಟು ಮಗಳು, ಹೆಂಡತಿ, ತಾಯಿಯು ಹೇಗಿರಬೇಕೆಂದು ನಿಯಮಗಳನ್ನು ರೂಪಿಸಿದೆ. ಅದರಂತೆ ಇಲ್ಲಿ ಮಹಿಳೆಯರು ಬದುಕುತ್ತಾರೆ. ಈ ನಿಯಮಗಳು ಪುರುಷ ಪ್ರಧಾನತೆಯನ್ನು, ಹೆಣ್ಣಿನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿರುವುದನ್ನು ಎತ್ತಿ ಹಿಡಿಯುತ್ತದೆ. ಹೆಣ್ಣು ಗೊಲ್ಲಗೋಣೆಯೊಳಗೆ ಹುಟ್ಟಿದ ಮೇಲೆ ಕಿರುಪಿನ ಬೇಲಿಯೊಳಗೆ ಇರಬೇಕು. ಏಕಪತ್ನಿತ್ವ, ಮಾತೃತ್ವ ಇಲ್ಲಿನ ಮಹಿಳೆಯರ ಕೌಟುಂಬಿಕ ಜೀವನವಾಗಿದೆ.

ಈ ಕುಟುಂಬದಲ್ಲಿ ಮಹಿಳೆಯರಿಗೆ ಎರಡು ಕಾರಣಗಳಿಗೆ ಮುಖ್ಯ ಸ್ಥಾನವಿದೆ 1) ಸಂತಾನೋತ್ಪತ್ತಿ 2) ಮಾತೃತ್ವ

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳೆ ಗುರುತಿಸಿಕೊಳ್ಳುವುದು ಆಕೆಗಿರುವ ಸಂತಾನೋತ್ಪತ್ತಿಯ ಶಕ್ತಿಯ ಕಾರಣದಿಂದ. ಸಂತಾನೋತ್ಪತ್ತಿಯ ಶಕ್ತಿ ಇಲ್ಲದ ಹೆಣ್ಣು ಇಲ್ಲಿ ಯಾವುದೇ ಬೆಲೆಯನ್ನು ಹೊಂದುವುದಿಲ್ಲ. ಜುಂಜಪ್ಪನ ಕಾವ್ಯದಲ್ಲಿ ಜುಂಜಪ್ಪನ ತಾಯಿ ಚಿನ್ನಮ್ಮ ಮಕ್ಕಳಿಲ್ಲದ ಕಾರಣಕ್ಕೆ ಆತ್ಮಹತ್ಯೆಗೆ ಪ್ರಯತ್ನಿಸುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ಸಂತಾನೋತ್ಪತ್ತಿಯ ಶಕ್ತಿ ಹೀನತೆಯು ಬಹುಪತ್ನಿತ್ವಕ್ಕೆ ಕಾರಣವಾಗಬಲ್ಲದು. ಮಹಿಳೆಗಿರುವ ಈ ಶಕ್ತಿಯು ಕುಟುಂಬದಲ್ಲಿ ಆಕೆಗೆ ಗೌರವವನ್ನು ಮತ್ತು ಮುಖ್ಯ ಸ್ಥಾನವನ್ನು ನೀಡುತ್ತದೆ. ಆದರೆ ಈ ಮುಖ್ಯ ಸ್ಥಾನ ಅಧಿಕಾರದ ನೆಲೆಯಿಂದ ಬಂದುದಲ್ಲವೆಂಬುದು ಸ್ಪಷ್ಟ.

ಸ್ತ್ರೀಯರ ಸಂತಾನೋತ್ಪತ್ತಿಗೆ ಮೂಲಭೂತ ಕಾರಣಗಳು ಋತುಚಕ್ರ, ಹೆರಿಗೆ. ಇವು ಇಲ್ಲಿನ ಸ್ತ್ರೀಯ ಸ್ಥಾನಮಾನವನ್ನು ಎತ್ತರಿಸುವ ಬದಲು ಕೆಳಗೆ ತಳ್ಳಿವೆ. . ಋತುಚಕ್ರ, ಮಾಸಿಕ ಋತುಚಕ್ರ, ಹೆರಿಗೆ ಮೈಲಿಗೆಯ ಆಚರಣೆಗಳಾಗಿವೆ. ಈ ಸಂದರ್ಭದಲ್ಲಿ ಮಹಿಳೆಯರು ಸೂತಕ ಕಳೆದುಕೊಳ್ಳುವವರೆಗೂ ಹಟ್ಟಿಯ ಆಚೆಗೆ ಇರಬೇಕಾಗುತ್ತದೆ. ಕುಟುಂಬದ ಏಳಿಗೆಯನ್ನು ತನ್ನ ಸಂತಾನೋತ್ಪತ್ತಿಯ ಶಕ್ತಿಯ ಮೂಲಕ ಮುಂದುವರೆಸುವ ಹೆಣ್ಣನ್ನು ಬುಡಕಟ್ಟಿನೊಳಗೆ ಸೂತಕ, ಮೈಲಿಗೆ ಎಂದು ಕರೆಯಲಾಗಿದೆ. ಸಂತಾನೋತ್ಪತ್ತಿ ಋತುಚಕ್ರದ ಬಗೆಗಿನ ಭಯ, ಗ್ರಹಿಕೆ ಕೊರತೆ

ಇಂತಹ ಪ್ಪೈಲಿಗೆ ಎಂಬ ಆತಂಕಗಳಿಗೆ ಕಾರಣವಾಗಿದ್ದಿರಬಹುದು. ಸಂತಾನೋತ್ಪತ್ತಿ, ಹೆರಿಗೆ, ಋತುಚಕ್ರವು ಇಲ್ಲಿನ ಮಹಿಳೆಯ ಬದುಕಿನ ಹಲವು ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸಿದೆ ಅವುಗಳಲ್ಲಿ ಶಿಕ್ಷಣ, ಪ್ರತಿಷ್ಠಿತ ಉದ್ಯೋಗ, ಮುಕ್ತವಾಗಿ ಓಡಾಡುವಿಕೆ ಸ್ವಾತಂತ್ರ್ಯ ಇಲ್ಲದಿರುವಿಕೆಯನ್ನು ಮುಖ್ಯವಾಗಿ ಗುರುತಿಸಬಹುದು.

ಈ ಕುಟುಂಬದಲ್ಲಿ ಮಹಿಳೆಯ ಬೌದ್ಧಿಕ ಅಸ್ತಿತ್ವಕ್ಕಿಂತ ಆಕೆಯ ದೈಹಿಕ ಅಸ್ತಿತ್ವ ಮುಖ್ಯವಾಗಿದೆ. ದುಡಿಮೆ ಮುಖ್ಯವಾಗುತ್ತದೆ, ಹಾಗೆಂದು ಇಲ್ಲಿನ ಮಹಿಳೆಯರು ದಡ್ಡರೆಂದು ಬುದ್ಧಿಹೀನರು, ಅನಕ್ಷರೆಂದು ಗುರುತಿಸುವದಕ್ಕೆ ಸಾಧ್ಯವಿಲ್ಲ. ಏಕೆಂದರೆ ಉನ್ನತ ಶಿಕ್ಷಣವಿಲ್ಲದಿದ್ದರೂ ಇವರು ಬದುಕನ್ನು ನಡೆಸುವ ಪರಿಣಿತರು. ಬದುಕಿನ ಕಷ್ಟಗಳಿಗೆ ಬೆನ್ನು ಮಾಡದವರು. ಎಲ್ಲವನ್ನು ಆತ್ಮವಿಶ್ವಾಸದಿಂದ ನಡೆಸುವ ಧೈರ್ಯವಂತರು. ಆದರೆ ಎಂದೂ ತಮ್ಮ ಅಸ್ತಿತ್ವಕ್ಕಾಗಿ ತಮ್ಮ ಸಮುದಾಯವನ್ನು ಎದುರು ಹಾಕಿಕೊಳ್ಳುವ ಬುದ್ಧಿವಂತರಲ್ಲ, ವಿಚಾರವಂತರಲ್ಲ ತಮ್ಮ ಬದುಕೆಂದರೆ ತಮ್ಮ ಕುಟುಂಬ ಗೊಲ್ಲಗೇಣಿ ಎಂದು ಭಾವಿಸಿಕೊಂಡು ಬದುಕುತ್ತಿರುವವರು. ಹೆರಿಗೆ, ಸಂತಾನೋತ್ಪತ್ತಿ ಮಕ್ಕಳ ಪಾಲನೆ ಪೋಷಣೆ ಆಚೆಗೆ ತಮ್ಮದೊಂದು ಬದುಕು ಇದೆ ಎಂದು ಅರಿವು ಇಲ್ಲದವರು ಇವರು.

ಕುಟುಂಬದಲ್ಲಿ ಸಂತಾನೋತ್ಪತ್ತಿಯ ಕಾರಣದಿಂದ ಮಾತೃತ್ವದ ಹೊಣೆಗಾರಿಕೆಯನ್ನು ಮಹಿಳೆ ನಿರ್ವಹಿಸುತ್ತಾಳೆ ಮಕ್ಕಳ ಲಾಲನೆ ಪಾಲನೆ ಪೋಷಣೆ ಈ ಮಾತೆಯರ ಕರ್ತವ್ಯ. ಅದರಲ್ಲಿ ಪುರುಷ ಭಾಗಿಯಾಗಿರುವುದಿಲ್ಲ. ಮಕ್ಕಳ ಪೋಷಿಸುವ ತಾಯಿ ಮರಣಿಸಿದರೆ ತಂದೆ ಜವಾಬ್ದಾರಿ ಹೋರುವುದಿಲ್ಲ ಬದಲಿಗೆ ಆ ಸ್ಥಾನಕ್ಕೆ ಮರು ವಿವಾಹದ ಮೂಲಕ ಮಲ ತಾಯಿಯನ್ನು ತರುತ್ತಾನೆ. ಮಾತೃತ್ವ ಕುಟುಂಬದಲ್ಲಿ ಆಕೆಗೆ ಗೌರವದ ಜೊತೆಗೆ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಬಹುತೇಕ ಕಾಡುಗೊಲ್ಲ ಮಹಿಳೆಯರೆಲ್ಲರು ಕೂಲಿ, ಬೇಸಾಯ ಇತ್ಯಾದಿ ಕೆಲಸಗಳನ್ನು ಮಾಡುವ ವೃತ್ತಿಪರರು.ಇವರು ಮಕ್ಕಳ ಪಾಲನೆಯ ಜೊತೆಗೆ ದುಡಿಮೆಯನ್ನು ಮಾಡಬೇಕಾಗುತ್ತದೆ. ಎಷ್ಟೋ ಬಾರಿ ಮನೆಯ ಯಜಮಾನ ದುಡಿಯಲು ಅಸಮರ್ಥನಾದರೆ ಕುಟುಂಬದ ಜವಾಬ್ದಾರಿಯನ್ನು ಮಾತೆಯರೇ ನಿರ್ವಹಿಸುತ್ತಾರೆ. ಇಂದಿಗೂ ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳೆಯರೇ ಕುಟುಂಬದ ಜವಾಬ್ದಾರಿಯನ್ನು ಬಹುಪಾಲು ನಿರ್ವಹಿಸುತ್ತಿದ್ದಾರೆ.

ಸ್ತ್ರೀ ಭ್ರೂಣ ಹತ್ಯೆ, ಹೆಣ್ಣು ಮಕ್ಕಳ ಜನನ ತಿರಸ್ಕಾರ ಇವು ಈ ಬುಡಕಟ್ಟಿನೊಳಗೆ ವಿರಳ. ಕೆಲವು ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಮಾತ್ರವಿದ್ದರೆ, ಕೆಲವರು ಗಂಡು ಮಕ್ಕಳ ಆಸೆ ಪಟ್ಟು 8–10 ಹೆಣ್ಣು ಮಕ್ಕಳನ್ನು ಹೊಂದಿರುವವರೂ ಇದ್ದಾರೆ. ಗಂಡು ಮಕ್ಕಳು ಪಡೆಯುವಲ್ಲಿ ಒಲವಿದ್ದರೂ ಹೆಣ್ಣು ಮಕ್ಕಳನ್ನು ಪಡೆದರೆ ಆ ಬಗೆಗೆ ತಿರಸ್ಕಾರವಿಲ್ಲ. ಕುಟುಂಬದ ಎಲ್ಲ ಸದಸ್ಯರೂ ದುಡಿಮೆಯಲ್ಲಿ

ಪಾಲ್ಗೊಳ್ಳುವುದು, ವರದಕ್ಷಿಣೆಯ ಒತ್ತಾಯಗಳಿಲ್ಲದಿರುವುದು, ಶಿಕ್ಷಣ ಕೊಡಿಸಬೇಕಾದ ಒತ್ತಡಗಳಿಲ್ಲದಿರುವುದು, ಸೋದರ ಸಂಬಂಧಗಳಲ್ಲಿ ಬಹುತೇಕ ಏರ್ಪಡುವ ವಿವಾಹಗಳ ಕಾರಣದಿಂದ ಬುಡಕಟ್ಟಿನೊಳಗೆ ಹೆಣ್ಣು ಮಗುವಿನ ಬಗೆಗೆ ತಿರಸ್ಕಾರ, ಮತ್ತು ಭ್ರೂಣಹತ್ಯೆಯಂತ ಕ್ರೌರ್ಯಗಳಿಂದ ಮುಕ್ತವಾಗಿದೆ.

ಮಾತೃತ್ವದ ಜವಾಬ್ದಾರಿಯನ್ನು ನಿರ್ವಹಿಸುವ ಮಹಿಳೆಯು ಕುಟುಂಬದ ಕೇಂದ್ರವಾದರೂ ಕುಟುಂಬದ ಯಜಮಾನಿಯಲ್ಲ. ಕುಟುಂಬದ ಯಜಮಾನಿಕೆಯು ಪುರುಷನದ್ದೇ ಆಗಿರುತ್ತದೆ.ಆಸ್ತಿಯು ಯಜಮಾನನಿಂದ ಗಂಡು ಮಕ್ಕಳಿಗೆ ವರ್ಗಾಯಿಸಲ್ಪಡುತ್ತದೆ. ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ತಂದೆಯ ಆಸ್ತಿಯಲ್ಲಿ ಭಾಗ ಪಡೆದ ಅಥವಾ ಪಡೆಯಬೇಕೆಂಬ ಆಕಾಂಕ್ಷೆಯನ್ನು ಯಾವ ಮಹಿಳೆಯಲ್ಲೂ ಕಾಣಲಿಲ್ಲ, ಹಕ್ಕಿನ ಕಲ್ಪನೆಯೂ ಈ ಬುಡಕಟ್ಟಿನ ಮಹಿಳೆಯರಲ್ಲಿ ಇಲ್ಲ. ಅಧಿಕಾರ, ಆಸ್ತಿ, ಒಡೆತನವೆಲ್ಲವೂ ಮನೆಯ ಯಜಮಾನನದ್ದೇ ಆಗಿವೆ. ಕಾನೂನಿನಲ್ಲಿ ಆಸ್ತಿ ಒಡೆತನಕ್ಕೆ ಸಂಬಂಧಿಸಿದ ಸಮಾನತೆಯ ಅವಕಾಶವನ್ನು ನೀಡಿದ್ದರೂ ಹಟ್ಟಿ ಒಳಗಿನ ಕಾನೂನು ಅದನ್ನು ಮಾನ್ಯ ಮಾಡುವುದಿಲ್ಲ. ಕಾಡುಗೊಲ್ಲರು ತಮ್ಮದೇ ಆದ ನ್ಯಾಯ ವ್ಯವಸ್ಥೆಯನ್ನು ಕಟ್ಟೆ ಮನೆಗಳಲ್ಲಿ ಹೊಂದಿರುವುದರಿಂದ ಜನರು ಅವುಗಳಲ್ಲಿ ನಿಷ್ಠೆಯನ್ನು ಹೊಂದಿರುವುದರಿಂದ ಮಹಿಳೆಯರು ಅಧಿಕಾರ ಮತ್ತು ಒಡೆತನವನ್ನು ಹೊಂದಲು ಸಾಧ್ಯವಾಗಿಲ್ಲ ಮನೆಯ ಯಜಮಾನ ತೀರಿಕೊಂಡರೆ, ವಯಸ್ಸಿನಿಂದ ಮುಪ್ಪಾದರೆ ಮಾತ್ರ ಮಹಿಳೆಯು ಕುಟುಂಬದ ಯಜಮಾನಿಯಾಗುತ್ತಾಳೆ. ಒಂದು ವೇಳೆ ವಯಸ್ಕರಾದ ಗಂಡು ಮಕ್ಕಳಿದ್ದರೆ. ಆ ಅಧಿಕಾರವೂ ಗಂಡುಮಕ್ಕಳಿಗೆ ಸೇರುತ್ತದೆ.

ಅಧಿಕಾರ ಮತ್ತು ಹಕ್ಕು

ಕಾಡುಗೊಲ್ಲ ಬುಡಕಟ್ಟಿನೊಳಗೆ ಮಹಿಳೆಯರಿಗೆ ಕರ್ತವ್ಯಗಳು ಮಾತ್ರವೇ ಇವೆ. ಇವರು ಬುಡಕಟ್ಟಿನ ಹಕ್ಕು ಮತ್ತು ಅಧಿಕಾರಗಳಲ್ಲಿ ಭಾಗವಹಿಸಿಯೇ ಇಲ್ಲ. ಕಾಡುಗೊಲ್ಲ ಬುಡಕಟ್ಟಿನ ಪಿತೃ ಪ್ರಧಾನ ಸಮಾಜವು ಹೊಂದಿರುವ ಕಟ್ಟೆ ಮನೆಯ ನ್ಯಾಯ ಪದ್ಧತಿಯು, ಹಟ್ಟಿ ಸಂಸ್ಕೃತಿಯಲ್ಲಿ ಪುರುಷನಿಗೆ ಮಾತ್ರ ಅಧಿಕಾರವನ್ನು ಹಕ್ಕನ್ನು ಮುಕ್ತವಾಗಿ ನೀಡಿವೆ. ಅದರಲ್ಲಿ ಮಹಿಳೆಯರು ಭಾಗಸ್ತರಾಗುವುದನ್ನು ವಿರೋಧಿಸುತ್ತದೆ.

ಕುಟುಂಬದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರ, ನ್ಯಾಯಸ್ಥಾನದಲ್ಲಿ ಭಾಗವಹಿಸುವ ಅಧಿಕಾರ, ಹಟ್ಟಿಯ ಗೌಡಿಕೆ, ಪೂಜಾರಿಕೆ, ದಳವಾಯಿ ಅಧಿಕಾರ ಸ್ಥಾನಗಳನ್ನು ಪಡೆಯುವ

ಅಧಿಕಾರ ಎಲ್ಲವೂ ಪುರುಷನಿಗೆ ಮಾತ್ರ ಸಂಬಂಧಿಸಿದೆ. ನನ್ನ ಕ್ಷೇತ್ರಕಾರ್ಯದಲ್ಲಿ ಯಾರೊಬ್ಬ ಮಹಿಳೆಯರು ಮೇಲಿನ ಅಧಿಕಾರಗಳನ್ನು ಹೊಂದಿಲ್ಲ. ಬುಡಕಟ್ಟಿನ ಅಸ್ತಿತ್ವಕ್ಕೆ ಬಂದ ಕಾಲದಿಂದಲೂ ಈ ಅಧಿಕಾರಗಳನ್ನು ಪುರುಷನೇ ನಿರ್ವಹಿಸುತ್ತ ಬಂದಿದ್ದು ತೀರ್ಮಾನಗಳನ್ನು ಪಾಲಿಸುವ, ನ್ಯಾಯವನ್ನು ಒಪ್ಪುವ, ಹಟ್ಟಿಯ ಹಿರಿಯರ ಅಣತಿಯಂತೆ ನಡೆಯುವ ಕರ್ತವ್ಯ ಮಾತ್ರ ಮಹಿಳೆಯರದ್ದಾಗಿದೆ. ಈ ಅಧಿಕಾರ ಸ್ಥಾನಗಳಲ್ಲಿ ಮಹಿಳೆಗೆ ಅವಕಾಶಗಳಿಲ್ಲದಿರುವುದು ಆಕೆಯ ಇಂದಿನ ಸ್ತ್ರೀಪರವಲ್ಲದ ಸಂಪ್ರದಾಯಗಳು, ಧಾರ್ಮಿಕ ನಿಷೇಧಗಳು, ಉನ್ನತ ಶಿಕ್ಷಣ, ಉದ್ಯೋಗದಿಂದ ವಂಚಿತರಾಗಿರುವುದು ಇತ್ಯಾದಿ ಸ್ಥಿತಿಗಳಿಗೆ ಕಾರಣವಾಗಿದೆ. ಹಟ್ಟಿಯೊಳಗೆ ತಲೆಮಾರುಗಳಿಂದಲೂ ಈ ಅಧಿಕಾರಗಳು ಪುರುಷರಲ್ಲಿಯೇ ಕೇಂದ್ರೀಕರಣಗೊಂಡಿರುವುದರಿಂದ ಅದು ಪ್ರಶ್ನೆಗೆ ಒಳಪಡದೆ ಪುರುಷರಲ್ಲಿಯೇ ಮುಂದುವರಿಯಲು ಒಪ್ಪಿತವಾಗಿದೆ.

ಇಲ್ಲಿನ ಮಹಿಳೆಯರಿಗೆ ತಾವು ಅಧಿಕಾರವನ್ನು ಪಡೆಯಲು ಹಟ್ಟಿಯ ಹಿರಿಯರನ್ನು ಪ್ರಶ್ನಿಸುವ ಬೌದ್ಧಿಕ ಅಸ್ಮಿತ್ವತೆಯಾಗಲಿ, ಧೈರ್ಯವಾಗಲಿ ಇರುವುದಿಲ್ಲ. ಇಂತಹ ಅಧಿಕಾರಿಗಳಿಗೆ ಇದುವರೆಗೂ ಪುರುಷರ ನಡುವೆ ಸಂಘರ್ಷಗಳಿವೆ ಆದರೆ ಪುರುಷ ಮಹಿಳೆಯ ನಡುವೆ ಇಂತಹ ಅಧಿಕಾರಕ್ಕೆ ಸಂಘರ್ಷಗಳು ನಡದೇಯಿಲ್ಲ ಎಂಬುದನ್ನು ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ಗುರುತಿಸಿದ್ದೇನೆ.

ಹಕ್ಕುಗಳನ್ನು ಎರಡು ನೆಲೆಗಳಲ್ಲಿ ವಿವೇಚಿಸಬಹುದು 1) ಸಂವಿಧಾನದ ಹಕ್ಕುಗಳು 2) ಹಟ್ಟಿಯೊಳಗಿನ ಹಕ್ಕುಗಳು.

ಸಂವಿಧಾನದಿಂದ ದೊರೆಯುವ ಮೂಲಭೂತ ಹಕ್ಕುಗಳಾದ ಶೈಕ್ಷಣಿಕ ಹಕ್ಕು, ಆಸ್ತಿಯ ಹಕ್ಕು, ಧಾರ್ಮಿಕ ಹಕ್ಕು, ವಾಕ್ ಸ್ವಾತಂತ್ರ್ಯ ಇವುಗಳೆಲ್ಲವೂ ಭಾರತೀಯರಿಗೆ ದಕ್ಕುವಂತೆ ಭಾರತೀಯರಾದ ಕಾಡುಗೊಲ್ಲರಿಗೆ ಲಭ್ಯವಿದೆ. ಭಾರತೀಯ ಮಹಿಳೆಯರಾದ ಕಾಡುಗೊಲ್ಲ ಮಹಿಳೆಗೆ ಸಲ್ಲಬೇಕಿದೆ, ಇಂತಹ ಹಕ್ಕುಗಳು ದಮನಕ್ಕೆ ಒಳಗಾಗಿದ್ದರದಿದ್ದರೂ ಯಾವೊಬ್ಬ ಮಹಿಳೆಯು ಅದರ ವಿರುದ್ಧ ಧ್ವನಿಯನ್ನು ಎತ್ತಿಲ್ಲ, ಕಾನೂನಿನ ಮೆಟ್ಟಿಲೇರಿಲ್ಲ, ವಿದ್ಯಾವಂತ ನಗರ ಸಮಾಜದೊಳಗೆ ಮಹಿಳೆಯರಿಗೆ ಅಸಾಧ್ಯವಾಗಿರುವ ಈ ಸಂಗತಿಯನ್ನು ಕಾಡುಗೊಲ್ಲ ಮಹಿಳೆಯರಲ್ಲಿ ನಿರೀಕ್ಷಿಸುವುದು ಅಸಾಧ್ಯವೇ ಸರಿ. ಆದರೂ ಇಂತಹ ಬೆಳವಣಿಗೆಗೆ ಕಾರಣವೇನು ಎಂದು ಗುರುತಿಸಿಕೊಳ್ಳುವುದು ಈ ಸಂದರ್ಭದಲ್ಲಿ ಉಚಿತವೆನಿಸುತ್ತದೆ.

ಇಂದಿನ ತಂತ್ರಜ್ಞಾನ ಯುಗದಲ್ಲಿ ಮಾಹಿತಿ ಕ್ರಾಂತಿಯು ಆಗತ್ಯವಾಗಿ ಆಗಬೇಕಾಗಿದೆ. ಭಾರತೀಯ ಸಮಾಜದೊಳಗೆ ಲಭ್ಯವಿರುವ ಹಲವು ಹಕ್ಕುಗಳು, ಸೌಕರ್ಯಗಳು, ಅರಿವು ಇಂದಿನ

ಅನೇಕರಿಗೆ ಅಲಭ್ಯವಾಗಿವೆ. ಅವುಗಳಲ್ಲಿ ಕಾಡುಗೊಲ್ಲ ಬುಡಕಟ್ಟು ಒಂದಾಗಿದೆ. ಬುಡಕಟ್ಟಿನೊಳಗೆ ಮಹಿಳೆಯರಿಗೆ ಇರುವ ಮಾಹಿತಿಯ ಕೊರತೆಯೇ ಅವರ ಇಂದಿನ ಸ್ಥಿತಿಗೆ ಕಾರಣ.

ಬುಡಕಟ್ಟಿನೊಳಗೆ ಮಹಿಳೆಯರಿಗೆ ಯಾವ ಹಕ್ಕುಗಳಿವೆ ಎಂದು ಹುಡುಕಿದರೆ ಸಿಗುವುದು ಶೂನ್ಯ ಮಾತ್ರ. ಇಲ್ಲಿನ ಹಕ್ಕುಗಳೇನಾದರೂ ಇದ್ದರೆ ಅದು ಪುರುಷನಿಗೇ ಸೇರಿದ್ದು .ಮಹಿಳೆಯರಿಗೆ ಹಕ್ಕುಗಳಿವೆ ಎಂದು ಪುರುಷರು ನೀಡಲು ಸಿದ್ಧರಿಲ್ಲ. ಮಹಿಳೆಯರು ಸ್ವತಃ ಕಲ್ಪಿಸಿಕೊಳ್ಳಲು ಸಿದ್ಧರಿಲ್ಲ.

ಕಾಡುಗೊಲ್ಲ ಬುಡಕಟ್ಟು ತಮ್ಮದೇ ಹಟ್ಟಿ ಸಂಸ್ಕೃತಿಯೊಳಗೆ ತಮ್ಮದೇ ಕಾನೂನು, ತಮ್ಮ ಸಂಪ್ರದಾಯ, ತಮ್ಮ ಸಂಸ್ಕೃತಿಯನ್ನು ನಿರ್ವಹಿಸಿಕೊಂಡಿರುವುದರಿಂದ ಇವುಗಳಲ್ಲಿ ಪುರುಷಾಧಿಕಾರದ ಸರ್ವಾಧಿಕಾರವಿದೆಯೇ ಹೊರತು, ಸಮಾನತೆಯ ಸ್ವಾತಂತ್ರ್ಯಗಳನ್ನು ಹೊಂದಿರುವ ಪ್ರಜಾಸತ್ತಾತ್ಮಕ ಧೋರಣೆಯಿಲ್ಲ. ಹಕ್ಕುಗಳಿಗೆ ಸಂಬಂಧಿಸಿದಂತೆ ಬುಡಕಟ್ಟಿನೊಳಗೆ ಪುರುಷ ಮತ್ತು ಮಹಿಳೆಯರಲ್ಲಿ ಅಸಮಾನ ನೆಲೆಗಳಿವೆ. ಹಕ್ಕು ಪರುಷರಿಗೂ ಕರ್ತವ್ಯ ಮಹಿಳೆಗೆ ಹಂಚಲ್ಪಟ್ಟಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ.

“ಪುರುಷ ಪ್ರಧಾನ ತತ್ವಗಳನ್ನು ಮಹಿಳೆ ಅಂತಸ್ತಗೊಂಡಾಗ ಮತ್ತು ಬಲವಂತವಾಗಿ ಹೇರಿದ್ದನ್ನು ಅವಳು ಸ್ವೀಕರಿಸಿದಾಗ ವ್ಯವಸ್ಥೆಯಿಂದ ಆಕೃತಿಗೊಂಡು ವ್ಯವಸ್ಥೆಯ ನಿರೀಕ್ಷೆಯಂತೆ ವರ್ತಿಸುವ ಪುರುಷನಿಗಿಂತ ಮೂಲಭೂತವಾಗಿ ಅವಳು ಭಿನ್ನವಾಗಿರುವುದಿಲ್ಲ. ಹಾಗೆ ನೋಡಿದರೆ ಇಬ್ಬರು ವ್ಯವಸ್ಥೆಯ ಬಲಿಪಶುಗಳಾಗಿದ್ದಾರೆ. ವಾಸ್ತವಿಕವಾಗಿ ಎಲ್ಲಾ ಸನ್ನಿವೇಶಗಳಲ್ಲಿ ಮಹಿಳೆ ಮಾತ್ರ ಸೋತುಹೋದವಳು ಎಂಬ ಸಂಗತಿಯನ್ನು ಇಂಥ ಚರ್ಚೆ ನಿರ್ಲಕ್ಷಿಸುವುದಿಲ್ಲ.”[31] ಬುಡಕಟ್ಟು ವ್ಯವಸ್ಥೆಯ ಪೋಷಕರು ಪಾಲಕರು ಆದ ಕಾಡುಗೊಲ್ಲ ಮಹಿಳೆಯರು ವ್ಯವಸ್ಥೆಯೊಳಗೆ ಹಲವು ಸನ್ನಿವೇಷಗಳಲ್ಲಿ ದಮನಕ್ಕೆ ಒಳಗಾಗಿದ್ದಾರೆ. ಪುರುಷ ನಿಷ್ಠ ಸಮಾಜದ ಆಕೃತಿಗಳಾದ ಇವರು ತಮ್ಮ ಹಕ್ಕುಗಳು ದಮನಗೊಂಡಿದ್ದರೂ ಅದರ ಅರಿವಿಲ್ಲದೆ ಬಾಳುತ್ತಿದ್ದಾರೆ. ಮಾತೃವಂಶೀಯ ಕುಟುಂಬಗಳಲ್ಲಿ ಹೆಣ್ಣು ವಿವಾಹದ ನಂತರ ಹುಟ್ಟಿದ .ಮನೆಯಲ್ಲೆ ವಾಸ ಮಾಡುವ ವ್ಯವಸ್ಥೆ, ಗಂಡಿನ ಅಂತಸ್ತು ಹೆಣ್ಣಿನ ಸ್ಥಾನ ಮಾನದ ಮೂಲಕ ನಿರ್ಧಾರವಾಗುವುದು, ತೆರಪದ್ಧತಿ(ವಧು ದಕ್ಷಿಣೆ), ವೈವಾಹಿಕ ಬಾಂದವ್ಯಕ್ಕಿಂತ ರಕ್ತ ಬಾಂದವ್ಯಕ್ಕೆ ಪ್ರಾಧ್ಯಾನ್ಯತೆ, ವಿಚ್ಛೇದನ ಹೇಳುವ ಪದ್ಧತಿ, ಮರುವಿವಾಹ, ಉತ್ತರದಾಯಿತ್ವ ಆಸ್ತಿ ಒಡೆತನವು ಮಹಿಳೆಯರಿಗಿರುವ ಕಾರಣದಿಂದ ಅವರು ತಮ್ಮ ಅಸ್ತಿತ್ವಕ್ಕೆ ಕುಂದುಂಟಾದಾಗ ಗಂಡಿನ ಪ್ರಭುತ್ವವನ್ನು ಪ್ರಶ್ನಿಸುವ ಪ್ರತಿಭಟಿಸುವ ಧೈರ್ಯವನ್ನು ಹೊಂದಿದ್ದಾರೆ. ಕಾಡುಗೊಲ್ಲ ಬುಡಕಟ್ಟು ಪಿತೃಪ್ರಧಾನ ವ್ಯವಸ್ಥೆಯನ್ನು ಹೊಂದಿದೆ. ಈ ಪಿತೃಪ್ರಧಾನ ಕುಟುಂಬಗಳಲ್ಲಿನ ಸೋದರ ಸಂಬಂದದ ವಿವಾಹ, ಮರುವಿವಾಹ ನಿಷೇಧ, ಏಕಪತಿತ್ವ, ಪುರುಷರಿಗೆ ಸೇರಿದ ಉತ್ತರದಾಯಿತ್ವ, ವೈವಾಹಿಕ ಬಾಂಧವ್ಯಕ್ಕೆ ಇರುವ ಅದ್ಯತೆ, ಗಂಡನ ಮನೆಯಲ್ಲಿಯೇ

ಪಾಲಿಸಬೇಕಾದುದು. ಹೆಣ್ಣಿನ ಸ್ಥಾನಮಾನ ಗಂಡಿನ ಸ್ಥಾನ ಮಾನದ ಮೂಲಕ ನಿರ್ಧಾರವಾಗುವುದು ಇಲ್ಲಿನ ಮಹಿಳೆಯರ ಅಸ್ತಿತ್ವದ ನಿರಾಕರಣೆಗೆ ಕಾರಣವಾಗಿದೆ. ಇದು ಅವರನ್ನು ಮಾನಸಿಕ ಅಂಗಹೀನವಾಗಿಸಿದೆ. ಇರುವ ವ್ಯವಸ್ಥೆಯನ್ನು ಇಲ್ಲಿನ ಮಹಿಳೆಯರು ವಿಧಿಯಿಲ್ಲದೆ ಒಪ್ಪಿಕೊಳ್ಳುವುದೇ ಅವರ ಬದುಕಿನ ಕರ್ಮಸಿದ್ಧಾಂತವಾಗಿ ಬಿಟ್ಟದೆ.

ಕೊನೆ ಟಿಪ್ಪಣಿ

1. ಲೋಕಾಯತ ಲೇ:ಶರತ್‌ಶ್ಚಂದ್ರ ಚಟ್ಟೋಪಾಧ್ಯಾಯ ಪುಟ 158
2. ಅದೇ ಪುಟ 179
3. ಕಾಡುಗೊಲ್ಲರ ಜನಪದ ಗೀತೆಗಳು (ಸಂ): ಅಂಬಳಿಕೆ ಹಿರಿಯಣ್ಣ ಪುಟ 122 ರಿಂದ 115
4. ಅದೇ ಪುಟ 166
5. ಅದೇ 181
6. ಸಣ್ಣಮ್ಮ 45 ವರ್ಷ ದೇವರಹಟ್ಟಿ
7. ಈರಮ್ಮ 60 ವರ್ಷ ಪೆಮ್ಮನಹಳ್ಳಿ
8. ಮಮತ 23 ವರ್ಷ ಬ್ಯಾಡರ ಹಟ್ಟಿ
9. ರತ್ನಮ್ಮ 38 ವರ್ಷ ಜುಂಜಪ್ಪನ ಹಟ್ಟಿ
10. ನಾಗವೇಣಮ್ಮ 45 ವರ್ಷ ಜುಂಜಪ್ಪನ ಹಟ್ಟಿ
11. ನಾಗಮ್ಮ 45 ವರ್ಷ ಕೆಂಚಮ್ಮನಹಳ್ಳಿ ಗೊಲ್ಲರ ಹಟ್ಟಿ
12. ಲಕ್ಷ್ಮಮ್ಮ 32 ವರ್ಷ ಚಿಕ್ಕತಿಮ್ಮನ ಹಟ್ಟಿ
13. ಈರಮ್ಮ 40 ವರ್ಷ ಲಿಂಗದ ಹಳ್ಳಿ ಗೊಲ್ಲರ ಹಟ್ಟಿ
14. ಕರಿಯಮ್ಮ 60 ವರ್ಷ ಕಾಮನಹಟ್ಟಿ
15. ಗೀತ 25 ವರ್ಷ ಬ್ಯಾಡರಹಳ್ಳಿ ಗೊಲ್ಲರ ಹಟ್ಟಿ
16. ಶಿವಮ್ಮ 20 ವರ್ಷ ಗೌಡಗಾರನಾಗನ ಹಟ್ಟಿ
17. ರಾಧಮ್ಮ 26 ವರ್ಷ ಬ್ಯಾಡನೂರು ಗೊಲ್ಲರ ಹಟ್ಟಿ
18. ಮಂಜುಳ 17 ವರ್ಷ ಬ್ಯಾಡನೂರು ಗೊಲ್ಲರ ಹಟ್ಟಿ
19. 80 ವರ್ಷ ಚಿತ್ತಮ್ಮ ಮುಗುದಾಳ ಬೆಟ್ಟ ಗೊಲ್ಲರ ಹಟ್ಟಿ
20. ಕರಿಯಪ್ಪ 40 ವರ್ಷ ಬ್ಯಾಡನೂರು ಗೊಲ್ಲರ ಹಟ್ಟಿ
21. ನೇತ್ರ 29 ವರ್ಷ ಕೆಂಚಮ್ಮನಹಳ್ಳಿ ಗೊಲ್ಲರ ಹಟ್ಟಿ
22. ನಾಗವೇಣಿ 32 ವರ್ಷಈರಮುದ್ದನ ಹಟ್ಟಿ

23. ಗಿಡ್ಡಮ್ಮ 54 ವರ್ಷ ಹೊಸಹಳ್ಳಿ ಗೊಲ್ಲರ ಹಟ್ಟಿ

24. ಸರೋಜಮ್ಮ 69 ವರ್ಷ ಬೊಮ್ಮನ ಹಟ್ಟಿ

25 ಸಾವಿತ್ರಮ್ಮ 65 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರ ಹಟ್ಟಿ

26. ಅನಿತ 17 ವರ್ಷ ಚನ್ನಸಾಗರದ ಹಟ್ಟಿ

27. ನಾಗವೇಣಮ್ಮ 30 ವರ್ಷ ಈರಮುದ್ದನಹಟ್ಟಿ

28. ಸರೋಜಮ್ಮ 52 ವರ್ಷ ಕಣವೇನಹಳ್ಳಿ ಗೊಲ್ಲರ ಹಟ್ಟಿ

29. ಸಾವಿರದ ಸಿರಿಬೆಳಗು ಸಂ:ಕೃಷ್ಣಮೂರ್ತಿ ಹನೂರ ಪುಟ 80

30. ಅದೇ

31. ಮಧ್ಯಮ ಮಾರ್ಗ ಲೇ: ಮನುಚಕ್ರವರ್ತಿ

ಅಧ್ಯಾಯ 7

ಕಾಡುಗೊಲ್ಲ ಮಹಿಳಾ ಧಾರ್ಮಿಕ ಸಂಕಥನ

ಕಾಡುಗೊಲ್ಲರದು ಧಾರ್ಮಿಕ ಶ್ರದ್ಧೆಯುಳ್ಳ ಬುಡುಕಟ್ಟು. ಕಾಡುಗೊಲ್ಲರ ಬಹುಪಾಲು ಸಂಸ್ಕೃತಿ ವಿಶಿಷ್ಟತೆಗಳು ಅನಾವರಣಗೊಂಡಿರುವುದು ಧಾರ್ಮಿಕ ಆಚರಣೆ, ಸಂಪ್ರದಾಯ ವಿಧಿ-ನಿಷೇಧಗಳ ಮೂಲಕ. ಊರಿನಿಂದ ಐದಾರು ಮೈಲಿಗಳ ಅಂತರದಲ್ಲಿ ನೆಲೆಸಿರುವ ಗೊಲ್ಲರಹಟ್ಟಿಗಳು ಊರಿನ ಇತರೆ ಜಾತಿಯವರೊಂದಿಗೆ ಬೆರೆಯಲು ಇಷ್ಟಪಿಡದಿರಲು ಮೊದಲ ಕಾರಣ ತಮ್ಮ ಧಾರ್ಮಿಕ ದೇವರುಗಳ ಮಡಿತನವನ್ನು ಕಾಯ್ದುಕೊಳ್ಳುವುದು. ಕಾಡುಗೊಲ್ಲರಲ್ಲಿ ಹಟ್ಟಿಯ ಮಧ್ಯೆ ದೇವಸ್ಥಾನವಿರುವುದು ಅವರ ಧಾರ್ಮಿಕ ಕೇಂದ್ರಿತ ಬದುಕನ್ನು ಸಂಕೇತಿಸುತ್ತದೆ. ಕಾಡುಗೊಲ್ಲ ಸಾಹಿತ್ಯದಲ್ಲಿ ಮುಸ್ಲಿಮರ ದಾಳಿ, ಅನ್ಯಜನರ ದಾಳಿಯಿಂದ ತಮ್ಮ ದೇವರು ಮಲಿನವಾಗದಂತೆ ರಕ್ಷಿಸಲು ಬಚ್ಚಿಟ್ಟ ಉದಾಹರಣೆಗಳು ಸಿಗುತ್ತವೆ. ತಮ್ಮ ದೇವರಿಗೆ ಸೂತಕ ಮೈಲಿಗೆ ಉಂಟಾದರೆ 'ಜಲಧಿ'ಗೆ ಹೋಗುವ ಮೂಲಕ ದೇವರನ್ನು ಮಡಿ ಮಾಡುತ್ತಾರೆ. ಅಷ್ಟೇ ಅಲ್ಲ ವರ್ಷಾವರ್ತದಲ್ಲಿ ನಡೆಯುವ ದೇವರ ಉತ್ಸವ ಜಾತ್ರೆಯಲ್ಲಿ ಉಪವಾಸವಿದ್ದು, ಅತ್ಯಂತ ಮಡಿ ನೇಮದಿಂದ ಪಾಲಿಸುವುದು ಕಂಡು ಬರುತ್ತದೆ. ಕಾಡುಗೊಲ್ಲರ ಈ ಧಾರ್ಮಿಕ ಶ್ರದ್ಧೆಯನ್ನು ಕಂಡು ಪ್ರಭಾವಗೊಂಡು ಅನ್ಯ ಜಾತಿಯವರಿಂದ ಪೂಜೆಗೊಳ್ಳುವ ದೇವರುಗಳೇ ಕಾಡುಗೊಲ್ಲರಿಗೆ ಒಲಿದು ವಲಸೆ ಬಂದಿರುವ ದಾಖಲೆಗಳನ್ನು ಕಾಡುಗೊಲ್ಲರ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಕಾಡುಗೊಲ್ಲರು ಪ್ರಮುಖವಾಗಿ ಎತ್ತಪ್ಪ, ಜುಂಜಪ್ಪ, ಕಾಟಮದೇವರು, ಚಿತ್ರದೇವರು, ಪಾತೇದೇವರು, ಕೇತೇದೇವರು, ನರಸಿಂಹ, ತಿಮ್ಮಪ್ಪ, ರಂಗಪ್ಪ ದೇವರುಗಳನ್ನು ಆರಾಧಿಸತ್ತಾರೆ.ಇವುಗಳೇ ಅಲ್ಲದೆ ಸಿದ್ದಪ್ಪ, ಈರಣ್ಣ, ಆಂಜನೇಯ, ಗೌರಸಂದ್ರದ ಮಾರಿ, ಕಾವಲಮ್ಮ, ಅಕ್ಕಮ್ಮ, ಕರಿಯಮ್ಮ ದೇವತೆಗಳನ್ನು ಪೂಜಿಸುತ್ತಾರೆ. ಕೆಲವೊಮ್ಮೆ ಪೂಜಾರಿ ಅಥವಾ ಹಟ್ಟಿಯಲ್ಲಿ ಗೌರವಕ್ಕೆ ಪಾತ್ರನಾಗಿ ಸತ್ತ ವ್ಯಕ್ತಿಯ ಹೆಸರಿನಲ್ಲೂ ಅಲಗು ಇಟ್ಟು ಪೂಜಿಸುತ್ತಾರೆ.ಇತ್ತೀಚೆಗೆ ಸೇರ್ಪಡೆಗೊಂಡಿರುವ ಹೊಸ ಧಾರ್ಮಿಕ ಆಚರಣೆಯೆಂದರೆ 'ಕೃಷ್ಣ ಜಯಂತಿ'. ಕಾಡುಗೊಲ್ಲ ಯುವಕರು 'ಶ್ರೀ ಕೃಷ್ಣ ಯುವಕರ ಸಂಘ'ಗಳ ಮೂಲಕ ಸಂಘಟಿತರಾಗಿ ಕೃಷ್ಣಜಯಂತಿಯನ್ನು ನಡೆಸುತ್ತಿದ್ದಾರೆ. ಆದರೆ ಯಾವ ಹಟ್ಟಿಯಲ್ಲಿಯು ಕೃಷ್ಣನ ವಿಗ್ರಹವಾಗಲಿ ಗುಡಿಯಾಗಲಿ ಇಲ್ಲದಿರುವುದು ಇತ್ತೀಚೆಗೆ ವಲಸೆ ಬಂದಿರುವ ಶ್ರೀಕೃಷ್ಣನ ಆಧುನಿಕತೆಯನ್ನು ಹೇಳುತ್ತದೆ.

ಕಾಡುಗೊಲ್ಲರು ಊರಿನ ಜನರಂತೆ ಯುಗಾದಿ, ಸಂಕ್ರಾಂತಿ, ಗೌರಿ-ಗಣೇಶ, ದೀಪಾವಳಿ, ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಊರಿನ ಜನರಲ್ಲಿ ಇಲ್ಲದ ಕಾಡುಗೊಲ್ಲರ ಬುಡಕಟ್ಟಿನವರು

ಮಾತ್ರ ಆಚರಿಸುವ ವಿಶೇಷವಾದ ಹಬ್ಬ ' ಹಾಲುಯ್ಯುವ ಹಬ್ಬ' (ಹಾಲು ಮೀಸಲು ಹಬ್ಬ)'. ಈ ಹಬ್ಬದಂದು ಒಂದು ಬಳಗ, ಸಂಬಂಧಿಕರು ಹಟ್ಟಿಯಲ್ಲಿ ಸೇರುತ್ತಾರೆ. ಮೂರು ದಿನಗಳ ಕಾಲ ಹಾಲು-ಮೊಸರು ಬಳಸದೆ ಅದನ್ನು ದೇವರಿಗೆ ಮೀಸಲಿಡುತ್ತಾರೆ. ಮಗುವಿಗೂ ಹಾಲನ್ನು ಕುಡಿಯಲು ಕೊಡುವುದಿಲ್ಲ. ಹಬ್ಬದ ದಿನ ಹಟ್ಟಿಯ ಮುಂದೆ ಸಗಣಿಯ ಕಟ್ಟೆ ಕಟ್ಟುತ್ತಾರೆ. ಕಟ್ಟೆಯಲ್ಲಿ ನಾಲ್ಕು ಮೂಲೆಯಲ್ಲಿ ನಾಲ್ಕು ಚಿಕ್ಕ ಜಾಗಗಳನ್ನು (ಹಾಲು ಹೊರಗೆ ಹರಿಯಲು) ಮಾಡುತ್ತಾರೆ. ಸಗಣಿಯ ಕಟ್ಟೆಯನ್ನು ಹೂಗಳಿಂದ ಅಲಂಕರಿಸುತ್ತಾರೆ. ಬೆಳಗ್ಗೆಯಿಂದಲೂ ಉಪವಾಸವಿದ್ದು ದೇವರ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಮೀಸಲಿಟ್ಟಿದ ಹಾಲನ್ನು ತಂದು ಸಂಜೆಯ ಹೊತ್ತಿಗೆ ಸಗಣಿ ಕಟ್ಟೆಯಲ್ಲಿ ಸುರಿಯುತ್ತಾರೆ. ಹೀಗೆ ಹಟ್ಟಿಯ ಪ್ರತಿ ಮನೆಯವರು ಹಾಲು-ಮೊಸರು ತಂದು ಕಟ್ಟೆಯಲ್ಲಿ ಸುರಿಯುತ್ತಾರೆ. ಈ ಸಂದರ್ಭದಲ್ಲಿ ಸಗಣಿ ಕಟ್ಟೆಯು ಹಾಲು-ಮೊಸರುನಿಂದ ತುಂಬಿ ಹರಿಯುತ್ತದೆ. ಪಶುಪಾಲಕರಾಗಿದ್ದ ಕಾಡುಗೊಲ್ಲರು ಹಾಲು-ಮೊಸರನ್ನು ದೇವರಿಗೆ ಭಕ್ತಿಯಿಂದ ಅರ್ಪಿಸಿ ಹಾಲು-ಮೊಸರಿನ ಸಮೃದ್ಧಿ ಉಂಟಾಗಲೆಂದು ಪ್ರಾರ್ಥಿಸುವುದು ಈ ಹಬ್ಬದ ವಿಶೇಷವಾಗಿದೆ.

ಹಟ್ಟಿಯ ಧಾರ್ಮಿಕ ವ್ಯವಸ್ಥೆಯಲ್ಲಿ ಪೂಜಾರಿಗೆ ಉನ್ನತ ಸ್ಥಾನವಿದೆ. ಹಟ್ಟಿಯ ಪೂಜಾರಿ ಹಟ್ಟಿಯ ನ್ಯಾಯಾಧಿಕಾರಿಯಿದ್ದಂತೆ. ಗೌಡ, ದಳವಾಯಿ ಪೂಜಾರಿ ಮುಖ್ಯವಾದ ಬುಡಕಟ್ಟಿನ ಅಧಿಕಾರದ ಸ್ಥಾನಗಳಾಗಿವೆ. ಹಬ್ಬ, ಉತ್ಸವ, ಜನನ, ಮದುವೆ, ಮಸಣ ಈ ಎಲ್ಲಾ ಸಂದರ್ಭದಲ್ಲೂ ಪೂಜಾರಿ ಪಾಲ್ಗೊಳ್ಳುವಿಕೆ ಇದೆ. ಆತನೆ ಮುಖ್ಯಸ್ಥನಾಗಿ ನಿಂತು ಎಲ್ಲಾ ಕಾರ್ಯಗಳನ್ನು ನೆರವೇರಿಸುತ್ತಾನೆ. ಈ ಪೂಜಾರಿಯು ಹಟ್ಟಿಯಲ್ಲೇ ವಾಸಿಸುವ ಕಾಡುಗೊಲ್ಲನಾಗಿರುತ್ತಾನೆ. ಅನ್ಯಜಾತಿಯವರು ಇಲ್ಲವೆ ಬ್ರಾಹ್ಮಣರು ಧಾರ್ಮಿಕ ಹಬ್ಬ - ಉತ್ಸವ, ಸಂಪ್ರದಾಯ ಬುಡಕಟ್ಟಿನ ಆಚರಣೆಗಳಲ್ಲಿ ಬರುವುದಿಲ್ಲ. ಇತ್ತೀಚೆಗೆ ಊರಿನ ಪ್ರಭಾವದಿಂದಾಗಿ ವಿವಾಹ, ನಾಮಕರಣ, ಮೊದಲಾದ ಸಂದರ್ಭದಲ್ಲಿ ಬ್ರಾಹ್ಮಣರನ್ನು ಕರೆಸುತ್ತಿರುವುದನ್ನು ವಿರಳವಾಗಿ ನೋಡುತ್ತಿದ್ದೇವೆ. ಹಟ್ಟಿಯಲ್ಲಿ ಯಾವುದೇ ವ್ಯಕ್ತಿಯು ಹಟ್ಟಿಯ ಸಂಪ್ರದಾಯ ಪಾಲನೆಯಲ್ಲಿ ತಪ್ಪಬಹುದು. ಆದರೆ ಪೂಜಾರಿ ಮಾತ್ರ ಅತ್ಯಂತ ನೇಮ ನಿಷ್ಠೆಗಳಿಂದ ಸಂಪ್ರದಾಯಗಳನ್ನು ಪಾಲಿಸುತ್ತಾನೆ. ಮಾತ್ರವಲ್ಲ ಆತನ ಕುಟುಂಬವೂ ಧಾರ್ಮಿಕ ರೀತಿ ರಿವಾಜುಗಳನ್ನು ನಿಷ್ಠೆಯಿಂದ ನಡೆಸಿಕೊಂಡು ಬರುವ ಮೂಲಕ ಹಟ್ಟಿಗೆ ಮಾದರಿಯಾಗಿರುತ್ತದೆ.

ಪೂಜಾರಿಕೆಯ ಅಧಿಕಾರಕ್ಕಾಗಿ ಜಗಳಗಳೂ ನಡೆದಿರುವುದು ಹಲವು ಹಟ್ಟಿಗಳಲ್ಲಿ ಇವೆ. ಹಟ್ಟಿಯಲ್ಲಿ ಸಂಪ್ರದಾಯ ಮೀರಿ ನಡೆದ ತಪ್ಪುಗಳಿಗೆ ಮತ್ತು ವಿವಾಹ, ನಾಮಕರಣ ಮಡಿ ಆಚರಣೆಗಳ ಸಂದರ್ಭದಲ್ಲಿ ಪೂಜಾರಿಗೆ ಕಾಣಿಕೆಗಳನ್ನು ಕಾಡುಗೊಲ್ಲರು ಸಲ್ಲಿಸುತ್ತಾರೆ. ಪೂಜಾರಿಯು ಹಟ್ಟಿಯೊಳಗೆ ಧಾರ್ಮಿಕ ಶ್ರದ್ಧೆಯನ್ನು ಕಾಪಾಡುತ್ತಾನೆ. ಸಂಪ್ರದಾಯ, ರೂಢಿ, ವಿಧಿಗಳನ್ನು ಮೀರದಂತೆ ಹದ್ದಿನ ಕಣ್ಣಿಡುತ್ತಾನೆ. ಮೀರಿದರೆ ದಂಡ ವಿಧಿಸುತ್ತಾನೆ. ಶಿಕ್ಷಿಸುತ್ತಾನೆ.

ಕೆಲವೊಮ್ಮೆ ಪೂಜಾರಿಯು ಹಟ್ಟಿಗೆ ತನ್ನ ವೈದ್ಯಕೀಯ ಸೇವೆ ಮಾಡುತ್ತಾನೆ. ಗಿಡ ಮೂಲಿಕೆಗಳ ಮೂಲಕ ಮಾನವ ಮತ್ತು ಪಶು ಇಬ್ಬರ ಅನಾರೋಗ್ಯಕ್ಕೆ ಮದ್ದು ನೀಡುವ ವೈದ್ಯವನ್ನು ಬಲ್ಲವನಾಗಿರುತ್ತಾನೆ.

ಕಾಡುಗೊಲ್ಲರ ಧಾರ್ಮಿಕ ಶ್ರದ್ಧೆಯನ್ನೇ ಪ್ರಸ್ತಾಪಿಸುವ ಮುಖ್ಯ ಕಾರಣ ಕಾಡುಗೊಲ್ಲ ಮಹಿಳೆಯರ ಜೀವನದಲ್ಲಿ ಈ ಶ್ರದ್ಧೆಯ ಪರಿಣಾಮವೇನು? ಎಂಬುದನ್ನು ವಿವೇಚಿಸುವುದೇ ಆಗಿದೆ. ಪಿತೃವಂಶೀಯ ಸಮಾಜವನ್ನು ಹೊಂದಿರುವ ಕಾಡುಗೊಲ್ಲರ ಧಾರ್ಮಿಕ ವಿಧಿ–ನಿಷೇಧಗಳು ಪುರುಷರ ಹಿತವನ್ನು ಕಾಯುವಂತವು ಮಹಿಳೆಯರನ್ನು ಉಪೇಕ್ಷಿಸಿರುವಂತವು. ಕಾಡುಗೊಲ್ಲರ ಧಾರ್ಮಿಕ ಪರಿಸರದಲ್ಲಿ ಪುರುಷ ಉನ್ನತ ಗೌರವ ಸ್ಥಾನಮಾನ ಪಡೆದರೆ ಮಹಿಳೆಯು ಸೂತಕ ಮೈಲಿಗೆಯ ಭಾವಗಳ ಹಿರಿತದಿಂದ ಘಾಸಿಗೊಳ್ಳುತ್ತಾಳೆ. "ಮಾನ್ಯತೆ ಪಡೆದ ಸಂಸ್ಕೃತಿಯ ಮಜಲಿನ ನಿರ್ಮಾಣವನ್ನು ಗಂಡಸರು ಮಾತ್ರ ಪ್ರಭಾವಿಸ ಬಲ್ಲವರಾಗಿದ್ದರಿಂದ ಸಂಸ್ಕೃತಿಯಲ್ಲೂ ಗಂಡು ಗುಣಕ್ಕೆ ಆದ್ಯತೆ ದೊರೆಯಿತು.ಹೆಂಗಸರು ಮತ್ತು ಹೆಂಗಸಿನ ಗುಣ ಹಿಂದಕೆ ತಳ್ಳಲ್ಪಟ್ಟಿತು".[1]ಎಂಬುದನ್ನು ಕಾಡುಗೊಲ್ಲರ ಬುಡಕಟ್ಟಿನ ಧಾರ್ಮಿಕ ವ್ಯವಸ್ಥೆಯು ನಿಜವಾಗಿಸುತ್ತದೆ.

ಕಾಡುಗೊಲ್ಲ ಮಹಿಳೆಯ ಧಾರ್ಮಿಕ ಶ್ರದ್ಧೆಯನ್ನು ಪಾಲಿಸುವುದು ಬಿಡುವುದು ಆಕೆಯ ವೈಯಕ್ತಿಕ ಆಯ್ಕೆಯಲ್ಲ. ಬದಲಿಗೆ ಬುಡಕಟ್ಟು ಅದನ್ನು ನಿರ್ಧರಿಸುವಂತದ್ದು. ಈ ವಿಧಿ–ನಿಷೇಧಗಳಿಗೆ ಇಲ್ಲಿನ ಮಹಿಳೆಯರು ತಲೆಬಾಗಿ ನಡೆಯಬೇಕೆಂಬುದರಲ್ಲಿ ಇಲ್ಲಿನ ಪುರುಷ ಸಮಾಜ ಸಾರ್ವತ್ರಿಕವಾಗಿ ಒಪ್ಪುತ್ತದೆ. ಆದರೆ ಮಹಿಳಾ ಸಮಾಜವು ಈ ಧಾರ್ಮಿಕ ವಿಧಿ ನಿಷೇದಗಳ ಬಗೆಗೆ ಅಸಹನೆಯನ್ನು ಹೊಂದಿರುವುದು ನನ್ನ ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ. ಕಾಡುಗೊಲ್ಲ ಪುರುಷ ಸಮಾಜವು ವಿವಾಹದಿಂದ ತಾಯ್ತನದವರೆಗೆ ಆಕೆ ಅನುಭವಿಸುವ ಮೈಲಿಗೆ ತನನ್ನು ಅನುಭವಿಸುವುದಿಲ್ಲ. ಹಟ್ಟಿಯ ಆಚೆಗೆ ಗುಬ್ಬದ ಅಥವಾ ಮರದ ಕೆಳಗೆ ಇದ್ದು ಕಷ್ಟ ಅನುಭವಿಸುವುದಿಲ್ಲ. ಬದಲಿಗೆ ಈ ಮೈಲಿಗೆ ಆಚರಣೆಯು ತಮ್ಮ ಸಾಂಸ್ಕೃತಿಕ ಮೌಲ್ಯವೆಂದು ಬೀಗುತ್ತದೆ. ಈ ಸಾಂಸ್ಕೃತಿಕ ಮೌಲ್ಯದಡಿಯಲ್ಲಿ ನಲುಗುವ ಮಹಿಳೆಯು ಈ ಮೌಲ್ಯವನ್ನು ತೀವ್ರವಾಗಿ ಪ್ರತಿರೋಧಿಸುತ್ತಾಳೆ.

ಈ ಬುಡುಕಟ್ಟಿನೊಳಗೆ ಹೆಣ್ಣಿಗೆ ಪುರುಷನ ನಂತರದ ಸ್ಥಾನವಿದೆ.ಇಲ್ಲಿ ಪುರುಷನ ದೇಹ ಶ್ರೇಷ್ಠನಾಗಿಯೂ ಹೆಣ್ಣಿನದೇಹವನ್ನು ಸಂತಾನೋತ್ಪತ್ತಿ ಋತುಚಕ್ರ ಈ ಕಾರಣಗಳಿಂದ ಕೀಳಾಗಿಯು ಕಾಣಲಾಗಿದೆ. ಆದರೆ "ಜೈವಿಕ ಸಾಕ್ಷ್ಯ ಹೆಣ್ಣನ್ನು ಗಂಡಿಗಿಂತ ಭಿನ್ನಳೆಂದು ಸ್ಥಾಪಿಸುತ್ತದೆಯೇ ಹೊರತು ಕೀಳೆಂದಲ್ಲ ಜೈವಿಕ ಸಂಗತಿಗಳಿಗೆ ಒಂದು ಮೌಲ್ಯ ಬರುವುದು ಸಾಮಾಜಿಕ ಕಾರ್ಯಕಪ್ಪಗಳಿಂದ ವಿಧಿ ನಿಷೇದಗಳಿಂದ."[2] ಹೆಣ್ಣಿನ ದೇಹ ಕೀಳು ಎಂದು ಭಾವಿಸಲು ಆಕೆಯು ದೈಹಿಕವಾಗಿ ಪಡೆದಿರುವ ಋತುಚಕ್ರ.. ಸಂತಾನೋತ್ಪತ್ತಿ. ಸ್ತ್ರೀಯರ ಲಕ್ಷಣಗಳಾದ ಈ ಸಂಗತಿಗಳ

ಬಗ್ಗೆ ಬುಡಕಟ್ಟು ಹೊಂದಿರುವ ಅಜ್ಞಾನವು, ಹೆಣ್ಣಿನ ಜೀವಕ್ಕೆ ಸಂಚಾಕಾರವಾಗುವ ಪ್ರಸಂಗವೆಂದು ಭಾವಿಸಿರುವುದು. ಮಾನವ ಸಂತತಿಯ ಫಲವಂತಿಗೆ ಕಾರಣವಾದ ಋತುಸ್ರಾವ ಅಪವಿತ್ರ ಎಂದು ಭಾವಿಸುವುದು, ಸ್ತ್ರೀದೇಹದ ಬಗೆಗಿನ ನಕರಾತ್ಮಕ ದೃಷ್ಟಿಯನ್ನು ಹೆಚ್ಚಿಸಿದೆ.

ಸ್ತ್ರೀದೇಹ ಮತ್ತು ಆಕೆಯ ಉತ್ಪಾದಕತೆಯ ಬಗೆಗಿನ ಈ ನಕರಾತ್ಮಕ ದೃಷ್ಟಿಯು ಬುಡಕಟ್ಟಿನೊಳಗೆ ಮಹಿಳೆಯ ವೈಯಕ್ತಿಕ ಬದುಕನ್ನು ನಿರಾಕರಿಸುತ್ತದೆ. ಇತರ ನಾಗರಿಕ ಸಮಾಜದೊಂದಿಗೆ ಮಹಿಳೆಯರು ಬೆರೆಯುವುದನ್ನು ಪ್ರತಿರೋಧಿಸುತ್ತದೆ. ತನ್ನ ವಿಧಿ ನಿಷೇದಗಳನ್ನು ಪಾಲಿಸಲು ಆಕೆಯು ಅರಿವಿನ ಮೂಲಕ ನಿರಾಕರಿಸಬಹುದಾದ ಎಲ್ಲಾ ಸಂಪರ್ಕಮಾರ್ಗಗಳನ್ನು ಜ್ಞಾನದ ಅರಹನ್ನು ಕಡಿದುಹಾಕುತ್ತದೆ. ಬಹು ಮಟ್ಟಿಗೆ ಆಕೆಯನ್ನು ಅನಕ್ಷರಸ್ಥರನ್ನಾಗಿ ಧಾರ್ಮಿಕ ಶ್ರದ್ಧೆಯುಳ್ಳ ಪತಿವ್ರತೆಯಾಗಿ, ಕುಟುಂಬವನ್ನು ಪಾಲಿಸಿ ಪೋಷಿಸುವ ಮಾತೆಯನ್ನಾಗಿ ಇರಿಸಲು ಬಯಸುತ್ತದೆ.

ಹೆಣ್ಣಿನ ದೈಹಿಕ ವ್ಯತ್ಯಾಸಗಳು ಜೈವಿಕವಾಗಿಯೇ · ಸ್ವೀಕರಿಸಿದ್ದರೆ ಲಿಂಗತಾರತಮ್ಯವೇ ಉಂಟಾಗುತ್ತಿರಲಿಲ್ಲ. ಮಹಿಳೆಯರ ಜೈವಿಕತೆಯು ಧಾರ್ಮಿಕ ಪರಿವೇಷದಲ್ಲಿ ಬುಡಕಟ್ಟಿನೊಳಗೆ ಪ್ರವೇಶಿಸಿದ್ದರಿಂದ ಲಿಂಗತಾರತಮ್ಯತೆಗೆ ಕಾರಣವಾಗುತ್ತಿದೆ. ಅಷ್ಟೇ ಅಲ್ಲ ಆಕೆಯ ಬೌದ್ಧಿಕ ಅಸ್ತಿತ್ವಗಳಾದ ಶಿಕ್ಷಣ, ಅಧಿಕಾರ, ಅಸ್ಮಿತೆಗಳಿಗೆ ಅಡ್ಡಗೋಡೆಯಾಗಿ ಪರಿಣಮಿಸಿದೆ. "ಹೆಣ್ಣು ಗಂಡಿನ ನಡುವಿನ ದೈಹಿಕ ವ್ಯತ್ಯಾಸ ಎಲ್ಲ ಲಿಂಗಾಧಾರಿತ ನೀತಿಯ ಮೂಲ ನೆಲೆ. ಈ ದೈಹಿಕ ಭಿನ್ನತೆಯನ್ನು ಭಿನ್ನತೆಯಾಗಿ ಮಾತ್ರ ಸ್ವೀಕರಿಸಿದ್ದರೆ ಸಮಸ್ಯೆ ಏಳುತ್ತಿರಲಿಲ್ಲ. ಆದರೆ ಪುರುಷ ದೇಹವು ಸಾಮಾನ್ಯ ಮತ್ತು ಶ್ರೇಷ್ಠ ಎಂಬ ಕಲ್ಪನೆಯ ಹಿನ್ನಲೆಯಲ್ಲಿ ಭಿನ್ನತೆಯು ಕೀಳೆಂದು ಪರಿಗಣಿತವಾಯ್ತು. ಹಾಗೂ ಆ ಮೂಲಕ ಅವರನ್ನು ಹಿಂದಕ್ಕೆ ತಳ್ಳಲು ಅದೊಂದು ನೆಪವಾಯಿತು".[3]

ಋತುಮತಿ ಮತ್ತು ತಾಯ್ತನ ಕಾಡುಗೊಲ್ಲ ಮಹಿಳೆಯ ಬದುಕಿನಲ್ಲಿ ಬಹುದೊಡ್ಡ ಮಹತ್ವದ ಸಂಗತಿಗಳು ಇವು ಆಕೆಯ ಬದುಕಿನ ಪಲ್ಲಟಗಳಿಗೆ ಕಾರಣವಾಗಿ ತೀವ್ರವಾಗಿ ಪ್ರಭಾವಿಸುತ್ತದೆ. ಋತುಮತಿ ಮತ್ತು ತಾಯ್ತನ ಆಕೆಯಲ್ಲಿ ಸೃಷ್ಟಿಯ ಅನನ್ಯತೆ ಮತ್ತು ಮಾನವ ಫಲವತ್ತತೆಯ ಶಕ್ತಿಯಾಗಿರುವುದರಿಂದ ಎರಡು ಸಂದರ್ಭದಲ್ಲೂ ಗೌರವಕ್ಕೆ ಪಾತ್ರಳಾಗುತ್ತಾಳೆ. ಈ ಗೌರವ ಆಕೆಗೆ ದೊರೆಯವುದು ಆಕೆಯಲ್ಲಿರುವ ಸೃಷ್ಟಿ ಶಕ್ತಿಯ ವೈಶಿಷ್ಟ್ಯತೆ ಕಾರಣದಿಂದಲೇ. ಹಾಗೂ ಋತುಮತಿ ಮತ್ತು ತಾಯ್ತನದ ಸಂದರ್ಭದಲ್ಲಿ ಅಶುದ್ಧಳಾಗಿ ಜೆನಿಗೆ ಕುಡಿಯುವ ಮೂಲಕ ಶುದ್ಧಳಾಗಿ ಹಟ್ಟಿಗೆ ಬಂದಾಗ. ಕಾಡುಗೊಲ್ಲ ಬುಡಕಟ್ಟು ಅಸ್ತಿತ್ವದಲ್ಲಿರುವ ಆರಂಭದಿಂದಲೂ ಮಹಿಳೆಯರಲ್ಲಿ ಈ ಸೃಷ್ಟಿಕ್ರಿಯೆಗಳ ಬಗೆ ಅಜ್ಞಾನವಿರುವುದು ಉಲ್ಲೇಖನೀಯ. ಕಾಡುಗೊಲ್ಲ ಬುಡಕಟ್ಟಿನ ಇತಿಹಾಸವನ್ನು ಕಟ್ಟಿಕೊಡುವ ಸಾಹಿತ್ಯದಲ್ಲಿ ಮಹಿಳೆಯ ಸೃಷ್ಟಿಕ್ರಿಯೆಗಳ ಬಗೆಗೆ ಮೈಲಿಗೆ ಭಾವನೆಗಳೇ ಇವೆ. "ಜುಂಜಪ್ಪನ ಕಾವ್ಯದಲ್ಲಿ ಕಾಡುಗೊಲ್ಲ ಮೂಲ ಪುರುಷರು ನಮ್ಮ ಹೆಂಗ್ಸುರು ಸೂತಕವಾದ್ರೆ ಹಟ್ಟಿ

ಹೊರಗಿರ್ತಾರೆ" ಎಂದು ಊರಿನ ಪ್ರಾಜ್ಞರಿಗೆ ಹಮ್ಮಿನಿಂದ ಹೇಳಿಕೊಳ್ಳುತ್ತಾರೆ. ಕಾಡುಗೊಲ್ಲ ಸಾಹಿತ್ಯದೊಳಗೆ ಪುರುಷ ನಿರೂಪಿಸುವ ಮೈಲಿಗೆ ಭಾವಗಳಲ್ಲಿ ಸ್ತ್ರೀ ಸಂವೇದನೆಗಳಿಲ್ಲ. ಕಾಡುಗೊಲ್ಲ ಮಹಿಳೆಯರು ನಿರೂಪಿಸುವ ಕೆಲವು ಪದ್ಯಗಳಲ್ಲಿ ಈ ಸಂವೇದನೆಗಳನ್ನು ದಾಖಲಿಸಬಹುದಾಗಿದೆ. ಕೃಷ್ಣಮೂರ್ತಿ ಹನೂರು ಅವರು ಸಂಗ್ರಹಿಸಿರುವ ಚಳ್ಳಕೆರೆ ತಾಲ್ಲೂಕು. ಬೆಳಗೆರೆ ಗೊಲ್ಲರಹಟ್ಟಿಯ ಸಿರಿಯಜ್ಜಿ' ಹಾಡಿರುವ ಸಾಹಿತ್ಯದಿಂದ ಕೆಲವು ಭಾಗಗಳನ್ನು ಆಯ್ದುಕೊಳ್ಳಲಾಗಿದೆ. ಅವುಗಳನ್ನಿಲ್ಲಿ ಗಮನಿಸ ಬಹುದಾಗಿದೆ.

ಅಡವನ್ನೆರಡು ವರಸಾಕೆ ಆರಾದಿ ದ್ರೋಪಾದಿ ಸೂಸಕವಾದಳೇ
ಅಡದುವಾನಿಮನಿಗೆ ಕೇಡು ಬಡಿದಾವು
ತೊರಿದು ಬನ್ನೀರರಣ್ಣಕ್ಕ

ಪುಟ್ಟೀದನ್ನೆರಡು ವರುಸಾಕೆ ಆರುವಾರ ನಿಸ್ತ್ರೇ ಸೂಸುಕವಾದಾಳೇ
ವಾರಾ ಮಂಗಳವಾರ ರೆಂಜೆ ಸೂಸುವಾದಾಳೇ
ಹೆಣ್ಣು ಪಟ್ಟಣದೊಳಗೆ ಇರಬಾರದಂತ
ಅಣ್ಣಯ್ಯ ಸಾರುತಾನೇ

ವಾರ ಸುಕ್ಕರವಾರ ಆರುವಾರ
ನಿಸ್ತೇ ಸೂಸುಕವಾದಾಳೇ
ಬುಕ್ಕಾಪಟ್ಟಣದೊಳಗ ಇರಬಾರದತೇಳಿ
ಅಪ್ಪಯ್ಯ ಸಾರುತಾನೇ

ಅಕ್ಕಗಳು ನಮಗಿಲ್ಲ ತಾಯಿಗಳು ನಮಗಿಲ್ಲ
ಆರುವಾರ ತಂದೆಗಳು ನಮಗಿಲ್ಲವೇ
ಆರೊನ್ನ ಅಡವ್ಯಾಗ ಸಾಲೂ ಜೇವಿನ ಮರ
ಅವುಗಾಳಮ್ಮ ತಾಯಿ ತಂದೇ

ಅಣ್ಣಗಳು ನಮಗ್ಯಾತಕೆ ಶಿವ ಶಿವನೆ ತಮ್ಮಗಳು
ನಮಗ್ಯಾತಕೋ

ಆರೊನ್ನ ಅಡವ್ಯಾಗ ಸಾಲು ಅಳ್ಳಿಯ ಮರ
ನಮ್ಮ ಅಣ್ಣಾತಮ್ಮ

ಅಕ್ಕಗಳು ನಮಗ್ಯತಕ್ಕೊ ತಂಗೀರು ನಮಗ್ಯತಕೋ
ಸಿವನವನೆ ತಂಗೀರು ನಮಗ್ಯಾತಕೋ
ಆಟ್ಟುಂಬೋ ಅಡವ್ಯಾಗ ಸಾಲೂ ಅತ್ತಿಯ ಮರ
ನಮ್ಮ ಅಕ್ಕಾ ತಂಗೀ[4]

ಮುಟ್ಟು ಆಗಿರುವೋಳು ಅಟ್ಯಾವರಗಿರುವೋಳು
ಬತ್ತೀದ ಎಲೆಯ ಮೆಲುವೋಳು
ಬತ್ತೀದ ಎಲೆಯಾ ಮೆಲವೋಳು ಗೊಲ್ಲತಿನ
ಗ್ಯಾನ ಗೋವಿಂದ ಒಲುದನಲ್ಲೇ

ವಲಿಯಾಗಿರಲೇಳೆ ವೂರಾವರಗಿರಲೇಳೆ
ಬಾಡೀದ ಎಲೆಯಾ ಮೆಲಲೇಳೆ
ಬಾಡೀದ ಎಲೆಯಾ ಮೆಲಲೇಳೆ ಗೊಲ್ಲತಿನ
ಅಗಲಿಯೊಂದರಗಳಿಗೆ ಇರಲಾರೆ.[5]

ವೋಣ್ಯಾಗಂಜನದೇವಿ ಬಾಲಾನ ಪಡೆದಾರೆ
ತೊಡಿಯ ತೊಳುವಕ ನೀರಿಲ್ಲ
ತೊಡಿಯ ತೊಳುವಕ ನೀರಿಲ್ಲ ಅನುಮಯ್ಯ
ದೂರೇಳು ಸಮುದ್ರನ ತಿರುವ್ಯಾನೆ[6]

ಮೇಲಿನ ಸ್ತ್ರೀ ಪಠ್ಯಗಳಲ್ಲಿ ಮಹಿಳೆ ಋತುಮತಿಯಾದಾಗ, ಮಾಸಿಕ ಋತುವಿನ ಸಂದರ್ಭದಲ್ಲಿ, ಹೆರಿಗೆಯ ಸಂದರ್ಭದಲ್ಲಿ ಅನುಭವಿಸುವ ಸಂವೇದನೆಗಳಿವೆ. ಈ ಸಂವೇದನೆಯಲ್ಲಿ ತನ್ನ ಮೈಲಿಗೆತನವನ್ನು ಸಾಂಸ್ಕೃತಿಕ ಹೆಗ್ಗಳಿಕೆ ಎಂದು ಜೀಗುಪಿಕೆ ಇಲ್ಲ. ಬದಲಿಗೆ ತನ್ನ ಒಂಟಿತನ, ಹಟ್ಟಿಯ ಹೊರಗಿರಬೇಕಾದ ಹೊಲೆತನ ಹೆರಿಗೆ ಸಂದರ್ಭದಲ್ಲಿ ನೀರು, ಊಟ ವಿಲ್ಲದೆ ಅನುಭವಿಸಿದ ಸಂಕಟಗಳು ಕಾಣಿಸುತ್ತವೆ.

12 ವರ್ಷಕ್ಕೆ "ಸೂತಕ"ವಾದ ದ್ರೌಪದಿಯನ್ನು ಹಟ್ಟಿಯಲ್ಲಿ ಇರಿಸಿಕೊಳ್ಳಬಾರದೆಂದು ಆಕೆಯ ಅಣ್ಣ ಮತ್ತು ಅಪ್ಪ ಆಕೆಯನ್ನು ಅಡವಿಗೆ ಬಿಟ್ಟು ಬರುತ್ತಾರೆ. ಆ ಸಮಯದಲ್ಲಿ ತಂದೆ, ತಾಯಿ, ಅಕ್ಕ, ತಮ್ಮ ಅಣ್ಣ ಯಾರು ಜೊತೆಗಳಿಲ್ಲದೆ ಸಾಲು ಬೇವಿನ ಮರ, ಆಳ್ಳಿಯಮರ, ಅತ್ತಿಯ ಮರದಿಂದ ಕುಟುಂಬದ ಪ್ರೀತಿಯನ್ನು ಬಯಸುತ್ತಾಳೆ. ದ್ರೌಪದಿ ಮಹಾರಾಣಿಯಾದರೂ ಪಾಂಡವರ ಪತ್ನಿಯಾದರೂ ಕಾಡುಗೊಲ್ಲ ಬುಡಕಟ್ಟಿನ ಹೆಣ್ಣುಮಗಳಾದ ಮೇಲೆ ಅಲ್ಲಿನ ಹೆಣ್ಣಿನಂತೆ ಋತುಮತಿಯಾದರೆ ಹಟ್ಟಿಯ ಆಚೆಗೆ ಇರಬೇಕಾಗುತ್ತದೆ. "ಪ್ರತಿಯೊಂದು ಮಹತ್ವದ ಘಟನೆಯನ್ನು ಪ್ರಕೃತಿಯಿಂದಲೇ ಹೊಸ ಸೃಷ್ಠಿ ಯಾವಾಗಲೂ ಸಾಮಾನ್ಯ ಮನುಷ್ಯನಿಂದ ಆಗುವಂಥಾದ್ದಲ್ಲ ಎಂಬುದು ಬುಡಕಟ್ಟಿನ ಕಲ್ಪನೆಯಿರಬಹುದು"[7] ಎಂಬುದನ್ನು ಒಪ್ಪಲು ಕಷ್ಟವೆನಿಸುತ್ತದೆ. ಋತುಮತಿಯಾಗುವಿಕೆ ಬಗೆಗಿನ ಪ್ರಕೃತಿಯ ಕಲ್ಪನೆಗಿಂತ ಹೆಣ್ಣಿನ ಈ ಸಂದರ್ಭ ಸೂತಕ, ಮೈಲಿಗೆ, ದೇಹ ಅಶುದ್ಧವಾಗುವಿಕೆ ಎಂಬ ಭಾವವಿದೆ.ಈ ಅಜ್ಞಾನ ವೈಚಾರಿಕತೆಯ ಮೂಲಕ ಪರಿಹರಿಸಿಕೊಳ್ಳುವುದು ಇಂದಿನ ತುರ್ತಿನ ಅಗತ್ಯವೂ ಆಗಿದೆ.

ಜನಪದ ಸಾಹಿತ್ಯವು ಸಮಾಜದ ಮುಖಗನ್ನಡಿಯಾಗಿದ್ದು ಕಾಡುಗೊಲ್ಲರ ಈ ಸಾಹಿತ್ಯವು ಮಹಿಳೆಯರ ಬದುಕಿನ ಮಜಲುಗಳಲ್ಲಿನ ಸಿಕ್ಕುಗಳನ್ನು ತೋರಿಸಿಕೊಡುತ್ತದೆ. "ಭಾರತೀಯ ಸಮಾಜದಲ್ಲಿ ಬಹುಹಿಂದಿನಿಂದಲೂ ಸ್ತ್ರೀ ಸಮುದಾಯವು ನಾನಾ ಆಚರಣೆ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಶೋಷಣೆಗಳಿಗೆ ಒಳಗಾಗಿಯೇ ಬಂದಿರುತ್ತದೆ ಎಂಬುದು ಶಿಷ್ಟ ಕಾವ್ಯಗಳೇ ಅಲ್ಲದೆ ಜನಪದ ಸಾಹಿತ್ಯದಪರಂಪರೆಯಿಂದಲೂ ತಿಳಿದು ಬರುತ್ತದೆ."[8] ಮುಟ್ಟಾಗಿ ಮೂರುದಿನ ಐದು ದಿನಗಳವರೆಗೆ ಹಟ್ಟಿಯ ಹೊರಗಿರುವ ಮಹಿಳೆಯ ಏಕಾಂಗಿತನದ ಭಾವಗಳನ್ನು ಆಕೆ ಮಾತ್ರ ವಿವರಿಸಲು ಸಾಧ್ಯ. ಕೆಲವೊಮ್ಮೆ ಊಟವಿಲ್ಲದೆ ಬತ್ತಿದ ಎಲೆ ಅಡಿಕೆ ಮೆಲ್ಲುತ್ತ ಅದರ ರಸ ಕುಡಿಯುತ್ತಾಇರಬೇಕಾದ ಸ್ಥಿತಿ ಇಲ್ಲದಿಲ್ಲ. ಅಂತಹ ಸಮಯದಲ್ಲಿ ಕೃಷ್ಣನಂತಹ ಸಂಗಾತಿಯನ್ನು ಬಯಸುತ್ತಾಳೆ. ಮೈಲಿಗೆಯಾಗಿದ್ದರೂ ಊರ ಹೊರಗಿದ್ದರೂ ಸ್ತ್ರೀಯ ಭಾವಗಳನ್ನು ಅರ್ಥೈಸಿಕೊಂಡು ಸ್ನೇಹದಿಂದ ವರ್ತಿಸುವ ಕೃಷ್ಣನಂತ ಸಾಂಗತ್ಯದ ಆಶೆ ಅವಳ ಮನಸ್ಸಿನ ಅಮೂರ್ತ ಬಯಕೆಯೂ ಆಗಿದೆ. ಹೆರಿಗೆಯ ಹೊತ್ತಿನಲ್ಲಿ ನೋವು ಕಾಣಿಸಿದ ತಕ್ಷಣ ಹಟ್ಟಿಯ ಆಚೆಗೆ ಗುಬ್ಬ ಸೇರಿ ಮಗುವನ್ನು ಹೆತ್ತ ಮೇಲೆ ತಿಂಗಳುಕಾಲ ಅಲ್ಲಿಯೇ ಉಳಿದು ತನ್ನ ಆಹಾರ ತಾನೇ ಬೇಯಿಸಿ ತಿನ್ನುವಾಗ, ಸ್ನಾನಕ್ಕೆ ಬಂಡೆಯ ಮರೆಗೆ ಹೋಗಬೇಕಾದಾಗ, ನೀರಿಲ್ಲದೆ ಸ್ನಾನಕ್ಕೆ ನರಳಿದಾಗ ಆಕೆಯ ಕಷ್ಟ ಹೆಣ್ಣಿನ ಜನ್ಮವನ್ನೇ ಅಳಿಯುವಂತದ್ದಾಗಿದೆ. ಜನಪದ ಸಾಹಿತ್ಯದಲ್ಲಿ ದೊರೆಯುವ ಈ ಸಂಗತಿಗಳು ಕ್ಷೇತ್ರಕಾರ್ಯದಲ್ಲಿ ದೊರೆಯುವ ಮಾಹಿತಿಗಳಿಗೂ ವ್ಯತ್ಯಾಸಗಳೇನೂ ಇಲ್ಲ. ಹೆಣ್ಣಿನ ಋತು. ಹೆರಿಗೆ ಸಮಯದ ಈ ಆಚರಣೆಗಳಿಗೆ ಸಂಬಂಧಿಸಿದ ಈ ಸಂಗತಿಗಳಿಗೂ ಕ್ಷೇತ್ರಕಾರ್ಯದಲ್ಲಿ ದೊರೆಯುವ ಮಾಹಿತಿಗಳಿಗೂ ವ್ಯತ್ಯಾಸಗಳೇನೂ ಇಲ್ಲ. ಹೆಣ್ಣಿನ ಋತು. ಹೆರಿಗೆ

ಸಮುಯದ ಈ ಆಚರಣೆಗಳಗೆ ಮಹಿಳೆಯರಲ್ಲಿ ವಿಭಿನ್ನ ರೀತಿಯ ಪ್ರತಿರೋಧಗಳಿವೆ. ನಾನು ಭೇಟಿಮಾಡಿದ ಮಹಿಳೆಯರಲ್ಲಿ 60-80 ವರ್ಷದ ಮಹಿಳೆಯರು ಬುಡಕಟ್ಟಿನಲ್ಲಿ ಈ ಸ್ಮೃತಿಕ್ರಿಯೆಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಬಯಸುತ್ತಾರೆ. ಅದಕ್ಕೆ ಅವರು ನೀಡುವ ಕಾರಣ ಹಟ್ಟಿಯೊಳಗಿರುವ ದೇವರು ತೊಂದರೆ ಮಾಡುತ್ತಾನೆಂಬ ಭಯ. ಸುಮಾರು 16 ರಿಂದ 25 -30 ವರ್ಷದ ಮಹಿಳೆಯರು ಈ ಸ್ಮೃತಿಕ್ರಿಯೆಗಳನ್ನು ಖಡಾಖಂಡಿತವಾಗಿ ಪಾಲಿಸಲು ಒಪ್ಪುವುದಿಲ್ಲ. ಬಲವಂತಕ್ಕೆ ಆಚರಿಸುವುದಾಗಿ ಹೇಳುತ್ತಾರೆ. ಕೆಲವೊಮ್ಮೆ ಮುಂದುವರಿದು ಋತುಮತಿ ಹೆರಿಗೆ ಆದ ಸಂದರ್ಭ ಬಿಟ್ಟು ಮಾಸಿಕ ಋತುವಾದಗ ಮನೆಯಲ್ಲಿಯೇ ಇರುತ್ತೇವೆ ಎಂಬ ಪ್ರಯತ್ನವನ್ನು ಮಾಡಿದ್ದಾರೆ. ಇಂತಹ ಬದಲಾವಣೆಗೆ ಇಂದಿನ ಯುವತಿಯರು ತಯಾರಾಗುತ್ತಿದ್ದು ಈ ನಡಿಗೆ ಇನ್ನೂ ಮೊದಲಮೆಟ್ಟಿಲಲ್ಲಿ ನಿಂತಿದೆ. ಇದು ಸ್ವಾಗತಾರ್ಹ.

ಋತುಚಕ್ರವನ್ನು ಸಿರಿಯಜ್ಜಿ 'ಅಣ್ಣೊಡೆದು ಮ್ಯಾಲೆ ಸಿಡಿದಾವೆ' ಎಂದು ಕಾವ್ಯಾತ್ಮಕವಾಗಿ ಹಾಡುತ್ತಾಳೆ. ತಾಂತ್ರಿಕರು ಈ ಕ್ರಿಯೆಯನ್ನು ಖಪುಷ್ಪ ಎಂದು ಕರೆದಿದ್ದಾರೆ ಇದರರ್ಥ ಆಕಾಶದ ಹೂವು' ಎಂದು ಸಸ್ಯಮೂಲದ ಉತ್ಪತ್ತಿಯಂತೆ ಸ್ತ್ರೀಯರ ಸಂತತಿ ಉತ್ಪನ್ನದ ಮೊದಲ ಸ್ಥಿತಿಯನ್ನು ಸಿರಿಯಜ್ಜಿ ಸಂಗತವಾಗಿಯೇ ಗುರುತಿಸಿದ್ದಾರೆ. ಇದೊಂದು ಪವಿತ್ರ ಕ್ರಮ ಋತುಮತಿಯಾದಾಗ ಉಂಟಾಗುವ ಋತುಸ್ರಾವ ಕುರಿತು ವೈಜ್ಞಾನಿಕ ಗ್ರಹಿಕೆ ಭಿನ್ನರೀತಿಯದು "ಸ್ತ್ರೀಯರಲ್ಲಿ ಗರ್ಭಾಶಯದಲ್ಲಿ ಅಂಡವು ಫಲಿತಗೊಂಡು ಉತ್ಪತ್ತಿಯಾಗುವ ಭ್ರೂಣ ತನ್ನಲ್ಲಿ ಹುದುಗುವುದೇನೋ ಎಂಬ ನಿರೀಕ್ಷೆಯಿಂದ ಗರ್ಭಕೋಶದ ಒಳಪೊರೆ (ಎಂಡೋಮಿಟ್ರಿಯಂ) ಪ್ರತಿ ತಿಂಗಳೂ ಮೆತ್ತನೆಯ ಹಾಸಿಗೆಯಂತೆ ಬೆಳೆಯುತ್ತಿದೆ. ತಿಂಗಳ ಮೊದಲ ಹದಿನಾಲ್ಕು ದಿನ ಈ ಬೆಳವಣಿಗೆಯ ಕ್ರಿಯೆ ನಡೆಯುತ್ತದೆ. 14ನೇ ದಿನದ ಸುತ್ತಮುತ್ತ ಅಂಡ ಬಿಡುಗಡೆಯಾಗಿ ಗರ್ಭ ಕಟ್ಟಿಲ್ಲವೆಂದು ಖಾತ್ರಿಯಾಗುತ್ತಿದ್ದಂತೆಯೇ ಒಳ ಪೊರೆಯ ಬೆಳವಣಿಗೆ ಸ್ಥಗಿತಗೊಳ್ಳುತ್ತದೆ. ಬೆಳವಣಿಗೆಯಾದ ಮೇಲೆ ಲೋಳ್ಪೊರೆ ಕುಗ್ಗತೊಡಗಿ ಚಿರುಟಿ ಮುಂದಿನ ಎರಡು ವಾರಗಳಲ್ಲಿ ಸ್ರಾವವಾಗಿ ಹೊರಹರಿಯುತ್ತದೆ. ಇದೇ ಋತುಸ್ರಾವ"[10]

ಹೆಣ್ಣಿನ ಈ ದೈಹಿಕ ಕ್ರಿಯೆಯು ವೈಜ್ಞಾನಿಕವಾಗಿ ವಿವರಿಸಿಕೊಳ್ಳದಿರುವುದು ಹಿಂದಿನಿಂದಲೂ ಇಂದಿಗೂ ಮುಂದುವರಿಯುತ್ತಿರುವುದೇ ಬರುತ್ತಿರುವುದರಿಂದ ಮೌಢ್ಯಗಳಿಗೆ ಕಾರಣವಾಗಿದೆ. ಅಲ್ಲದೆ ಜೈವಿಕವಾಗಿರುವ ಸಂಗತಿಗಳನ್ನು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕ ವಿಧಿ ನಿಷೇಧಗಳಿಂದ ವಿವರಿಸಿಕೊಂಡಿರುವುದು ಅದರ ಬಗೆಗಿನ ಭಯವನ್ನು- ಹೆಮ್ಮೆಯನ್ನು ಉಂಟಾಗಿಸಿದೆ. ಕ್ಷೇತ್ರಕಾರ್ಯದ ಸಂಧರ್ಭವಲ್ಲಿ ಋತುಸ್ರಾವ, ಮಾಸಿಕ ಋತು, ಹೆರಿಗೆಯ ಸಂದರ್ಭದ 'ಮೈಲಿಗೆ'

ಆಚರಣೆ ಕುರಿತು ಮಹಿಳೆಯರನ್ನು ಮಾತನಾಡಿದಾಗ ಅವರು ಹೇಳಿದ ಮಾತುಗಳು ವಿಶೇಷವೆನಿಸಿದವು.

'ಹೊರಗಡೆ ಆದ್ರೆ ಹಟ್ಟಿ ಹೊರಗೋಗಬೇಕು. ಹಟ್ಟಿಯಲ್ಲಿ ದೇವಸ್ಥಾನ ಇದೆ ಇರಬಾರದು.'[11]

' ಕಷ್ಟ ಅಂದ್ರೆ ನಾವು ಬಾಳಿಲ್ವೆ'[12]

'ಆಗ ಅವ್ರೋ ಬೆಡ್‌ಸೀಟ್ ಇಲ್ಲ ಹೊದ್ಕಂಬಕೆ, ಮನೇಲಿ ನೀರು ಉಯ್ಯತ್ತಿರಲಿಲ್ಲ.'[13]

'ನಾನು ರಜಸ್ತ ಆದ ಮೇಲೆ ಹೊರಗೆ ಇದ್ದೆ ಮನೆ ಮಠ ಇಲ್ಲ. ಮಳೆ ಬಂದ್ರೆ ನೆನೆಭೇಕು.ದಪ್ಪ ಕಾಟನ್ ಸೀರೆ ಮಡಿಸಿ ಉಡುತಿದ್ವಿ. ಬಂಡೆ ಮರೆಲಿ ಸ್ನಾನ. ಅನುಕೂಲ ಇರೂರು ಕಾಸಿ ಉಯ್ತಾರೆ.'[14]

'ನಮ್ಮ ಕಷ್ಟ ಇವರು ಮಾಡ್ತರೇನಮ್ಮ. ಆ ಕಾಲಕ್ಕೂ ಈ ಕಾಲಕ್ಕೂ ಬಿಡ್ತತೆ. ಓಂದ್ಲುದು ನಡೆನೆ ಒಳ್ಳೇದು. ಇವರಾದ್ರು ಸುಖವಾಗಿ ಇಲ್ಲ ಬಿಡಮ್ಮ . ಸುಖವಾಗಿ ಊಟ ಮಾಡ್ತರೆ ಓಗಲಿ. ನಾವೋ ನೆಲದ ಧೂಳು ನೆತ್ತಿಮ್ಯಾಲೆ ಹೊಯ್ಕೋತಿದ್ವಿ'[15]

'ಹೊದ್ ಕೊಳ್ಳೋದು ಅದೆ, ಹುಟ್ಟಿಕೊಳ್ಳೋದು ಅದೇ.ಈಗ ಯಾರು ಅದನ್ನು ಪಾಲೋ ಮಾಡಲ್ಲ. ಕೆಲಸದಾಗೆ ಇದ್ದೀವಂತ ಇಂಗ್ ಮಾಡ್ತೀಯೆನೆ ಅಂಬ್ತರೆ. ಏನಾದ್ರೂ ಹೆಚ್ಚು ಕಡಿಮೆ ಆದ್ರೆ ಅವಳು ಅಂಗಿರಲಿಲ್ಲ ಅಂತ ಅಂಡ್ಕಂಬ್ತರೆ. ನಾನು ಪೋಷಕ ಸಭೆ, ತಾಯಂದಿರ ಸಭೆಲಿ ಅಂಗಿರಬೇಕು, ಈಂಗಿರಬೇಕು ಎಂದು ಹೇಳಿದ್ರೂ ರಾತ್ರಿ ಮನೆಗೆ ಹೋದಾಗ ನಾನೇನೆ ಯೋಚನೆ ಮಾಡ್ತೀನೆ. ನಾನೇ ತಪ್ಪು ಮಾಡಿದೀನಿ ಅಂತ. ನಂಗೆ ಇಂತ ಕೆಟ್ಟ ಕನಸಾಯ್ತು ಅಂತ.ನಾನು ಸಮೇತ ತಿಂಗಳಿಗೆ ಮೂರುದಿನ ಹೋಗ್ತಿದ್ದೆ.' ಈಗ ಬಿಡ್ಬಿಟ್ಟೆ. ಮಗಿನ ಯಾಕೆ ಬರ್ಲಿಲ್ಲ ಅಂತ ಕೇಳ್ದ್ರೆ ನಮ್ಮಮ್ಮ ಇರ್ಲಿಲ್ಲ ಅಂತವೆ.'[16]

'ನಾವು ಬಟ್ಟೆ ತೊಳೆದು ಆರಿಸಿ ಉಟ್ಟುಕೋತಿದ್ವಿ. ಬಟ್ಟೆತೊಳೆದು ಆರಿಸ್ಕಂಡು ಅದನ್ನೇ ಹಾಕೋಳ್ತಾ ಇದ್ವಿ. ಮೂರು ತಿಂಗಳು ಆಚೆ ಇದ್ವಿ.ಹಿರಿಯರು ಹೇಳಿದ ಮಾತು ಕೇಳ್ಬೇಕು. ಮಾತು ತೆಗೆದು

ಹಾಕಂಗಿಲ್ಲ. ನನ್ನ ಕೈಯಾನ ಅಡಗೆ ಮಾಡ್ಕೊಂಡು ನಾನೆ ತಿಂದೆ ಇದೋಷ್ಟು ಕಷ್ಟ ಬೇಕಿತ್ತ ನನಗೆ ಅಂತ ಅತ್ಕಂಡು ಕರ್‍ಕಂಡು.'[17]

'ಅದ ತಕ್ಷಣವೇ ಹೆಣ್ಣುಮಕ್ಕಳನ್ನು ಕೂರಿಸಲ್ಲ. ಆಡಿಕೊಳ್ಳೋದು ಜಾಸ್ತಿ. ಸೂತಕ ಕಳಕೋ ಯಾವಗಮ್ಮ ಕಳಕೊಳ್ಳೋದು. ನಿಮ್ಮಿಂದ ಹಟ್ಟೀನೆ ಕಟ್ಟೋಯ್ತು ಅಂಬ್ತಾರೆ.'[18]

'ಇದ್ನೆಲ್ಲಾ ನೋಡಿ ನಾವು ಎಲ್ಲರೂ ಬೇರೆ ಇರಬೇಕು ಟೌನ್ ಸೇರಬೇಕು ಅನ್ಸುತ್ತೆ.'[19]

'ಹೆತ್ರ ಸತ್ರ ಎಲ್ಲೆ ಇದ್ರು ಬಂದು ದುಡ್ಡು ಕಟ್ಟಿ ಹೋಗಬೇಕು ಗೌಡ, ಪೂಜಾರಿ ಮಾಡಿಕೊಂಡಿರೂ ಸಿಸ್ಟಮ್'.[20]

'ಮೂರು ದಿನ ಹೊರಗೆ ಇರ್ತಾರೆ ಒಕ್ಕಲಿಗರ ಮನೆ ಹತ್ರ ಹೋಗ್ತಾರೆ. ಊರೊಳಗೆ ಹೋಗಿ ಇರ್ತಾರೆ. ಸ್ನಾನ ಬಯಲಲಿ ಮಾಡಬೇಕು, ಹೆಣ್ಣುಮಕ್ಳು ಬಟ್ಟೆ ಬದಲಾಯಿಸೋಕೆ ತೊಂದ್ರೆ.'[21]

'ಹೋಗಲ್ಲ ಅಂದ್ರೆ ಮನೆಯವರ ಕೇಳಬೇಕಲ್ಲ. ಊಟಕ್ಕೆ ಹಾಕ್ತಾರೆ ನಿದ್ದೆ ಬಂದ್ರೆ ಮನಗೋದು ಇಲ್ಲದೆ ಹೋದ್ರೆ ಕುಳಿತುಕೊಳ್ಳೋದು.'[22]

'ಹಟ್ಟಿ ಹೊರಗೆ ಕೆಲವರು ಇರ್ತಾರೆ. ಕೆಲವರು ಇರಲ್ಲ. ಹೆರಿಗೆ ಆದಾಗ 9 ದಿನ ಇರ್ತಾರೆ. ಮೈನೆರೆದಾಗ 3–4 ದಿನ ಇರ್ತಾರೆ ಅನುಕೂಲ ಇದ್ದೋರು ವಸಗೆ ಹಾಕ್ತಾರೆ ಇಲ್ದೋರು ಇಲ್ಲ. ಆರತಿ ಮಾಡಿ ಒಳಗೆ ಕರ್‍ಕಂಬ್ತಾರೆ.'[23]

'ಮೂರು ದಿನ ಇರ್ತೀವಿ ಸ್ನಾನಾನೂ ಇಲ್ಲ ಏನೂ ಇಲ್ಲ. ಹೊಂಗೆ ಸೊಪ್ಪು ಮ್ಯಾಲೆ ಹಾಸಕೊಳ್ಳೂದು ಕೂತಿರೋದು ನಂಗೆ 10 ಮಕ್ಕಳು ದೇವರು ಹೆಂಗೆ ಕಾಪಾಡಿದ್ನೋ.'[24]

'ಭಯ ಆಗ್ತದೆ. ಇದು ಬೇಡ ಅನ್ಸುತ್ತೆ. ಈಗ ಗುಡ್ಲು ಹಾಕಲ್ಲ. ಚಿಕ್ಕ ವಯಸ್ಸಿಗೆ ಹಾಕಲ್ಲ ಮದುವೆ ಟೈಮಾಗೆ ಗುಡ್ಲು ಹಾಕ್ತಾರೆ. ದೊಡ್ಡವರಾದ್ರೂ ಯಾರಿಗೂ ಗೊತ್ತಿಲ್ದಂಗೆ ಇರ್ತಾರೆ. ಗೊತ್ತಾದ್ರೆ ಎತ್ತಂಡ್ಕು ಹೋಗಿ ಮದುವೆ ಮಾಡ್ತಾರೆ.'[25]

'ಹೊಂಗೆ ಸೊಪ್ಪು ಮೇಲೆ ಇರ್ತಾ ಇದ್ವಿ ಎಬ್ಬುಸೋರು ಇಲ್ಲ ಕುರುತೋರು ಇಲ್ಲ.'[26]

'ರೂಮು ಅಷ್ಟೆ. ಕಸಗುಡಿಸಲ್ಲ ಧೂಳು ತುಂಬ್ಕಂಡೈತೆ ಅಚೆಯಾದರೂ ರೂಮು ಹೊರಗೆ ಕೂಡ್ತಾರೆ. ಮನೇಲಿ ಇರೋದು ಮೇಲು ಅನ್ಸುತ್ತೆ. ಎಲ್ಲಾ ಟೈಪಲು ಇರಬೇಕು. ನಾವೇ ಒಂಥರಾ ಕಂಡ್ರೆ ಆಗ್ತದಾ.'[27]

'ಈಗ ಮುಟ್ಟುಕಂಡು ಒಬ್ರು ಜೊತೇಲಿ ಇರ್ತೀವಿ. ಕಾವಲಾಗಿ ಯಾರಾದ್ರೂ ಒಬ್ರು ಇರ್ತಾರೆ. ಪೋನ್ ಗಳು ಅವಲ್ಲ ಪೋನ್ ಮಾಡಿದ್ರೆ ಯಾರಾದ್ರು ಬರ್ತಾರೆ.'[28]

'ಈಗ ಹೆರಿಗೆ ನೋವು ಕಾಣಿಸಿದ್ರೆ ಅಂಬುಲೆನ್ಸ್‌ಗೆ ಪೋನ್ ಮಾಡ್ತಾರೆ ಆಸ್ಪತ್ರೇಲೆ ಏಳು ದಿನ ಇದ್ದು ಬರ್ತಾರೆ .ದುಡ್ಡು ಕೊಟ್ಟಾದ್ರು ಇದ್ದು ಬರ್ತಾರೆ.'[29]

'ಈಗ ಯಾರು ನಡೆಸ್ತಿಲ್ಲ ಬೇಡ ಅಂದ್ರೆ ಅವರು ನಡೀಸಬೇಕು ಅಂತಾರೆ, ತೊಂದ್ರೆಲಿದ್ರು ಬಿಡಲ್ಲ'.[30]

'ನಮ್ಮ ಹೆಣ್ಣು ಮಕ್ಕಳನ್ನು ನಮ್ಮ ಹಟ್ಟಿಯಲ್ಲಿ ಇಟ್ಕಂಡ್ತೀವಿ ಯಾರೂ ಏನೂ ಅಂಬಲ್ಲ, ಅವರು ಹೇಳಿದ್ರು ಅಂತ ಕೇಳಕಾಗ್ತದ. ನಾವು ಕೇಳಲ್ಲ ನಡಸೇ ನಡೆಸ್ತೀವಿ'.[31]

'ನಾವು ಬದಲಾಯಿಸಕಾಗ್ತದ. ಹಟ್ಟಿಯಲ್ಲಿ ಒಪ್ಪಿಲ್ಲ. ಬದಲಾಯಿಸಕೋದ್ರೆ ನಡೆಸಲ್ಲ, ಇಲ್ಲ ಕಣಮ್ಮ ಇದೆ ಇಲ್ಲಿ ಅಂತಾರೆ. ತೊಂದರೆ ಅನ್ಸುತ್ತೆ ಆದ್ರು ದೇವರಿಗೆ ಅಂಜಬೇಕು. ಹಿಂದಿನ ಹಾಗೆ ನಡೆಸಬೇಕು.'[32]

"ಈಗಿಂದೇನು ಬಿಡಮ್ಮ ನಾವು ಮರದ ಕೆಳಗೆ ಕುತ್ಕಂಬ್ತಿದ್ವಿ ಅಡಿಗೆ ಮಾಡ್ಕಂತಿದ್ವಿ, ಅಡಿಗೆ ಮಾಡ್ಕಂದಿದ್ದ ಹೊಗೆ ಸೈತ ಹಟ್ಟಿ ಒಳಕ್ಕ ಹೋಗ್ದಂಗೆ ಇದ್ವಿ ಈಗನೋರು ಇರ್ತಾರೆ.'[33]

'ನಾವು ಹಂಗೆ ಇದ್ರೂ ಯಾವ ಕಾಯಿಲೆ ಇಲ್ಲ ಕಸಾಲೆ ಇಲ್ಲ ಈಗನೋರು ಸ್ನಾನ ಮಾಡ್ತಾರೆ, ಒಳಗೆ ಇರ್ತಾರೆ ಎಲ್ಲ ಮಾಡ್ತಾರೆ ಎಲ್ಲಾ ಕಾಯಿಲೆ ಬರ್ತಾವೆ. ದೇವರು ಸುಮ್ನೆ ಬಿಡ್ತಾತ.'[34]

'ದೊಡ್ಡವರಾದ್ಮೇಲೆ ಭಯ ಪಟ್ಕಂಡು ಸ್ಕೂಲ್ ಗೆ ಕಳಿಸಲ್ಲ ದೂರ ಒಬ್ಬೇ ನಡಕಂಡು ಹೋಗಬೇಕು ಬಸ್ಸಿಲ್ಲ ಅಂತ ಮನೇಲಿರು ಅಂತಾರೆ.'[35]

'ನಮ್ಮ ಹೆಣ್ಮಕ್ಳು ದೊಡ್ಡವರಾದ್ಮೇಲೆ ಮದುವೆ ಆಗೋಗಂಟ ಹಟ್ಟಿ ಒಳಗೆ ಇರಬೇಕು ರಜಸ್ತ ಆಗಿ ಎರಡು ಮೂರು ವರ್ಷಕ್ಕೆ ಮದುವೆ ಮಾಡ್ತೀವಿ.'[36]

'ಈಗ ಯಾರು ಹೊರಗೆ ಹೋಗಲ್ಲ ನೀರು ಹುಯ್ಕೊಂಡು ಮನೇಲೆ ಇರ್ತಾರೆ. ಬದಲಾಗಬೇಕು ಅನ್ಸುತ್ತೆ. ತಪ್ಪು ಅನ್ಸುತ್ತೆ.'[37]

'ಒಕ್ಕಲಿಗರು ಮನೆ ಜಗಲಿ ಮೇಲೆ ಕುಂತ್ಕಂಡ್ತೀವಿ. ರಾತ್ರಿ ಆದ್ರೆ ಅವ್ರು ಒಳ್ಗೆ ಮಲಕ್ಕೊತಾರೆ. ನಾವು ಒಬ್ರೆ ಇರಬೇಕು ಭಯ ಆಗ್ತದೆ.'[38]

'ಅತ್ತೆ: ಈಗ ಯಾರು ಇರಲ್ಲಮ್ಮ

ಸೊಸೆ: ನೀ ಸುಮ್ನೆ ಕುಕ್ಕುರಿಸ್ಕೋ. ಅದು ನಿನ್ನ ಕಾಲಕ್ಕೆ ಹೋತು. ಇಂಥ ಹೆಣ್ಣುಮಕ್ಕಳನ್ನ ಹೊರ್ಗೆ ಹೆಂಗೆ ಕಳಿಸಕಾಗ್ತದ ಮೇಡಮ್ಮ.'[39]

'ಓದಿರಾ ಹೆಣ್ಮಕ್ಳು ಕೇಳ್ತಾವೇನಮ್ಮ. ಇರಲ್ಲ ಅಂತಾವೆ. ಇದ್ಕಳ್ಳಿ ಬಿಡು ಅವ್ರದೇ ಸುಖ'[40]

'ಈ ಹೆರಿಗೆ ನೋವು ಕಾಣಿಸಿದ್ರೆ ಅಂಬುಲೆನ್ಸ್ ಗೆ ಫೋನ್ ಮಾಡ್ತಾರೆ.ಆಸ್ಪತ್ರೆಲೆ ಏಳು ದಿನ ಇದ್ದು ಬರ್ತಾರೆ.'[41]

ಈ ಎಲ್ಲಾ ಅಭಿಪ್ರಾಯಗಳಲ್ಲಿಮೈಲಿಗೆ ಆಚರಣೆಯು ಅನಾಗರೀಕವಾಗಿಯೇ ಕಾಣುತ್ತದೆ. ಋತುಸೂತಕ, ಮಾಸಿಕ, ಹೆರಿಗೆ ಈ ಸಮಯದಲ್ಲಿ ಆಕೆಯು ಆಚರಿಸುವ ಸಂಪ್ರದಾಯಗಳ ಬಗ್ಗೆ ಮಹಿಳೆಯರಲ್ಲಿ ಕಷ್ಟವೆಂಬ ಅಭಿಪ್ರಾಯವಿದೆ. ಹಟ್ಟಿಯ ನಿಯಮವಾದ್ದರಿಂದ ಕಷ್ಟವಾದರೂ ಇವರು ಪಾಲಿಸಲೇ ಬೇಕಾಗಿದೆ. ಕೆಲ ಮಹಿಳೆಯರು ಅದನ್ನು ಒಪ್ಪಿಯೂ ಇದ್ದಾರೆ. ಇಂತಹ ಆಚರಣೆಗಳಿಂದ ಸಂತೃಪ್ತಿ, ಸಂತೋಷ ಹೊಂದಿದ ಒಬ್ಬ ಕಾಡುಗೊಲ್ಲ ಮಹಿಳೆಯರನ್ನು ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಣಲಿಲ್ಲ. ಅವರು ದಾಖಲಿಸುವಂತೆ ಈ ಆಚರಣೆಯ ಸಂದರ್ಭದ ಮಹಿಳೆಯರು ಅನುಭವಿಸುವ ಕಷ್ಟಗಳನ್ನು ಹೀಗೆ ಗುರುತಿಸಿಬಹುದು.

1. ಸ್ನಾನ ಮತ್ತು ಶುಚಿತ್ವಕ್ಕೆ ಅಭಾವ
2. ಹೊದೆಯಲು ಹಾಸಲು ಇಲ್ಲದೆ. ಇರುವಷ್ಟು ದಿನ ಕುಳಿತು ನಿಂತೋ ಸೊಪ್ಪಿನ ಮೇಲೆ ಮಲಗಬೆಕು. ಕಾಲಕಳೀಬೇಕು.
3. ಮಳೆ ಬಂದ್ರೆ ನೆನೆಯಬೇಕಿತ್ತು.
4. ಋತುಸ್ರಾವ ತಡೆಯಲು ತಾವು ಉಟ್ಟ ದಪ್ಪ ಕಾಟನ್ ಸೀರೆ ಬಳಸುತ್ತಿದ್ದರು. ಹೆಚ್ಚಿನ ಬಟ್ಟೆಯು ಲಭ್ಯವಿರುತ್ತಿರಲಿಲ್ಲ. ಅದೇ ಬಟ್ಟೆಯನ್ನು ಒಗೆದು ಒಣಗಿಸಿಕೊಂಡು ಉಪಯೋಗಿಸಬೇಕು.
5. ಈ ಸಂದರ್ಭದಲ್ಲಿ ಓಡಾಡುವಂತಿಲ್ಲ. ಶುಚಿತ್ವ ಕಾರಣದಿಂದ ಒಂದೇ ಕಡೆ ಕುಳಿತಿರಬೇಕಾಗಿತ್ತು.

6. ತಮ್ಮ ಅಡುಗ ತಾವೆ ಮಾಡ್ಕಂಬೇಕು ಮನೇಲಿ ಇರೋರು ತಂದುಕೊಡೋರು. ಇಲ್ದಿದ್ರೆ ಇಲ್ಲ.

7. ಒಕ್ಕಲಿಗೆ ಮನೆ ಮುಂದೆ ಕುಳಿತುಕೊಳ್ಳಬೇಕು.

8. ಓದೋಕೆ ಓಗಲು ಕಷ್ಟ, ಕೆಲಸಕ್ಕೆ ಹೋಗಂಗಿಲ್ಲ.

ಈ ಸಂಗತಿಗಳು ಮಹಿಳೆ ಬದುಕಿನ ಚಲನೆಯ ಗಡಿಯಾರವನ್ನೇ ನಿಲ್ಲಿಸಿ ಕಷ್ಟದ ಬದುಕಿಗೆ ಈಡು ಮಾಡಿರುವ ಆಚರಣೆಗಳಾಗಿವೆ. ಕಾಡುಗೊಲ್ಲ ಪುರುಷ ಸಮಾಜ ಇವುಗಳು ಇರಲೇಬೇಕು ಎಂದು ಬಯಸುವುದು ಶೋಷಣಾತ್ಮಕವಾಗಿ ಕಾಣುತ್ತದೆ. ಸಂಸ್ಕೃತಿಯ ಅನನ್ಯತೆಯನ್ನು ಈ ಸಂಗತಿಗಳು ಎತ್ತಿ ಹಿಡುಯುವುದಕ್ಕಿಂತ ಬುಡಕಟ್ಟಿನ ಅನಾಗರಿಕತೆಯನ್ನು ತಿಳಿಯ ಪಡಿಸುತ್ತದೆ.

ಈ ಮೇಲಿನ ಮಹಿಳೆಯರ ಅಭಿಪ್ರಾಯಗಳು ಸ್ಪಷ್ಟಪಡಿಸುವುದೆಂದರೆ 70-80 ವರ್ಷದ ಹಿರಿಯ ಮಹಿಳೆಯರು ಋತುಮತಿಯಾದ, ಋತು ಸೂತಕವಾದಾಗ, ಹೆರಿಗೆಯಾದಾಗ ಮೈಲಿಗೆ ಆಚರಣೆಗಳನ್ನು ಉಳಿಸಿಕೊಳ್ಳಲು ಬಯಸುತ್ತಾರೆ.ಅವರು ನೀಡುವ ಕಾರಣಗಳು.

1) ದೇವರು ಕಷ್ಟ ಕೊಡ್ತಾನೆ ಎನ್ನುವ ಭಯ

2) ಹಟ್ಟಿಯಲ್ಲಿ ಎಲ್ಲರಂತೆ ತಾವು ಒಪ್ಪಿ ಬದುಕಬೇಕಾದ ಸಾಮೂಹಿಕ ಜೀವನ.

3) ಆಡಿಕೊಳ್ಳುತ್ತಾರೆ, ಅವಮಾನಿಸುತ್ತಾರೆ. ಹಟ್ಟಿಯಲ್ಲಾದ ತೊಂದರೆಗಳನ್ನು ಅದರ ಜವಾಬ್ದಾರಿಯನ್ನು ಹೊತ್ತಿಕೊಳ್ಳಬೇಕಾದ ಭಯ.

ಇದೇ ಬುಡಕಟ್ಟಿನ 16 ರಿಂದ 30 ವರ್ಷದೊಳಗಿನ ಮಹಿಳೆಯರು ಈ ಪದ್ಧತಿಯನ್ನು ಬೇಡವೆನ್ನುತ್ತಾರೆ. ಬದಲಾಯಿಸಬೇಕೆನ್ನುತ್ತಾರೆ. ತಪ್ಪು ಎಂದು ಭಾವಿಸುತ್ತಾರೆ. ಈ ಬದಲಾವಣೆಗೆ ಅವರು ನೀಡುವ ಕಾರಣಗಳೆಂದರೆ.

1. ಹೊರಗೆ ಇದ್ರೆ ಯಾರಿಂದಲಾದರೂ ಅಪಾಯವಾಗುವ ಭಯ

2. ದೊಡ್ಡವರಾದ್ರು ಅಂತ ಗೊತ್ತಾದ್ರೆ ಮದುವೆ ಮಾಡ್ತಾರೆ

3. ಓದಕ್ಕೆ ಕಳಿಸುವುದಿಲ್ಲ

4. ಸ್ನಾನ, ಬಟ್ಟೆ ಬದಲಾಯಿಸಲು, ಊಟಕ್ಕೆ ತೊಂದರೆ

5. ಎಲ್ಲರಂತೆ ನಾವು ಇರಬೇಕು. ಇಲ್ಲದೆ ಹೋದರೆ ನಮ್ಮನ್ನು ವಿಚಿತ್ರವಾಗಿ ಕಾಣುತ್ತಾರೆ.

6. ಕಷ್ಟ ಆಗುತ್ತೆ ಹೊರಗೆ ಇರೋಕಾಗಲ್ಲ.

ಈ ಸಂಗತಿಗಳಿಂದ ಸ್ಪಷ್ಟವಾಗುವುದೆಂದರೆ ಹಿರಿಯ ಮಹಿಳೆಯರು ಈಗಾಗಲೇ ಒಪ್ಪಿ ಮೈಲಿಗೆ ಆಚರಣೆಗಳನ್ನು ನಡೆಸಿರುವುದರಿಂದ ಮುಂದಿನವರೂ ನಡೆಸಲು ಹಾಗೂ ಯಾವುದೇ ತೊಂದರೆಗಳು ಉಂಟಾಗದಿರಲಿ ಎನ್ನುವ ಹಟ್ಟಿಯ ತೀರ್ಮಾನವನ್ನು ಸಂಪ್ರದಾಯವನ್ನು ಪಾಲಿಸಬೇಕೆಂಬ ತೀರ್ಮಾನವಿದೆ. ಯುವ ಪೀಳಿಗೆಯು ತಮ್ಮ ಓದು, ಉದ್ಯೋಗ, ಶುಚಿತ್ವಕ್ಕೆ ಅಡ್ಡಿಯಾಗುವ ಈ ಪದ್ಧತಿಯನ್ನು ಪಾಲಿಸಲು ನಿರಾಕರಿಸುತ್ತಾರೆ ಬದಲಾಯಿಸಬೇಕೆಂಬ ಮಹದಾಸೆಯುಳ್ಳವರಾಗಿದ್ದಾರೆ. ಕೆಲವು ಅಕ್ಷರಸ್ಥರು ತಿಳುವಳಿಕೆಯಿಂದ ಪದ್ಧತಿಯ ಬದಲಾವಣೆಗೆ ಮುಂದಾದರೆ ಅವರನ್ನು ಹಟ್ಟಿಗೆ ನಿಮ್ಮಿಂದ ತೊಂದ್ರೆ ಆಯಿತು ಎಂದು ಅಪಮಾನಿಸುವ ಕಾರಣದಿಂದ ತಿಳುವಳಿಕೆಯಿದ್ದರೂ ಅವರು ಈ ಸಂತಿಗಳನ್ನು ಅನಿವಾರ್ಯವಾಗಿ ಮಾಡಲೇಬೇಕಾದ ಒತ್ತಡವಿದೆ.

ಕಾಡುಗೊಲ್ಲ ಪುರುಷರ ಸಮುದಾಯವು ಈ ಆಚರಣೆಗೆ ಬಗ್ಗೆ ಭಿನ್ನಾಭಿಪ್ರಾಯಗಳೇ ಇಲ್ಲದೆ ಗೊಲ್ಲರು ಆದ ಮೇಲೆ ಹೆಣ್ಣು ಹಾಗೆ ಇರಲೇಬೇಕು ಎಂದು ಒತ್ತಾಯಿಸುತ್ತದೆ. ಇವರಲ್ಲಿ ಬದಲಾವಣೆಯ ಮಾತಿಗೆ ಅವಕಾಶವೇ ಇಲ್ಲ ಮಹಿಳೆಯರ ಬಗೆಗಿನ ತಾತ್ಸಾರ. ತಿರಸ್ಕಾರಗಳು ಇಲ್ಲಿ ಹೆಚ್ಚಾಗಿಯೇ ಇದೆ. ಎಲ್ಲಾ ಜಾತಿ, ಸಮುದಾಯಗಳಲ್ಲೂ ಹೆಣ್ಣಿನ ಬದುಕಿನಲ್ಲಿ ಈ ಸಂದರ್ಭಗಳನ್ನು ಅಪವಿತ್ರವಾಗಿಯೇ ಭಾವಿಸುತ್ತವೆ. ಅಶುದ್ದಳು ಎಂದೂ ಕರೆಯುತ್ತದೆ. ಪಾಪ ಎಂಬ ಅಪರಾಧಿ ಮನೋಭಾವವನ್ನು ಹುಟ್ಟಿಸುತ್ತಿದೆ. ಹೆಣ್ಣಿನ ಶಕ್ತಿಎಂದರೆ ಆಕೆಗಿರುವ ಸಂತಾನೋತ್ಪತ್ತಿ ಉತ್ಪಾದಕ ಶಕ್ತಿ. ಈ ಶಕ್ತಿ ಕೇಂದ್ರವನ್ನು ಅಶುದ್ಧ ಅಪರಾಧವೆಂದು ಕರೆಯುವ ಮೂಲಕ ಹೆಣ್ಣಿನ ಹಕ್ಕು ಅಧಿಕಾರ ಅಸ್ಮಿತೆಯನ್ನು ದಮನಿಸಲಾಗುತ್ತಿದೆ.

ಸೃಷ್ಟಿಕ್ರಿಯೆ ಸಂದರ್ಭಗಳನ್ನು ಕಾಡುಗೊಲ್ಲ ಬುಡಕಟ್ಟು ಅನಾಗರಿಕವಾಗಿ ಭಾವಿಸಿದ್ದರಿಂದ ಸಾಮಾಜಿಕವಾಗಿ ಹಲವು ಪದ್ದತಿಗಳಿಗೆ ಕಾರಣವಾಯಿತು ಅದರಲ್ಲಿ ಬಾಲ್ಯವಿವಾಹವನ್ನು ಮುಖ್ಯವಾಗಿ ಗುರುತಿಸಬಹುದು. ಹಾಗೆಯೇ ಧಾರ್ಮಿಕವಾಗಿ ವಿಧಿ ನಿಷೇಧಗಳಿಗೆ ಕಾರಣವಾಯಿತು ಎಂಬುದನ್ನು ಗಮನಿಸಬಹುದು.

'ಋತುಮತಿಯಾದ ನಂತರ ತಿಂಗಳ ಯಾವ ಋತವು ವ್ಯರ್ಥವಾಗಬಾರದು. ನಷ್ಟವಾಗುವ ಒಂದೊಂದು ಋತುವೂ ಒಂದೊಂದು ಶಿಶು ಹತ್ಯೆ ಮಾಡಿದಂತೆ' ಈ ನಂಬಿಕೆಯು ಬಾಲ್ಯ ವಿವಾಹ ಪದ್ಧತಿಗೆ ದಾರಿ ಮಾಡಿಕೊಟ್ಟಿತು. ಕಾಡುಗೊಲ್ಲ ಬುಡಕಟ್ಟಿನಲ್ಲಿ ಇಂದಿಗೂ ಬಾಲ್ಯ ವಿವಾಹ ಪದ್ಧತಿಯು ಆಚರಣೆಯಲ್ಲಿದೆ.ಇದಕ್ಕೆ ಹಲವು ಸಾಮಾಜಿಕ ಕಾರಣಗಳೊಟ್ಟಿಗೆ ಆಕೆಯ ಮಾಸಿಕ ಋತು ನಷ್ಟವಾಗದಂತೆ ಜೋಪಾನ ಮಾಡುವ ಒಂದು ಸಂಗತಿಯು ಇಲ್ಲಿ ಮುಖ್ಯವಾಗುತ್ತದೆ. ಹೆಣ್ಣಿನ ಸಹಜ ಋತುಮಾಸಿಕ ಆಕೆಯನ್ನು ಬಾಲ್ಯ ವಿವಾಹವಾಗುವಂತೆ ಒತ್ತಡ ತಂದಿತು. ಈ ಧಾರ್ಮಿಕ ಮೌಲ್ಯ ಆಕೆಯ ಬದುಕನ್ನು ಬಾಲ್ಯದಲ್ಲಿಯೇ ನರಳಿಸಿರುವುದು ಇದರಿಂದ ಸ್ಪಷ್ಟ.

ಋತುಸೂತಕ ಹೆರಿಗೆ ಸಮಯದಲ್ಲಿ ಎದ್ದು ಓಡಾಡುವಂತಿಲ್ಲ ಆಕೆಗೆ ವಿರಾಮ ನೀಡಲಾಗುತ್ತಿದೆ ಎಂಬ ಸಕಾರಣವಿದ್ದರೂ ನೈರ್ಮಲ್ಯ ಶುಚಿತ್ವದ ಕಾರಣದಿಂದ ಆಕೆಯು ಒಂದೇ ಕಡೆ ಕುಳಿತಿರಬೇಕು. ಆಕೆಯ ಅಶುಚಿತ್ವ ಹಟ್ಟಿಯ ಅಶುಚಿತ್ವಕ್ಕೆ ಕಾರಣವಾಯಿತು, ಎಂದು ಆಕೆಯನ್ನೇ ಹಟ್ಟಿಯಿಂದ ಹೊರಗಿಡುವುದು ಸರಿಯಾದುದಲ್ಲ. ಅಷ್ಟೇ ಅಲ್ಲದೆ ಹಟ್ಟಿಯ ಆಚೆಗಿರುವ ವೇಳೆ ಆಕೆ ದೇವರ ಉತ್ಸವ ಹಬ್ಬದಲ್ಲಿ ಪಾಲ್ಗೊಳ್ಳುವಂತಿಲ್ಲ. ಅಷ್ಟೇ ಅಲ್ಲ ಆ ಸಮಯದಲ್ಲಿ ದೇವರ ಹೆಸರನ್ನು ನೆನೆಯುವಂತಿಲ್ಲ. (ಮೈಲಿಗೆಯ ಸಂದರ್ಭದಲ್ಲಿ ಧಾರ್ಮಿಕ ಚಟುವಟಿಕೆಯಲ್ಲಿ ಭಾಗವಹಿಸಲು ನಿಷೇದವಿದೆ) ಹಾಲು ಮೀಸಲು ಹಬ್ಬದ ಸಂದರ್ಭದಲ್ಲಿ ಮೈಲಿಗೆಯಾದರೆ ಹಟ್ಟಿಯಿಂದ ಮೈಲುಗಳ ದೂರದಲ್ಲಿ ಆಕೆ ಇರಬೇಕಾಗುತ್ತಿದೆ. ನಾಗನ ಆರಾಧನೆ ಅಥವಾ ಹುತ್ತದ ಪೂಜೆಯ ಸಂದರ್ಭದಲ್ಲಿ ಕಟ್ಟುನಿಟ್ಟಿನ ಮಡಿಯನ್ನು ಬುಡಕಟ್ಟಿನೊಳಗೆ ಕಾಯ್ದುಕೊಳ್ಳಲಾಗುತ್ತದೆ. ಋತುವಾಗುವ ಸೂಚನೆಯಿದ್ದಾರೆ ಹಬ್ಬಕ್ಕೆ ಮೊದಲೇ ಹಟ್ಟಿ ಬಿಡಬೇಕಾಗುತ್ತದೆ.ವೈರುಧ್ಯವೆಂದರೆ ಬುಡಕಟ್ಟಿನೊಳಗಿನ ಹುತ್ತದ ಪೂಜೆ ಮಾತೃತ್ವ ಸಂತಾನಾಪೇಕ್ಷೆಯ ಬಯಕೆಯ ಕಾರಣದಿಂದ ನಡೆಯುವಂತದ್ದು.ಆದರೆ ಮಾತೃತ್ವ ಮತ್ತು ಸಂತಾನೋತ್ಪತ್ತಿಯ ಮೂಲ ಸಂಗತಿಗಳಾದ ಋತುಚಕ್ರ, ಋತುಮಾಸಿಕವು ಧಾರ್ಮಿಕ ನಿಷೇಧಕ್ಕೆ ಒಳಗಾಗಿ ಮೈಲಿಗೆಯೆಂದು ಪರಿಗಣಿಸಲ್ಪಟ್ಟಿದೆ. ಹೀಗೆ ಧಾರ್ಮಿಕ ಕಾರಣಕ್ಕೆ ಮಹಿಳೆಯರು ಮೈಲಿಗೆ ಎಂದು ಗುರತಿಸಲ್ಪಡುವುದರಿಂದದ ವಿಧಿ ನಿಷೇದಗಳಿಂದ ನರಳಬೇಕಿದೆ. ಇದರ ಪರಿಣಾಮಗಳನ್ನು ಈ ಕೆಳಕಂಡ ಅಂಶಗಳ ಮೂಲಕ ಗುರುತಿಸಬಹುದಾಗಿದೆ.

1) ಅವ್ಯವಸ್ಥಿತ ಪರಿಸರದಲ್ಲಿ ಕಷ್ಟವಾದರೂ ಸಹಿಸಿಕೊಂಡು ಆತಂಕದಲ್ಲಿ ಕಾಲಕಳೆಯ ಬೇಕಿರುವುದು.

2) ಸದಾ ಕಾಡುವ ಏಕಾಂಗಿತನ

3) ಸ್ನಾನ, ಶುಚಿತ್ವಕ್ಕೆ ವ್ಯವಸ್ಥೆ ಇಲ್ಲದೆ ಅನಾರೋಗ್ಯ ಸೋಂಕಿಗೆ ತುತ್ತಾಗಿರುವುದು

4) ಓದು ಉದ್ಯೋಗಕೆ ತೆರಳಲು ಸಹಮತಿ ಇಲ್ಲದಿರುವುದು

5) ಮೈಲಿಗೆ ಎಂದು ಕಾಡುವ ಕೀಳರಿಮೆ

6) ಊಟಕ್ಕೆ ತೊಂದರೆ, ಎಲೆ ಅಡಿಕೆ ರಸ ಕುಡಿದು ಬದುಕಬೇಕಾಗಿರುವುದು ಇತ್ಯಾದಿ.

ಕರ್ನಾಟಕದಲ್ಲಿ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಯ ಮೂಲಕ ಗೊಲ್ಲರ ಹಟ್ಟಿಯಲ್ಲಿ ಮೌಢ್ಯವನ್ನು ನಿರಾಕರಿಸಲು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಅರಿವಿನ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಆದರೆ ಇದು ಯಾವುವು ಫಲಕಾರಿಯಾಗಿಲ್ಲ. ಗೊಲ್ಲರ ಹಟ್ಟಿಯ ಅಂಗನವಾಡಿಯಲ್ಲಿ ಕಾರ್ಯನಿರ್ವಹಿಸುವ ಅಂಗನವಾಡಿ ಕಾರ್ಯಕರ್ತೆಯು ಕಾಡುಗೊಲ್ಲ

ಬುಡಕಟ್ಟಿನ ಮಹಿಳೆಯಾಗಿರುತ್ತಾಳೆ. ಈ ಕಾರ್ಯಕರ್ತೆಯರ ಮಾತನ್ನು ಬಹುತೇಕ ಕಾಡುಗಳಲ್ಲಿ ಬುಡಕಟ್ಟಿನ ಮಹಿಳೆಯರು ನಿರಾಕರಿಸಿದ್ದಾರೆ.

ಹಟ್ಟಿಯ ಹಿರಿಯರ ವಿರುದ್ಧ ಈ ಕಾರ್ಯಕರ್ತೆಯರು ಯಾವುದೇ ಪ್ರತಿರೋಧ ತೋರಿಸಲು ಅಸಮರ್ಥರು. ಸ್ವತಃ ಕೆಲ ಅಂಗನವಾಡಿ ಕಾರ್ಯಕರ್ತೆಯರು ಹಟ್ಟಿಯ ಅಂದರೆ ನಗರ ಪಟ್ಟಣಗಳೀ ವಾಸಿಸುವ ಮಹಿಳೆಯರು ಬಹುತೇಕ ಪದ್ಧತಿಗಳನ್ನು ಕೈಬಿಟ್ಟಿದ್ದಾರೆ. ಹಲವು ಸ್ವಯಂಸೇವಾ ಸಂಸ್ಥೆಗಳು. ಎನ್ ಜಿ ಒ ಗಳು ಏರ್ಪಡಿಸಿರುವ ಅರಿವಿನ ಕಾರ್ಯ ಕ್ರಮಗಳು ಫಲಿತಾಂಶವು ವಿಫಲತೆಯನ್ನು ಹೇಳುತ್ತದೆ. ಬುಡಕಟ್ಟಿನ ಮಹಿಳೆಯು ಸ್ವತಃ ಬದಲಾಗಲು ತಯಾರಿದ್ದಾರೆ. ಆದರೆ ಬುಡಕಟ್ಟಿನ ಧಾರ್ಮಿಕ ನಂಬಿಕೆ, ಸಾಂಸ್ಕೃತಿಕ ಅನನ್ಯತೆ ಮಹಿಳೆಯರಲ್ಲಿ ಈ ಆಚರಣೆಗಳಲ್ಲಿ ಬದಲಾವಣೆ ಉಂಟಾಗುವುದನ್ನು ನಿರಾಕರಿಸುತ್ತದೆ. ಧಾರ್ಮಿಕ ಮೌಢ್ಯ ಅಳಿಯದೆ, ಸಾಂಸ್ಕೃತಿಕ ಅನನ್ಯತೆ ಬಗೆಗಿರುವ ಹೆಮ್ಮೆ ಬಿಗುಮಾನ ಅಳಿಯದೆ ಮಹಿಳೆಯರು ಅನುಸರಿಸುವ ಈ ಅನಾಗರಿಕ ಪದ್ಧತಿಯ ಬದಲಾವಣೆ ಸಾಧ್ಯವಿಲ್ಲ.

ಮಾಸಿಕ ಋತು, ಋತುಚಕ್ರ, ಶುಚಿತ್ವತೆ ಆಧುನಿಕ ತಂತ್ರಜ್ಞಾನವು ಹಲವು ಸೌಕರ್ಯಗಳನ್ನು ಮಹಿಳೆಯರಿಗೆ ಒದಗಿಸದೆ ಬಟ್ಟೆಯ ಬದಲು ಹತ್ತಿಯ ಪ್ಯಾಡ್ ಗಳನ್ನು ಬಳಸುವಿಕೆಯ ಬಗ್ಗೆ ತಿಳುವಳಿಕೆ ನೀಡಬೇಕಿದೆ. ಆಧುನಿಕ ತಂತ್ರಜ್ಞಾನವು ಅನುಕೂಲಕಾರಿಯಂತೆ ಕೆಲವೊಮ್ಮೆ ಅಪಾಯಕಾರಿಯೂ ಆಗಬಲ್ಲುದು. ಮಾಸಿಕ ಋತುವನ್ನು ಮುಂದೂಡಲು, ತ್ವರಿತವಾಗಿ ಆಗಲು ಬಳಸುವ ಮಾತ್ರೆಗಳು, ಔಷಧಿಗಳು ಆಕೆಯ ಶರೀರದಲ್ಲಿ ಅಡ್ಡ ಪರಿಣಾಮಗಳಿಗೆ ಕಾರಣವಾಗಬಹುದು.ಅವುಗಳ ಬಗೆಗಿನ ಎಚ್ಚರಿಕೆಯನ್ನು ಅಗತ್ಯವಾಗಿ ಮನದಟ್ಟು ಮಾಡಿಸ ಬೇಕಾಗಿದೆ.

ಪ್ರಸ್ತುತ ಲಭ್ಯವಿರುವ ಆಧುನಿಕ ತಂತ್ರಜ್ಞಾನದ ಉಪಕರಣಗಳಿಂದ ಫೋನ್. ಅಂಬುಲೆನ್ಸ್, ಗರ್ಭನಿರೋಧಕಗಳು, ಸಂತಾನಹರಣಚಿಕಿತ್ಸೆಗಳು ಮಹಿಳೆಯರ ಸಮಸ್ಯೆಗಳು ಕಡಿಮೆಯಾಗಲು ಸಹಕಾರಿಯಾಗಿವೆ. ಹೆರಿಗೆ ಮೊದಲಾದ ಸಂದರ್ಭದಲ್ಲಿ ನೆರವಾಗುವ ಅಂಬುಲೆನ್ಸ್, ಹೆರಿಗಾಗಿ ಆಸ್ಪತ್ರೆಗಳ ವ್ಯವಸ್ಥೆ ಇರುವುದು ಮಹಿಳೆಯರು ಈ ಹಿಂದೆ ಮೈಲಿಗೆ ಎಂಬ ಅನಿಷ್ಠ ಆಚರಣೆಗಳಿಂದ ಅನುಭವಿಸಬೇಕಾಗಿದ್ದ ತೊಂದರೆಗಳಿಗೆ ಪರಿಹಾರ ನೀಡಿದೆ. ಮೊಬೈಲ್. ಫೋನ್‌ಗಳು ತಮ್ಮ ಬೇಸರ, ಆತಂಕಗಳ ಸಮಯದಲ್ಲಿ ಸದುಪಯೋಗಕ್ಕೆ ಬಂದಿವೆ. ಸಂತಾನಹರಣ ಚಿಕಿತ್ಸೆಗಳು ಹಲವು ಮಕ್ಕಳನ್ನು ಹೆರಬೇಕಾದ ತೊಂದರೆಗಳನ್ನು ನಿವಾರಿಸಿದೆ. ಇಷ್ಟೇ ಅಲ್ಲದೆ. ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಇಲಾಖೆಯು ಬಾಣಂತಿಯರಿಗೆ ನೀಡುವ ಪೌಷ್ಟಿಕ ಆಹಾರ. ಸಲಹೆಗಳು ಗೊಲ್ಲ ಮಹಿಳೆಯರಿಗೆ ಅಮೂಲ್ಯವಾಗಿದೆ.

ಕೃಷ್ಣ ಕುಟೀರಗಳು

ಕಾಡುಗೊಲ್ಲರ ಹಟ್ಟಿಗಳಲ್ಲಿ ಋತುಮತಿಯರಾದವರು, ಮಾಸಿಕ ಋತುವಾದವರು, ಬಾಣಂತಿಯರು, ಮಳೆಗಾಲದಿಂದ ಮತ್ತು ಅನ್ಯರಆಕ್ರಮಣ, ಮತ್ತಿತರ ತೊಂದರೆಗಳನ್ನು ಅನುಭವಿಸಬೇಕಾದ್ದನ್ನು ಮನಗಂಡು ಹಟ್ಟಿಯಲ್ಲಿ ಸರ್ಕಾರದ ಸಹಾಯದಿಂದ ಕೃಷ್ಣಮಂದಿರ ಮತ್ತು ಕೃಷ್ಣ ಕುಟೀರಗಳನ್ನು ನಿರ್ಮಿಸದೆ. ಕೃಷ್ಣ ಮಂದಿರಗಳು ಹಟ್ಟಿಯಿಂದ ಸೂತಕ, ಮೈಲಿಗೆಯ ಆಚರಣೆಗಳಿಗೆ ತೆರಳುವ ಮಹಿಳೆಯರಿಗಾಗಿ ನಿರ್ಮಿಸಿರುವಂತಹವು. ಈ ಕುಟೀರಗಳಲ್ಲಿ ಸ್ನಾನ ಮಾಡಲು ಅಡಿಗೆ ಮಾಡಿಕೊಳ್ಳಲು ವ್ಯವಸ್ಥೆಯನ್ನು ಮಾಡಲಾಗಿದೆ.

ಕೃಷ್ಣ ಕುಟೀರಗಳ ನಿರ್ಮಾಣ ಸ್ತ್ರೀಯ ಸಮಸ್ಯೆಗೆ ಸ್ಪಂದಿಸುವ ಮೂಲಕ ಮಾನವೀಯತೆಯನ್ನು ಮೆರೆದರೂ ಮೈಲಿಗೆಯ ಆಚರಣೆಯನ್ನು ಕಳೆದುಕೊಳ್ಳುವ ಬದಲು ಆಧುನಿಕ ರೂಪದಲ್ಲಿ ಸಮರ್ಥಿಸುವಂತೆ ಕಾಣುತ್ತದೆ. ಚಾಲ್ತಿಯಲ್ಲಿರುವ ಸನಾತನ ಆಚರಣೆಗಳನ್ನು ಮುಂದುವರಿಸಿಕೊಂಡು ಹೋಗಲು ಕೃಷ್ಣ ಕುಟೀರದ ಮೂಲಕ ಮುಂದುವರಿಸಲು ವಿಶೇಷ ವ್ಯವಸ್ಥೆ ಕಲ್ಪಿಸುವುದು ಅನರ್ಥವನ್ನು ಸೃಷ್ಟಿಸಿರುವಂತದ್ದು. ಸರ್ಕಾರ ತನ್ನ ಮಹಿಳಾ ಕಲ್ಯಾಣ ಕಾರ್ಯಕ್ರಮದ ಮೂಲಕ ಮೈಲಿಗೆ ಆಚರಣೆ ಕೈಬಿಡಲು ಅರಿವಿನ ಕಾರ್ಯಕ್ರಮಗಳನ್ನು ರೂಪಿಸುತ್ತಾ ಮತ್ತೊಂದೆಡೆ ಈ ಆಚರಣೆಗಳನ್ನು ಉಳಿಸಿಕೊಳ್ಳಲು. ವಿಶೇಷ ವ್ಯವಸ್ಥೆ ಕಲ್ಪಿಸುವುದು ದ್ವಂದ್ವ ಮಾಡು ಉಂಟುಮಾಡುವುದಲ್ಲದೆ ಉಚಿತವೆನಿಸುವುದಿಲ್ಲ.

ಹಲವು ಕಾಡುಗೊಲ್ಲರ ಹಟ್ಟಿಗಳಲ್ಲಿ ಕೃಷ್ಣ ಕುಟೀರಗಳು ಇಲ್ಲ. ಕೃಷ್ಣ ಮಂದಿರಗಳನ್ನು ಹೊಂದಿರುವ ಬಹುತೇಕ ಹಟ್ಟಿಗಲ್ಲಿ ಅವು ಪಾಳು ಬಿದ್ದಿವೆ. ತಿಂಗಳಿನ ಕೆಲವು ದಿನ ಮಾತ್ರ ಉಳಿಯುವ ಈ ಕುಟೀರಗಳನ್ನು ಯಾರು ಶುಚಿಯಾಗಿಟ್ಟುಕೊಳ್ಳಬೇಕೆಂಬ ಪ್ರಶ್ನೆಯಿಂದಾಗಿ ಕುಟೀರದ ಒಳಗೆ ಕಸ ಕಡ್ಡಿಗಳು ತುಂಬಿವೆ. ಕುಟೀರದ ಒಳಗೆ ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲ ಕುಟೀರವು ಹಟ್ಟಿಯ ಹೊರಗಡೆ ಇರುವುದರಿಂದ ಅದರ ಸುತ್ತಮುತ್ತಲೂ ಗಿಡಗಂಟೆ ಪೊದೆಗಳು ಬೆಳೆದುಕೊಂಡು ವಾಸಿಸಲು ಯೋಗ್ಯವಾಗಿಲ್ಲ.

ಕೃಷ್ಣ ಕುಟೀರಗಳು ಸಮರ್ಪಕವಾಗಿ ಕಟ್ಟಿಲ್ಲದಿರುವುದರಿಂದ ಬಾಗಿಲು, ಕಿಟಕಿಗಳು ಮುರಿದು ರಕ್ಷಣೆಯನ್ನು ನೀಡಲು ಅಸಮರ್ಥವಾಗಿದೆ. ಬಹುತೇಕ ಮಹಿಳೆಯರು ಈ ಕುಟೀರದ ಒಳಗಿರದೆ ಹೊರಗಡೆಯೋ ಇದ್ದು ಕಾಲ ಕಳೆಯುತ್ತಾರೆ.ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೃಷ್ಣ ಕುಟೀರಗಳೆ ಇಲ್ಲದ ಹಟ್ಟಿಗಳು ಅವುಗಳು ಬೇಕಿವೆ ಎಂದು ಬೇಡಿಕೆಯನ್ನು ಮುಂದಿಡುತ್ತವೆ. ಒಟ್ಟಾರೆ ಕೃಷ್ಣ

ಕುಟೀರಗಳೊಳಗಿನ ಅವ್ಯವಸ್ಥೆಗಳು ಋತು ಆವರ್ತದ ಮಹಿಳೆಗೆ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಹಕಾರಿಯಾಗಿಲ್ಲ.

ಲಕ್ಷಾಂತರ ರೂಗಳನ್ನು ಖರ್ಚು ಮಾಡಿ ಸರ್ಕಾರವು ಇಂತಹ ಕುಟೀರಗಳನ್ನು ನಿರ್ಮಿಸುವ ಬದಲು ಅದೇ ಹಣವನ್ನು ಮಹಿಳೆಯರು ಧಾರ್ಮಿಕ ಸಂಕೋಲೆಯಿಂದ ಹೊರ ಬರಲು ಮೌಢ್ಯದಿಂದ ಮುಕ್ತಿ ಹೊಂದಲು ನೀಡಿದರೆ ಉತ್ತಮವೆನಿಸುತ್ತದೆ.ಮಹಿಳೆಯರನ್ನು ಹಟ್ಟಿಯ ಆಚೆಗಿರಿಸುವ ಈ ಪದ್ಧತಿ ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸಿ ಸರ್ಕಾರ ಕೈಗೊಳ್ಳುವ ಶಾಸನಾತ್ಮಕ ಕ್ರಮಗಳು ಧಾರ್ಮಿಕ ಸಾಂಸ್ಕೃತಿಕ ಒತ್ತಡವನ್ನು ಮಹಿಳೆಯರ ಮೇಲೆ ಬಹು ಮಟ್ಟಿಗೆ ಕಡಿಮೆಗೊಳಿಸಬಲ್ಲುದು.

"ನಂಬಿಕೆಗೆ ಪುರಾತನವಾದ ಮಾತ್ರಕೆ ಸತ್ಯವಾದುದೆಂದು ಭಾವಿಸಬೇಡಿ"[42] ಧಾರ್ಮಿಕ ನಂಬಿಕೆಗಳ ವಿಧಿ ನಿಷೇಧಗಳು ಲಿಂಗ ತಾರತಮ್ಯವನ್ನು ಉಂಟುಮಾಡುತ್ತಿದ್ದರೆ, ಅಸಮಾನತೆಗೆ ಕಾರಣವಾಗುತ್ತಿದ್ದರೆ, ಅಭಿವೃದ್ಧಿಗೆ ವಿಮುಖವಾಗಿದ್ದರೆ, ಅಂತಹ ನಂಬಿಕೆಗಳು ಎಷ್ಟೇ ಪುರಾತನ ಪ್ರಾಚೀನವಾದರೂ ಕೈ ಬಿಡುವುದು ಒಳ್ಳೆಯದು. ಚಿತ್ರಾ ಘೋಷಳ ಮಾತಿನಲ್ಲಿ ಹೇಳುವುದಾದರೆ " ಅಸಹಜವಾದ ಮತ್ತು ನಿರರ್ಥಕವಾದ ಕಟ್ಟಳೆಗಳನ್ನು ತೆಗೆದುಹಾಕಿ ಪ್ರತಿಯೊಬ್ಬರು ಸಮಾಜ ನೀಡುವ ಎಲ್ಲಾ ಸದಾವಕಾಶಗಳನ್ನು ಸರಿಯಾಗಿ ಯಾವ ನಿರ್ಬಂಧವಿಲ್ಲದೆ ತಮ್ಮ ವ್ಯಕ್ತಿತ್ವದ ಬೆಳವಣಿಗೆ ಮತ್ತು ಅಭ್ಯುದಯಕ್ಕೆ ಉಪಯೋಗಿಸಿಕೊಳ್ಳುವಲ್ಲಿ ಜಾಣತನವಿದೆ.[43]

ಕೊನೆ ಟಿಪ್ಪಣಿ

1. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಾಹಿತ್ಯ ಪರಿಷತ್ತು ಪುಟ 43
2. ಅದೇ ಪುಟ 10
3. ಅದೇ ಪುಟ 46
4. ಸಾವಿರದ ಸಿರಿಬೆಳಗು ಸಂ:ಕೃಷ್ಣಮೂರ್ತಿ ಹನೂರ ಪುಟ 260
5. ಅದೇ ಪುಟ 115
6. ಅದೇ ಪುಟ 37
7. ಅದೇ ಪುಟ 10
8. ಅದೇ ಪುಟ 28
9. ಲೋಕಾಯತ ಲೇ:ಶರತ್ಚ್ಚಂದ್ರ ಚಟ್ಟೋಪಾಧ್ಯಾಯ ಪುಟ 213

ತಂತ್ರದ ಉಗಮವನ್ನು ಮಾಂತ್ರಿಕತೆಯ ಸಂಬಂಧದೊಡನೆ ಗುರುತಿಸುವಾಗ ಉತ್ಪಾದನಾ ಪ್ರಕ್ರಿಯೆ ಮತ್ತು ಸಂತಾನೋತ್ಪತ್ತಿ ಪ್ರಕ್ರಿಯೆಗಳ ಬಗ್ಗೆ ಗೊಂದಲ ಮೂಡಿರುವುದನ್ನು ತಿಳಿಯಬಹುದು: ಅಂತಹ ಹಿನ್ನೆಲೆಯಲ್ಲಿ ಋತುಸ್ರಾವದ ರಕ್ತಕ್ಕೆ ವಿಶೇಷ ಮಹತ್ವವನ್ನು ಕಲ್ಪಿಸುವುದು ಸಹಜ. ಅದನ್ನು ತಾಂತ್ರಿಕರು ಕುಸುಮ ಅಥವಾ ಪುಷ್ಪ ಎನ್ನುತ್ತಾರೆ. ಕೆಲವೇಳೆ ಅದನ್ನು 'ಖಪುಷ್ಪ' (ಆಕಾಶದ ಹೂವು) ಎಂದು ಕರೆದು ಅದಕ್ಕೆ ನಿಗೂಢತೆಯ ಛಾಯೆ ನೀಡುತ್ತಾರೆ. ಸಸ್ಯ ಪ್ರಪಂಚದ ಜೊತೆಗಿನ ಸಂಬಂಧವಂತೂ ಸ್ಪಷ್ಟವಾಗಿಯೇ ಇದೆ. ಯೋನಿಯಿಂದ ಮಗು, ಸಸಿಯಿಂದ ಹಣ್ಣು, ಆದ್ದರಿಂದ ಯೋನಿಗೆ 'ಲತಾ' ಎಂಬ ಇನ್ನೊಂದು ಹೆಸರು. ಹಣ್ಣಿಗೆ ಮುಂಚೆ ಹೂವು ಬಸರಿಗೆ ಮೊದಲು ಋತುಸ್ರಾವವಿದ್ದಂತೆ. ಆದ್ದರಿಂದ ಋತುಸ್ರಾವದ ರಕ್ತಕ್ಕೆ 'ಕುಸುಮ ಅಥವಾ 'ಪುಷ್ಪ ಎಂಬ ಹೆಸರು "

"ಮಾನವ ಫಲವತ್ತತೆಯ ಮಾಂತ್ರಿಕತೆ ಇರುವುದು ಪ್ರಕ್ರಿಯೆಯಲ್ಲಿ ಆದ್ದರಿಂದ ಋತುಸ್ರಾವಕ್ಕೆ ಪ್ರಾಮುಖ್ಯ. ಮಗುವಿನಲ್ಲಿ ಜೀವ ಕೊಡುವ ಶಕ್ತಿ ಇರುವುದು ಈ ಸ್ರಾವಕ್ಕೆ ಎಂಬುದು ಆದಿಮ ಚಿಂತನೆಯಲ್ಲಿದೆ. ಮಗುವಿನ ಜನನದ ಪ್ರಕ್ರಿಯಗಿರುವಷ್ಟೇ ಮಹತ್ವ ಅದಕ್ಕೂ ಇದೆ. ಈ ಮಾಂತ್ರಿಕತೆಗೆ ಎರಡು ಅಲುಗುಗಳಿವೆ: ಅದರ ಮಹಾನ್ ಶಕ್ತಿಯ ಭಯವನ್ನೂ ಹುಟ್ಟಿಸುತ್ತದೆ.. ... ಒಂದು ದೃಷ್ಟಿಯಲ್ಲಿ ಸ್ತ್ರೀ ಅಪರಿಗ್ರಹಯೋಗ್ಯಳು, ಪವಿತ್ರಳು, ಇನ್ನೊಂದು ದೃಷ್ಟಿಯಲ್ಲಿ ಅವಳು ಕಲುಷಿತಳು ಅಶುದ್ಧಳು, ರೋಮನ್ನರು ಅವಳನ್ನು 'ಸಾಕ್ರ' ಎಂದು ಕರೆದರು ಅಂದರೆ ಪವಿತ್ರಳು ಮತ್ತು ಶಪಿತಳು ಎಂದು. ಪಿತೃಪ್ರಧಾನ ಸಮಾಜದ ವೇಳೆಗೆ ಧಾರ್ಮಿಕ ವಿಷಯಗಳು ಮಹಿಳೆಯ ಸ್ವಾಧೀನದಿಂದ ಹೊರಗೆ ಬಂದಿರುತ್ತವೆ. ಆದ್ದರಿಂದ ಅವಳ ಬಗೆಗಿನ ನಕಾರಾತ್ಮಕ ದೃಷ್ಟಿಗೆ ಮಾನ್ಯತೆ. ಅವಳ ಲೈಂಗಿಕ ಕ್ರಿಯೆಗಳನ್ನು ಅಶುದ್ಧವೆಂದು ಬಗೆಯುವುದಲ್ಲದೆ ಅವಳ ಸ್ತ್ರೀ ಪ್ರಕೃತಿಯನ್ನೇ ಜರಿಯಲಾಗುತ್ತದೆ. ಆದ್ದರಿಂದ ಅವಳು ಕೆಡುಕಿನ ಮೂಲವೆಂದು ಕರೆಯಲ್ಪಡುತ್ತಾಳೆ. ಈವ್ ಆಗುತ್ತಾಳೆ. ಮಾಟಗಾತಿಯಾಗುತ್ತಾಳೆ. ಇದು ಸಾರ್ವತ್ರಿಕ ವಿದ್ಯಮಾನ. ಋತುಸ್ರಾವ ಮತ್ತು ಪ್ರಸೂತಿ ಸ್ಥಿತಿಯಲ್ಲಿರುವ ಮಹಿಳೆಯನ್ನು ನೋಡುವ ವಿಧಾನದಲ್ಲಿ ಎಲ್ಲ ನಾಗರೀಕತೆಗಳಲ್ಲೂ ಏಕರೀತಿಯ ದೃಷ್ಟಿ ಇದೆ: ಬಹುಶಃ ಮಾನವ ಜೀವನದಲ್ಲಿ ಇದರಷ್ಟು ಏಕರೀತಿ ಬೇರಾವುದರ ಬಗೆಗೂ ಇರಲಾರದು. ಎಲ್ಲ ಸಂಸ್ಕೃತಿಗಳಿಂದಲೂ ಈ ಬಗೆಗಿನ ಮಾಹಿತಿಯನ್ನು ಬ್ರಿಫೋ ಕಲೆಹಾಕಿದ್ದಾನೆ

10. ಭೂಮಿಕಾ ಡಾ. ಎಸ್.ಅನುಪಮಾ ದಿನಾಂಕ 22-9-2012

11. ಈರಮ್ಮ 60 ವರ್ಷ ಚಿಕ್ಕ ತಿಮ್ಮನಹಳ್ಳಿಗೊಲ್ಲರಹಟ್ಟಿ

12. ಗಂಗಮ್ಮ 85 ವರ್ಷ ಕಾಮನಹಟ್ಟಿ

13. ಕರಿಯಮ್ಮ 69 ವರ್ಷ ಕುಲಮೆಹಟ್ಟಿ

14. ಸಣ್ಣೀರಮ್ಮ 58 ವರ್ಷ ಎರಪಳಪಾಲ್ಯ ಗೊಲ್ಲರಹಟ್ಟಿ

15. ತಾಯಮ್ಮ 46 ವರ್ಷ ಪೊನ್ನ ಸಮುದ್ರಗೊಲ್ಲರಹಟ್ಟಿ

16. ನಾಗವೇಣಿ ಅಂಗನವಾಡಿ ಕಾರ್ಯಕರ್ತೆ ಪೆಮ್ಮನಹಳ್ಳಿಗೊಲ್ಲರಹಟ್ಟಿ

17. ಹನುಮಕ್ಕ 65 ವರ್ಷ ಚಿತ್ತಗಾನಹಳ್ಳಿ ಗೊಲ್ಲರಹಟ್ಟಿ

18. ಅನುಸೂಯ 39 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ

19. ಚಿತ್ತಮ್ಮ 25 ವರ್ಷ ಜೋಗರ ಹಟ್ಟಿ

20. ಲಕ್ಷ್ಮಮ್ಮ 26 ವರ್ಷ ಪೆಮ್ಮನಹಳ್ಳಿಗೊಲ್ಲರಹಟ್ಟಿ

21. ಶೋಭ 30 ವರ್ಷ ಜುಂಜಪ್ಪನ ಹಟ್ಟಿ

22. ಸಿದ್ದಮ್ಮ 64 ವರ್ಷ ಕೋಣನಕುರಿಕೆ ಗೊಲ್ಲರ ಹಟ್ಟಿ

23. ಅಕ್ಕಮ್ಮ 68 ವರ್ಷ ಜಂಗಮರ ಗೊಲ್ಲರಹಟ್ಟಿ

24. ಕರಿಯಮ್ಮ 70 ವರ್ಷ ಕಾರನಾಗನಹಟ್ಟಿ

25 ನಿರ್ಮಲ 19 ವರ್ಷ ಬ್ಯಾಡನೂರು ಗೊಲ್ಲರಹಟ್ಟಿ

26 ಪಾತಮ್ಮ 82 ವರ್ಷ ಕೆಂಚಮ್ಮನಹಳ್ಳಿಗೊಲ್ಲರಹಟ್ಟಿ

27 ಆಶಾ 29 ವರ್ಷ ಪಳುವಳ್ಳಿ ಗೊಲ್ಲರಹಟ್ಟಿ

28. ಪಾರ್ವತಮ್ಮ 59 ವರ್ಷ ದೇವರಹಟ್ಟಿ

29. ಪವಿತ್ರ 28 ವರ್ಷ ಕಾಮನಹಟ್ಟಿ

30. ದೊಡ್ಡೀರಮ್ಮ 36 ವರ್ಷ ಕಾರನಾಗನಹಟ್ಟಿ

31. ಗಿರಿಯಮ್ಮ 70 ವರ್ಷ ಕುಲುಮೆಹಟ್ಟಿ

32. ರಾಜಮ್ಮ 34 ವರ್ಷ ಹೊಸಹಳ್ಳಿ ಗೊಲ್ಲರಹಟ್ಟಿ

33. ಈರಕ್ಕ 80 ವರ್ಷ ಕೆ ಟಿ ಹಳ್ಳಿ ಗೊಲ್ಲರಹಟ್ಟಿ

34. ಕರಿಯಮ್ಮ 62 ವರ್ಷ ಪೊನ್ನಸಮುದ್ರಗೊಲ್ಲರಹಟ್ಟಿ

35. ಅರ್ಪಿತ 19 ವರ್ಷ ಚನ್ನಸಾಗರದ ಹಟ್ಟಿ

36. ಚಿಕ್ಕಣ್ಣ 45 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ

37. ಯಶೋಧ 20 ವರ್ಷ ಎರಪಾಳ್ಯಗೊಲ್ಲರಹಟ್ಟಿ

38.ಗಂಗಮ್ಮ 31 ವರ್ಷ ಗೌಡಗರನಹಟ್ಟಿ

39. ರಾಜಮ್ಮ 32 ವರ್ಷ. ಹನುಮಕ್ಕ 75 ವರ್ಷ ಚಿಕ್ಕತಿಮ್ಮನಹಳ್ಳಿಗೊಲ್ಲರಹಟ್ಟಿ

40. ಚಿತ್ರಮ್ಮ 54 ವರ್ಷ ಲಿಂಗದಾಳ್ಳಿ ಗೊಲ್ಲರ ಹಟ್ಟಿ

41. ನೀಲಮ್ಮ 35 ವರ್ಷ ಜಂಗಮಾರಗೊಲ್ಲರಹಟ್ಟಿ

42. ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ ಲೇ: ಕುವೆಂಪು ಪುಟ 4

43. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ಪುಟ 3

ಅಧ್ಯಾಯ 8

ಕಾಡುಗೊಲ್ಲ ಮಹಿಳಾ ಆರ್ಥಿಕ ಸಂಕಥನ

ಕಾಡುಗೊಲ್ಲರ ಪ್ರಧಾನ ಕಸುಬು ಪಶುಸಂಗೋಪನೆ. ಇವರು ಹುಲ್ಲುಗಾವಲಿನಂತಹ ಪ್ರದೇಶದಲ್ಲೇ ಹೆಚ್ಚು ವಾಸಿಸುತ್ತಿದ್ದವು. ವೃತ್ತಿಯ ಕಾರಣದಿಂದಲೂ ಕಾಡಿಗೆ ಸಮೀಪವಾಗಿ ಊರಿಗೆ ದೂರವಾಗಿ ಬದುಕಿದವರು. ಪಶುಸಂಗೋಪನೆಯ ಮೂಲಕ ಹಾಲು, ಮೊಸರು, ತುಪ್ಪ ಮಾರಿ ಜೀವನವನ್ನು ನಡೆಸುತ್ತಿದ್ದರು. ಮಳೆಯ ಅಭಾವ, ಬರ, ಹುಲ್ಲುಗಾವಲುಗಳು ವ್ಯವಸಾಯಕ್ಕೆ, ವಾಸಕ್ಕೆ ಬಳಸಲ್ಪಟ್ಟದ್ದರಿಂದ ಹುಲ್ಲುಗಾವಲುಗಳ ಅಭಾವದಿಂದಾಗಿ ಪಶುಸಂಗೋಪನಾ ವೃತ್ತಿಯಿಂದ ಹಿಂದೆ ಸರಿಯಬೇಕಾಯಿತು.ಇಂದು ಕುರಿ ಸಾಕಾಣೆ ಕಾಡುಗೊಲ್ಲರ ಪ್ರಧಾನ ವೃತ್ತಿಯಾಗಿದೆ. ಇದರೊಂದಿಗೆ ಅನುಕೂಲವಿದ್ದವರು ಭೂಮಿಯನ್ನು ಹೊಂದಿ ವ್ಯವಸಾಯವನ್ನು ಮಾಡುತ್ತಿದ್ದರೆ. ಕುರಿಸಾಕಾಣಿಕೆ, ವ್ಯವಸಾಯ ವೃತ್ತಿಯಲ್ಲಿ ತೊಡಗಲು ಅಸಮರ್ಥರಾದವರು ಕೂಲಿಯನ್ನು ಆಶ್ರಯಿಸಿದ್ದಾರೆ. "ಬುಡಕಟ್ಟುಗಳ ಮೂಲ ಆರ್ಥಿಕ ಸಂಘಟನೆಯೂ ನಗರೀಕರಣ, ಪಾಶ್ಚಾತೀಕರಣ, ಸಂಸ್ಕೃತೀಕರಣ, ತಾಂತ್ರೀಕರಣ ಹಾಗೂ ಸರ್ಕಾರದ ಯೋಜನೆಗಳ ಅನುಷ್ಠಾನೀಕರಣಗಳಾಗಿ ಬದಲಾಗಿದೆ. ಮತ್ತು ಬದಲಾಗುತ್ತಿದೆ. ಕಾಡು ನಾಡಾದಾಗ ಇಲ್ಲವೆ ಕಾಡು ಸರ್ಕಾರದ ಯೋಜನೆಗಳ ಸಾಮ್ಯಕ್ಕೆ ಸೇರಿದಾಗ ಕಾಡಾಶ್ರಿತ ಬುಡಕಟ್ಟುಗಳ ಕಸುಬಿಗೆ ಸಂಚಕಾರ ಬಂದೊದಗಿರುವುದು ಸಹಜ. ಹೀಗಾಗಿ ಇಂದು ಕುಲ ಕಸುಬುಗಳಿಗಿರುವ ಅರ್ಥ ಭಿನ್ನವಾಗಿರುವುದು."[1] ಆದ್ದರಿಂದ ಇಂದು ಕಾಡುಗೊಲ್ಲ ಬುಡಕಟ್ಟು ತನ್ನ ಸಾಂಪ್ರದಾಯಿಕ ವೃತ್ತಿಯನ್ನು ಬದಲಾಯಿಸಿಕೊಂಡಿದೆ. ಈ ಬದಲಾವಣೆಯು ಅಭಿವೃದ್ಧಿಯೆಡೆಗೆ ಸಾಗುತ್ತಿರುವ ಕಾರಣದಿಂದ ಅಗತ್ಯವೂ ಅನಿವಾರ್ಯವೂ ಆಗಿದೆ.

ಕಾಡುಗೊಲ್ಲರ ಪಶುಸಂಗೋಪನಾ ವೃತ್ತಿ, ಕುರಿಸಾಕಾಣಿಕೆಯು ವೃತ್ತಿ ಪ್ರಧಾನವಾಗಿ ಪುರುಷನ ಕೆಲಸವೇ ಆಗಿದೆ. ಇವರ ಆರಾಧ್ಯ ದೈವಗಳಾದ ಎತ್ತಪ್ಪ ಜಂಜಪ್ಪ, ಪಶುಪಾಲಕರಾಗಿದ್ದವರು ಈ ಪಶುಸಂಗೋಪನಾ ಪುರುಷ ದೈವಗಳ ಅರಾಧನೆಯು ಕಾಡುಗೊಲ್ಲರ ಬುಡಕಟ್ಟಿನಲ್ಲಿದ್ದ ಪುರುಷಪ್ರಧಾನ ಆರ್ಥಿಕತೆಯನ್ನು ತಿಳಿಯಪಡಿಸುತ್ತದೆ. ಇಂತಹ ಆರ್ಥಿಕತೆಯೊಳಗೆ ಮಹಿಳೆಯ ಆರ್ಥಿಕತೆಯ ಸ್ಥಿತಿಗತಿ ಗೌಣವಾದವು, ಅಗೋಚರವಾದವು. ದುಡಿಮೆ ಇದ್ದರೂ ಬದುಕಿನ ಅನಿವಾರ್ಯತೆ ದೃಷ್ಟಿಯದ್ದು ಲಾಭಮೂಲದಲ್ಲಿ ಎಂಬುದನ್ನು ಗಮನಿಸಬಹುದಾಗಿದೆ.

ಜೇವ್ಪೋತ್ಪಾದಕತೆ:

ಕಾಡುಗೊಲ್ಲ ಬುಡಕಟ್ಟಿನಲ್ಲಿ ಪುರುಷ ಸಮಾಜ ಪಶುಸಂಗೋಪನೆಯ ವೃತ್ತಿಯನ್ನು ಅನುಸರಿಸುತ್ತಿದ್ದಾಗ ಮಹಿಳೆಯರಿಗೆ ಜೇವ್ಪೋತ್ಪಾದಕತೆ, ಮನೆಗೆಲಸ ಅವರ ಮುಖ್ಯವಾದ ದುಡಿಮೆಯಾಗಿತ್ತು. ಈ ಎರಡೂ ವೃತ್ತಿಗಳು ಲಾಭರಹಿತವಾದವು. ಸಾಮಾಜಿಕ, ಸಾಂಸ್ಕೃತಿಕ ಕಟ್ಟಳೆಗಳಿಗೆ ಒಳಗಾಗಿ ಮಹಿಳೆ ಎಂಬುವವಳು ಮಾಡಲೇಬೇಕಾಗಿದ್ದ ಕೆಲಸವಾಗಿದ್ದವು. ಈ ಹೊತ್ತಿನಲ್ಲಿ ಪುರುಷ ಪಶುಪಾಲಕನಾಗಿದ್ದ ಆದರೆ ಹಾಲು, ತುಪ್ಪ, ಮೊಸರು ಮಾರುವುದು, ಪಶುವಿನ ಹಾರೈಕೆ, ಸ್ವಚ್ಛದ ಕೆಲಸಗಳು ಮಹಿಳೆಯರ ಪಾಲಾದವು. ಹೈನು ಉತ್ಪನ್ನಗಳನ್ನು ಅವರು ಮಾರುತ್ತಿದ್ದರೂ ಲಾಭ ಅವರ ಕೈಸೇರುತ್ತಿರಲಿಲ್ಲ. ಹೈನುಗಾರಿಕೆ ಉತ್ಪನ್ನಗಳ ಮಾರಾಟದ ಜೊತೆಗೆ ಕಾಡುಗೊಲ್ಲ ಮಹಿಳೆಯರು ಕಾಡಿನ ಉತ್ಪನ್ನಗಳನ್ನು ಮಾರಿ ಒಂದಷ್ಟು ಹಣ ಪಡೆಯುತ್ತಿದ್ದರು. ಕಾಡುಗೊಲ್ಲರ ಸಾಹಿತ್ಯದಲ್ಲಿ ದೊರೆಯುವ ಕೆಲವು ಗೀತೆಗಳಲ್ಲಿ ಇದನ್ನು ಗುರುತಿಸಬಹುದು..

ಅಕ್ಕಾ ತಂಗ್ಯೇರು ತುಪ್ಪ ಮಾರಲೋಗಿ
ಬಟ್ಟೆ ಮುತ್ತ ಕಂಡಾರೆ ಕಡೆಗಣ್ಣಲಿ
ಬಟ್ಟೆ ಮುತ್ತ ಕಂಡಾರೆ ಕಡೆಗಣ್ಣಲಿ ಅಕ್ಕಸಮ್ಮ
ದಿಕ್ಕಿನೊಳಗಿದ್ದಾರ ದಿವಸಿಲ್ಲ

ಅಕ್ಕ ನಮ್ಮ ಸೆಟ್ಟೇರಿಗೇಳಿ ತರಿಸೋನೆ
ತಾಯಿ ಮಕ್ಕಳು ಆಲಮಾರಲೋಗಿ
ಮಾನ ಮುತ್ತು ಕಂಡಾರೆ ಕಡೆಗಣ್ಣ[2]

ರತ್ನದ ಕುಡುಗೋಲು ಮುತ್ತೀನ ಇಡಿಯಗ್ಗ
ವಜ್ರಮಾಣಿಕದ ಗುದಿನೇಮಿ
ವಜ್ರಮಾಣಿಕದ ಗುದಿನೇಮಿ ತಕ್ಕಂಡು
ತಲೆಬಾಗಿ ಮುಸುರ ಕಡೆದಾಗಿ[3]

ಅಕ್ಕ ಕಾಟಮ್ಮ ನ್ಯಟ್ಟನ್ನ ಎಂಗೂಸು
ಕಟ್ಟಿಗೋದವ್ವು ಬರಲಿಲ್ಲ ವುಲಿಕುಂಟೆ
ವುಟ್ಟು ದೇವಿನಾಗಿ ಮೆರೆದಾಳೆ[4]

ಹಾಲು ಕಾಸಾಕಿದ್ವೆ, ಒಲೆ ಬೆಳಗೂತಿದ್ದೆ
ಬಾಲಮ ತೂಗತ ಒಳಗಿದ್ದೆ- ಹೊನ್ನುಬಂಡ
ಸಾಮಿ ಬಂದ ದಾಯಾ ತಿಳಿಲಿಲ್ಲ.[5]

ಈ ಗೀತೆಗಳಲ್ಲಿ ಕಾಡುಗೊಲ್ಲ ಮಹಿಳೆಯರು ನಿರ್ವಹಿಸುತ್ತಿದ್ದ ಸಾಂಪ್ರದಾಯಿಕ ವೃತ್ತಿ, ದುಡಿಮೆಯ ವಿವರಗಳಿವೆ. ಪಶುವಿನ ಉತ್ಪನ್ನಗಳಿಂದ ಹಾಲು ಮೊಸರು, ಮಜ್ಜಿಗೆ, ತುಪ್ಪವನ್ನು ಮಹಿಳೆಯರೆ ಊರಿಗೆ ಕೊಂಡು ಹೋಗಿ ಮಾರುತ್ತಿದ್ದರು. ಅದಕ್ಕೆ ಸಂಬಂಧಿಸದ ಎಲ್ಲಾ ಕಾರ್ಯಗಳನ್ನು ಮಹಿಳೆಯರೇ ನಿರ್ವಹಿಸುತ್ತಿದ್ದರು. ಪುರುಷರು ಪಶುಗಳ ಮೇಯಿಸುವಿಕೆ, ರಕ್ಷಣೆ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಹಾಲಿನಿಂದ ಉತ್ಪನ್ನಗಳನ್ನು ತಯಾರಿಸಿ ಮಾಡುವ ಹೊಣೆಗಾರಿಕೆಯು ಮಹಿಳೆಯರಾದಾಗಿದ್ದಿತು. ಆದ್ದರಿಂದ ದೊರೆಯುವ ಲಾಭ ಕುಟುಂಬ ನಿರ್ವಹಣೆಗೆ ವ್ಯಯವಾಗುತ್ತಿತ್ತು. ಕುಟುಂಬ ನಿರ್ವಹಣೆ ಮತ್ತು ಅದಾಯದ ನಿರ್ವಹಣೆ ಎರಡನ್ನೂ ಪುರುಷನೆ, ನಿರ್ವಹಿಸುತ್ತಿದ್ದುದು ಕಂಡು ಬರುತ್ತದೆ. ಪಶುಸಾಗೋಪನೆ ಪೂರಕ ದುಡಿಮೆಯನ್ನು ಮಹಿಳೆಯರು ಮಾಡುತ್ತಿದ್ದರು. ಮಹಿಳೆ ಪುರುಷ ದುಡಿಮೆಗಳೆರಡೂ ಕುಟುಂಬದ ಪೂರೈಕೆಗಾಗಿ ನಡೆಯುತ್ತಿತ್ತು. ಇಲ್ಲಿ ಮುಖ್ಯವಾಗಿ ಮಹಿಳೆಯ ದುಡಿಮೆ ಪೂರಕ ದುಡಿಮೆಗಿಂತ ಜೀವೋತ್ಪಾದಕತೆಯ ದುಡಿಮೆಗೆ ಪ್ರಾಮುಖ್ಯತೆ ಇದ್ದಿತು.

ಜೀವೋತ್ಪಾದಕತೆಯ ಮಹಿಳೆಯರ ಜೈವಿಕ ಕ್ರಿಯೆಯಾಗಿದ್ದು ಅದು ಹಣ ಮೂಲದ್ದಲ್ಲ. ಜೀವ ಪೋಷಕತೆ ಮತ್ತು ಜೀವೋತ್ಪಾದಕತೆಯನ್ನು ಮಾಡುವ ಮಹಿಳೆಯದು ದುಡಿಮೆ ಎಂದು ಪರಿಗಣಿಸದಿರಲು ಇದು ಮುಖ್ಯಕಾರಣ. ಇಂದಿನ ಆರ್ಥಿಕತೆಯ ಹಣದ ಮೂಲದಾದ್ದರಿಂದ ಮಹಿಳೆಯರ ಈ ಕ್ರಿಯೆಗಳು ದುಡಿಮೆ ಎಂದು ಪರಿಗಣಿಸಲಿಲ್ಲ. ಇವು ಮಹಿಳೆಯ ಬುಡಕಟ್ಟಿನಲ್ಲಿ ನಿಶ್ಶಬ್ದವಾಗಿ ನಡೆಸಿಕೊಂಡ ದುಡಿಮೆಗಳು. ಈ ದುಡಿಮೆಗಳು ಹೆಣ್ಣು ಗಂಡಿನ ನಡುವೆ ಅಸಮಾನತೆಯನ್ನು ಉಂಟುಮಾಡಿರಲಿಲ್ಲ. ಬದಲಿಗೆ ಬದುಕಿಗೆ ಪೂರಕವಾಗಿ ಪರಸ್ಪರ ಅವಲಂಬನೆಯಿಂದ ನಡೆಯುತ್ತಿದ್ದವು.

ಪಶುಸಂಗೋಪನೆಯ ಜೊತೆಗೆ ಕುಟುಂಬ ನಿರ್ವಹಣೆಗಾಗಿ ಮಹಿಳೆಯು ಕಾಡಿನಲ್ಲಿ ಕಟ್ಟಿಗೆ ಸಂಗ್ರಹಿಸುವ, ಆಹಾರಕ್ಕಾಗಿ ಸೊಪ್ಪುಗಳನ್ನು ಸಂಗ್ರಹಿಸುವ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಮನೆ ನಿರ್ವಹಣೆ, ಪೂರಕ ದುಡಿಮೆ, ಜೀವೋತ್ಪಾದಕತೆ ಇವು ಅಂದಿನ ಮಹಿಳೆಯರ ವೃತ್ತಿಯಾಗಿದ್ದವು. ಪುರುಷನಿಗಿಂತ ಹೆಚ್ಚಿನ ಅವಧಿ ಶ್ರಮದ ದುಡಿಮೆಯನ್ನು ಮಾಡುತ್ತಿದ್ದರಾದರೂ ಎಂದೂ ಮಹಿಳೆಯು ತಮ್ಮನ್ನು ದುಡಿಮೆಗಾರರೆಂದು ಗುರುತಿಸಿಕೊಳ್ಳಲಿಲ್ಲ. ಬದಲಿಗೆ ಕಾಡುಗೊಲ್ಲ

ಮಹಿಳೆಯರಾಗಿ ಹುಟ್ಟಿದ ಮೇಲೆ ಮಹಿಳೆಯರು ನಿರ್ವಹಿಸಬೇಕಾದ ಸಾಮಾಜಿಕ ವಾಸ್ತವಗಳಾಗಿದ್ದವು. ಸಮಾಜವು ಮಹಿಳೆಯರ ಲಾಭರಹಿತ ಶ್ರಮದ ದುಡಿಮೆಯನ್ನು ದುಡಿಮೆಯೆಂದು ಪರಿಗಣಿಸಿದ್ದು 1991ರ ನಂತರವೇ. ಭಾರತದಲ್ಲಿ ಜನರ ದುಡಿಮೆಯನ್ನು ಗುರುತಿಸಿ, ಮಾಹಿತಿ ಸಂಗ್ರಹಿಸಿ ದಾಖಲು ಮಾಡುವ ಸಂಸ್ಥೆಗಳಾದ ದಿ ನ್ಯಾಷನಲ್ ಸ್ಯಾಂಪಲ್ ಸರ್ವೆ, ಜನಗಣತಿ, ದಿ ಸ್ಟ್ಯಾಟಿಸ್ಟಿಕ್ ಆಫ್ ದಿ ಡೈರೆಕ್ಟೊರೇಟ್ ಜನರಲ್ ಆಫ್ ಎಂಪ್ಲಾಯ್ ಮೆಂಟ್ ಅಂಡ್ ಟ್ರೇನಿಂಗ್ ಮಹಿಳೆಯರು ಮಾಡುವ ಮಾರುಕಟ್ಟೆ ಮೌಲ್ಯವಿಲ್ಲದ ಕೆಲಸವನ್ನು ಪ್ರಾರಂಭದಲ್ಲಿ ಮಹಿಳೆಯರ ದುಡಿಮೆ ಎಂದು ಪರಿಗಣಿಸಲಿಲ್ಲ. 1991ರ ನಂತರ ಮಹಿಳೆಯರ ವೇತನ ರಹಿತ ಕೆಲಸವನ್ನು ದುಡಿಮೆ ಎಂದು ಪರಿಗಣಿಸಿ. ಮಹಿಳೆಯರನ್ನು ದುಡಿಮೆಗಾರರೆಂದು ಗುರುತಿಸಿತು.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳೆಯರಿಗೆ ಕುಟುಂಬದ ಹೊರಗಿನ ದುಡಿಮೆಗಿಂತ ಕುಟುಂಬ ನಿರ್ವಹಣೆ ಮಾಡುವ ದುಡಿಮೆಗೆ ಮೊದಲ ಆದ್ಯತೆ ಇದೆ. ಈ ಕೌಟುಂಬಿಕ ಕೆಲಸಗಳು. ಈ ಬುಡಕಟ್ಟಿನ ಮಹಿಳೆಯರ ಹೆಣ್ಣುತನವನ್ನು ನಿರ್ಧರಿಸುತ್ತವೆ. ಈ ಕೆಲಸಗಳಿಂದ ಹಿಂದೆ ಸರಿಯುವ ಮಹಿಳೆಯರು ಹೆಣ್ಣುತನವನ್ನೇ ಪ್ರಶ್ನೆಗೆ ಒಡ್ಡಬೇಕಾಗುತ್ತದೆ.

ಕುಟುಂಬದ ನಿರ್ವಹಣೆ ಮಾಡುತ್ತಿರುವ ವಿರಾಮವಿಲ್ಲದೆ ಕುಟುಂಬದ ಒಳಗೂ ಹೊರಗೂ ದುಡಿಯುತ್ತಿರುವ ಕಾಡುಗೊಲ್ಲ ಮಹಿಳೆ ಅದು ತನ್ನ ಕರ್ತವ್ಯ ಎಂದು ಬದುಕು ಮತ್ತು ದುಡಿಮೆ ಎರಡನ್ನು ನಿರ್ವಹಿಸುತ್ತಿದ್ದಾಳೆ. ಜೀವೋತ್ಪಾದರಾಗಿದ್ದ ಮಹಿಳೆಯರು ತಮ್ಮ ಜೈವಿಕ ಕಾರಣದಿಂದ ಕುಟುಂಬದ ಹೊರಗಿನ ದುಡಿಮೆಯನ್ನು ನಿರಾಕರಿಸಿಲ್ಲ. ಅನಿಶ್ಚಿತ ಬದುಕು ಅನಿಶ್ಚಿತ ಕೂಲಿ, ಬೇಸಾಯದ ಕಾರಣದಿಂದ ಪೂರಕ ದುಡಿಮೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಕೌಟುಂಬಿಕ ಅನಿವಾರ್ಯತೆಯಾಗಿದೆ.

ಶ್ರಮವಿಭಜನೆ:

ಸಮಾಜದ ವ್ಯವಸ್ಥೆಯ ಅಡಿಪಾಯ ಆರ್ಥಿಕ ಉತ್ಪಾದನೆಯನ್ನು ಆಧರಿಸಿದ್ದು ಈ ಅಡಿಪಾಯದ ಮೇಲೆ ಮಹಿಳೆ ಮತ್ತು ಪುರುಷನ ಸಾಮಾಜಿಕ ಸ್ಥಾನ ಮಾನಗಳು ನಿರ್ಧಾರವಾಗುತ್ತವೆ. ಕಾಡುಗೊಲ್ಲ ಮಹಿಳೆಯ ಇಂದಿನ ಸಾಮಾಜಿಕ ಸ್ಥಾನಮಾನಗಳಿಗೆ ಬುಡಕಟ್ಟಿನ ಆರ್ಥಿಕ ವ್ಯವಸ್ಥೆ ಪ್ರಮುಖ ಕಾರಣವಾಗಿದೆ. ಪುರುಷ ಪ್ರಧಾನವಾಗಿದ್ದ ಪಶುಸಂಗೋಪನೆಯಲ್ಲಿ ಮಹಿಳೆಯರ ಕುಟುಂಬದ ಒಳಗಿನ ದುಡಿಮೆ ಮತ್ತು ಪಶುಸಂಗೋಪನೆ ಪೂರಕ ದುಡಿಮೆ ಎರಡೂ ನಗಣ್ಯವಾಗಿದ್ದವು.

ಪಶುಪಾಲಕರಾಗಿದ್ದ ಕಾಡುಗೊಲ್ಲ ಬುಡಕಟ್ಟಿನಲ್ಲಿ ಶ್ರಮವಿಭಜನೆ ಇರಲಿಲ್ಲ. ಕುಟುಂಬದ ನಿರ್ವಹಣೆಗೆ, ಉತ್ತಮ ಬದುಕಿಗಾಗಿ ದುಡಿಯಲೇ ಬೇಕಾದ ಅನಿವಾರ್ಯತೆ ಪುರುಷ ಮತ್ತು ಮಹಿಳೆಯರಿಬ್ಬರಲ್ಲಿಯೂ ಇತ್ತು. ಪಶುಪಾಲನೆ, ಪೋಷಣೆಗೆ ಪುರುಷ ತೊಡಗಿಕೊಂಡರೆ ಕುಟುಂಬದ ಪಾಲನೆ ಪೋಷಣೆಯಲ್ಲಿ ಮಹಿಳೆ ತೊಡಗಿಕೊಂಡಳು. ಇಬ್ಬರದ್ದೂ ಶ್ರಮದ ದುಡಿಮೆಯಾಗಿತ್ತು. ಈ ದುಡಿಮೆಯು ಬದುಕಿಗೆ ಅಗತ್ಯವಾದುದಕ್ಕಿಂತ ಹೆಚ್ಚಿನದನ್ನೇನೂ ಉತ್ಪಾದಿಸುತ್ತಿರಲಿಲ್ಲ. ಹೀಗಾಗಿ ಉಳಿತಾಯಕ್ಕೆ ಆಸ್ಪದವಿಲ್ಲದೆ ಕಾಡುಗೊಲ್ಲರಲ್ಲಿ ಬಡತನವು ಉಳಿದುಕೊಂಡು ಬಂದಿತು.

ಈ ಶ್ರಮವಭಜನೆಯಿಂದ ಬುಡಕಟ್ಟಿನಲ್ಲಿ ಹೆಣ್ಣು ಗಂಡಿನ ನಡುವೆ ಅಸಮಾನ ನೆಲೆಗಳಿರಲಿಲ್ಲ. ಈ ಹೋರಾಟದಲ್ಲಿ ಉಳಿದುಕೊಳ್ಳಲು ಪರಸ್ಪರ ಸಹಕಾರ ಮತ್ತು ಅವಲಂಬನೆಯ ಬದುಕು ಅಗತ್ಯವೇ ಆಗಿತ್ತು. ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಮಹಿಳೆಯರಿಗೆ ಅಧೀನ ಸ್ಥಾನವಿದ್ದರೂ ಆರ್ಥಿಕವಾಗಿ ಆಕೆಯ ದುಡಿಮೆ ಪುರುಷನ ದುಡಿಮೆಗೆ ಸಮಾನ ನೆಲೆಯದ್ದೇ ಆಗಿತ್ತು. ಬುಡಕಟ್ಟಿನೊಳಗಿನ ಬಹುಪತ್ನಿತ್ವ, ಶಿಶುವಿವಾಹಕ್ಕೆ ಒಂದರ್ಥದಲ್ಲಿ ಈ ವೃತ್ತಿಯೂ ಕಾರಣವಾಗಿದ್ದಿತು. ಕುಟುಂಬದ ನಿರ್ವಹಣೆಗೆ ಹೆಚ್ಚಿನ ಆದಾಯಕ್ಕೆ ಪತಿ ಜೊತೆಗೆ ದುಡಿಮೆಗೆ ಸಹಕರಿಸಲು ಒಬ್ಬಳಿಗಿಂತ ಹೆಚ್ಚಿನ ಹೆಂಡತಿಯರನ್ನು ಹೊಂದುವುದು ಸಾಮಾನ್ಯವಾಗಿತ್ತು. ಅಲ್ಲದೆ ಈ ಹೆಂಡತಿಯರಿಗೆ ಯಾವುದೇ ಕೂಲಿಯನ್ನು ನೀಡಬೇಕಾಗಿರಲಿಲ್ಲ. ಸೋದರ ಸಂಬಂಧಗಳಲ್ಲಿ ಏರ್ಪಡುತ್ತಿದ್ದ ಶಿಶುವಿವಾಹಗಳು ಆಸ್ತಿಯ ವಿಭಜನೆಯನ್ನು ತಡೆದವು.

ಅಸಂಘಟಿತ ವಲಯದ ವೃತ್ತಿ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಪಶುಸಂಗೋಪನೆಯಿಂದ ಕುರಿಸಾಕಾಣಿಕೆ ಮತ್ತು ವ್ಯವಸಾಯದ ಕಡೆಗೆ ವೃತ್ತಿಯನ್ನು ಬದಲಾಯಿಸಿದ್ದು ಕಾಡುಗೊಲ್ಲ ಮಹಿಳೆಯರ ದುಡಿಮೆಯ ಬದುಕನ್ನು ಗೊಂದಲಕ್ಕೆ ತಳ್ಳಿತು. ಪಶುಪಾಲನೆಯಿಂದ ಕುರಿವ್ಯಾಪಾರಕ್ಕೆ ಬದಲಾದಾಗ, ವ್ಯವಸಾಯಕ್ಕೆ ಬದಲಾದಾಗ ಪುರುಷ ತನ್ನ ಆದಾಯದಲ್ಲಿ ಬದಲಾವಣೆಯನ್ನು ಕಂಡು ಕೊಂಡನು. ಈ ವೃತ್ತಿಯ ಬದಲಾವಣೆಯು ಪುರುಷನಿಗೆ ಬಹುಮಟ್ಟಿಗೆ ಪ್ರಯೋಜನಕಾರಿಯೇ ಪರಿಣಮಿಸಿತು. ಕಾಡುಗೊಲ್ಲ ಮಹಿಳೆಯರ ಪಾಲಿಗೆ ಈ ವೃತ್ತಿ ಬದಲಾವಣೆಯು ಹಲವು ಪ್ರಶ್ನೆಗಳನ್ನು ಎದುರಿಗಿಟ್ಟಿತು. ಹಾಲು, ತುಪ್ಪ, ಮೊಸರು, ಮಜ್ಜಿಗೆ ಮಾರುತ್ತಿದ್ದ ಈ ಗೊಲ್ಲತಿಯರು ಕುರಿ ವ್ಯಾಪಾರದ ಸಂಪೂರ್ಣ ಲಾಭ ಪುರುಷನಿಗೆ ಸೇರಿಕೊಂಡಾಗ ಈ ಸಂದರ್ಭದಲ್ಲಿ ಕುಟುಂಬದ ನಿರ್ವಹಣೆ ಸಾಧ್ಯವಾಗದೆ ಮಹಿಳೆಯರು ಹೊಸ ವೃತ್ತಿಗಳನ್ನು ಶೋಧಿಸಿಕೊಳ್ಳಬೇಕಾಯಿತು. ಅಸಂಘಟಿತ ವಲಯದ

ವೃತ್ತಿಗಳಾದ ಹಣ್ಣು, ತರಕಾರಿ ಮಾರಾಟ, ಬುಟ್ಟಿ, ಚಾಪೆ ಎಣೆಯುವುದು, ಬಟ್ಟೆ ಹೊಲಿಯುವುದು, ಮನೆಕೆಲಸ, ತೋಟಗಾರಿಗೆ, ಕೃಷಿ ಕೂಲಿ, ಬೀಡಿ ಕಟ್ಟುವುದು, ಊದುಬತ್ತಿ ತಯಾರಿಸುವುದು ಆಹಾರ ಸಂಸ್ಕರಣೆ, ಕೈಗಾರಿಕಾ ಕಾರ್ಮಿಕರಾಗಿ ದುಡಿಮೆಯನ್ನು ಹುಡುಕಿಕೊಳ್ಳಬೇಕಾಯಿತು.

ಕಾಡುಗೊಲ್ಲ ಪುರುಷ ಸಮಾಜ ತನ್ನನ್ನು ಲಾಭದಾಯಕ ವೃತ್ತಿಗೆ ಬದಲಾಯಿಸಿಕೊಂಡಿತು, ಅವರ ಸಾಮಾಜಿಕತೆಯು ಪುರುಷ ಪ್ರಧಾನತೆಯ ಹಿನ್ನೆಲೆಯಲ್ಲಿಯೇ ವಿಸ್ತರಿಸಿಕೊಂಡಿತು. ಮಹಿಳೆಯ ವೃತ್ತಿ ಬದುಕಿನಲ್ಲಿ ಉಂಟಾದ ಗೊಂದಲ ಅಸಂಘಟಿತ ವಲಯದ ಕೂಲಿ ಕಾರ್ಮಿಕನನ್ನಾಗಿಸಿತು. ಕಡಿಮೆ ಆದಾಯದಲ್ಲಿ ಕೂಲಿ ಕಾರ್ಮಿಕರಾಗಿ ಮುಂದುವರಿದಿದ್ದರಿಂದ ಬದುಕಿನ ಮಟ್ಟವು ಉತ್ತಮವಾಗುವ ಬದಲು ಕುಸಿಯಿತು. ಪಶುಪಾಲಕರಾಗಿದ್ದಾಗ ಮಹಿಳೆಯ ದುಡಿಮೆ ಬದುಕಿನ ಮಟ್ಟವನ್ನು ಎತ್ತರಿಸುವಲ್ಲಿ, ತನ್ನ ಕೊಡುಗೆಯನ್ನು ಸಂಪೂರ್ಣವಾಗಿ ನೀಡಿತ್ತು. ಪಶುಪಾಲನೆಯಿಂದ ವೃತ್ತಿ ಬದಲಾವಣೆಯಾದ ಮೇಲೆ ತನ್ನನ್ನು ಸಂಪೂರ್ಣವಾಗಿ ದುಡಿಮೆಯಲ್ಲಿ ತೊಡಗಿಸಿಕೊಳ್ಳಲು ಅಸಾಧ್ಯವಾಗಿ ಕೂಲಿ ಮತ್ತಿತರ ಕೆಲಸಗಳಿಂದ ಬದುಕಿನ ಮಟ್ಟ ಮತ್ತೂ ಕೆಳಗಿಳಿಯಬೇಕಾಯಿತು.

ಈ ವೃತ್ತಿಬದಲಾವಣೆಯು ಮಹಿಳೆಯ ಬದುಕಿನಲ್ಲಿ ಮಹತ್ತರ ಬದಲಾವಣೆ ತಂದಿತು. ಈ ಕಾರಣದಿಂದ ಕೆಲವು ಮಹಿಳೆಯರು ಮನೆಕೆಲಸಗಳಿಗೆ ಸೀಮಿತಗೊಳ್ಳಬೇಕಾಯಿತು ಅಥವಾ ಊರು ಪಟ್ಟಣಗಳಿಗೆ ಕೂಲಿ ಕೆಲಸಗಳಿಗಾಗಿ ವಲಸೆ ಹೋಗಬೇಕಾಯಿತು. ಈ ವಲಸೆ ಕೆಲವೊಮ್ಮೆ ಅಸಾಧ್ಯವಾಗಿ ಕುಟುಂಬ ನಿರ್ವಹಣೆಗಾಗಿ ಮಹಿಳೆಯರ ಮೇಲಿನ ಒತ್ತಡವನ್ನು ಹೆಚ್ಚಿಸಿತು. ಮಹಿಳೆಯರು ತಮ್ಮ ಸ್ವಾವಲಂಬಿ ಬದುಕನ್ನು ಬಿಟ್ಟು ಕೊಟ್ಟು ಕಡಿಮೆ ಕೂಲಿಗಾಗಿ ದುಡಿಯಬೇಕಾಯಿತು. ಕೌಟುಂಬಿಕ ಕಾರಣಗಳಿಗೆ ವಲಸೆ ಹೋಗಲು ಸಾಧ್ಯವಾಗದೆ ದೈಹಿಕ ಶ್ರಮವನ್ನು ಆಧರಿಸಿದ ಕೆಲಸವನ್ನು ನಂಬಿಕೊಳ್ಳಬೇಕಾಯಿತು.

ಪ್ರಸ್ತುತ ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರೆಲ್ಲರು ಶೇ 90 ಭಾಗ ಕುಟುಂಬಗಳಲ್ಲಿ ಗಂಡು ಮಕ್ಕಳು ಮತ್ತು ಮನೆಯ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ದುಡಿಯವವರು. ಕೇವಲ 10 ರಷ್ಟು ಮಹಿಳೆಯರು ಆರ್ಥಿಕವಾಗಿ ಗಂಡಂದಿರನ್ನು ಅವಲಂಬಿಸುತ್ತಾರೆ ಮತ್ತು ಮನೆ ಕೆಲಸವನ್ನು ಮಾತ್ರ ನಿರ್ವಹಿಸುತ್ತಾರೆ. ಹೊರಗಿನ ದುಡಿಮೆಗೆ ಹೋಗುವುದಿಲ್ಲ. ಕಾಡುಗೊಲ್ಲ ಬುಡಕಟ್ಟಿನೊಳಗಿನ ಅನಿಶ್ಚಿತ ಆದಾಯದ ದುಡಿಮೆ, ಬಡತನ ಮಹಿಳೆಯರು ಕುಟುಂಬದ ಹೊರಗೂ ದುಡಿಯುವಂತೆ ಮಾಡಿದೆ.

ಕಾಡುಗೊಲ್ಲ ಮಹಿಳೆಯರು ಇಂದು ಬೇಸಾಯದಲ್ಲಿ ಪೂರಕ ದುಡಿಮೆಗಾರರಾಗಿ. ಜಮೀನು ಇಲ್ಲದಿದ್ದರೆ ಅನ್ಯರ ಕೃಷಿಭೂಮಿಯಲ್ಲಿ ಕೃಷಿ ಕಾರ್ಮಿಕರಾಗಿ, ದುಡಿಯುತ್ತಿದ್ದಾರೆ, ಹೂವಿನವ್ಯಾಪಾರ, ತರಕಾರಿ ವ್ಯಾಪಾರ, ಕಳೆಕೀಳುವ, ಸಸಿಹಾಕುವ, ಚಿಕ್ಕ ಪುಟ್ಟ ಪೆಟ್ಟಿಗೆ ಅಂಗಡಿಗಳನ್ನಿಟ್ಟು ದುಡಿಮೆ

ಮಾಡುತ್ತಿದ್ದಾರೆ. ಕಡಿಮೆ ಆದಾಯದ ಈ ವೃತ್ತಿಯಲ್ಲಿ ಆಕೆಗೆ ಸಿಗುವ ಹಣವು ಕುಟುಂಬ ನಿರ್ವಹಣೆ ಮುಗಿದು ಬಿಡುತ್ತದೆ. ಯಾವುದೇ ಉಳಿತಾಯವು ಸಾಧ್ಯವಾಗುವುದಿಲ್ಲ. ಇದರಿಂದಾಗಿ ನಿರಂತರ ದುಡಿಮೆಯು ಇವರಿಗೆ ಅನಿವಾರ್ಯವಾಗಿಬಿಟ್ಟಿದೆ.

ವಯಸ್ಸು

ಕಾಡುಗೊಲ್ಲ ಮಹಿಳೆಯ ದುಡಿಮೆ ವಯಸ್ಸು ಸುಮಾರು 14-15 ವಯಸ್ಸಿಗೆ ಆರಂಭವಾಗಿ ಆಕೆ ವಯಸ್ಸಾದ ಮುದುಕಿಯಾಗಿ ಕೆಲಸ ಮಾಡಲು ಅಸಮರ್ಥಳಾಗುವವರೆಗೂ ಇರುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ 60–70–85 ವರ್ಷದ ಬೆನ್ನುಬಾಗಿರುವ, ನಡೆಯಲು ಅಸಮರ್ಥರಾದ ವೃದ್ಧ ಮಹಿಳೆಯರು ಕೋಲು ಹಿಡಿದು ನಡೆದಾಡುತ್ತಾ, ಕೂಲಿ, ಕಳೆ ಕೀಳುವುದು, ಕಡ್ಲೆಬೀಜ ಬಿತ್ತನೆ, ಸಂಸ್ಕರಣೆ ಮಾಡಿರುವುದನ್ನು ನೋಡಿದ್ದೇನೆ. ಕಾಡುಗೊಲ್ಲ ತರುಣಿಯರು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಗೇ ಓದು ಕೊನೆಗೊಳಿಸಿಕೊಂಡಿರುತ್ತಾರೆ. ಪಾಸಾದರೂ, ಫೇಲಾದರೂ ದುಡಿಮೆ ಮಾಡುವುದು ಅನಿವಾರ್ಯವಾಗಿರುತ್ತದೆ. ಓದುವ ಮನಸ್ಸಿದ್ದರೂ ಮನೆಯಲ್ಲಿ ಖರ್ಚು ಮಾಡಿ ಓದಿಸುವ ಸ್ಥಿತಿಯಲ್ಲಿ ಇಲ್ಲ. ಓದಿಗಿಂತ ದುಡಿಮೆ ಮುಖ್ಯವಾಗಿರುತ್ತದೆ. ಮದುವೆಯಾಗುವವರೆಗೆ ಅಪ್ಪನ ಮನೆಯಲ್ಲಿ ದುಡಿಮೆ ನಂತರ ಗಂಡನ ಮನೆಯಲ್ಲಿ ದುಡಿಮೆ ಇಳಿಗಾಲದಲ್ಲೂ ಕುಟುಂಬಕ್ಕಾಗಿ ದುಡಿಮೆ ಮಾಡಲೇಬೇಕಾದ ಅನಿವಾರ್ಯತೆಯಲ್ಲಿ ಇಲ್ಲಿನ ಮಹಿಳೆಯರಿದ್ದಾರೆ.

ಪಾವಗಡ ತಾಲ್ಲೋಕಿನಲ್ಲಿ ಮುಖ್ಯವಾಗಿ ದೊರೆಯುವ ಅಸಂಘಟಿತ ವಲಯದ ಕೆಲಸಗಳೆಂದರೆ ಕಡ್ಲೆ ಬೀಜದ ಸಂಸ್ಕರಣೆ, ಬಿತ್ತನೆ, ಕಳೆ ಕೀಳುವುದು, ರಾಗಿ ಬಿತ್ತನೆ ಸಂಸ್ಕರಣೆ. ಬಹುತೇಕ ಬರಪೀಡಿತ ಪ್ರದೇಶವಾದ್ದರಿಂದ, ಮಳೆಯ ಅಭಾವವಿರುವುದರಿಂದ ನಿರಂತರ ಕೃಷಿ ಬೇಸಾಯ ಸಾಧ್ಯವಾಗುವುದಿಲ್ಲ. ನೀರಾವರಿ ಜಮೀನಿನಲ್ಲಿ ದುಡಿಯಬೇಕಾಗುತ್ತದೆ. ನೀರಾವರಿ ಜಮೀನು ಹೊಂದಿರುವವರ ಸಂಖ್ಯೆ ಬಹಳ ಕಡಿಮೆಯೇ ಇದೆ. ಕೃಷಿ, ಕೂಲಿ, ಇಲ್ಲದಾಗ ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ ಮಾಡುತ್ತಾರೆ ಇದನ್ನು ಹೊರತು ಪಡಿಸಿದರೆ ಅಂಗನವಾಡಿ ಕಾರ್ಯಕರ್ತೆಯರಾಗಿ, ಶಿಕ್ಷಕಿಯರಾಗಿ, ಕಂಪ್ಯೂಟರ್ ಆಪರೇಟರ್‌ಗಳಾಗಿ, ಆಶಾ ಕಾಯಕರ್ತೆಯರಾಗಿ, ಹೊಲಿಗೆ ಕೆಲಸವನ್ನು ಮಾಡುತ್ತಾರಾದರೂ ಅವರ ಪ್ರಮಾಣ ತುಂಬಾ ಕಡಿಮೆಯೇ ಇದೆ.

ಒಹುಪಾಲು ಅನಕ್ಷರಸ್ತರಾಗಿರುವ ಕಾಡುಗೊಲ್ಲ ಮಹಿಳೆಯರು ಉನ್ನತ ಉದ್ಯೋಗ ಒಳ್ಳೆಯ ಆದಾಯ ತರುವ ಉದ್ಯೋಗಗಳಿಂದ ಧೂರವೇ ಇದ್ದಾರೆ ದುಡಿಮೆಯೆಂದರೆ ಕೂಲಿ ಎಂಬ ಅನಿವಾರ್ಯ ಸ್ಥಿತಿ ಉಂಟಾಗುತ್ತಿದೆ.

ಕಾಡುಗೊಲ್ಲರ ಬುಡಕಟ್ಟಿನಲ್ಲಿ ಉಂಟಾದ ವೃತ್ತಿ ಬದಲಾವಣೆಯು ಕಾಡುಗೊಲ್ಲ ಪುರುಷ ಮತ್ತು ಮಹಿಳೆಯರ ನಡುವೆ ಅಸಮಾನ ನೆಲೆಯನ್ನು ಸೃಷ್ಟಿಮಾಡಿತು. ಹೊಸ ವೃತ್ತಿಗೆ ಬದಲಾದ ಕಾಡುಗೊಲ್ಲ ಪುರುಷನ ದುಡಿಮೆಯ ಮಾರುಕಟ್ಟೆ ಮೌಲ್ಯವನ್ನು ಪಡೆದವು. ಮಹಿಳೆಯರು ದೈಹಿಕ ಶ್ರಮವನ್ನು ನಂಬಿಕೊಂಡಿರುವ ಕೂಲಿ ದುಡಿಮೆಯಲ್ಲಿ ದುಡಿಯುತ್ತಿದ್ದರೂ ಕಡಿಮೆ ಆದಾಯ ಮತ್ತು ವೃತ್ತಿಯ ಅನಿಶ್ಚಿತತೆಯಿಂದಾಗಿ ಅವರ ಉತ್ಪಾದಕ ಚಟುವಟಿಕೆಗಳು ಮಾರುಕಟ್ಟೆ ಮೌಲ್ಯಪಡೆಯದೆ ನಗಣ್ಯವಾದವು. ಅಗೋಚರವಾದವು. ಈ ಅಗೋಚರತೆಯು ಮಹಿಳೆಯ ದುಡಿಮೆಯನ್ನು ಬದಿಗೆ ತಳ್ಳಿದವು. ಕೂಲಿಯಿಂದ ಬಂದ ಹಣವು ಕುಟುಂಬದ ನಿರ್ವಹಣೆಗೆ ಖರ್ಚಾಗಿ ಹೋಗುವ ಈ ಸಂದರ್ಭದಲ್ಲಿ "ತನ್ನ ದುಡಿಮೆಯ ನ್ಯಾಯಯುತ ಪ್ರತಿಫಲಕ್ಕಾಗಿ ಮಹಿಳೆ ಬಾಯ್ತೆರೆಯದಂಥ ಬದ್ಧತೆಯನ್ನು ನಮ್ಮ ಸಾಂಸ್ಕೃತಿಕ ಸಂದರ್ಭ ಅವಳಿಗೆ ಕೊಟ್ಟಿದೆ . . . ಹೆಂಗಸಿನ ಮನೆಯೊಳಗಿನ ದುಡಿತವನ್ನು ದುಡಿತವೆಂದೇ ಪರಿಗಣಿಸದ ಸ್ಥಿತಿ. ಹೊರಗಿನ ದುಡಿಮೆಯನ್ನು ಅಗ್ಗಕ್ಕೆ ಪಡೆಯುವ ಸ್ಥಿತಿಗಳೊಂದಿಗೆ ಹಣದೊಂದಿಗೆ ವಿನಿಮಯ ಪಡೆಯುವ ಅವಳ ದುಡಿಮೆಯನ್ನು ನಿರುತ್ತೇಜನಗೊಳಿಸುವ ಯತ್ನ ಹಲವು ರೀತಿಗಳಲ್ಲಿ ಮುಂದುವರಿಯುತ್ತಿದೆ."[6] ಎಂಬುದನ್ನು ಕಾಡುಗೊಲ್ಲ ಮಹಿಳೆಯ ವಿಚಾರದಲ್ಲಿ ಒಪ್ಪಬಹುದಾಗಿದೆ. ಕಾಡುಗೊಲ್ಲ ಮಹಿಳೆಯನ್ನು ಅವರು ನಿರ್ವಹಿಸುವ ದುಡಿಮೆ ವೃತ್ತಿಗೆ ಸಂಬಂಧಿಸಿದಂತೆ ಪ್ರಶ್ನಿಸಿದಾಗ ಅವರಿಂದ ದೊರೆತ ಮಹಿಳೆಯು ಅವರ ವೃತ್ತಿ ಬದುಕಿನ ಹಲವು ಸಂಗತಿಗಳನ್ನು ತೆರೆದಿಟ್ಟಿತು.

ಕೂಲಿ:

ಕಾಡುಗೊಲ್ಲ ಮಹಿಳೆಯರ ದುಡಿಮೆಯನ್ನು ಎರಡು ರೀತಿಯಾಗಿ ಗಮನಿಸಬಹುದು. ವೇತನರಹಿತ ದುಡಿಮೆ ಮತ್ತು ವೇತನಸಹಿತ ದುಡಿಮೆ. ವೇತನ ರಹಿತ ದುಡಿಮೆಯಲ್ಲಿ ಮನೆಕೆಲಸ, ಕುಟುಂಬ ನಿರ್ವಹಣೆ, ಮಕ್ಕಳ ಲಾಲನೆ, ಪೋಷಣೆ, ಆಹಾರ ತಯಾರಿಕೆ ಸೇರುತ್ತವೆ. ಶ್ರಮಸಹಿತ ದುಡಿಮೆಯಾದರೂ ಈ ದುಡಿಮೆಗೆ ಕುಟುಂಬದಲ್ಲಿ ಯಾವ ಆದಾಯವನ್ನು ಮಹಿಳೆಯರು ಪಡೆಯುವುದಿಲ್ಲ. ಈ ಕೆಲಸವು ಮಹಿಳೆಯರೆ ಮಾಡಬೇಕಾದ್ದು. ಮಹಿಳೆಯರಿಗೆಂದೇ ನಿರ್ವಚಿಸಲ್ಪಟ್ಟಿರುವುದು. ಈ ದುಡಿಮೆಗಳಲ್ಲಿ ಕುಟುಂಬದ ಯಜಮಾನ. ಭಾಗವಹಿಸುವುದಿಲ್ಲ. ಏಕೆಂದರೆ ಈ ಕೆಲಸಗಳು ಗಂಡಸರು ಮಾಡುವ ಕೆಲಸಗಳಲ್ಲ ಎಂಬ ಉತ್ತರ ನೀಡುತ್ತಾರೆ. ವೇತನ

ರಹಿತ ಮನೆ ಕೆಲಸ-ಕಾರ್ಯಗಳನ್ನು ಮಾಡುವುದು ಹೆಣ್ಣಿನ ಕೆಲಸ ಅದನ್ನು ಗಂಡಸು ಮಾಡಿದರೆ ಅಪಮಾನ ಎಂಬ ಧೋರಣೆ ಗಾಢವಾಗಿಯೇ ಇದೆ. ಮನೆಯಲ್ಲಿ ಹೆಣ್ಣು ಮಕ್ಕಳು ಅಡಿಗೆ ಮಾಡುವ ಮಹಿಳೆಯರು ಇಲ್ಲದಾಗ ಪುರುಷ ಸಂಬಂಧಿಕರ ಮನೆಗೆ ಇಲ್ಲವೆ ಉಪಾಹಾರ ಗೃಹಗಳಲ್ಲಿ ಊಂಟಾದ ವ್ಯವಸ್ಥೆ ಮಾಡಿಕೊಳ್ಳುತ್ತಾನೆಯೇ ಹೊರತು ಎಂದಿಗೂ ಅಡುಗೆ ಕೆಲಸ ಕಾರ್ಯ ಮಾಡುವುದಿಲ್ಲ.

ವೇತನ ಸಹಿತ ದುಡಿಮೆಯಲ್ಲಿ ಲಿಂಗ ತಾರತಮ್ಯದ ನೆಲೆಗಳಿವೆ. ಕೂಲಿ ಕೆಲಸಕ್ಕೆ ತೆರಳುವ ಮಹಿಳೆಗೆ ನೀಡುವ ಕೂಲಿ ಅಥವಾ ವೇತನ ಪುರುಷನಿಗಿಂತ ಕಡಿಮೆ. ಪುರುಷರಿಗೆ 200 ರೂ ರವರೆಗೆ ಕೂಲಿಯನ್ನು ನೀಡಿದರೆ ಮಹಿಳೆಯರು ತಮ್ಮ ಕೆಲಸಕ್ಕೆ 80 ರಿಂದ 150 ರೂ ರವರೆಗೆ ಕೂಲಿಯನ್ನು ಪಡೆಯುತ್ತಾರೆ. ಗಂಡಸರು ಮಾಡುವ ಕೆಲಸ ಹೆಚ್ಚಿನ ದೈಹಿಕ ಶ್ರಮದ್ದು ಹೆಂಗಸರು ಮಾಡುವ ಕೆಲಸ ಕಡಿಮೆ ದೈಹಿಕ ಶ್ರಮದ್ದು ಎಂಬ ಕಾರಣಕ್ಕೆ ಈ ತಾರತಮ್ಯವಿದೆ. ಅಲ್ಲದೆ ಮಹಿಳಾ ಕೂಲಿಕಾರರ ಸಂಖ್ಯೆಯು ಹೆಚ್ಚಿದ್ದು ಬೇಡಿಕೆ ಕಡಿಮೆ ಇದೆ. ಗಂಡಸರು ಕೂಲಿಗೆ ಬರುವವರ ಸಂಖ್ಯೆ ಕಡಿಮೆ ಇರುವುದರಿಂದ ಅವರಿಗೆ ಬೇಡಿಕೆ ಹೆಚ್ಚಿದ್ದು ಕೊಡುವ ಕೂಲಿಯೂ ಹೆಚ್ಚಿದೆ. ಬದುಕಿನ ನಿರ್ವಹಣೆಗಾಗಿ ಮಹಿಳೆಯರು ಕೂಲಿಗೆ ತೆರಳಬೇಕಾದ ಅನಿವಾರ್ಯತೆ ಇದೆ. ಕೂಲಿಯಿಂದ ಬರುವ ಅದಾಯವು ಸಾಲ. ಮನೆ ನಿರ್ವಹಣೆಗೆ ಖರ್ಚಾಗುವುದರಿಂದ ಉಳಿತಾಯ ಸಾಧ್ಯವಿಲ್ಲದೆ ಉತ್ತಮ ಜೀವನ ನಡೆಸುವ ಅವಕಾಶಗಳು ಕಡಿಮೆಯಾಗಿವೆ.

ಮಹಿಳೆಯರು ಮಾಡುವ ಕೆಲಸವು ಪರೋಕ್ಷವಾಗಿ ಪುರುಷನ ಸಂಪಾದನೆಯ ಭಾಗವಾಗಿಯೇ ತೋರುತ್ತದೆ. ದುಡಿದರೂ ಬರುವ ಕೂಲಿಯನ್ನು ಸ್ತ್ರೀಶಕ್ತಿ ಸಂಘ. ಶ್ರೀ ಮಂಜುನಾಥ ಸಂಘಗಳಲ್ಲಿ ಪಡೆದ ಸಾಲಕ್ಕೆ ಉಳಿಸಿ ಕಟ್ಟುತ್ತಾರೆ. ಈ ಸಾಲವನ್ನು ಪಡೆದ ಮಹಿಳೆಯರು ಅದನ್ನು ಕುಟುಂಬದ ಪರುಷನಿಗೆ ಕುರಿವ್ಯಾಪಾರ ಇತರೆ ವ್ಯಾಪಾರಗಳಿಗೆ ಹೂಡಿಕೆಯಾಗಿ ನೀಡಿರುತ್ತಾರೆ. ಹೂಡಿಕೆಯಿಂದ ಬರುವ ಲಾಭ ನಿಧಾನಗತಿಯಾದ್ದುದರಿಂದ ಸಾಲದ ಜವಾಬ್ದಾರಿಯನ್ನು ಕೆಲವೊಮ್ಮೆ ಮಹಿಳೆಯರೇ ಹೊರಬೇಕಾಗುತ್ತದೆ. ಹೀಗೆ ತಾನು ಪಡೆಯುವ ವೇತನವು ಸಾಲದ ವೆಚ್ಚ ನಿರ್ವಹಿಸಲು ಖರ್ಚು ಮಾಡುತ್ತಾರೆ. " ಮಹಿಳೆಯರ ಕೆಲಸದ ಮಹತ್ವವನ್ನು ಅಂಗೀಕರಿಸಿದಾಗಲೂ ಅದು ಪರುಷನ ಸಂಪಾದನೆ ಸಾಲವಿದ್ದಾಗ ಸೇರಿಸುವ ಒಂದು ಅಂಶವಾಗುತ್ತದೆಯೇ ಹೊರತು ಅವನ ಉದ್ಯೋಗ – ವೇತನಗಳಿಗೆ ಪೂರಕವಾಗಿ ನೋಡಲಾಗಿಲ್ಲ"[7] ಎಂಬುದು ಸತ್ಯವೆನಿಸುತ್ತದೆ. ಇಷ್ಟೆಲ್ಲಾ ದುಡಿಮೆಯನ್ನು ಮಾಡಿ ಕುಟುಂಬದ ಒಳಗೂ ಹೊರಗೂ ದುಡಿಯುವ ಮಹಿಳೆಯರಿಗೆ ಪುರುಷನಷ್ಟು ಸ್ಥಾನಮಾನಗಳಿಲ್ಲ. ದುಡಿಯದಿದ್ದರೂ ಪುರುಷನೇ ಕುಟುಂಬದ ಯಜಮಾನನಾಗಿರುತ್ತಾನೆ. ದುಡಿಮೆ ಮತ್ತು ಕುಟುಂಬ ಸಲಹುವ ಮಹಿಳೆ ಕುಟುಂಬದಲ್ಲಿ ಯಾವ

ಮುಖ್ಯಸ್ಥಾನವನ್ನು ಪಡೆಯುವುದಿಲ್ಲ. ಏಕೆಂದರೆ "ಮಹಿಳೆಯರು ಕೈಗೊಳ್ಳುವ ಮನೆಗೆಲಸ ಮತ್ತಿತರ ಕಾರ್ಯಗಳೆ ಪುರುಷರ ಕ್ರಮಕ್ಕೆ ಸಹಾಯದ್ರವ್ಯದಂತೆ ಗೋಚರಿಸುತ್ತವೆ" ಹೊರತು ಪುರುಷನಂತೆ ದುಡಿಯುವುದು ಮಹಿಳಾ ಲಕ್ಷಣವಾಗಿಲ್ಲ.

ಅವಧಿ:

ಕಾಡುಗೊಲ್ಲ ಮಹಿಳೆಯ ಆರ್ಥಿಕವಾಗಿ ಸ್ವಾವಲಂಬನೆಯ ಬದುಕನ್ನು ಹೊಂದಿರುವವರು. ಆದರೆ ಈ ಸ್ವಾವಲಂಬನೆಯ ಅವರಿಗೆ ಜೀವನದ ಅನಿವಾರ್ಯ ಸಂಗತಿ. ಈ ಸ್ವಾವಲಂಬನೆಯಿಂದ ಅವರಿಗೆ ಸ್ವತಂತ್ರ ಅಸ್ತಿತ್ವವೆಂಬುದು ದೊರೆತಿಲ್ಲ. ಬೌದ್ಧಿಕ ತಿಳುವಳಿಕೆಯಿಲ್ಲದೆ ದೊರೆಯುವ ಆರ್ಥಿಕ ಸ್ವಾವಲಂಬನೆಯ ಪರಿಣಾಮಗಳಿಗೆ ಕಾಡುಗೊಲ್ಲ ಮಹಿಳೆಯರ ಬದುಕು ಉದಾಹರಣೆಯಾಗಿದೆ.

ಕಾಡುಗೊಲ್ಲ ಮಹಿಳೆಯ ಆರ್ಥಿಕ ಸ್ವಾವಲಂಬನೆಯು ಅವರಿಗೆ ಕುಟುಂಬ ಸಮಾಜದಲ್ಲಿ ಸಮಾನತೆಯ ಸ್ಥಾನ-ಮಾನಗಳನ್ನು ನೀಡಲು ಸಾಧ್ಯವಾಗಿಲ್ಲ. ಆರ್ಥಿಕ ದುಡಿಮೆಯಲ್ಲಿ ತೊಡಗಲು ನೀಡಿರುವ ಮುಕ್ತ ಅವಕಾಶವನ್ನು ಬುಡಕಟ್ಟು ಓದುವುದಕ್ಕೆ ಶಿಕ್ಷಣಕ್ಕೆ ನೀಡಿಲ್ಲ. ಬುಡಕಟ್ಟಿನಿಂದ ಸ್ವತಂತ್ರವಾಗಿ ಸಿಡಿಯಬಹುದಾದ ಎಲ್ಲಾ ಅವಕಾಶಗಳ ಬಾಗಿಲುಗಳನ್ನು ಬುಡಕಟ್ಟು ಮುಚ್ಚಿಬಿಡುತ್ತದೆ. ಕುಟುಂಬದ ಕೇಂದ್ರಶಕ್ತಿಯಾದ ಮಹಿಳೆಯ ದುಡಿಮೆ ಮುಖ್ಯವಾಗುವಂತೆ ಆಕೆಯ ಸ್ವತಂತ್ರ ಬದುಕು ಮುಖ್ಯವಾಗುವುದಿಲ್ಲ. ಸ್ವತಂತ್ರ ಬದುಕಿನ ಅರಿವುನೀಡುವ ಎಲ್ಲ ಅವಕಾಶಗಳಿಂದ ಅವಳನ್ನು ವಂಚಿತಳನ್ನಾಗಿಸುವ ಇತಿಹಾಸ ನಮ್ಮ ಕಣ್ಣೆದುರಿಗಿದೆ. ಈ ಬುಡಕಟ್ಟಿನ ಮಹಿಳೆಯನ್ನು ಬುದ್ಧಿ ಕಳೆದುಕೊಂಡು ಕೌಶಲ್ಯರಹಿತರಾಗಿ ದುಡಿಯುವ ಗುಲಾಮರಂತೆ ನಡೆಸಿಕೊಳ್ಳುತ್ತಿರುವುದು ಕಣ್ಣಿಗೆ ಕಾಣದ ಸತ್ಯವಾಗಿಯೇನೂ ಉಳಿದಿಲ್ಲ.

ಬುಡಕಟ್ಟಿನೊಳಗೆ ವೇತನ ಸಹಿತವಾಗಿಯೂ ವೇತನ ರಹಿತವಾಗಿಯೂ ದುಡಿಯುವ ಅವಧಿ ಪುರುಷನಿಗಿಂತ ಹೆಚ್ಚೇ ಇದೆ. ಕೂಲಿ ಮತ್ತು ಇತರೆ ಹೊರಗಿನ ದುಡಿಮೆಗಳಲ್ಲಿ ಪಾಲ್ಗೊಳ್ಳುವ ಮಹಿಳೆ ಮನೆಯಲ್ಲಿಯೂ ಕೆಲಸ-ಕಾರ್ಯಗಳನ್ನು ನಿರ್ವಹಿಸಿ, ಮಕ್ಕಳ ಪೋಷಣೆಯನ್ನು ಮಾಡುತ್ತಾಳೆ. ದಿನಕ್ಕೆ ಸುಮಾರು 6 ಗಂಟೆಗಳು ಕೂಲಿಯನ್ನು ಮಾಡಿದರೆ ಉಳಿದ ಸಮಯದಲ್ಲಿ ಸುಮಾರು 8 ಗಂಟೆಗಳ ಅವಧಿಯಲ್ಲಿ ಮನೆಗೆಲಸವನ್ನು ನೋಡಿಕೊಳ್ಳುತ್ತಾಳೆ. ಸುಮಾರು 2 ಗಂಟೆಗಳನ್ನು ನಾಳಿನ ಕೆಲಸಕ್ಕೆ ತೆರಳುವ ಸಿದ್ಧತೆಗಾಗಿ ವ್ಯಯಿಸುತ್ತಾಳೆ.

ಸುಮಾರು 18 ಗಂಟೆಗಳ ಅವಧಿಯಲ್ಲಿ ವೃತ್ತಿನಿರತಳಾದ ಮಹಿಳೆಯ ದುಡಿಮೆ ಅಸಮಾನ ಹಂಚಿಕೆಯದು. ಕಾಡುಗೊಲ್ಲ ಸಮಾಜದಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸನ್ಯತೆಗಳು

ಕೌಟುಂಬಿಕ ಕಾರ್ಯದಿಂದ ಅವಳಿಗೆ ಎಂದೂ ನಿವೃತ್ತಿ ನೀಡಲಾರವು. ಕೌಟುಂಬಿಕ ಕೆಲಸಗಳು ಮಹಿಳೆಯರೆ ಮಾಡುವಂತಹು ಅವುಗಳನ್ನು ಪುರುಷರು ಮಾಡಲು ಸಿದ್ಧರಿಲ್ಲ. ಇಲ್ಲಿನ ಕೆಲಸದ ಅವಧಿಯಲ್ಲಿ ಮೊಟಕುಗೊಳಿಸುವುದು ಸಾಧ್ಯವಿಲ್ಲ. ಆದರೆ ಹೊರಗಿನ ದುಡಿಮೆಯನ್ನು ತಗ್ಗಿಸುವ ಅವಕಾಶಗಳು ಇದ್ದು ಆ ಕಡೆಗೆ ಈ ಸಮಾಜವು ಗಮನಹರಿಸಬೇಕಿದೆ. ಹಾಗಾದಾಗ ಮಾತ್ರ ಮಹಿಳೆ ಮತ್ತು ಪುರುಷರ ನಡುವಿನ ಕೆಲಸದ ಅವಧಿಯಲ್ಲಿನ ತಾರತಮ್ಯವನ್ನು ಹೋಗಲಾಡಿಸಬಹುದಾಗಿದೆ

ಸಾಂಪ್ರದಾಯಿಕ ವಿಚಾರಗಳಿಂದ ಬಂಧಿಸಲ್ಪಟ್ಟಿರುವ ಮಹಿಳೆಯರು ಸ್ಥಳೀಯವಾಗಿ ಸಿಗುವ ಕೆಸಲಗಳಿಗೆ ಹೆಚ್ಚು ಅಂಟಿಕೊಂಡಿದ್ದಾರೆ. ಶಿಕ್ಷಣದ ಕೊರತೆ ಆತ್ಮವಿಶ್ವಾಸದ ಕೊರತೆಯು ಹೊರಗೆ ತೆರಳಿ ಮಾಡುವ ಉದ್ಯೋಗಗಳಿಗೆ ತಡೆಯಾಗಿದೆ. ಸಾಂಪ್ರದಾಯಿಕ ವೃತ್ತಿಗಳು ಮಾತ್ರ ಗೊತ್ತಿರುವ ಇವರು ಆಧುನಿಕ ತಂತ್ರಜ್ಞಾನ ಆಧಾರಿತ ಕೆಲಸಗಳನ್ನು ಮಾಡಲು ಸೂಕ್ತ ತರಬೇತಿ, ಅರಿವು ಇಲ್ಲದೆ ಕೆಲವೊಮ್ಮೆ ಕೆಲಸವೂ ಇಲ್ಲದೆ ಅತಂತ್ರ ಸ್ಥಿತಿಯನ್ನು ಅನುಭವಿಸುವಂತಾಗಿದೆ. ಅಸಂಘಟಿತ ವೃತ್ತಿಯಲ್ಲಿ ತೊಡಗಿರುವ ಮಹಿಳೆಯರಿಗೆ ಯಾವುದೇ ರೀತಿಯ ಕಾನೂನು, ವೈದ್ಯಕೀಯ, ಉದ್ಯೋಗ ಭತ್ಯೆ, ವಿಮೆ, ಪಿಂಚಣಿ, ಪರಿಹಾರ ಸೌಲಭ್ಯಗಳು ಇರುವುದಿಲ್ಲ. ಇದು ಈ ಮಹಿಳೆಯನ್ನು ಬದುಕಿನ ಬಗೆಗೆ ಮತ್ತಷ್ಟು ಆತಂಕಗೊಳ್ಳುವಂತೆ ಮಾಡಿದೆ. ಸಮಾನ ವೇತನ ಮತ್ತಿತರ ಸಮಸ್ಯೆಗಳ ಕುರಿತು ಕೆಲಸ ಮಾಡಲು ಪ್ರಶ್ನಿಸಲು ಯಾವುದೇ ರೀತಿಯ ದುಡಿಯುವ ಮಹಿಳೆಯರ ಸಂಘಟನೆಗಳು ಇವರಲ್ಲಿ ಇಲ್ಲ. ಈ ಕಾರಣಗಳಿಂದಾಗಿಯೇ ಕೆಲಸದ ಅವಧಿಯಲ್ಲಿ ತಾರತಮ್ಯ, ಕೂಲಿಯಲ್ಲಿ ತಾರತಮ್ಯ, ಕಸುಬಿನ ವೈವಿಧ್ಯತೆ ಸಾಧ್ಯವಾಗದಿರುವುದು. ಇದು ಹೇಗೆ ಬದುಕನ್ನು ನಿರ್ವಹಿಸಲು ಕಷ್ಟಪಡುವಂತೆ ಮಾಡಿದೆ ಎಂಬುದನ್ನು ಕಾಡುಗೊಲ್ಲ ಮಹಿಳೆಯರ ನುಡಿಗಳಲ್ಲಿ ಕೇಳಬಹುದು.

'ದುಡಕಂಡು ಅವರು ಊಟಮಾಡಬೇಕು.'[9]

'ಗಾರ್ಮೆಂಟ್ಸ್ ಹೋಗ್ತೀವಿ ಅಂತ ಬೆಂಗಳೂರು ಸೇರಿಕೊಂಡಿದ್ದಾರೆ.'[10]

'ಮದುವೆ ಆಗತನೂ ದುಡಿದುಕೊಳ್ಳಲಿ, ದುಡಿದುಕೊಂಡ ದುಡ್ಡಲ್ಲಿ ಮದುವೆ ಆಗ್ತಾರೆ.'[11]

'ಓದಿದೋರು ಕೂಲಿ ಮಾಡಲ್ಲ. ದುಡಿಯಕ್ಕೋಗದೆ ಸುಖವಾಗಿ ಊಟ ಮಾಡ್ತಾರೆ. ನಾವು ನೆಲದ ಧೂಳು ನೆತ್ತಿಮ್ಯಾಲೆ ಹಾಕ್ಕೊಂಡು ಮಾಡ್ತಿದ್ವಿ.'[12]

'ಪಿ.ಯು.ಸಿ. ವರೆಗೆ ಓದಿದೆ. 2 ಪೇಲಾಗವೆ ಅದ್ಕೆ ಹೋಗ್ತಿಲ್ಲ. ಮನೇಲಿ ಕಳಿಸಲ್ಲ ಅಂದ್ರು, ಹೊಲ್ದಲಿ ಕೂಲಿ ಮಾಡಕಾಗಲ್ಲ ಅದ್ಕೆ ಗಾರ್ಮೆಂಟ್ಸ್ ಸೇರಿದ್ವಿ.'[13]

'ಮೊದಲು ಪಿ.ಯು.ಸಿ. ನ್ಯಾಗೆ ಫೇಲಾಗಿದ್ದೆ ಆಮೇಲೆ ಪಾಸಾಯ್ತು ಮುಂದಕ್ಕೆ ಓದೋದಕ್ಕೆ ಕಳಿಸಲ್ಲ ಅಂದ್ರು. ನಾವೇ ಹೋಯ್ತೀವಿ ಅಂದ್ರೆ ಬಸ್ ಚಾರ್ಜ್ ಕೊಡಲ್ಲ ಅಂದ್ರು. ಕೆಲಸಕ್ಕೂ ಹೋದ್ರೆ ಹೋಗು ಬಟ್ರೆ ಬಿಡು ಅಂದ್ರು. ನಂಗೆ ಕೂಲಿ ಮಾಡಕಾಗಲ್ಲ ಗಾರ್ಮೆಂಟ್ಸ್ ಸೇರಿದೆ.'[14]

'ಕೆಲಸ ಸಿಕ್ಕಿದ್ರೆ ದೂರಾನಾದ್ರೂ ಕಳಿಸ್ತಾರೆ.'[15]

'ತಾಯಿ ಒಬ್ಬಳೆ ದುಡಿಯೋದು ನಾಲ್ಕು ಜನ ಸಾಕಬೇಕು. ಮನೆ ಕಡೆ ಅನುಕೂಲ ಇಲ್ಲ.'[16]

'ಕೆಲಸಕ್ಕೆ ಹೋಗದೆ ಇದ್ರೆ ಹುಡುಗ್ರ ಚಾಕರಿ ಮಾಡ್ತಾಯಿದ್ವಿ, 4 ಮನೆಯವರೆಗೆ ಜಮೀನು ಇದೆ ಉಳಿದವರು ಕೂಲಿಗೆ ಹೋಗ್ತಾರೆ. ಇದ್ದಾಗ ಹೋಗ್ತೀವಿ. ಇಲ್ಲದಾಗ ಇಲ್ಲ.'[17]

'60 ರೂಪಾಯಿ ಕೂಲೀನೂ ಸಾಲಕ್ಕೆ ಹೋಗ್ತದೆ, ತರಕಾರಿಗೂ ಸಾಲದಲೆ ಬರ್ತದೆ, ಉಳಿತಾಯ ಮಾಡಕಾಗಲ್ಲ. ಕೂಲಿ–ನಾಲಿ ಮಾಡಿ ಸಾಲ ತೀರಿಸ್ತೀವಿ.'[18]

'ಮನೇಲಿ ಯಾರೂ ಇರಲ್ಲ ಮೇಡಮ್ಮ. ಜೀವನಕ್ಕೆ ಕಷ್ಟ ಇದೆ.'[19]

'ಹಳ್ಯಾಗೆ ಏನು ಕೆಲಸ ಇರ್ತದಮ್ಮ ಜಮೀನನ ಇದ್ರೆ 2 ವರ್ಷ ಯಾವ ಬೆಳೇನೂ ಇಲ್ಲ. 15–20 ಸಾವಿರ ಖರ್ಚಿಟ್ಕಂಡ್ರೆ 2 ಸಾವಿರಾನೂ ವಾಪಸ್ಸು ಬರ್ಲಿಲ್ಲ.'[20]

'ನೀರಾವರಿ ಇದ್ರೆ ಕೂಲಿಸಿಗ್ತದೆ.'[21]

'ಓದಿಕೊಂಡು ಬೆಂಗಳೂರಾಗೆ ಕೂಲಿ ಕೆಲ್ಸಕೆ ಹೋಗ್ತಾರೆ.'[22]

'ಓದು ಡಿಸ್ಕಂಟಿನ್ಯು ಆದ್ರೆ ಕೆಲಸಕ್ಕೆ ಕಳಿಸ್ತಾರೆ.'[23]

'ಹೊಲ್ದಾಗೆನೂ ಆದಾಯ ಇಲ್ಲ ಬೆಂಗಳೂರಾಗೆ ಕೆಲಸಕೆ ಹೋಗಿರೋರು ದುಡಿದು ಕಳಿಸ್ತಾರೆ.'[24]

'ಓದಿರೋ ಹುಡ್ಗಿ ಬೇಕಂತ ಮದ್ವೆ ಆಯ್ತಾರೆ. ಆಮೇಲೆ ತಪ್ಪು ಮಾಡ್ಕಂಡೆ ಅಂತ ಕೊರುಗ್ತಾರೆ. ಯಾಕಂದ್ರೆ ಓದಿರೋ ಹುಡ್ಗಿ ಕೂಲಿ ಕೆಲಸಕ್ಕೆ ಹೋಗಲ್ಲ. ಮನೇಲಿ ಇದ್ದು ಮನೆ ಕೆಲಸ ನೋಡ್ಕಂಬ್ತದೆ.'[25]

'ನಾನೆಂಗ ಮಾಡಾನ? ಕೂಲಿ ಮಾಡಿ ಎಷ್ಟು ಇಕ್ಯಾನ? ಹೊಲ ಪಲ ಇಲ್ಲ. ಗಂಡ ಇಲ್ಲ ಬರೋ ಕೂಲಿ ರೇಷನ್, ತರಕಾರಿ, ಆಸ್ಪತ್ರೆಗೆ ಆಗ್ತಾದೆ?'[26]

'ನಮ್ಮ ಖರ್ಚಿಗೆ ಗಂಡಸ್ರು ದುಡ್ಡು ಕೊಡಲ್ಲ? ನಾವೇ ದುಡ್ಕಂಬೇಕು.'[27]

'ಮುಂದಿನ ವರುಷ ಈ ಯಮ್ಮನ್ನ ಬಿಡಿಸಿ (ಡಿಗ್ರಿ ಓದುತ್ತಿರುವ ಹುಡಗಿಯನ್ನು ತೋರಿಸಿ) ಬೆಂಗಳೂರಿಗೆ ಒಂದು ಮೂರು ವರ್ಷ ಕೆಲಸಕ್ಕೆ ಕಳಸನ ಅಂತದಾನಿ. ಆಮೇಲೆ ಮದ್ವೆ ಮಾಡ್ತೀವಿ'.[28]

'ಕೂಲಿ ಸಿಗ್ಲಿಲ್ಲ ಅಂದ್ರೆ ಈಕಾ ಇಂಗೆ ಮಲಕಳದು'.[29]

'ಇಲ್ಲ ಗಂಡಸ್ರುದೇ ಅರಾಮ ಕಣಮ್ಮ. ಹೆಂಗುಸ್ರುದು ಕಷ್ಟ. ಕೂಲಿ-ನಾಲಿ ಮಾಡಿ ದುಡ್ಡು ತಂದು ಮನೆಗಿಕ್ಕಬೇಕು. ಯಾವಾದ್ರು ದುಡಿದ್ರೆ ಊಟಕ್ಕಾಗ್ತದೆ ಇಲ್ಲಾ ಉಪಾಸ ಮಂಕಬೇಕು.'[30]

''ದುಡಿಯಕೋಗಲ್ಲ ಅಂದ್ರೆ ಕೇಳ್ತಾರ. ಮನೇಲಿ ಉಪವಾಸ ಇರಬೇಕಷ್ಟೇ. ಗಂಡುಸ್ರು ಸಾಲ ಮಾಡಿ ತಂದಿಕ್ತಾರೆ. ಸಾಲ ತೀರಿಸಕ್ಕಾದ್ರೂ ದುಡೀಬೇಕಲ್ಲ.'[31]

'ದೊಡ್ಡ ದೊಡ್ಡ ಖರ್ಚು ಗಂಡಸ್ರು ನೋಡ್ಕಂಬ್ತರೆ ತರಕಾರಿ, ರೇಷನ್, ಆಸ್ಪತ್ರೆಗೆ ನಾವು ದುಡಿಯೋದು ಆಯ್ತದೆ.'[32]

'ಕೆಲಸಕ್ಕೆ ಹೋಗಲ್ಲ ಅಂದ್ರೆ ಮನೇಲಿರು ಅಂತಾರೆ ಈ ಪರಿಸ್ಥಿತೀಲಿ ಕೋತ್ಕಂಬಕೆ ಆಗ್ತಾದ ಮೇಡಮ್ಮ.'[33]

'ಹೆಣ್ಮಕ್ಳುನ ಎಲ್ಲಾ ಈಗ ಕೆಲಸಕ್ಕೆ ಕಳಿಸಲ್ಲ ಮನೇಲಿ ಇರ್ತಾರೆ. ಈಗ ಅವರತಾನ ಎಸ್.ಎಸ್.ಎಲ್.ಸಿ. ಓದ್ಕಂಡಾರೆ ಕೂಲಿ ಗೀಲಿ ಮಾಡಲ್ಲ. ಬಿಸಿಲಲಿ ದುಡಿಯೋಗಲ್ಲ. ಕಡ್ಲೆಬೀಜ ಸುಲಿಯೋದು ಬಿಡಿಸೋದು ಮಾಡ್ತಾರೆ.'[34]

'ಎಲ್ಲಾರ ಸಮ ಇರಬೇಕಲ್ಲಮ್ಮ. ಅದ್ಕೆ ಬೆಂಗಳೂರಾಗೆ ದುಡಿಯೋಕೆ ಹೋಗ್ತಾರೆ. ಮದುವೆ ಟೈಮಗೆ ವಾಪಸ್ರು ಬರ್ತಾರೆ.'[35]

'ಕೂಲಿ ಸಿಗಲಿಲ್ಲ ಅಂದ್ರೆ ಕಡ್ಲೆಕಾಯಿ ತಿಬ್ತಿಂವಿ ಮಲಕತೀವಿ.'[36]

'ಜಮೀನಲ್ಲಿ ಏನೂ ಹುಟ್ಟಲ್ಲ ಮೇಡಮ್ಮ ಕೂಲಿ ಎಲ್ಲಿಂದ ಮಾಡಾನ, ಹಸಕರ ಇಲ್ಲ. ಕೂಲಿ ಬಿಟ್ರೆ ಬೇರೆ ಕೆಲಸ ಗೊತ್ತಿಲ್ಲ ಜೀವ ಬಿಡಂಗಾಗ್ಯೆತಿ'.[37]

ಕಾಡುಗೊಲ್ಲ ಮಹಿಳೆಯರ ಈ ಮಾತುಗಳಿಂದ ವೃತ್ತಿಬದುಕಿನಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಓೀಗೆ ಪಟ್ಟಿ ಮಾಡಬಹುದು.

1) ದುಡಿಮೆಯನ್ನು ಕುಟುಂಬದ ಆಹಾರ- ಅರೋಗ್ಯದ ನಿರ್ವಹಣೆಗೆ ಮಾಡಲೇಬೇಕು.
2) ವ್ಯವಸಾಯದಿಂದ ಸಿಗುವ ಕೂಲಿ ಅತ್ಯಂತ ಕಡಿಮೆಯೆಂದು ಉತ್ತಮ ಕೂಲಿಗಾಗಿ ವಲಸೆ ಹೋಗುವಿಕೆ.
3) ದುಡಿಮೆಯಿಂದ ತಮ್ಮ ಬದುಕನ್ನು ನಿರ್ವಹಿಸಿಕೊಳ್ಳಬೇಕು.
4) ಕೂಲಿಯಿಂದ ಬರುವ ವೇತನ ಉಳಿತಾಯ ಮಾಡಲು ಅಸಾಧ್ಯವಾಗಿದೆ. ಸಾಲ ತೀರಿಸಲು ಕೂಲಿಯ ವೇತನದ ಹೆಚ್ಚು ಭಾಗ ವ್ಯಯವಾಗುತ್ತದೆ.
5) ಅನಿಶ್ಚಿತವಾದ ಕೂಲಿ, ಕೂಲಿ ವ್ಯಾಪಾರ ಬಿಟ್ಟರೆ ಬೇರೆ ರೀತಿಯ ದುಡಿಮೆಯ ಬಗ್ಗೆ ತಿಳಿದಿಲ್ಲ.
6) ಸಮಾನ ವೇತನವಿಲ್ಲ
7) ಅಧಿಕವಾದ ಕೆಲಸದ ಅವಧಿ
8) ಅಸಮಾನತೆಯ ಸ್ಥಿತಿಯಲ್ಲಿ ಉಂಟಾಗಿರುವ ಶ್ರಮ ವಿಭಜನೆ.
9) ಅಸಂಘಟಿತ ವಲಯದ ದುಡಿಮೆಯನ್ನು ಬಹುವಾಗಿ ಅವಲಂಬಿಸಿರುವುದು.
10) ಮಹಿಳಾ ದುಡಿಮೆಗಾರರ ಯಾವ ಸಂಘಟನೆಯೂ ಇಲ್ಲದಿರುವುದು
11) ಆರ್ಥಿಕ ಸಂಘಟನೆಗಳ ಮೂಲಕ ಪಡೆಯುವ ಸಾಲದ ಹೊರೆಯನ್ನು ಹೊಡಬೇಕಾದುದು.
12) ಅತಿ ಕಡೆಮೆ ವಯಸ್ಸಿನಲ್ಲಿ ದುಡಿಮೆಯು ಅನಿವಾರ್ಯವಾಗಿ ಶಿಕ್ಷಣ ವಂಚಿತರಾಗಬೇಕಾದುದು.

ಆರ್ಥಿಕ ಸಂಘಟನೆಗಳು

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮುಖ್ಯವಾಗಿ ಮೂರು ಆರ್ಥಿಕ ಸಂಘಟನೆಗಳು ಆರ್ಥಿಕವಾಗಿ ಮಹಿಳೆಯರ ಸ್ಥಾನ-ಮಾನಗಳನ್ನು ಸುಧಾರಿಸಲು ನೆರವು ನೀಡಿವೆ.ಅವುಗಳೆಂದರೆ ಸ್ತ್ರೀಶಕ್ತಿ ಸಂಘ, ಸ್ವಸಹಾಯ ಸಂಘಗಳು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಸಹಾಯ ಸಂಘಗಳು. ಈ ಆರ್ಥಿಕ ಸಂಘಟನೆಗಳು ಸಣ್ಣ ಪ್ರಮಾಣದ ಸಾಲವನ್ನು ನೀಡುವ ಮೂಲಕ ಮಹಿಳೆಯರ ಜೀವನಾವಶ್ಯಕತೆಗೆ ಪೂರಕವಾಗಿ ಸ್ಪಂದಿಸಿವೆ. ಈ ಸಂಘದಿಂದ ಸಾಲ ದೊರೆಯುತ್ತಿರುವುದರಿಂದ "ಶೆಟ್ಟರತ್ರ ಸಾಲಕ್ಕೋಗೋದು" ತಪ್ಪಿದೆ. ಮದುವೆ, ಮಕ್ಕಳ ವಿದ್ಯಾಭ್ಯಾಸ, ಹೂಡಿಕೆಗೆ ಸಣ್ಣ ಪ್ರಮಾಣದ ಸಾಲಗಳಿಗಾಗಿ ಊರಿನ ಶೆಟ್ಟರತ್ರ ಅಧಿಕ ಬಡ್ಡಿಯ ಸಾಲ ಪಡೆಯುತ್ತಿದ್ದುದು ಇವುಗಳಿಂದಾಗಿ

ಕಡಿಮೆಯಾಗಿದೆ. ಕಂತುಗಳಲ್ಲಿ ಕಡಿಮೆ ಬಡ್ಡಿಯಲ್ಲಿ ಸಾಲ ಹಣ ಮರುಪಾವತಿಸುವುದು ಈ ಮಹಿಳೆಯರಿಗೆ ವರದಾನವೆನಿಸಿದೆ.

ಸ್ತ್ರೀ ಶಕ್ತಿ ಯೋಜನೆ :-

ಹಲವು ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಿ ಯೋಜನೆಗಳನ್ನು ಜಾರಿಗೆ ತಂದರೂ ಅವುಗಳ ಮಹಿಳೆಯರ ಸ್ಥಾನಮಾನಗಳನ್ನು ಎತ್ತರಿಸುವಲ್ಲಿ ಆಶಾದಾಯಕವಾಗೇನೂ ಇರಲಿಲ್ಲ. ಮಹಿಳೆಯರ ಅತಿ ಕಡಿಮೆ ಸಂಬಳದ ಕೆಲಸಗಳು, ಮತದಾನದ ಹೊರತಾಗಿ ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸದಿರುವಿಕೆ ಈ ಮೊದಲಾದ ಸಂಗತಿಗಳನ್ನು ಕಮಿಟಿ ಆನ್ ದಿ ಸ್ಟೇಟಸ್ ಆಫ್ ವಿಮನ್ ಇಂಡಿಯಾ ವು ತನ್ನ ತನಿಖಾ ವರದಿಯಲ್ಲಿ ಬಹಿರಂಗಗೊಳಿಸಿತು. ICCSR ನ ಸಂಶೋಧನಾ ವರದಿಗಳು ನಿರ್ಲಕ್ಷಿತ ಬಡ ಮಹಿಳೆಯರ ಹಲವು ಸಮಸ್ಯೆಗಳತ್ತ ಗಮನ ಸೆಳೆಯಿತು. ಹಾಗೆಯೇ 1986 ರ ರಾಷ್ಟ್ರೀಯ ಶಿಕ್ಷಣ ನೀತಿಯು ಸಮಾಜದಲ್ಲಿ ಮಹಿಳೆಯರ ಸಮಾನತೆ ಸ್ಥಾಪಿತವಾಗಿ ಅವರ ಸ್ಥಾನಮಾನಗಳು ಬದಲಾಗಬೇಕಾದರೆ ಅದು ಶಿಕ್ಷಣದ ಮೂಲಕ ಮಾತ್ರ ಎಂಬ ಅಭಿಪ್ರಾಯಪಡುವ ಜೊತೆಗೆ ವಿಭಿನ್ನ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣದ ಅಗತ್ಯವನ್ನೇ ಒತ್ತಿ ಹೇಳಿತು. ಮತ್ತು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಅಗತ್ಯವನ್ನು ತಿಳಿಸಿತು. ಈ ಕಾರ್ಯಕ್ರಮಗಳು ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡುವ ಸಾಮುದಾಯಿಕ ಸಂಘಗಳನ್ನು ಸ್ಥಾಪಿಸುವ ಪ್ರಸ್ತಾವಗಳನ್ನು ಮುಂದಿಟ್ಟಿತು.

ಈ ಮೇಲಿನ ಸಂಶೋಧನೆ, ತನಿಖಾ ವರದಿಗಳು ಮತ್ತು ಅಧ್ಯಯನಗಳ ಒತ್ತಾಸೆ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಮತ್ತು ಸ್ವಾವಲಂಬನೆಯ ಹಾದಿಯಲ್ಲಿ ಮುಂಚೂಣಿಯಲ್ಲಿದ್ದ ಸ್ವ ಸಹಾಯ ಗುಂಪುಗಳು ಕರ್ನಾಟಕದಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ರೂಪಿಸಲು ಪ್ರೇರಣೆ ನೀಡಿತು. ಕರ್ನಾಟಕ ಸರ್ಕಾರವು 1996-2000 ದ ಅವಧಿಯಲ್ಲಿ ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕ್ ಸಹಯೋಗದೊಂದಿಗೆ ಆರಂಭಿಸಿದ KUIDP (Karnataka Urban Infrastrctur Development Project) ಯೋಜನೆಯ ಒಂದು ಭಾಗವಾಗಿ ಮಹಿಳಾ ಸ್ವ ಸಹಾಯ ಗುಂಪುಗಳನ್ನು ಆರಂಭಿಸಿತು.

ಬಡವರನ್ನು ಗುರುತಿಸುವುದು, ಕಡಿಮೆ ಆದಾಯವನ್ನು ಮೇಲೆತ್ತುವುದು, ನೀರು ಪೂರೈಕೆ, ಶೌಚಾಲಯ ನಿರ್ಮಾಣ, ರಸ್ತೆ ಅಭಿವೃದ್ಧಿ, ಸ್ಲಂಗಳ ಅಭಿವೃದ್ಧಿ ಮೊದಲಾದವು KUIDP ಯ

ಯೋಜಿತ ಗುರಿಗಳಾಗಿದ್ದವು. ಇವುಗಳ ಜೊತೆಗೆ ಮಹಿಳಾ ಸಬಲೀಕರಣದ ಗುರಿಯೂ ಸೇರಿದ್ದು, ಮಹಿಳಾ ಸ್ವ ಸಹಾಯ ಗುಂಪುಗಳ ಮೂಲಕ ತರಬೇತಿ ಆಧಾರಿತ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇದು ಚಾಲನೆ ನೀಡಿತು.

2000 ದ ಹೊತ್ತಿಗೆ ಕರ್ನಾಟಕ ಸರ್ಕಾರವು ಮಹಿಳೆಯರನ್ನೆ ಕೇಂದ್ರಿಕರಿಸಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜನೆಗಳನ್ನು ಜಾರಿಗೆ ತಂದಿತು. ಇವುಗಳು ಗ್ರಾಮೀಣ ಪ್ರದೇಶದ ಬಡ ಮಹಿಳೆಯರ ಸಾಮಾಜಿಕ ಆರ್ಥಿಕ ಹಾಗೂ ಸರ್ವತೋಮುಖ ಅಭಿವೃದ್ಧಿಯನ್ನು ಹೆಚ್ಚಿಸುವ ಸಲುವಾಗಿ ಜಾರಿಗೊಂಡರೂ ಮಹಿಳೆಯರ ಆತ್ಮವಿಶ್ವಾಸ ಹಾಗೂ ಸ್ವಾವಲಂಬನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪರಿಣಾಮಕಾರಿ ಎನಿಸಲಿಲ್ಲ. ಆದ್ದರಿಂದ KSWDC (Karnataka State Women Development Corporation) ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಸರ್ಕಾರವು ಉದ್ಯೋಗಿನಿ, ಮಾರ್ಕೆಟಿಂಗ್ ಸ್ಕೀಮ್, ತರಬೇತಿ, ಆಸರೆ, ಸ್ವಾವಲಂಬನೆ, ಸ್ವಾದಾರ್, STEP (Support of Women Faring and Employment) ಮೊದಲಾದ ಯೋಜನೆಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿ ಆರಂಭಿಸಿತು. ಇದರೊಂದಿಗೆ ಪ್ರಾಯೋಜಿತಗೊಂಡ ವಿಶೇಷ ಯೋಜನೆಯೆ ಸ್ತ್ರೀಶಕ್ತಿ ಯೋಜನೆ. 18-10-2000 ರಂದು 15-20 ಮಹಿಳಾ ಸದಸ್ಯರನ್ನೊಳಗೊಂಡ ಸ್ವ ಸಹಾಯ ಗುಂಪು ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕಾಗಿ ಈ ಯೋಜನೆಯ ಮೂಲಕ ಕಾರ್ಯರಂಭಿಸಿತು. ಈ ಯೋಜನೆಯಲ್ಲಿ 175 ತಾಲ್ಲೂಕುಗಳಲ್ಲಿ 10.95 ಲಕ್ಷ ಮಹಿಳಾ ಪ್ರತಿನಿಧಿಗಳು 75.026 ಸ್ವ ಸಹಾಯ ಗುಂಪುಗಳನ್ನು ರಚಿಸಿ 90.29 ಕೋಟಿ ಉಳಿತಾಯವನ್ನು ಮಾಡಿದರು. ಪ್ರಸ್ತುತ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು 1,30,000 ವಿದ್ದು 19 ಲಕ್ಷ ಮಹಿಳಾ ಸದಸ್ಯರನ್ನೊಂದಿದೆ. 971.84 ಕೋಟಿ ರೂಗಳ ಉಳಿತಾಯವನ್ನು ಮಾಡಿದೆ.

ಸ್ತ್ರೀಶಕ್ತಿ ಯೋಜನೆಯು ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದಷ್ಟೇ ಸೀಮಿತಗೊಂಡಿದ್ದರೆ ಎಲ್ಲಾ ಯೋಜನೆಗಳಂತೆ ಇದು ಒಂದು ಅಭಿವೃದ್ಧಿ ಪ್ರಧಾನ ಯೋಜನೆ ಎನಿಸುತ್ತಿತ್ತು. ಆದರೆ ಈ ಮಿತಿಯನ್ನು ದಾಟಿ ಸಮಾಜದ ವಿಭಿನ್ನ ಆಯಾಮಗಳಿಗೆ ತನ್ನನ್ನು ತೆರೆದುಕೊಂಡಿರುವುದಲ್ಲಿಯೇ ಈ ಯೋಜನೆಯ ಪ್ರಾಮುಖ್ಯತೆಯಿದೆ. ಮಹಿಳೆಯರನ್ನು ಸ್ವಾವಲಂಭಿಯನ್ನಾಗಿಸುವುದಷ್ಟೆ ಅಲ್ಲದೆ ಅವರಲ್ಲಿ ಆತ್ಮವಿಶ್ವಾಸವನ್ನು ರೂಢಿಸುವುದರ ಜೊತೆಗೆ ಬದುಕಿನ ಬಗೆಗೆ ಸಕಾರಾತ್ಮಕ ನಿಲವು ಹೊಂದುವಂತೆ ಮನೋಚಿಕಿತ್ಸಕ ಮಾಧ್ಯಮವಾಗಿಯೂ ಸ್ತ್ರೀಶಕ್ತಿ ಯೋಜನೆ ಕಾರ್ಯ ನಿರ್ವಹಿಸುತ್ತದೆ. ಇದರಿಂದ ಆತ್ಮಹತ್ಯೆ, ಅಬಲತನ, ಬದುಕಿನ ಬಗೆಗಿದ್ದ

ನಿರಾಸಕ್ತಿಯನ್ನು ಕಾಡುಗೊಲ್ಲ ಮಹಿಳಾ ಸಮುದಾಯ ಕಳೆದುಕೊಳ್ಳುವಲ್ಲಿ ಅಲ್ಪ ಮಟ್ಟಿನ ಯಶಸ್ವಿಯು ಕಂಡಿದೆ.

ಕಾಡುಗೊಲ್ಲರ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಸಮಾಜ, ಕುಟುಂಬ ಹಾಗೂ ಸಂಪ್ರದಾಯಗಳಿಂದ ಶೋಷಣೆಗಳಿಗೆ ಒಳಗಾಗುತ್ತಲೆ ಇದ್ದರೆ ಅವನ್ನು ಪ್ರಶ್ನಿಸುವ ಮತ್ತು ಪರಿಹಾರ ಕಂಡುಕೊಳ್ಳಲು ಮಹಿಳೆ ಏಕಾಂಗಿಯಾಗಿ ಹೋರಾಡುವುದು ಅಸಾಧ್ಯ. ಈ ಸಂದರ್ಭದಲ್ಲಿ ಸ್ತ್ರೀಶಕ್ತಿ ಯೋಜನೆಯ ಮೂಲಕ ಸಂಘಟಿತವಾದ ಮಹಿಳೆಯರು ತಮಗೆ ಅನ್ಯಾಯವಾದಾಗ ಪ್ರಶ್ನಿಸುವ ಪ್ರತಿಭಟಿಸುವ ಶಕ್ತಿಯನ್ನು ಪಡೆದಿದ್ದಾರೆ. ಉದಾ :- ಮದ್ಯದಂಗಡಿಗಳ ನಿಷೇಧ, ನೀರು ಮೊದಲಾದ ಮೂಲಭೂತ ಸೌಕರ್ಯಕ್ಕಾಗಿ ಬೀದಿಗಿಳಿದು ಪ್ರತಿಭಟನೆ, ಕುಟುಂಬ ದೌರ್ಜನ್ಯಕ್ಕೊಳಗಾದ ಮಹಿಳೆ ಪರವಾಗಿ ನಿಂತು ಮಾಡುವ ಹೋರಾಟಗಳು ಇತ್ಯಾದಿ. ಆದರೆ ಈ ಬುಡಕಟ್ಟಿನ ಮಹಿಳೆಯರು ಆರ್ಥಿಕವಾಗಿ ಸಾಲ ಪಡೆದಿರುವುದನ್ನು ಬಿಟ್ಟರೆ ಯವುದೇ ರೀತಿಯಲ್ಲಿ ಈ ಸಂಘಟನೆಯಲ್ಲಿ ಪಾಲ್ಗೊಂಡಿಲ್ಲ

ಸ್ತ್ರೀಶಕ್ತಿ ಯೋಜನೆಯು ದುಡಿಯುವ ಕಾಡುಗೊಲ್ಲ ಮಹಿಳೆಯರ ಜೀವನ ಮಟ್ಟ ಸುಧಾರಣೆಯಲ್ಲಿ ವಿಶೇಷ ಪರಣಾಮವನ್ನುಂಟು ಮಾಡಿದೆ. ಮೊದಲಿದ್ದ ಜೀವನ ಮಟ್ಟಕ್ಕಿಂತ ಸುಧಾರಿತ ಜೀವನ ಮಟ್ಟವನ್ನು ಹೊಂದಲು ಈ ಯೋಜನೆಯಿಂದ ಸಾಧ್ಯವಾಗಿದೆ. ಬದುಕಿನ ಬಗೆಗೆ ಸಕಾರಾತ್ಮಕ ಭರವಸೆಗಳನ್ನು ಆತ್ಮವಿಶ್ವಾಸಗಳನ್ನು ತುಂಬುವ ಮೂಲಕ ದುಡಿಯುವ ಈ ಮಹಿಳೆಯರ ಆತಂಕಮಯ ಜೀವನದಿಂದ ಅಲ್ಪಮಟ್ಟಿಗೆ ಬಿಡುಗಡೆಯನ್ನು ಇದು ನೀಡಿದೆ.

ಸ್ತ್ರೀಶಕ್ತಿ ಯೋಜನೆಯ ಮೂಲಕ ತನ್ನ ದುಡಿಮೆಯ ಹಣವನ್ನು ಉಳಿತಾಯ ಮಾಡಿ ಅದರ ಮೂಲಕ ಸಾಲಸೌಲಭ್ಯ ಪಡೆಯುವ ಮಹಿಳೆಯರು ಈ ಹಣವನ್ನು ದುರುಪಯೋಗಕ್ಕೆ ಈಡುಮಾಡದೆ ಕುಟುಂಬದ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಹೆಚ್ಚು ವ್ಯಯಿಸುತ್ತಾರೆ. ಬಹುಮಟ್ಟಿಗೆ ಸಾಲದ ಹಣವನ್ನು ಕುರಿ ವ್ಯಾಪಾರಕ್ಕೆ ತೊಡಗಿಸಲಾಗುತ್ತದೆ. ಉಳಿದಂತೆ ಮಕ್ಕಳ ಶಿಕ್ಷಣ, ಕುಟುಂಬದ ಆರೋಗ್ಯ, ಮನೆ ರಿಪೇರಿ, ಅಡುಗೆ ಮನೆಯ ಸಾಮಗ್ರಿಗಳ ಖರೀದಿ, ಟಿ.ವಿ, ಫೋನ್. ಮೊದಲಾದವುಗಳಿಗಾಗಿ ಸಾಲದ ಹಣವು ಉಪಯೋಗಿಸಲ್ಪಡುತ್ತದೆ. ಪ್ರತಿ ಮಹಿಳೆಯರಿಂದ ಉಂಟಾಗುತ್ತಿರುವ ಈ ಕುಟುಂಬ ಕೇಂದ್ರಿತ ಜೀವನ ಮಟ್ಟ ಸುಧಾರಣೆಯು ಸಮಾಜವೊಂದರ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಮಹತ್ತರ ಪಾತ್ರವಹಿಸಿದೆ.

ಸ್ತ್ರೀಶಕ್ತಿ ಯೋಜನೆಯು ಮಹಿಳೆಯ ಉಳಿತಾಯದ ಹಣಕ್ಕೆ ಉತ್ತಮ ಭದ್ರತೆಯನ್ನು ನೀಡಿದೆ. ಸ್ತ್ರೀಶಕ್ತಿ ಯೋಜನೆಯ ಮೂಲಕ ತನ್ನ ದುಡಿಮೆಯ ಹಣವನ್ನು ಕೂಡಿಸಿ ಪಡೆದ ಬಂಡವಾಳದ

ಮೇಲೆ, ಸ್ವಂತ ವ್ಯಾಪಾರ ಉದ್ದಿಮೆಯಲ್ಲಿ ತೊಡಗಿಸಿ ಈ ಮಹಿಳೆಯರು ಹೆಚ್ಚು ಆತ್ಮವಿಶ್ವಾಸದಿಂದ ಇರುವುದು ಸಾಧ್ಯವಾಗಬೇಕಿತ್ತು ಆದರೆ ಸಾಲವು ಕುರಿವ್ಯಾಪಾರದ ಪಾಲಾಗುವುದರಿಂದ ಇದು ಸಾಧ್ಯವಾಗಿಲ್ಲ.

ಸ್ತ್ರೀ ಶಕ್ತಿ ಯೋಜನೆಯು ಬುಡಕಟ್ಟಿನ ಮಹಿಳಾ ಬದುಕಿನ ಹಲವು ಪರಿವರ್ತನೆಗಳಿಗೆ ಕಾರಣವಾಗುತ್ತಿದ್ದರೂ ಕೆಲವೊಂದು ಸಮಸ್ಯೆಗಳಿಂದ ನರಳುತ್ತಿದೆ. ಅವುಗಳೆಂದರೆ.

1. ಮಹಿಳೆಯು ಸಮುದಾಯ, ಸಂಘಟನೆಯಲ್ಲಿ ಭಾಗವಹಿಸಿದಂತೆ ನಿಷೇಧವನ್ನು ಏರುತ್ತದೆ.
2. ಈ ಸಾಂಪ್ರದಾಯಿಕ ಕುಟುಂಬಗಳು ಮಹಿಳೆಯರ ಬಗೆಗಿನ ಮೌಢ್ಯವನ್ನು ಕಳೆದುಕೊಳ್ಳಲು ಇನ್ನು ಸಾಧ್ಯವಾಗಿಲ್ಲ. ಉದಾ :- ಸ್ತ್ರೀ ಶಕ್ತಿ ಯೋಜನೆಯ ಹಲವು ತರಬೇತಿಗಳಿಗೆ ಹೆಣ್ಣು ಮಕ್ಕಳನ್ನು ಕಳುಹಿಸುವುದಿಲ್ಲ. ಮತ್ತು ಯೋಜನೆಯ ಕ್ರಮಬದ್ಧ ಸಭೆಯಲ್ಲಿ ಭಾಗವಹಿಸಲು ಮುಕ್ತ ಒಪ್ಪಿಗೆ ನೀಡುವುದಿಲ್ಲ.
3. ಬಡ ದುಡಿಯುವ ಮಹಿಳೆಯರು ಮಾಡುತ್ತಿರುವ ಉಳಿತಾಯದ ಹಣ, ಗಂಡ ಮತ್ತು ಮಕ್ಕಳಿಂದ ದುರುಪಯೋಗಕ್ಕೆ ಒಳಗಾಗುತ್ತದೆ.
4. ಯೋಜನೆಯಲ್ಲಿರುವ ಹೆಚ್ಚು ಮಹಿಳೆಯರಲ್ಲಿ ಶಿಕ್ಷಣವಿಲ್ಲದಿರುವುದು ಒಂದು ಸಮಸ್ಯೆಯೆ ಇದರಿಂದಾಗಿ ಸಾಲ ಸೌಲಭ್ಯ ಸಬ್ಸಿಡಿ ಮೊದಲಾದ ಸಂದರ್ಭದಲ್ಲಿ ಮೋಸಕ್ಕೊಳಗಾಗುವ ಸಾಧ್ಯತೆಗಳು ಹೆಚ್ಚಿವೆ.
5. ಸ್ತ್ರೀಶಕ್ತಿ ಯೋಜನೆಯ ಸದಸ್ಯರುಗಳಲ್ಲಿರುವ ಹಣಕಾಸು ನಿರ್ವಹಣಾ ಸಾಮರ್ಥದ ಕೊರತೆ.
6. ತರಬೇತಿ, ಮಾರುಕಟ್ಟೆ ನಿರ್ವಹಣೆ, ಸಾಲಸೌಲಭ್ಯ, ಸಬ್ಸಿಡಿ ಮೊದಲಾದವುಗಳ ಬಗ್ಗೆ ಇರುವ ಮಾಹಿತಿ ಕೊರತೆ.
7. ಸ್ತ್ರೀಶಕ್ತಿ ಯೋಜನೆ ಅಡಿಯಲ್ಲಿ ಒಂದೇ ಜಾತಿಗೆ ಸೇರಿದ ಮಹಿಳೆಯರೇ ಸೇರಿ ಮಾಡುತ್ತಿರುವ ಸ್ವ ಸಹಾಯ ಗುಂಪುಗಳು.
8. ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳಿಗೆ ಹೆಚ್ಚು ಮೀಸಲಾದ ಸಬ್ಸಿಡಿ ಸೌಲಭ್ಯಗಳು ಇಲ್ಲದೆ ಯೋಜನೆ ವಾಸ್ತವ ತೊಡಕನ್ನು ಉಂಟುಮಾಡುತ್ತವೆ.

ಸ್ತ್ರೀ ಶಕ್ತಿ ಯೋಜನೆ ಪ್ರಜಾಪ್ರಭುತ್ವ ವ್ಯವಸ್ಥೆಯ ಉತ್ತಮ ಮಹಿಳಾ ಸಬಲೀಕರಣದ ಕಾರ್ಯಕ್ರಮ. ಇದು ಸಮಾಜದಲ್ಲಿ ಉಂಟು ಮಾಡುತ್ತಿರುವ ಪರಿಣಾಮ ಪರಿವರ್ತನೆ ತಕ್ಷಣ ಗೋಚರಿಸದಿದ್ದರೂ ಅಗೋಚರವಾಗಿ ಮತ್ತು ನಿಧಾನಗತಿಯಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಉಂಟುಮಾಡುತ್ತಿದೆ. ಸ್ತ್ರೀ ಯೋಜನೆಯ ಮಹಿಳಾ ಸ್ಥಾನ ಮಾನಗಳಲ್ಲಿ ಉಂಟಾಗುತ್ತಿರುವ ಬದಲಾವಣೆಗಳು ಕುಟುಂಬದಲ್ಲಿ ಆ ಮೂಲಕ ಗ್ರಾಮಗಳಲ್ಲಿ ಹಾಗೂ ಸಮಾಜದಲ್ಲಿ ಸರಪಳಿ ರೂಪದ ಅಭಿವೃದ್ಧಿ ಪರ

ಪರಿವರ್ತನೆಯನ್ನುಂಟುಮಾಡುತ್ತವೆ. ಯೋಜನೆಯ ಸದಸ್ಯರಲ್ಲಿ ಶಿಕ್ಷಣಕ್ಕೆ ಆದ್ಯತೆ, ಒತ್ತಡ ರಹಿತ ಸ್ವಸಹಾಯ ಸಂಘಟನೆ, ಸಂಪ್ರದಾಯಿಕ ಮನೋಭಾವನೆಗಳಲ್ಲಿ ಉಂಟಾಗುವ ಬದಲಾವಣೆ, ಯೋಜನೆಯ ಬಗ್ಗೆ ಮಾಹಿತಿ, ನಿರ್ವಹಣಾ ತಿಳುವಳಿಕೆ ನೀಡಿದರ ಸ್ತ್ರೀಶಕ್ತಿ ಯೋಜನೆಯು ಇನ್ನೂ ಪರಿಣಾಮಕಾರಿಯಾಗುವುದರಲ್ಲಿ ಸಂಶಯವಿಲ್ಲ.

ಮಹಿಳಾ ಸ್ವಸಹಾಯ ಗುಂಪುಗಳು

ಮಹಿಳೆಯರನ್ನು ಆರ್ಥಿಕ ಸ್ವಾವಲಂಭಿಯನ್ನಾಗಿಸುವ ಉದ್ದೇಶದಿಂದ ಸರ್ಕಾರವು ಜಾರಿಗೆ ತಂದಿರುವ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸ್ವಸಹಾಯ ಗುಂಪುಗಳ ರಚನೆಯೂ ಒಂದು.ಗ್ರಾಮೀಣ ಮಹಿಳೆಯರ ಜೀವನಮಟ್ಟ ಸುಧಾರಿಸುವುದು ಅವರ ಸ್ಥಾನಮಾನವನ್ನು ಹೆಚ್ಚಿಸುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತರಲಾಯಿತು.

ಮಹಿಳಾ ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾದ ಮಹಿಳೆಯರಿಗೆ, ಕುರಿಸಾಕಾಣೆ, ಕೋಳಿಸಾಕಾಣೆ, ಕುಂಬಾರಿಕೆ, ತಿನಿಸುಗಳ ತಯಾರಿಕೆ, ಚಾಪೆ ಎಣೆಯುವಿಕೆ ಮೊದಲಾದ ಔದ್ಯೋಗಿಕ ತರಬೇತಿ ನೀಡಿ, ಅವರಿಗೆ ಕಚ್ಚಾವಸ್ತುಗಳನ್ನು ಪೂರೈಕೆ ಮಾಡಿ ಸಿದ್ಧವಸ್ತುಗಳಿಗೆ ಮಾರುಕಟ್ಟೆ ಒದಗಿಸುವ ಕೆಲಸವನ್ನು ಈ ಯೋಜನೆಯು ಮಾಡುತ್ತದೆ.

ಮಹಿಳೆಯರು ಆರ್ಥಿಕವಾಗಿ ಸ್ವಾವಲಂಭಿ ಜೀವನವನ್ನು ನಡೆಸಲು ಸಹಾಯ ಮಾಡುವುದರೊಂದಿಗೆ 1983–84 ರಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಉಪಯೋಜನೆಯನ್ನಾಗಿ ಡ್ವಾಕ್ರಾಯೋಜನೆಯನ್ನು ಅಸ್ತಿತ್ವಕ್ಕೆ ತರಲಾಯಿತು. (Development of women and children in rural area) ಸ್ವಸಹಾಯ ಗುಂಪುಗಳಿಗೆ ಆರ್ಥಿಕ ಉದ್ದೇಶಗಳಿಗೆ ಮಾತ್ರವಲ್ಲದೆ ಶಿಶು ಸಂರಕ್ಷಣಾ ಚಟುವಟಿಕೆಗಳು, ಶಿಕ್ಷಣ ಮಾಹಿತಿ ಒದಗಿಸುವ 'ಸಂಪರ್ಕ' ಕಾರ್ಯಕ್ರಮಗಳನ್ನು ಪರಿಚಯಿಸುವ ಮೂಲಕ ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಪರಿಕಲ್ಪನೆ ಇದು ಹೊಂದಿದೆ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳೆಯರ ಆರ್ಥಿಕ ಗುಂಪುಚಟುವಟಿಕೆಗಳಲ್ಲಿ ಮಹಿಳೆಯರ ಸ್ವಸಹಾಯ ಸಂಘವು ಪ್ರಮುಖವಾಗಿ ಬುಡಕಟ್ಟಿನೊಳಗೆ ಅವುಗಳ ಕೆಲವು ಉದ್ದೇಶಗಳಿಗಾಗಿ ರಚನೆಯಾಗಿದೆ ಅವುಗಳೆಂದರೆ.

1. ಆದಾಯ ಉತ್ಪತ್ತಿ ಚಟುವಟಿಕೆ ಕೈಗೊಳ್ಳಲು ತರಬೇತಿ ನೀಡುವುದು.

2. ಉದ್ದಿಮೆಗೆ ಬೇಕಾದ ಹೂಡಿಕೆ ಸಾಲ ಸೌಲಭ್ಯ ಒದಗಿಸುವುದು.

3. ಮಹಿಳೆಯರಲ್ಲಿ ಸ್ವಶಕ್ತಿಯ ಅರಿವಿನ ಜೊತೆಗೆ ಆಕೆಯ ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸುವುದು.

4. ಮಹಿಳೆಯರ ಮೂಲಕ ಸಮೂದಾಯವನ್ನು ಸ್ವಾವಲಂಬನೆಯೆಡೆಗೆ ಒಯ್ಯುವುದು.

ಈ ಉದ್ದೇಶಗಳಿಂದ ಕಾಡುಗೊಲ್ಲ ಬುಡಕಟ್ಟಿನಲ್ಲಿ ವಿರಳವಾಗಿಯಾದರೂ ಸ್ವಸಹಾಯಗುಂಪುಗಳಿವೆ. ಸ್ವಸಹಾಯ ಗುಂಪುಗಳ ರಚನೆ, ಆರ್ಥಿಕ ಚಟುವಟಿಕೆಗಳ ಆಯ್ಕೆ, ಕೌಶಲ್ಯ ತರಬೇತಿ, ಧನಸಹಾಯ, ಕಚ್ಚಾವಸ್ತುಗಳ ಪೂರೈಕೆ, ಸಿದ್ಧವಸ್ತುಗಳಿಗೆ ಮಾರುಕಟ್ಟೆ ಹೀಗೆ ಸ್ವಸಹಾಯ ಗುಂಪುಗಳಿಗೆ ಈ ಯೋಜನೆಯು ಹಂತ-ಹಂತವಾಗಿ ನೆರವು ನೀಡುತ್ತದೆ.ಈ ಯೋಜನೆಯು ಐ.ಆರ್.ಡಿ.ಪಿ.ಯ ಉಪಯೋಜನೆಯಾಗಿದ್ದು, ಯೋಜನೆಯ ನಿರ್ದೇಶಕರು ಮತ್ತು ಡಿ.ಆರ್.ಡಿ.ಪಿದ ಮುಖ್ಯಸ್ಥರು ಈ ಯೋಜನೆಯ ಮೇಲ್ವಿಚಾರಣೆ ಮತ್ತು ವಿಚಾರಣೆ ನಡೆಸಿ ಅದರ ಪ್ರಗತಿಯನ್ನು ಪರಿಶೀಲಿಸುವರು.

ಆದಾಯ ತರುವ ಕಸುಬುಗಳ ಮೂಲಕ ಆದಾಯ ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.ಅದಕ್ಕೆ ಸಂಬಂಧಿಸಿದಂತೆ ಕಾಡುಗೊಲ್ಲ ಮಹಿಳೆಯರಿಗೆ ವೃತ್ತಿ ತರಬೇತಿಯನ್ನು ನೀಡುವುದು ಮುಖ್ಯವಾಗಿತ್ತು. ಕಾಡುಗೊಲ್ಲ ಬುಡಕಟ್ಟಿನಲ್ಲಿರುವ ಈ ಸ್ವಸಹಾಯ ಸಂಘಗಳು ಹೊಸ ಉದ್ದಿಮೆಗಳ ಆರಂಭಿಸಲು ತರಬೇತಿ ಪಡೆಯುವ ಫಲವಾಗಿ, ತರಬೇತಿ ಕಾರ್ಯಕ್ರಮಗಳು ಪಟ್ಟಣ ಇಲ್ಲವೇ ತಾಲ್ಲೂಕು ಮಟ್ಟದಲ್ಲಿ ನಡೆಸುವುದರಿಂದ ಬಹುತೇಕ ಮಹಿಳೆಯರು ಭಾಗವಹಿಸಲು ನಿರಾಸಕ್ತಿ ಹೊಂದಿರುತ್ತಾರೆ.ಕೆಲವೊಮ್ಮೆ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಇಂತಹ ಕಾರ್ಯಕ್ರಮಗಳಿಗೆ ಕಳುಹಿಸಲು ನಿಷೇದವಿದೆ. ಬಹುತೇಕ ಮಹಿಳೆಯರು ಈ ಸ್ವಸಹಾಯ ಸಂಘದ ಮೂಲಕ ಸಾಲವನ್ನು ಪಡೆಯುತ್ತಾರೆ. ಪಡೆದ ಸಾಲವನ್ನು ಕುರಿವ್ಯಾಪಾರ, ಮನೆ ನಿರ್ಮಾಣಗಳಿಗೆ ಬಳಸಿಕೊಂಡಿರುವುದು ಇದೆ. ಕುರಿ ವ್ಯಾಪಾರ ಮನೆ ನಿರ್ಮಾಣಕ್ಕೆ ಮಹಿಳೆಯರ ಸ್ವಸಹಾಯ ಗುಂಪು ಒದಗಿಸುವ ಈ ಪಣವು ಪುರುಷ ಆದಾಯವನ್ನು ಹೆಚ್ಚಿಸುವ ಪೂರಕ ಹಣವಾಗಿ ಬಳಕೆಯಾಗುವುದರಿಂದ ಮಹಿಳೆಯ ಸ್ವ-ಶಕ್ತೀಕರಣ ಸ್ವಾವಲಂಬನೆ ಬಹಳ ಮಟ್ಟಿಗೆ ಯಶಸ್ವಿಯಾಗಲು ತಡೆಯಾಗಿದೆ.

ಸ್ವಸಹಾಯ ಗುಂಪುಗಳು ಮಹಿಳಾ ಸದಸ್ಯೆಯರಿಗೆ ಸಾಲವನ್ನು ಮಾತ್ರ ನೀಡುವ ಯೋಜನೆಯಾಗಿರದೆ, ಸಹಾಯಕ ತತ್ವದ ಆಧಾರದ ಮೇಲೆ ಉಳಿತಾಯ ಮಾಡಿ ಹಣ ಸಂಗ್ರಹಿಸಿ ತಮ್ಮದೇ ಉಳಿತಾಯ ಖಾತೆಯನ್ನು ಹೊಂದುವ ಅವಕಾಶವನ್ನು ಮಾಡಿಕೊಟ್ಟಿದೆ.ಪ್ರತಿ ತಿಂಗಳು

ಸಂಗ್ರಹವಾಗುವ ಹಣವನ್ನು ಅಗತ್ಯವಿರುವವರಿಗೆ ಸಾಲನೀಡಿ ಬಡ್ಡಿ ಪಡೆಯಬಹುದು. ಸಾಲದ ಹಣವನ್ನು ತಮ್ಮ ಮಾಸಿಕ ಕಂತಿನ ಜೊತೆಗೆ ಬಡ್ಡಿ ಮತ್ತು ಉಳಿತಾಯ ಸೇರಿಸಿ ಪಾವತಿಸಬೇಕು.ಸರಕಾರ, ಬ್ಯಾಂಕಿನ ಸಹಕಾರವಿಲ್ಲದೆಯೂ ಸ್ವಸಹಾಯ ಗುಂಪುಗಳು ತಮ್ಮ ಆರ್ಥಿಕ ಬಲದಿಂದ ಉಳಿಯಬಲ್ಲವು.

ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು, ಅಪನಂಬಿಕೆಗಳು, ವೈಮನಸ್ಯಗಳ ಕಾರಣದಿಂದ ಆರ್ಥಿಕ ನಿರ್ವಹಣೆಯ ಅಸಮರ್ಥತೆಯ ಕಾರಣದಿಂದ ಕೆಲವೊಮ್ಮೆ ಸಾಲ ಪಡೆದವರು ಮರುಪಾವತಿ ಮಾಡದೆ ಇರುವುದರಿಂದ ಸ್ವಸಹಾಯ ಗುಂಪುಗಳು ತಮ್ಮ ಅಸ್ತಿತ್ವ ಕಳೆದುಕೊಂಡಿದೆ. ಇದರ ಜೊತೆಗೆ ಮಹಿಳೆಯರಿಗೆ ಸ್ವ-ಶಕ್ತೀಕರಣಕ್ಕೆ ನೆರವಾಗುವಂತಹ ಉದ್ದಿಮೆಗಳ ಆರಂಭಕ್ಕೆ ಬುಡಕಟ್ಟಿನೊಳಗೆ ಸಾಧ್ಯವಾಗದೆ ಸಾಲವು ಪಡೆಯುವುದು ಕಂಡು ಬರುತ್ತದೆ. ದುಡಿಮೆಯ ಹಣವು ಮನೆ ನಿರ್ವಹಣೆಗೆ ವೆಚ್ಚವಾಗಿ ಆದಾಯದ ಹೆಚ್ಚಿಸುವ ಬದಲವು ಸಾಲವೇ ಹೊರೆಯಾಗಿ ಪರಿಣಮಿಸಿದ ಉದಾಹರಣೆಗಳೂ ಇವೆ. ಈ ಕಾರಣದಿಂದ ಸ್ವಸಹಾಯ ಗುಂಪುಗಳನ್ನು ಮಹಿಳೆಯರು ನಡೆಸಲು ಮುಂದುವರಿಸಲು ನಿರಾಸಕ್ತರಾಗಿದ್ದಾರೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವ-ಸಹಾಯ ಗುಂಪು

ಧರ್ಮಸ್ಥಳದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವ-ಸಹಾಯ ಗುಂಪುಗಳು ಸರ್ಕಾರ ಪ್ರಾಯೋಜಿತ ಯೋಜನೆಯಾಗಿರದೆ ಖಾಸಗಿ ವಲಯದ ಸ್ವಯಂಪ್ರೇರಿತವಾಗಿ ಸಮಾಜ ಸೇವೆಯ ಉದ್ದೇಶದಿಂದ ಆರಂಭವಾಗಿರುವ ಸ್ವಸಹಾಯ ಗುಂಪು ಪದ್ಧತಿಯ ಆರ್ಥಿಕ ಸಂಘಟನೆಯಾಗಿದೆ.ಈ ಸಂಘಟನೆಗೆ ಮಾದರಿ ಐ.ಆರ್.ಡಿ.ಪಿ ಯಿಂದ ಪ್ರಾಯೋಜಿತವಾದ ಮಹಿಳಾ ಸ್ವ-ಸಹಾಯ ಗುಂಪುಗಳೇ ಆಗಿದೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಸಹಾಯ ಗುಂಪು ಆರ್ಥಿಕ ಹೊಣೆಗಾರಿಕೆ ಖಾಸಗಿ ಒಡೆತನದ ಸಂಸ್ಥೆಯ ಅಧೀನದಲ್ಲಿರುತ್ತದೆ.ಈ ಸ್ವಸಹಾಯ ಗುಂಪೂ ಕೂಡ ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಜಾರಿಗೆ ಬಂದಿದೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಸಹಾಯ ಸಂಘವು ಕಾಡುಗೊಲ್ಲ ಬುಡಕಟ್ಟಿನಲ್ಲಿ ಪ್ರತಿ ಹಟ್ಟಿಯಲ್ಲಿ ಇವೆ. ಈ ಸಂಘದಲ್ಲಿ ಪುರುಷ ಮತ್ತು ಮಹಿಳೆ ಇಬ್ಬರು ಸದಸ್ಯರು ಇರಬಹುದು. ಕೃಷಿ, ವ್ಯಾಪಾರ, ಉದ್ದಿಮೆ, ಮನೆ ನಿರ್ಮಿಸಲು ಇತರೆ ಕಾರಣಗಳಿಗಾಗಿ 10 ಸಾವಿರ ಸಾಲವನ್ನು ಈ

ಸ್ವಸಹಾಯ ಗುಂಪು ನೀಡುತ್ತದೆ. ವಾರಕ್ಕೆ ನೂರ ಮೂವತ್ತು (130) ರಂತೆ ಸಾಲ ಮತ್ತು ಬಡ್ಡಿಯ ಹಣವನ್ನು ಪಾವತಿಸಬೇಕು 10 ಸಾವಿರಕ್ಕೆ ಒಟ್ಟು 12500 ಸಾವಿರಗಳನ್ನು ಕಟ್ಟುತ್ತಾರೆ. 2500 ಸಾವಿರ ಬಡ್ಡಿಯನ್ನು ಕಟ್ಟಿದರೂ 130 ರಂತೆ ಕಟ್ಟುವುದು ಹೊರೆ ಎನಿಸಲ್ಲ. ವಾರದಲ್ಲಿ ಒಂದು ಕಂತು ಕಟ್ಟದಿದ್ದರೂ ದಂಡವನ್ನು ಸೇರಿಸಿ ಮುಂದಿನ ಕಂತುಗಳಲ್ಲಿ ಕಟ್ಟುವ ಅವಕಾಶವಿದೆ. 120 ಸಾಲ ಹಣ 10 ರೂಪಾಯಿ ಉಳಿತಾಯ ಹಣವಾಗಿ ಈ ಸ್ವ ಸಹಾಯ ಗುಂಪು ಪಡೆಯುತ್ತದೆ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳಿಗಿಂತ ಹೆಚ್ಚು ಜನಪ್ರಿಯವಾಗಿ ಅಧಿಕ ಸಂಖ್ಯೆಯಲ್ಲಿರುವುದು ಈ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಸಹಾಯ ಗುಂಪುಗಳು, ಮಹಿಳೆ ಮತ್ತು ಪುರುಷರಿಬ್ಬರೂ ಈ ಗುಂಪಿನ ಸದಸ್ಯರಾಗಬಹುದಾದುದು ಇದರ ಜನಪ್ರೀಯತೆಗೆ ಕಾರಣಗಳಲ್ಲಿ ಒಂದಾಗಿದೆ. ಒಬ್ಬರಿಗಿಂತ ಹೆಚ್ಚು ಸದಸ್ಯರಿಗೆ ಒಂದೇ ಸಮಯದಲ್ಲಿ ಸಾಲ ನೀಡುವಿಕೆಯು ಈ ಸಂಘವನ್ನು ಹೆಚ್ಚು ಪ್ರಾರಂಭಿಸುವಂತೆ ಪ್ರೇರಣೆ ನೀಡುತ್ತದೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಸಹಾಯ ಗುಂಪಿನಿಂದ ಪಡೆಯುವ ಸಾಲವನ್ನು ಕುರಿವ್ಯಾಪಾರಕ್ಕೆ ಹೂಡಲಾಗುತ್ತದೆ. ಸಾಲ ಮರುಪಾವತಿಯು ಕೂಲಿ, ವ್ಯವಸಾಯದಿಂದ ಬರುವ ಆದಾಯದಿಂದ ಕಾಡುಗೊಲ್ಲರು ನಿರ್ವಹಿಸುತ್ತಾರೆ. ಈ ಸಂಘದಿಂದಾಗಿ ಊರಿನ ಗೌಡರು, ಶೆಟ್ಟರ ಬಳಿ ಸಾಲ ಕೇಳುವುದು ತಪ್ಪಿದೆ ಎಂದು ಕಾಡುಗೊಲ್ಲ ಮಹಿಳೆಯರು ನೆಮ್ಮದಿಯ ಉಸಿರು ಬಿಡುತ್ತಾರೆ.ತಿಂಗಳಿಗೆ ಮರುಪಾವತಿ ಮಾಡುವ ಹಣವು ಹೊರೆ ಎನಿಸಿಲ್ಲ. ಕರ್ನಾಟಕದ ಇತರೆಡೆಗಳಲ್ಲಿ ಈ ಸ್ವಸಹಾಯ ಗುಂಪು ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹನೀಡಿ, ಸಿದ್ಧ ಮಾರುಕಟ್ಟೆಯನ್ನು ಒದಗಿಸುತ್ತದೆ.ಆದರೆ ಕಾಡುಗೊಲ್ಲ ಬುಡಕಟ್ಟಿನಲ್ಲಿ ಹೊಸ ವೃತ್ತಿಗಳಲ್ಲಿ ಹಣ ಹೂಡಿಕೆಯ ಬದಲು ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಕುರಿಸಾಕಾಣಿಕೆಗೆ ಹೆಚ್ಚಿನ ಹಣವನ್ನು ತೊಡಗಿಸುತ್ತಾರೆ.ಇದರಿಂದ ಹೊಸ ಉದ್ಯೋಗ ಉತ್ತಮ ಆದಾಯ ವಂಚಿತರಾಗಬೇಕಾಗಿದೆ. ಸ್ವ-ಉದ್ಯೋಗಗಳಿಗೆ ತರಬೇತಿಯನ್ನು ಪಡೆದರೂ ಆ ಉದ್ಯೋಗಗಳಿಗೆ ಕಾಡುಗೊಲ್ಲ ಬುಡಕಟ್ಟಿನಲ್ಲಿ ಪ್ರೋತ್ಸಾಹವಿಲ್ಲ. ಬುಡಕಟ್ಟಿನ ಬದುಕಿಗೆ ತೊಂದರೆಯಾಗುವಂತ ಉದ್ಯೋಗಗಳನ್ನು ಆಯ್ದುಕೊಳ್ಳುವಲ್ಲಿ ಈ ಬುಡಕಟ್ಟು ಆಸಕ್ತಿವಹಿಸುವುದಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯಬಹುದಾದ ಸಂಗತಿಯಾಗಿದೆ.

ಕೊನೆ ಟಿಪ್ಪಣಿ

1. ಬುಡಕಟ್ಟು ಕುಲಕಸುಬುಗಳು ಲೇ:ಡಾ. ಕೆ.ಎಂ ಮೈತ್ರಿ ಪುಟ – ಅರಿಕೆ
2. ಸಾವಿರದ ಸಿರಿಬೆಳಗು ಸಂ:ಕೃಷ್ಣಮೂರ್ತಿ ಹನೂರ ಪುಟ 72

3. ಅದೇ ಪುಟ 113

4. ಅದೇ ಪುಟ38

5. ಕಾಡುಗೊಲ್ಲರ ಜನಪದ ಗೀತೆಗಳು (ಸಂ): ಅಂಬಳಿಕೆ ಓರಿಯಣ್ಣ ಪುಟ 95

6. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಪುಟ 45

7. ಅದೇ ಪುಟ 32

8. ಅದೇ ಪುಟ 34

9. ದೊಡ್ಡಮ್ಮ 67 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ

10. ಭಾಗ್ಯ 23 ವರ್ಷ ಕುಲುಮೆ ಹಟ್ಟಿ

11. ಚಿಕ್ಕಮ್ಮ 70 ವರ್ಷ ಲಿಂಗದಹಳ್ಳಿ ಗೊಲ್ಲರಹಟ್ಟಿ

12. ದೊಡ್ಡೀರಮ್ಮ 75 ವರ್ಷ ಪೊನ್ನಸಮುದ್ರ ಗೊಲ್ಲರಹಟ್ಟಿ

13. ಪದ್ಮ 20 ವರ್ಷ ಚಿಕ್ಕತಿಮ್ಮನಹಳ್ಳಿ ಗೊಲ್ಲರಹಟ್ಟಿ

14. ಸೌಮ್ಯ 18 ವರ್ಷ ಕೆಂಚಮ್ಮನಹಳ್ಳಿ ಗೊಲ್ಲರಹಟ್ಟಿ

15. ಈರಮ್ಮ 56 ವರ್ಷ ಚಿತ್ತಗಾನಹಳ್ಳಿ ಗೊಲ್ಲರಹಟ್ಟಿ

16. ನಾಗಮ್ಮ 63 ವರ್ಷ ಚನ್ನಸಾಗರದ ಗೊಲ್ಲರಹಟ್ಟಿ,

17. ಚಿತ್ತಮ್ಮ 54 ವರ್ಷ ದೇವರಹಟ್ಟಿ

18. ಸಾಕಮ್ಮ 59 ವರ್ಷ ಕಾಮನಹಟ್ಟಿ

19. ಸಿರಿಯಮ್ಮ 60 ವರ್ಷ ಕಣವೇನಹಳ್ಳಿ ಗೊಲ್ಲರಹಟ್ಟಿ

20. ಮಾದಮ್ಮ 68 ವರ್ಷ ಎರಪಾಳ್ಯ ಗೊಲ್ಲರಹಟ್ಟಿ

21. ತಿಮ್ಮಕ್ಕ 53 ವರ್ಷ ಬೊಮ್ಮನಹಟ್ಟಿ

22. ಸಣ್ಣಮ್ಮ 65 ವರ್ಷ ದೊಡ್ಡಟ್ಟಿ

23. ಸಹನ 32 ವರ್ಷ ಗೌಡಗಾರನಹಟ್ಟಿ

24. ಜಯಮ್ಮ 48 ವರ್ಷ ಜಂಗಮರಹಳ್ಳಿ ಗೊಲ್ಲರಹಟ್ಟಿ

25. ಕರಿಯಪ್ಪ 60 ವರ್ಷ ಈರಮುದ್ದನಹಟ್ಟಿ

26. ಬಾಳಮ್ಮ 54 ವರ್ಷ ಜೋಗಾರಹಟ್ಟಿ

27. ತಿಮ್ಮಮ್ಮ 75 ವರ್ಷ ಜುಂಜಪ್ಪನಹಟ್ಟಿ

28. ನಾಗಣ್ಣ 64 ವರ್ಷ ಹೊಸಹಳ್ಳಿ ಗೊಲ್ಲರಹಟ್ಟಿ

29. ಜಡೆಯಮ್ಮ 59 ವರ್ಷ ಕಾರನಾಗನಹಟ್ಟಿ

30. ಸಣ್ಣನಾಗಮ್ಮ 42 ವರ್ಷ ಕೆ.ಟಿ ಹಳ್ಳಿ ಗೊಲ್ಲರಹಟ್ಟಿ

31. ಕರಿಯಮ್ಮ 52 ವರ್ಷ ವಡ್ಡರಹಟ್ಟಿ

32. ಮುದ್ದಮ್ಮ 43 ವರ್ಷ ಕೆ.ಟಿ ಹಳ್ಳಿ ಗೊಲ್ಲರಹಟ್ಟಿ

33. ರತ್ನಮ್ಮ 35 ವರ್ಷ ಚಿಕ್ಕತಿಮ್ಮನಹಳ್ಳಿ ಗೊಲ್ಲರಹಟ್ಟಿ

34. ಕಂಬಮ್ಮ 50 ವರ್ಷ ಕಾಮನಹಟ್ಟಿ

35. ಕರಿಯಮ್ಮ 76 ವರ್ಷ ದೇವರಹಟ್ಟಿ

36. ರಾಮಕ್ಕ 65 ವರ್ಷ ದೇವರಹಟ್ಟಿ

37. ಚಿತ್ತಜ್ಜಿ 78 ವರ್ಷ ಪೊನ್ನಸಮುದ್ರ ಗೊಲ್ಲರಹಟ್ಟಿ

ಅಧ್ಯಾಯ 9

ಕಾಡುಗೊಲ್ಲ ಮಹಿಳಾ ಶೈಕ್ಷಣಿಕ ಮತ್ತು ರಾಜಕೀಯ ಸಂಕಥನ

ಪ್ರತಿದೇಶದಲ್ಲಿಯೂ ಲಭ್ಯವಿರುವ ವ್ಯವಸ್ಥಿತ ಶಿಕ್ಷಣ ಪದ್ಧತಿಯು ಆ ಸಮಾಜದ ನಾಗರೀಕತೆಯನ್ನು ಸಾರುವಂತದ್ದಾಗಿರುತ್ತದೆ. ದೇಶದ ಸರ್ವೋತೋಮುಖ ಪ್ರಗತಿಯನ್ನು ಉಂಟುಮಾಡುವ ಹಲವು ಸಂಗತಿಗಳಲ್ಲಿ ಶಿಕ್ಷಣಕ್ಕೆ ಅಗ್ರಸ್ಥಾನವಿದೆ. ಆಧುನಿಕ ಸಮಾಜದ ಹಲವು ಅಸಮಾನತೆಗಳನ್ನು ಹೋಗಲಾಡಿಸಲು ಶಿಕ್ಷಣ ಅಸ್ತ್ರವಾಗಿ ಬಳಕೆಯಾದ ಉದಾಹರಣೆಗಳು ನಮ್ಮ ಕಣ್ಣೆದುರಿಗೇ ಇವೆ. ಶಿಕ್ಷಣವು ಆಧುನಿಕ ಬದುಕಿನಲ್ಲಿ ರಕ್ತನಾಳಗಳಂತೆ ಹರಡಿಕೊಂಡಿದ್ದು, ನಿರಂತರ ಜೀವಂತಿಕೆಯಿಂದ ಪ್ರವಹಿಸಬೇಕಿದೆ.

ಭಾರತವು ತನ್ನ ನಾಗರೀಕ ಇತಿಹಾಸದಲ್ಲಿ ಶೈಕ್ಷಣಿಕ ಬದುಕಿಗೆ ಉಚಿತ ಸ್ಥಾನವನ್ನು ನೀಡಿತ್ತು. ವೇದಗಳ ಕಾಲದಲ್ಲಿ ಸ್ತ್ರೀ-ಪುರುಷರಿಬ್ಬರೂ ವೇದಾಧ್ಯಯನ ನಡೆಸುವ ಸಮಾನ ಅವಕಾಶಗಳನ್ನು ಹೊಂದಿದ್ದರು. .ಆ ಕಾಲಕ್ಕೆ ವೇದಾಧ್ಯಯನ ಮಾಡಿದ್ದರು ಎಂದು ಹೇಳಲಾಗುವ ಸ್ತ್ರೀಯರಾದ ಮೈತ್ರೇಯಿ, ಗಾರ್ಗಿ, ಲೋಪಮುದ್ರಾ ಸಮಾಜದ ಉನ್ನತ ವರ್ಗಕ್ಕೆ ಸೇರಿದವರಾಗಿದ್ದರು. ಈ ಹೊತ್ತಿನಲ್ಲಿ ಸಾಮಾನ್ಯ ವರ್ಗದ ಅದರಲ್ಲೂ ಬುಡಕಟ್ಟಿನೊಳಗೆ ಶಿಕ್ಷಣ ಏನಾಗಿತ್ತು? ಮಹಿಳೆಯರು ಯಾವ ಅಧ್ಯಯನ ಮಾಡುತ್ತಿದ್ದರು, ಎಂಬುದು ಇತಿಹಾಸದಲ್ಲಿ ದಾಖಲಾಗಿಲ್ಲ. ಇತಿಹಾಸವಿಲ್ಲವೆಂದರೆ ಅಂದಿನ ವರ್ತಮಾನದಲ್ಲಿ ಅವರು ಶಿಕ್ಷಣದ ಕ್ಷೇತ್ರವನ್ನು ಪ್ರವೇಶಿಸಿರಲಿಲ್ಲ. ಎಂಬುದು ಸ್ಪಷ್ಟ. ಮನುಸ್ಮೃತಿಯ ಕಾಲದಲ್ಲೂ ಶೂದ್ರರಿಗೆ ಮತ್ತು ಸ್ತ್ರೀಯರಿಗೆ ಶಿಕ್ಷಣ ಪಡೆಯುವುದನ್ನು ನಿರಾಕರಿಸಲಾಗಿತ್ತು. ಪ್ರಾಚೀನ ಭಾರತೀಯ ಸಮಾಜವು ತನ್ನ ಸಮಾಜದಲ್ಲಿ ಶೂದ್ರರನ್ನು ದಲಿತರನ್ನು ಮಹಿಳೆಯರನ್ನು ಶಿಕ್ಷಣವಂಚಿತರನ್ನಾಗಿ ಮಾಡಿತು. ಈ ವರ್ಗವು ಅಕ್ಷರದ ಬೆಳಕನ್ನು ಕಂಡಿದ್ದು, ಬ್ರಿಟೀಷರ ಆಗಮನದ ನಂತರವೇ.

ಬ್ರಿಟೀಷರ ಆಗಮನದ ನಂತರ ಭಾರತದ ಸಮಾಜದಲ್ಲಿ ಹಲವು ಅಸಮಾನತೆಗಳು ಬಯಲಿಗೆಳೆಯಲ್ಪಟ್ಟವು. ಇದಕ್ಕೆ ಮುಖ್ಯ ಕಾರಣ ಶಿಕ್ಷಣವೇ. ಸ್ತ್ರೀ ಶಿಕ್ಷಣದ ಇತಿಹಾಸವೂ ಈ ಹೊತ್ತಿನಲ್ಲಿಯೇ ಆರಂಭಗೊಳುತ್ತದೆ. ಪಾಶ್ಚಾತ್ಯ ಶಿಕ್ಷಣದಿಂದ ಪ್ರೇರಿತರಾದ ಭಾರತದ ಬುದ್ಧಿಜೀವಿಗಳು ತಮ್ಮ ಸಮಾಜದೊಳಗಿದ್ದ ಹಲವು ಮೌಢ್ಯಗಳನ್ನು ಪ್ರಶ್ನಿಸುವ ಮೂಲಕ ಅವುಗಳನ್ನು ಸಮಾಜದಿಂದ ಹೊರಹಾಕುವ ಪ್ರಯತ್ನ ಮಾಡಿದರು.ಈ ಹಿನ್ನೆಲೆಯಲ್ಲಿ ಸತಿ ಪದ್ಧತಿ, ಬಾಲ್ಯವಿವಾಹ ವಿಧವಾ ಪದ್ಧತಿಗಳ ನಿರ್ಮೂಲನೆಗಳಂತಹ ಸುಧಾರಣಾ ಚಳುವಳಿಗಳೂ ನಡೆದವು.ಈ ಸುಧಾರಣಾವಾದಿ ಚಳುವಳಿಗಳಲ್ಲಿ ಸ್ತ್ರೀ ಶಿಕ್ಷಣವೂ ಒಂದಾಗಿತ್ತು ಎಂಬುದು ವಿಶೇಷ.

ಬ್ರಿಟೀಷ್ ಸರ್ಕಾರದ ಶಿಕ್ಷಣ ನೀತಿಯನ್ನು ಅಸಮಾಧಾನದಿಂದಲೇ ಸ್ವೀಕರಿಸಿದ ಸುಧಾರಣಾವಾದಿಗಳು ಸ್ತ್ರೀಯರಿಗೂ ಶಿಕ್ಷಣ ನೀಡಬೇಕೆಂಬ ಸಂಕಲ್ಪ ಮಾಡಿದರು.ಆದರೆ ಯಾವ ಶಿಕ್ಷಣ ನೀಡಬೇಕು?ಎಂತಹ ಶಿಕ್ಷಣ ನೀಡಬೇಕು ಎಂಬ ಗೊಂದಲಕ್ಕೆ ಒಳಗಾದರು.ಈ ಸಂದರ್ಭದಲ್ಲಿ ಕುಟುಂಬದ ಒಳಗೆ ಅತ್ಯುತ್ತಮ ತಾಯಿಯನ್ನು, ನಿಷ್ಠಾವಂತ ಪತ್ನಿಯನ್ನು ಸೃಷ್ಟಿಮಾಡುವ ಅಕ್ಷರಸ್ಥನಾಗಿಸುವ ಸಾಂಪ್ರದಾಯಿಕ ಶಿಕ್ಷಣಕ್ಕೆ ಹೆಚ್ಚಿನ ಮನ್ನಣೆ ದೊರೆಯಿತು. ಪುರುಷರಿಗೆ ಸಮಾನವಾಗಿ ಪರಿಗಣಿಸುವ ಶಿಕ್ಷಣ ಮಹಿಳೆಯರಿಗೆ ನೀಡಲು ಹಿಂಜರಿದರು. ಈ ಹೊತ್ತಿನಲ್ಲಿ ಬ್ರಿಟೀಷರು ಮತ್ತು ಅವರ ಕ್ರೈಸ್ತ ಮಿಷನರಿಗಳು ಮಹಿಳಾ ಕಲಿಕಾ ಕೇಂದ್ರಗಳನ್ನು ತೆರೆದವು. ಅಲ್ಲಿ ಎಲ್ಲಾ ವರ್ಗದವರಿಗೂ ಕಲಿಕೆಗೆ ಅವಕಾಶ ಮಾಡಿಕೊಟ್ಟಿತು. ದೇಶಿಯವಾಗಿದ್ದ ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ಆರ್ಯಸಮಾಜಗಳು ಅನಿಬೆಸೆಂಟ್, ರಮಾಭಾಯಿ, ಮೊದಲಾದವರ ಪ್ರಯತ್ನದಿಂದ ಮಹಿಳೆಯು ಶಿಕ್ಷಣ ಪಡೆಯುವ ಅವಕಾಶಗಳನ್ನು ಪಡೆದುಕೊಂಡರು. ಇದರ ಫಲ ಹೆಚ್ಚು ಮೇಲು ಮಧ್ಯಮ ವರ್ಗದ ಮಹಿಳೆಯರ ಪಾಲಾಯಿತು.ಆದರೆ ಬುಡಕಟ್ಟಿನ ಮಹಿಳೆಯರು ಈ ಹೊತ್ತಿನಲ್ಲಿ ಶಿಕ್ಷಣದ ಗಾಳಿಯೂ ಸೋಕದೆ ಹಟ್ಟಿಯ ಒಳಗೆ ನಿಶಬ್ದವಾಗಿ ದುಡಿಯುತ್ತಿದ್ದರು.

ಹೀಗೆ 19 ನೇ ಶತಮಾನದ ಮಹಿಳಾ ಶಿಕ್ಷಣವು ಸುಧಾರಣಾವಾದಿ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಶಿಕ್ಷಣಕ್ಕೆ ಒತ್ತು ನೀಡಿತು. ಇಲ್ಲಿ ಸಾಂಪ್ರದಾಯಿಕ ಶಿಕ್ಷಣವೆಂದರೆ ಓದುವ, ಬರೆಯುವ, ಇಂಗ್ಲೀಷ್ ಭಾಷೆಯನ್ನು ತಿಳಿಯುವ, ಎಂಬ್ರಾಯಿಡ್, ಕರಕುಶಲತೆ, ಸ್ವಚ್ಛತೆ, ಆರೋಗ್ಯ ಲಲಿತಕಲೆಯನ್ನು ಕಲಿಯುವ ಶಿಕ್ಷಣವಂತ ಪುರುಷನಿಗೆ ಬುದ್ಧಿವಂತ ಅಕ್ಷರಸ್ಥ ಸಂಗಾತಿ ಒದಗಿಸುವುದೇ ಆಗಿತ್ತು.

ಭಾರತವು ಸ್ವಾತಂತ್ರ್ಯಗೊಂಡ ನಂತರ ಅಭಿವೃದ್ಧಿಯೆಡೆಗೆ ಮುಖಮಾಡಿತು. ಎಷ್ಟೇ ಸಂಪನ್ಮೂಲಗಳಿದ್ದರೂ, ಬೌದ್ಧಿಕ ದಾರಿದ್ರ್ಯವಿದ್ದರೆ ಸಂಪನ್ಮೂಲಗಳ ಸದುಪಯೋಗ ಸಾಧ್ಯವಿಲ್ಲವೆಂಬ ಅಭಿವೃದ್ಧಿ ತತ್ವ ಮನಗಂಡ ಭಾರತ ಸರ್ಕಾರ ಭಾರತದಲ್ಲಿ ಸಮರ್ಪಕವಾಗಿ ಶಿಕ್ಷಣ ನೀಡುವ ಪ್ರಯತ್ನ ಶೀಲವಾಗಿ ಹಲವು ಸಮಿತಿ, ಆಯೋಗ ರಚಿಸಿತು. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದಾಗಿದೆ. ಡಾ.ಎಸ್.ರಾಧಕೃಷ್ಣನ್ ನೇತೃತ್ವದಲ್ಲಿ 1948-49 ರಲ್ಲಿ "ಯೂನಿವರ್ಸಿಟಿ ಎಜುಕೇಷನ್ ಕಮಿಷನ್" ರಚನೆಗೊಂಡಿತು.ಇದು ಮಹಿಳಾ ಶಿಕ್ಷಣವನ್ನು ಆಲೋಚಿಸಿದ್ದು, ಉತ್ತಮ ಗೃಹಿಣಿಯಾಗುವುದೇ ಸ್ತ್ರೀಯ ಮನೋಧರ್ಮವೆಂದು ತಾಯಿಯು ಕುಟುಂಬದಲ್ಲಿ ಗುರುವಾಗಿ ಮೊದಲ ಸ್ಥಾನದಲ್ಲಿರುವುದರಿಂದ ಅವರಿಗೆ ಇತಿಹಾಸ ಸಾಹಿತ್ಯದಂತಹ ವಿಷಯಗಳನ್ನು ಕಲಿಸಬೇಕೆಂದು ಬಯಸಿತು. ಪ್ರಾಥಮಿಕ ಮತ್ತು ಕಾಲೇಜು ಶಿಕ್ಷಣದಲ್ಲಿ ಮಹಿಳೆಯರಿಗೆ ಅವಕಾಶ ಮತ್ತು ಪ್ರತ್ಯೇಕ ಶಾಲೆಗಳನ್ನು ಅವರಿಗಾಗಿ ನಿರ್ಮಿಸಲು ಆಲೋಚಿಸಿತು. 1952-53 ರಲ್ಲಿ ಬಂದ 'ಸೆಕೆಂಡರಿ ಎಜುಕೇಷನ್ ಕಮಿಟಿಯು' ಹುಡುಗಿಯರಿಗೆ ಶಿಕ್ಷಣದಲ್ಲಿ ವಿಶೇಷ ಸವಲತ್ತು ನೀಡಲು

ಆಲೋಚಿಸಿತು. ಅಲ್ಲದೆ ಮಹಿಳೆ-ಪುರುಷ ಇಬ್ಬರಿಗೂ ಮನೆ ಮತ್ತು ಸಮುದಾಯಕ್ಕೆ ಅಗತ್ಯವಿರುವ ಕಲಿಕೆಗೆ ಆದ್ಯತೆ ನೀಡಿತು. 1958 ರಲ್ಲಿ ಜಾರಿಗೆ ಬಂದ 'ಮಹಿಳಾ ಶಿಕ್ಷಣ ಸಮಿತಿಯು' ಪ್ರಾಥಮಿಕ ಮಾಧ್ಯಮದಲ್ಲಿ ಹುಡುಗಿಯರ ಶಿಕ್ಷಣಕ್ಕೆ ವಿಶೇಷ ರಿಯಾಯಿತಿಗಳನ್ನು ನೀಡಿತು. ಅವುಗಳಲ್ಲಿ ಉಚಿತ ಶಾರಿಗೆ, ಸೇರಿತು. ಅಲ್ಲದೆ ವೃತ್ತಿಪರ ಕೋರ್ಸ್ ಕಲಿಯಲು ಆಸಕ್ತಿ ಇರುವ ಮಹಿಳೆಯರಿಗೆ ಅವಕಾಶ ಕಲ್ಪಿಸಿತು.ಪುರುಷಾತ್ಮಕ ಮತ್ತು ಸ್ತ್ರೀಯಾತ್ಮಕ ಶಿಕ್ಷಣ ಪದ್ಧತಿ ರೂಪಿಸುವ ಸಲುವಾಗಿ ಅಧ್ಯಯನಕ್ಕೆ 1962 ರಲ್ಲಿ 'ನ್ಯಾಷನಲ್ ಕೌನ್ಸಿಲ್ ಫಾರ್ ವುಮೆನ್ಸ್ ಎಜುಕೇಷನ್' ಜಾರಿಗೆ ಬಂದಿತು. ಇದು ಶಿಕ್ಷಣದಲ್ಲಿ ಸಾಂಪ್ರದಾಯಿಕ ಮನೋಭಾವಗಳನ್ನು ಅಲ್ಲಗಳೆದು ಸ್ತ್ರೀ ಮತ್ತು ಪುರುಷರಿಬ್ಬರಿಗೂ ಸಮಾನ ಶಿಕ್ಷಣಕ್ಕೆ ಆಧ್ಯತೆಯನ್ನು ನೀಡಿತು. 1964 ರಲ್ಲಿನ 'ಕೊಠಾರಿ ಸಮಿತಿಯು' ಶಿಕ್ಷಣ ಮತ್ತು ದುಡಿಮೆ ಮಹಿಳೆಯ ಹಕ್ಕು ಎಂಬುದನ್ನು ಪ್ರತಿಪಾದಿಸಿತು. 1974 ರಲ್ಲಿ 'ಭಾರತ ಮಹಿಳೆಯ ಸ್ಥಾನಮಾನ ಸಮಿತಿಯು' ತನ್ನ ವರದಿಯಲ್ಲಿ ಹುಡುಗ ಹುಡುಗಿಯರಿಗೆ 10 ನೇ ತರಗತಿಯವರೆಗೆ ಒಂದೇ ಪಠ್ಯಕ್ರಮ ಹುಡುಗಿಯರಿಗೂ ವೃತ್ತಿಶಿಕ್ಷಣ ನೀಡಿಕೆ ಮತ್ತು ಪ್ರಾಥಮಿಕ ಮಟ್ಟದಲ್ಲಿ ಸ್ತ್ರೀ-ಪುರುಷ ಇಬ್ಬರಿಗೂ ಸಂಗೀತ ಕರಕುಶಲ ಹಾಗೂ ಕೈಕಸೂತಿ ಕೆಲಸಗಳನ್ನು ಕಲಿಸಬೇಕು ಎಂದು ಶಿಫಾರಸ್ಸು ಮಾಡಿತು. 1986 ರಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿಯು' ಸಮಾನತೆ ಮತ್ತು ಸಶಕ್ತಿಕರಣಕ್ಕಾಗಿ ಶಿಕ್ಷಣದ ಅಗತ್ಯತೆಯನ್ನು ಪ್ರತಿಪಾದಿಸಿ ರಾಜ್ಯಮಟ್ಟದಲ್ಲಿ ಶಿಕ್ಷಣದ ಘಟಕಗಳು ಸಂಶೋಧನಾ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳನ್ನು ಸ್ಥಾಪಿಸುವಂತೆ ಸಲಹೆ ನೀಡಿತು. 'ನ್ಯಾಷನ್ ಫಾರ್ ಸ್ಟೆರ್ಟೇವ್ ಪ್ಲಾನ್ ಫಾರ್ ವುಮೆನ್ 1988-2000' ಸ್ತ್ರೀಶಿಕ್ಷಣ ಅಭಿವೃದ್ಧಿ, ಶಿಕ್ಷಣದಲ್ಲಿ ಸ್ತ್ರೀಯರಿಗೆ ಮೀಸಲಾತಿ, ಸ್ತ್ರೀಯರಿಗೆ ಪ್ರತ್ಯೇಕ ಶಾಲೆ, ಸ್ತ್ರೀಶಿಕ್ಷಕರ ನೇಮಕ, ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡುವುದು.ಉನ್ನತ ಶಿಕ್ಷಣದಲ್ಲಿ ಹುಡುಗಿಯರಿಗೆ ಮೀಸಲಾತಿ, ಮೊದಲಾದ ಸಲಹೆಗಳನ್ನು ನೀಡಿತು. ಈ ಎಲ್ಲಾ ಸಮಿತಿಗಳು ಸ್ವಾಸಂತ್ರ್ಯಾನಂತರದ ಭಾರತದಲ್ಲಿ ಸ್ತ್ರೀ ಶಿಕ್ಷಣಕೆ ಸಂಬಂಧಿಸಿದಂತೆ ಹೊಸ ಸಾಧ್ಯತೆಗಳನ್ನು ಹುಟ್ಟು ಹಾಕಿತು ಸಂಪೂರ್ಣವಾಗಿಯಲ್ಲವಾದರೂ ಬಹುಮಟ್ಟಿಗೆ ಸಮಿತಿಗಳ ಶಿಫಾರಸ್ಸುಗಳನ್ನು ಸ್ತ್ರೀಶಿಕ್ಷಣದಲ್ಲಿ ತರುವ ಪ್ರಯತ್ನವನ್ನು ಮಾಡಲಾಗಿದೆ.

ಪಾವಗಡ ತಾಲ್ಲೂಕಿನಲ್ಲಿ ಗ್ರಾಮೀಣ ಭಾಗದಲ್ಲಿ ಶೇ 75 ರಷ್ಟು ಪುರುಷರು ಸಾಕ್ಷರರಾಗಿದ್ದರೆ, ಮಹಿಳೆಯರ ಪ್ರಮಾಣ ಶೇ 53.69 ಮಾತ್ರ. ಗ್ರಾಮೀಣ ಭಾಗದಲ್ಲಿ ಬಹುತೇಕವಾಗಿ ನೆಲೆಸಿರುವ ಕಾಡುಗೊಲ್ಲ ಬುಡಕಟ್ಟಿನ ಹಟ್ಟಿಗಳು ಅನಕ್ಷರತೆಗೆ ತಮ್ಮ ಕೊಡುಗೆಯನ್ನು ನೀಡಿವೆ. ಇಡೀ ಜಿಲ್ಲೆಯಲ್ಲಿ ಪಾವಗಡ ತಾಲ್ಲೂಕಿನ ಗ್ರಾಮೀಣ ಮಹಿಳೆಯ ಸಾಕ್ಷರತೆಯ ಪ್ರಮಾಣ ಕಡಿಮೆಯಿದ್ದು, ತಾಲ್ಲೂಕಿನ ಅರ್ಧವಷ್ಟು ಮಹಿಳೆಯರು ಸಾಕ್ಷರರಲ್ಲದಿರುವುದು ಕಂಡುಬರುತ್ತದೆ. ತಾಲ್ಲೂಕಿನ ಹಿಂದುಳಿಕೆಗೆ ಇದೂ ಒಂದು ಕಾರಣವಾಗಿದೆ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳಾ ಶಿಕ್ಷಣಕ್ಕೆ ಆದ್ಯತೆಯಿಲ್ಲ. ಇಲ್ಲಿ ಶಿಕ್ಷಣವು ಹಟ್ಟಿಯ ಬದುಕಿನ ಆಚೆಗೆ ಮಹಿಳೆಯರನ್ನು ಆಕರ್ಷಿಸುವುದರಿಂದ ಸ್ತ್ರೀಶಿಕ್ಷಣದ ಬಗೆಗೆ ನಿರ್ಲಕ್ಷ್ಯವಿದೆ. ಅಲ್ಲದೆ ಕಾಡುಗೊಲ್ಲರ ಆರ್ಥಿಕ ಪರಿಸ್ಥಿತಿಗಳು, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳು ಸ್ತ್ರೀ ಶಿಕ್ಷಣಕ್ಕೆ ಮುಕ್ತ ಅವಕಾಶವನ್ನು ಕಲ್ಪಿಸಲಾರವಾಗಿದೆ. ಇಲ್ಲಿನ ಪುರುಷನ ಶಿಕ್ಷಣಕ್ಕೆ ಪ್ರೋತ್ಸಾಹವಿದೆ.ಆದರೂ ಪುರುಷರು ಶಿಕ್ಷಣದ ಬಗ್ಗೆ ನಿರಾಸಕ್ತಿಯನ್ನು ಹೊಂದಿದ್ದಾರೆ. ಶಿಕ್ಷಣದ ವಿಚಾರದಲ್ಲಿ ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳೆ ಮತ್ತು ಪುರುಷರ ನಡುವೆ ಅಸಮಾನತೆಗಳಿವೆ.

ಸಂವಿಧಾನವು ಭಾರತೀಯರೆಲ್ಲರಿಗೂ ಸ್ವಾತಂತ್ರ್ಯಾನಂತರ ಶೈಕ್ಷಣಿಕ ಹಕ್ಕನ್ನು ನೀಡಿತು.ಸರ್ಕಾರವು ತನ್ನ ಶಾಸನಾತ್ಮಕ ಕಾನೂನಿನ ಮೂಲಕ 14 ವರ್ಷದವರೆಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಘೋಷಿಸಿತು. ಬಾಲಕಾರ್ಮಿಕರ ಪದ್ಧತಿಯನ್ನು ನಿಷೇಧಿಸಿತು.ಈ ಎಲ್ಲಾ ಪ್ರಯತ್ನಗಳು ಭಾರತೀಯರಾದ ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರ ಬದುಕನ್ನು ಪ್ರವೇಶಿಸಿಲ್ಲ. ಪ್ರವೇಶಿಸಿದ್ದರೂ ಅದರ ಪ್ರತಿಫಲವನ್ನು ಪಡೆದಿರುವ ಮಹಿಳೆಯರ ಸಂಖ್ಯೆಯ ಪ್ರಮಾಣ ಬೆರಳೆಣಿಕೆಯಷ್ಟರದು.ಕಾಡುಗೊಲ್ಲ ಬುಡಕಟ್ಟು ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಮಹಿಳೆಯರು ಶಿಕ್ಷಣದ ಉನ್ನತ ಅಂಚನ್ನು ತಲುಪಲು ಇಂದಿಗೂ ಸಾಧ್ಯವಾಗಿಲ್ಲ.

ಕಾಡುಗೊಲ್ಲ ಬುಡಕಟ್ಟಿನೊಳಗೆ ಪ್ರಾಥಮಿಕ ಶಿಕ್ಷಣ ಮತ್ತು ಅಂಗನವಾಡಿ ಕೇಂದ್ರಗಳಿರುವುದರಿಂದ ಬುಡಕಟ್ಟಿನ ಹುಡುಗ ಮತ್ತು ಹುಡುಗಿಯರಿಬ್ಬರು ಇಂದು ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನು ಹೊಂದಿರುತ್ತಾರೆ. ಪ್ರತಿಹಟ್ಟಿಯಲ್ಲಿಯೂ ಕಾಡುಗೊಲ್ಲರಿಗೇ ಪ್ರಾಥಮಿಕ ಶಾಲೆಯನ್ನು ತೆರೆದಿರುವುದು ಹೆಚ್ಚು ಪ್ರಯೋಜನಕಾರಿಯಾಗಿದೆ. ಈ ಶಾಲೆಗಳು ಕಾಡುಗೊಲ್ಲ ಬುಡಕಟ್ಟಿನ ವಿದ್ಯಾರ್ಥಿಗಳನ್ನು ಅಕ್ಷರಸ್ಥರನ್ನಾಗಿಸಲು ಶ್ರಮವಹಿಸಿವೆ. ಪ್ರಾಥಮಿಕ ಶಿಕ್ಷಣ ನೀಡಿಕೆಯಲ್ಲಿ ಬುಡಕಟ್ಟಿನೊಳಗೆ ಯಾವುದೇ ತಾರತಮ್ಯಗಳಿಲ್ಲ. ಹಟ್ಟಿಯಲ್ಲಿರುವ ಹುಡುಗ ಹುಡುಗಿಯರೆಲ್ಲರೂ ತಮ್ಮದೇ ಹಟ್ಟಿಯಲ್ಲಿರುವ ಪ್ರಾಥಮಿಕ ಶಾಲೆಗೆ ತೆರಳಿ ವಿದ್ಯಾಭ್ಯಾಸ ಮಾಡುತ್ತಾರೆ. ಪ್ರಾಥಮಿಕ ಶಾಲೆಯ ಶಿಕ್ಷಣ ವ್ಯವಸ್ಥೆಯಲ್ಲಿ ತಾರತಮ್ಯಗಳಲ್ಲದಿರಲು ಈ ಕೆಳಗಿನ ಕಾರಣಗಳನ್ನು ಗುರುತಿಸಬಹುದು.

1. ಹಟ್ಟಿಯ ಒಳಗೇ ಇರುವ ಪ್ರಾಥಮಿಕ ಶಾಲೆಗಳು.
2. ಪ್ರಾಥಮಿಕ ಶಾಲೆಗೆ ತೆರಳಲು ಸಾರಿಗೆ ವೆಚ್ಚ ಭರಿಸಬೇಕಾದ ಅನಿವಾರ್ಯತೆ ಇಲ್ಲದಿರುವುದು.
3. ಪ್ರಾಥಮಿಕ ಶಾಲೆಯಲ್ಲಿ ದೊರೆಯುವ ಉಚಿತ ಶಿಕ್ಷಣ.
4. ಉಚಿತ ಶಿಕ್ಷಣದ ಜೊತೆಗೆ ದೊರೆಯುವ ಬಿಸಿಯೂಟ, ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ.

5. ವಿದ್ಯಾಭ್ಯಾಸ ಆರ್ಥಿಕ ಹೊರೆ ಎನಿಸದಿರುವುದು.
6. ಹುಡುಗಿಯರು ಮನೆಕೆಲಸ ಅಥವಾ ಹೊರಗಿನ ಕೆಲಸ ಮಾಡುವಷ್ಟು ವಯಸ್ಕರಾಗಿಲ್ಲದಿರುವುದು.
7. ಓದು-ಬರಹ ಇಂದಿನ ಕಾಲದಲ್ಲಿ ತಿಳಿದಿರಬೇಕೆಂಬ ಅರಿವು.
8. ಹೆಣ್ಣು ಮಕ್ಕಳು ವಿದ್ಯಾಭ್ಯಾಸಕ್ಕೆ ಹಟ್ಟಿ ಆಚೆಗೆ ಹೋಗಬೇಕಾಗದೆ ಇರುವುದು.
9. ವಿದ್ಯಾರ್ಥಿನಿಯರಿಗೆ ದೊರೆಯುವ ವಿದ್ಯಾರ್ಥಿವೇತನ.
10. ಮಧ್ಯದಲ್ಲಿ ಶಾಲೆ ತೊರೆದರೂ ವಿದ್ಯಾಭ್ಯಾಸ ಮುಂದುವರಿಸಲು 'ಮರಳಿ ಬಾ ಶಾಲೆ' ಕಾರ್ಯಕ್ರಮದ ಮೂಲಕ ಅವಕಾಶ ನೀಡುವುದು.

ಈ ಕಾರಣಗಳಿಂದ ಇಂದಿನ ಕಾಡುಗೊಲ್ಲ ತರುಣಿಯರು, ಮಧ್ಯವಯಸ್ಕರು ಪ್ರಾಥಮಿಕ ಶಾಲೆಯವರೆಗೂ ಓದಿಕೊಂಡಿರುತ್ತಾರೆ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಪ್ರೌಢಶಿಕ್ಷಣಕ್ಕೆ ಪ್ರೋತ್ಸಾಹವಿಲ್ಲ. ಇಲ್ಲಿನ ಮಹಿಳೆಯರು ಪ್ರೌಢಶಿಕ್ಷಣ ವಂಚಿತರಾಗಿರುವುದು ಹೆಚ್ಚಾಗಿಯೇ ಇದೆ.ಇದಕ್ಕೆ ಕುಟುಂಬದ ಆರ್ಥಿಕ ಸ್ಥಿತಿ, ಸಾಮಾಜಿಕ ಆಚಾರಗಳು, ಸಾಂಸ್ಕೃತಿಕ ಸಂಗತಿಗಳು ಕಾರಣವಾಗಿದೆ. ಬುಡಕಟ್ಟಿನ ಹಟ್ಟಿಯೊಳಗೆ ಪ್ರೌಢಶಿಕ್ಷಣ ನೀಡುವ ಶಾಲೆಗಳು ವಿರಳ. ಪ್ರೌಢಶಿಕ್ಷಣ ಪಡೆಯುವ ಮಕ್ಕಳ ಸಂಖ್ಯೆ ಪ್ರಮಾಣ ಕಡಿಮೆ ಇರುವುದರಿಂದ ಹೋಬಳಿ, ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಪ್ರೌಢಶಾಲೆಗಳನ್ನು ತೆರೆಯಲಾಗಿದೆ. ಪ್ರೌಢಶಾಲೆಗೆ ತೆರಳಲು ಕಾಡುಗೊಲ್ಲ ಮಹಿಳೆಯರು ಆರ್ಥಿಕ ಶ್ರಮಪಡಬೇಕಾಗುತ್ತದೆ. ಕೆಲವು ದೈಹಿಕ ಶ್ರಮವೂ ಉಂಟಾಗುತ್ತದೆ. ಜೀವನಕ್ಕೆ ಕಷ್ಟವಿರುವ ಕಾಡುಗೊಲ್ಲರು ವೆಚ್ಚ ಭರಿಸಿ ಮಹಿಳೆಯರಿಗೆ ಪ್ರೌಢಶಿಕ್ಷಣ ಕೊಡಿಸುವಲ್ಲಿ, ಉತ್ಸುಕರಾಗಿಲ್ಲ. ಒಂದು ವೇಳೆ ವೆಚ್ಚರಹಿತವಾಗಿ ಪ್ರಾಥಮಿಕ ಶಿಕ್ಷಣದಂತೆ ಹಟ್ಟಿ ಸಮೀಪವೆ ದೊರೆತರೆ ಹುಡುಗಿಯರನ್ನು ಪ್ರೌಢಶಾಲೆಗೆ ಕಳುಹಿಸುವ ಪ್ರಯತ್ನಮಾಡುತ್ತಾರೆ.ಕಾಡುಗೊಲ್ಲ ಮಹಿಳೆಯರು ಪ್ರೌಢಶಾಲಾ ಶಿಕ್ಷಣದಿಂದ ವಂಚಿತರಾಗಲು ಪ್ರಮುಖ ಕಾರಣಗಳನ್ನು ಹೀಗೆ ಪಟ್ಟಿಮಾಡಬಹುದು.

1. ಹಟ್ಟಿಯೊಳಗೆ ಪ್ರೌಢಶಾಲೆಗಳು ಸಾಮಾನ್ಯವಾಗಿ ಇಲ್ಲ.
2. ಬಸ್‌ಗೆ ಚಾರ್ಜ್ ನೀಡಿ ದಿನನಿತ್ಯವೂ ವೆಚ್ಚಮಾಡುವ ಶಕ್ತಿ ಇಲ್ಲದ ಕಾರಣ.
3. ಪ್ರೌಢಶಾಲೆಗೆ ತೆರಳಲು ನಡದೇ ಹೋಗಬೇಕಾದ ಸಂದರ್ಭ, ಅದರಿಂದ ಎದುರಿಸಬೇಕಾದ ಭಯ, ಆತಂಕ ಮತ್ತು ದೈಹಿಕ ಆಯಾಸ.

4. ಪ್ರೌಢಶಾಲೆಗೆ ಬರುವ ವೇಳೆಗೆ ಹುಡುಗಿಯರು ಮನೆಕೆಲಸ ಮತ್ತು ಕೂಲಿ ಮತ್ತಿತ್ತರ ದುಡಿಮೆ ಮಾಡುವ ವಯಸ್ಕರಾಗುವುದರಿಂದ.
5. ಪ್ರೌಢಶಾಲೆಯ ಹಂತದಲ್ಲಿ ಹೆಣ್ಣುಮಕ್ಕಳು ಋತುಮತಿಯರಾಗುವುದರಿಂದ.
6. ಬುಡಕಟ್ಟಿನಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ಬಾಲ್ಯವಿವಾಹ.
7. ಶಿಕ್ಷಣದ ಬಗೆಗಿರುವ ಅಸಡ್ಡೆ ದುಡಿಮೆಯ ಬಗೆಗಿನ ಆಸಕ್ತಿ.
8. ಓದಲು ಕಳುಹಿಸಿದಾಗ ಪ್ರೀತಿ-ಪ್ರೇಮಕ್ಕೆ ಬಲಿಯಾಗುತ್ತಾರೆಂಬ ಭಯ.

ಪ್ರೌಢಶಾಲಾ ಶಿಕ್ಷಣದಲ್ಲು ಉಚಿತ ಶಿಕ್ಷಣ ಮತ್ತು ಸವಲತ್ತುಗಳು ಲಭ್ಯವಿವೆ ಹಾಗೂ ಶಾಲೆಗೆ ತೆರಳಲು ಬೈಸಿಕಲ್ ನೀಡಿಯೂ ಪ್ರೋತ್ಸಾಹ ನೀಡಲಾಯಿತು. ಸವಲತ್ತು ಪಡೆದು ಕೆಲವೊಮ್ಮೆ ಶಾಲೆ ಬಿಡುವುದು ಮದುವೆಯ ಕಾರಣಕ್ಕೆ ಮನೆಕೆಲಸದ ಕಾರಣಕ್ಕೆ, ಬಡತನ ಕಾರಣಕ್ಕೆ ಪ್ರೌಢಶಾಲೆಯನ್ನು ತೊರೆಯುವುದು ಕಾಡುಗೊಲ್ಲ ಮಹಿಳೆಯರಲ್ಲಿ ಕಂಡುಬರುತ್ತದೆ.

ಉನ್ನತ ಶಿಕ್ಷಣವೆಂಬುದು ಕಾಡುಗೊಲ್ಲ ಮಹಿಳೆಯರು ಇಂದಿಗೂ ಮುಟ್ಟಲಾರದ ದಿಗಂತವಾಗಿಯೇ ಉಳಿದಿದೆ.ಕನಿಷ್ಟವೆಂದರೆ ಉನ್ನತ ಶಿಕ್ಷಣ ಪಿ.ಯು.ಸಿ.ವರೆಗೆ ಸಾಗುತ್ತದೆ.ಅನಂತರ ಓದು ನಿಂತು ಅವರ ಜೀವನಲ್ಲಿ ವಿವಾಹ ಮತ್ತು ದುಡಿಮೆ ಕಾಲಿಡುತ್ತವೆ. ಉನ್ನತಶಿಕ್ಷಣದಿಂದ ವಂಚಿತಳಾಗಿರುವುದು ಮಹಿಳೆಯರ ಇಂದಿನ ಸ್ಥಿತಿಗೆ ಕಾರಣವಾಗಿದೆ.ಉನ್ನತ ಶಿಕ್ಷಣದಿಂದ ಹೊಂದಬಹುದಾದ ಅರಿವು, ಹೊಸ ಉದ್ಯೋಗ, ಹೆಚ್ಚಿನ ವೇತನ, ಯಾವುವೂ ಇಲ್ಲವಾಗಿ ಬುಡಕಟ್ಟಿನೊಳಗೆ ಅಸಮಾನ ನೆಲೆಗಳು ಉಳಿದುಕೊಳ್ಳಲು ಕಾರಣವಾಗಿದೆ.ಪ್ರೌಢಶಿಕ್ಷಣವೇ ಪ್ರಯಾಸದಿಂದಗಳಿಸಿ ಪಿ.ಯು.ಸಿ.ವರೆಗೆ ವಿದ್ಯೆ ಮುಂದುವರೆಸುವುದೇ, ಬಹುದೊಡ್ಡ ಸವಾಲಾಗಿರುವುದರಿಂದ ಅಲ್ಲಿಂದ ಮುಂದೆ ಸಾಗಲು ಬುಡಕಟ್ಟಿನ ಸಮಾಜದ ಮಾತ್ರವಲ್ಲ ಸರ್ಕಾರದ ನೆರವು ಅಗತ್ಯವಾಗಿ ಬೇಕಾಗಿದೆ. ಪಿ.ಯು.ಸಿ. ವರೆಗೆ ಓದುವ ಹೆಣ್ಣುಮಕ್ಕಳಿಗೆ ಮುಂದೆ ಉನ್ನತಶಿಕ್ಷಣ ಇಲ್ಲವೆ ವೃತ್ತಿಪರ ಶಿಕ್ಷಣ ಹೊಂದುವ ಅನುಕೂಲಗಳು ಇಲ್ಲದಿರುವುದರಿಂದ ಹೊಸ ಅರಿವು ಇಲ್ಲವಾಗಿ ಹೊಸ ಬದುಕಿನ ಸಾಧ್ಯತೆಗಳು ಇಲ್ಲವಾಗಿ, ಈ ಬುಡಕಟ್ಟಿನ ಮಹಿಳೆಯರು ಸಾಂಪ್ರದಾಯಿಕ ಬದುಕು ಮತ್ತು ದುಡಿಮೆಯಲ್ಲೆ ಮುಂದುವರಿಯಬೇಕಾಗಿದೆ.ಬುಡಕಟ್ಟಿನೊಳಗಿನ ಮೌಢ್ಯವನ್ನು ಪ್ರಶ್ನಿಸುವ ಅರಿವು ಆತ್ಮವಿಶ್ವಾಸವನ್ನು ಶಿಕ್ಷಣ ನೀಡದಿರುವುದು ಬುಡಕಟ್ಟಿನೊಳಗೆ ಮೌಢ್ಯಗಳು ಉಳಿಯುವಂತೆ ಮಾಡಿವೆ.

ಕಾಡುಗೊಲ್ಲ ಮಹಿಳೆಯರು ಉನ್ನತಶಿಕ್ಷಣ ವಂಚಿತರಾಗಲು ಕೆಲವು ಕಾರಣಗಳನ್ನು ಹೀಗೆ ಗುರಿತಿಸಬಹುದು.

ಕಾಡುಗೊಲ್ಲ ಕುಟುಂಬಗಳು ಆರ್ಥಿಕವಾಗಿ ಸಂಕಷ್ಟವನ್ನು ಎದುರಿಸುತ್ತಿದೆ.ಈ ಹೊತ್ತಿನಲ್ಲಿ ವೆಚ್ಚದಾಯಕವಾದ ಉನ್ನತ ಶಿಕ್ಷಣವನ್ನು ಕೊಡಿಸುವ ಸ್ಥಿತಿಯಲ್ಲಿ ಈ ಕುಟುಂಬಗಳು ಇಲ್ಲ. ಮನೆಯಲ್ಲಿ ವಯಸ್ಕರು ದುಡಿಮೆಗಾರರಾಗಬೇಕಾದದು ಅನಿವಾರ್ಯವಾಗಿದೆ.ಹಾಗೆಯೇ ಪಿಯುಸಿವರೆಗೆ ಓದಿರುವ ಮಕ್ಕಳು ಕೂಲಿ ಮತ್ತಿತರ ಕೆಲಸಗಳಿಗೆ ಹೋಗದಿರುವುದರಿಂದ ಶಿಕ್ಷಣ ಕೊಡಿಸಲೇ ಹಿಂದು-ಮುಂದು ನೋಡುವ ಪರಿಸ್ಥಿತಿ ಇದೆ.

ಕುಟುಂಬದ ಸದಸ್ಯರು ದುಡಿಮೆಗೆ ತೆರಳಿದರೆ ಮನೆಕೆಲಸ ನಿರ್ವಹಿಸಲು ಈ ಹೆಣ್ಣು ಮಕ್ಕಳು ನಿಯಮಿಸಲ್ಪಡುತ್ತಾರೆ.ಪ್ರಾಪ್ತ ವಯಸ್ಕರಾದವರನ್ನು ಮನೆಯಲ್ಲಿಯೇ ಉಳಿಸಲು ಕುಟುಂಬಗಳು ಹೆಚ್ಚು ಆಸಕ್ತಿ ವಹಿಸುವುದು ಇದೆ.

ಉನ್ನತಶಿಕ್ಷಣಕ್ಕೆ ನಗರ ಪಟ್ಟಣಕ್ಕ ತೆರಬೇಕು ಕೆಲವೊಮ್ಮೆ ಅಲ್ಲಿಯೇ ಉಳಿಯಬೇಕು ಇದಕ್ಕೆ ತಗುಲುವ ವೆಚ್ಚ ತಮ್ಮ ಆದಾಯವನ್ನು ಮೀರಿದ್ದರಿಂದ ಉನ್ನತಶಿಕ್ಷಣದ ಬಗ್ಗೆ ಯೋಚಿಸುವುದೂ ಇಲ್ಲ.

ಶಿಕ್ಷಣಕ್ಕೆ ಕಲಿಸಿದ ಹೆಣ್ಣು ಪ್ರೀತಿ ಪ್ರೇಮಕ್ಕೆ ಒಳಗಾಗಿ ಅಂತರ್ಜಾತಿ ವಿವಾಹವಾಗುವುದರಿಂದ ಕುಲ ಕೆಡುತ್ತದೆ ಎಂಬ ಭಯದ ಕಾರಣ ಉನ್ನತಶಿಕ್ಷಣಕ್ಕೆ ಕಳಿಸದಿರುವುದು.

ಶಿಕ್ಷಣಕ್ಕಿಂತ ವಿವಾಹವು ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಈ ಬುಡಕಟ್ಟಿನಲ್ಲಿ ನಡಸಲೇ ಬೇಕಾದ ಸಂಗತಿಯಾದ್ದರಿಂದ ವಿವಾಹ ಮಾಡಲು ಉತ್ಸುಕರೇ ಹೊರತು ಶಿಕ್ಷಣ ನೀಡುವುದಕ್ಕಲ್ಲ.

ಪೋಷಕರು ಉನ್ನತ ಶಿಕ್ಷಣಕ್ಕೆ ಯಾವುದೇ ಪ್ರೋತ್ಸಾಹ ಒತ್ತಡವನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೀಡುವುದಿಲ್ಲ ಅವೆಲ್ಲಾ ಗಂಡು ಮಕ್ಕಳ ಶಿಕ್ಷಣಕ್ಕೆ ಸೀಮಿತ.

ಉನ್ನತಶಿಕ್ಷಣ ಹೊಂದಲು ಮಹಿಳೆಯರು ಆಸಕ್ತರಾಗಿದ್ದಾರೆ. ಉತ್ಸುಕರಾಗಿದ್ದಾರೆ. ಅದಕ್ಕೆ ಪೂರಕ ವಾತಾವರಣ ಇಲ್ಲ.

ಪಿಯುಸಿವರೆಗೆ ಕನ್ನಡ ಮಾಧ್ಯಮದಲ್ಲಿ ಪಡೆಯುವ ಶಿಕ್ಷಣ. ಗುಣಮಟ್ಟವಲ್ಲದ ಶಿಕ್ಷಣದಿಂದ ಕೀಳರಿಮೆ ಉಂಟಾಗಿ ಉನ್ನತ ಶಿಕ್ಷಣ ಪಡೆಯಲು ಹಿಂಜರಿಕೆ, ಕಾರಣವಾಗಿದೆ.

ಈ ಸಂಗತಿಗಳು ಮಹಿಳೆಯರಿಗೆ ಉನ್ನತ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸುವ ಅನಿವಾರ್ಯತೆಯನ್ನು ಒತ್ತಿ ಹೇಳುತ್ತವೆ.

ಇದುವರೆಗೂ ಗಮನಿಸಿದ ಪ್ರಾಥಮಿಕ, ಪ್ರೌಢ, ಉನ್ನತ ಶಿಕ್ಷಣವು ಔಪಚಾರಿಕ ಶಿಕ್ಷಣವನ್ನು ಕುರಿತದ್ದು, ಇಂದಿನ ಶೈಕ್ಷಣಿಕ ವ್ಯವಸ್ಥೆಯು ಔಪಚಾರಿಕವಾಗಿಯೇ ಇರುವುದರಿಂದ ಸಮಾಜದಲ್ಲಿ ಉತ್ತಮ ಸ್ಥಾನ-ಮಾನಗಳಿಗಾಗಿ ಈ ಶಿಕ್ಷಣ ಹೊಂದಲೇಬೇಕಾಗುತ್ತದೆ. ಬುಡಕಟ್ಟಿನ ಮಹಿಳೆಯು ಅನೌಪಚಾರಿಕವಾಗಿ ಸ್ಥಳೀಯವಾಗಿ ಕೌಶಲ್ಯಭರಿತ ಅನೌಪಚಾರಿಕ ಶಿಕ್ಷಣ ಪಡೆದಿದ್ದಾರೆ.ಈ ಶಿಕ್ಷಣ ದುಡಿಮೆಯ ಕಾರಣದಿಂದ ಗಳಿಸಿಕೊಂಡಿರುವಂತದ್ದು ಮತ್ತು ಪಾರಂಪರಿಕವಾದದ್ದು.ಸ್ಥಳೀಯವಾಗಿ ನಿರ್ವಹಿಸುವ ವ್ಯವಸಾಯ, ಕೂಲಿ, ಕಡಲೆಕಾಯಿ ಬೀಜ ಸಂಸ್ಕರಣೆ ಒಂದು ರೀತಿಯಲ್ಲಿ ಕೌಟುಂಬಿಕವಾಗಿ ದೊರೆಯುವ ಅನೌಪಚಾರಿಕ ಶಿಕ್ಷಣವಾಗಿದೆ.ಈ ಶಿಕ್ಷಣದಿಂದ ಮುಂದೆ ಉದ್ಯೋಗ, ದುಡಿಮೆ ಸಾಧ್ಯವಾಗಿ ಲಾಭ ಬರುತ್ತದೆ.ಆದರೆ ಔಪಚಾರಿಕ ಶಿಕ್ಷಣದಲ್ಲಿ ಪ್ರಾಥಮಿಕ ಪ್ರೌಢಶಾಲೆ ಹೆಚ್ಚೆಂದರೆ ಪಿಯುಸಿಗೆ ಕೊನೆಗೊಳ್ಳುವ ಶಿಕ್ಷಣ ಒಂದು ರೀತಿಯಲ್ಲಿ ನಿರುದ್ಯೋಗವನ್ನು ಸೃಷ್ಟಿಮಾಡುತ್ತಿದೆ.ಓದಿದ ಹೆಣ್ಣುಮಕ್ಕಳು ಉತ್ತಮ ಉದ್ಯೋಗವನ್ನು ಪಡೆಯಲು ಸಾಧ್ಯವಾಗದೆ ಕೂಲಿಗೂ ಹೋಗಲಾಗದೆ ಮನೆಯಲ್ಲಿಯೇ ಉಳಿಯುತ್ತಾರೆ.ಇದರಿಂದಾಗಿ ಬುಡಕಟ್ಟಿನಲ್ಲಿ ಔಪಚಾರಿಕ ಶಿಕ್ಷಣಕ್ಕಿಂತ ಅನೌಪಚಾರಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಕಾಡುಗೊಲ್ಲ ಮಹಿಳೆಯರಲ್ಲೂ ಉನ್ನತ ಶಿಕ್ಷಣ ಹೊಂದಿರುವವರು, ಶಿಕ್ಷಕಿಯಾಗಿರುವವರು, ಎಂಜಿನಿಯರಿಂಗ್, ಎಲ್.ಎಲ್.ಬಿ. ಓದಿರುವವರು ಇದ್ದಾರೆ.ಅವರೆಲ್ಲರೂ ಪಟ್ಟಣ ಸೇರಿರುವ ಅಥವಾ ಅಕ್ಷರಸ್ಥ ಕುಟುಂಬದಿಂದ ಬಂದಿರುವ 5-6 ರಿಂದ ಹೆಣ್ಣು ಮಕ್ಕಳು ಮಾತ್ರ ಉಳಿದಂತೆ ಬಹುಪಾಲು ಹೆಣ್ಣುಮಕ್ಕಳು ಕನಿಷ್ಠ ಪಿಯುಸಿ ಗರಿಷ್ಠ ಬಿ.ಎ. ಪದವಿಯನ್ನು ಹೊಂದಿರುತ್ತಾರೆ.ಕೆಲವೊಮ್ಮೆ ಸ್ನಾತಕಪೂರ್ವಪದವಿಯು ಇಂಗ್ಲೀಷ್‌ನ ಕಬ್ಬಿಣದ ಕಡಲೆಯಿಂದಾಗಿ ಪೂರ್ತಿಯಾಗದೆ ಹಾಗೆಯೇ ಉಳಿದು ಕೊಂಡುಬಿಟ್ಟಿದೆ.

ಕಾಡುಗೊಲ್ಲ ಮಹಿಳೆಯರನ್ನು ಶಿಕ್ಷಣ, ಓದಿದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿದಾಗ ವಿಭಿನ್ನ ರೀತಿಯ ಮಾಹಿತಿಯು ದೊರೆಯಿತು. ಪ್ರಾಥಮಿಕ ಶಾಲೆಗೆ ಕೊನೆಗೊಳಿಸಿದ (ವಿದ್ಯಾಭ್ಯಾಸ) ಹಿರಿಯ ಕಾಡುಗೊಲ್ಲ ಮಹಿಳೆಯರಲ್ಲಿ ಶಿಕ್ಷಣ ಓದಿಗೆ ಯಾವುದೇ ಆಸಕ್ತಿ ವ್ಯಕ್ತವಾಗಲಿಲ್ಲ. ದುಡಿಮೆ ಕಡೆಗೆ ಹೆಚ್ಚು ಒತ್ತು ನೀಡುವ ಮಾತನಾಡಿದರು. ಯಾರು ಪ್ರಾಥಮಿಕ ಪ್ರೌಢಶಾಲೆಯನ್ನು ಪಿಯುಸಿವರೆಗೆ ಓದಿ ಮನೆಯಲ್ಲಿರುವ ಹೆಣ್ಣು ಮಕ್ಕಳು ದುಡಿಮೆಗಿಂತ ಓದಲು ಉತ್ಸುಕರಾಗಿದ್ದರು. ಮನೆಯವರು ಓದಿಸಲು ಕಳಿಸದೆ ಇರುವ ಕಾರಣದಿಂದ ಮನೆಯಲ್ಲಿಯೇ ಉಳಿಯ ಬೇಕಾಗಿರುವುದಕ್ಕೆ ಸಂಕಟ ಪಟ್ಟರು. ಅಲ್ಲದೆ ಸಂಬಂಧಿಕರೊಂದಿಗೆ ಗೊತ್ತಾಗಿರುವ ವಿವಾಹದ ಬಗೆಗೂ ಅಸಹನೆ ವ್ಯಕ್ತಪಡಿಸುತ್ತಾ ಖರ್ಚಿಟ್ಟು ಓದಿಸಿದರೆ ಓದುವ ಬಯಕೆಯನ್ನು ವ್ಯಕ್ತಪಡಿಸಿದರು.ಓದಲು ಅವರು ಉತ್ಸುಕರಾಗಿದ್ದು, ಪ್ರೋತ್ಸಾಹವಿಲ್ಲದ ಕಾರಣ ದುಡಿಮೆಯಡೆಗೆ ಮುಖಮಾಡಿದ್ದಾರೆ. ಕನಿಷ್ಠ ಪ್ರೌಢಶಾಲೆ ಓದಿರುವ ಮಕ್ಕಳು ಉದ್ಯೋಗಕ್ಕಾಗಿ ವಲಸೆ ಹೋಗುತ್ತಿದ್ದಾರೆ.ಉದ್ಯೋಗಕ್ಕಾದರೆ ದೂರದ ಬೆಂಗಳೂರಿಗೆ ಕಳುಹಿಸಲು ತಯಾರಿರುವ ಈ

ಬುಡಕಟ್ಟು ಶಿಕ್ಷಣಕ್ಕೆ ಅಷ್ಟು ದೂರ ಕಳುಹಿಸಲು ಹಿಂಜರಿಯುತ್ತದೆ. ಇಂದು ಬುಡಕಟ್ಟಿನ ಹಟ್ಟಿಗಳು ಊರಿಗೆ ಸಮೀಪವಾಗಿರುವುದರಿಂದ ನಾಗರೀಕತೆಯ ಅರಿವಾಗಿ ತಾವು ಅಂತೆಯೇ ಇರಲು ಬಯಸುತ್ತಾರೆ. ಅದಕ್ಕೆ ಪೂರಕವಾಗಿ ವ್ಯಾಪಾರ, ಉದ್ದಿಮೆ, ಉಡುಗೆ-ತೊಡುಗೆ, ಜೀವನ ವಿಧಾನದಲ್ಲಿ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ ಹಾಗೆಯೇ ಶಿಕ್ಷಣದ ವಿಚಾರದಲ್ಲೂ ಬದಲಾಗುತ್ತಿದ್ದಾರೆ.ಇತ್ತೀಚೆಗೆ ತಮ್ಮ ಬುಡಕಟ್ಟಿನ ಮಹಿಳೆಯರಿಗೂ ಶಿಕ್ಷಣ ಕೊಡಿಸಬೇಕೆಂಬ ಅರಿವು ಉಂಟಾಗಿದೆ.ಈ ಅರಿವು ಪ್ರಯೋಗಕ್ಕೆ ಬರಲು ಇನ್ನೂ ಕೆಲವು ವರ್ಷಗಳಾದರೂ ಹಿಡಿಯುತ್ತದೆ.ಅಲ್ಲಿಯವರೆಗೂ ಕಾಯದೆ ವಿಧಿಯಿಲ್ಲ.

ಕಾಡುಗೊಲ್ಲ ಮಹಿಳಾ ರಾಜಕೀಯ ಅಧಿಕಾರಗಳು

"ಎಲ್ಲಿ ಪರಮಾಧಿಕಾರವು ಜನರ ಕೈಯಲ್ಲಿದೆಯೋ ಅದೇ ಪ್ರಜಾಪ್ರಭುತ್ವ" ಎನ್ನುತ್ತಾನೆ ಅರಿಸ್ಟಾಟಲ್. ಅಬ್ರಹಾಂ ಲಿಂಕನ್ ನೀಡಿರುವ ವಿಶ್ವಮಾನ್ಯ ವ್ಯಾಖ್ಯೆಯಾದ "ಪ್ರಜಾಪ್ರಭುತ್ವವೆಂದರೆ ಪ್ರಜೆಗಳು ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಸುವ ಸರ್ಕಾರ" ಎಂಬುದು ಪ್ರಜಾಪ್ರಭುತ್ವ ಆಡಳಿತದ ಜನರ ಪಾಲ್ಗೊಳ್ಳುವಿಕೆ ಮತ್ತು ಅವರಿಗೆ ಇರುವ ಪರಮಾಧಿಕಾರದ ಬಗ್ಗೆ ಹೇಳುತ್ತದೆ. ಭಾರತವು ಸ್ವಾತಂತ್ರ್ಯಾ ನಂತರ ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಂಡಿತು. ಈ ಪ್ರಜಾತಂತ್ರ ವ್ಯವಸ್ಥೆಯು ಸರ್ವರ ಸರ್ವೋದಯ, ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷವಾಗಿದ್ದು ಎಲ್ಲಾ ಪೌರರಿಗೂ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಆರಾಧನಾ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯನ್ನು ಸಂವಿಧಾನದ ಮೂಲಕ ನೀಡಿರುತ್ತದೆ. ಆದುದರಿಂದ ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಯೂ ಭಾರತೀಯನಾಗಿ ಸಮಾನ ಸ್ಥಾನ-ಅವಕಾಶ ಪಡೆಯುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ.

ಭಾರತ ಬ್ರಿಟೀಷ್ ಆಡಳಿತದಿಂದ ಸ್ವಾತಂತ್ರಗೊಂಡ ನಂತರ ರಾಜಕೀಯ ಅಧಿಕಾರವು ಕೆಲವೇ ವರ್ಗದವರಲ್ಲಿ ಉಳಿದುಕೊಂಡಿತು.ಈ ಅಸಮಾನತೆಯನ್ನು ಹೋಗಲಾಡಿಸಲು ಮೀಸಲಾತಿಯನ್ನು ರಾಜಕೀಯದಲ್ಲಿ ತರಲಾಯಿತು.ಆ ಮೂಲಕ ಅಸಮಾನತೆಯನ್ನು ಹೋಗಲಾಡಿಸಲು ಮೂಲಾಮು ಹಚ್ಚುವ ಕೆಲಸ ಮಾಡಲಾಯಿತು.ಆದರೆ ರಾಜಕೀಯ ಅಧಿಕಾರ, ಆಡಳಿತ ಎನ್ನುವುದು ಇಂದಿಗೂ ತಳ ಸಮುದಾಯಗಳಿಗೆ ಮರೀಚಿಕೆಯಾಗಿದೆ.

ಕಾಡುಗೊಲ್ಲ ಬುಡಕಟ್ಟನ್ನು ಸ್ವಾತಂತ್ರ್ಯ ನಂತರ ಭಾರತದಲ್ಲಿ ಸುಧಾರಣಾ ನೀತಿ ಹಿನ್ನೆಲೆಯಲ್ಲಿ ಅಭಿವೃದ್ಧಿಗೊಳಿಸಬೇಕಾದ ಒಂದು ಬುಡಕಟ್ಟಾಗಿ ಪರಿಗಣಿಸಲಾಯಿತು.ಹೆಚ್ಚೆಂದರೆ ಇವರು ರಾಜಕೀಯ ಅಧಿಕಾರ ಆಡಳಿತವನ್ನು ಆಯ್ಕೆಮಾಡುವ ಮತದಾರರಾಗಿಯಷ್ಟೇ

ಉಳಿದರು.ಅಧಿಕಾರ ಪಡೆಯಲು ಯಾವುದೇ ರೀತಿಯ ಪ್ರಯತ್ನ ಮಾಡಲಿಲ್ಲ. ಅದು ಅವರಿಗೆ ಅಸಾಧ್ಯವೂ ಆಗಿತ್ತು.

ಕಾಡುಗೊಲ್ಲ ಬುಡಕಟ್ಟಿನಲ್ಲಿ ಎರಡು ರೀತಿಯ ಆಡಳಿತ ವ್ಯವಸ್ಥೆಯಿದೆ 1. ಔಪಚಾರಿಕ ರಾಜಕೀಯ 2. ಬುಡಕಟ್ಟಿನೊಳಗಿನ ರಾಜಕೀಯ.

ಈ ಎರಡೂ ವ್ಯವಸ್ಥೆಗಳಲ್ಲಿ ಔಪಚಾರಿಕ ರಾಜಕೀಯವು ಗ್ರಾಮ ಪಂಚಾಯಿತಿಯಿಂದ ಕೇಂದ್ರ ಸರ್ಕಾರದವರೆಗೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆ ಮತ್ತು ಅಧಿಕಾರವನ್ನು ಹೊಂದುವಿಕೆಯಾಗಿದೆ.ಕಾಡುಗೊಲ್ಲ ಬುಡಕಟ್ಟು ಆರ್ಥಿಕವಾಗಿ ಇರುವ ಸಂಕಷ್ಟ, ಅನಕ್ಷರತೆ, ಹಟ್ಟಿ ಒಳಗಿನ ಸೀಮಿತ ಬದುಕು, ಔಪಚಾರಿಕ ರಾಜಕಾರಣಕ್ಕೆ ತೆರೆದುಕೊಳ್ಳಲು ಹಿಂಜರಿಕೆಯನ್ನು ಉಂಟುಮಾಡಿದೆ. ಗ್ರಾಮ ಮತ್ತು ತಾಲ್ಲೂಕು, ಜಿಲ್ಲೆ, ರಾಜ್ಯ, ಲೋಕಸಭೆಯ ಚುನಾವಣೆಯಲ್ಲಿ ಮೀಸಲಾತಿಯಡಿಯಲ್ಲಿ ಅವಕಾಶ ಸಿಕ್ಕರೆ ಮಾತ್ರ ಅನಿವಾರ್ಯವಾಗಿ ಸ್ಪರ್ಧಿಸುತ್ತಾರೆ.ಉಳಿದಂತೆ ಔಪಚಾರಿಕ ರಾಜಕಾರಣದಲ್ಲಿ ಭಾಗವಹಿಸಲು ತಾವೇ ಸ್ವತಃ ಆಸಕ್ತಿ ಹೊಂದಿಲ್ಲ.

ಬುಡಕಟ್ಟಿನೊಳಗಿನ ಆಡಳಿತ ಮತ್ತು ಅಧಿಕಾರ ಗೌಡ, ಪೂಜಾರಿ, ದಳವಾಯಿ ಇವರಲ್ಲಿ ಕೇಂದ್ರೀಕರಣವಾಗಿದೆ. ಇವರ ಆಯ್ಕೆಗೆ ಯಾವುದೇ ಚುನಾವಣೆಯು ಇಲ್ಲ ಇಂದು ವಂಶಪಾರ್ಯಂಪರ್ಯ ವೃತ್ತಿಯಾಗಿದೆ. ಈ ವ್ಯವಸ್ಥೆ ಪ್ರಜಾಪ್ರಭುತ್ವದ ಧೋರಣೆಗಳಿಗೆ ವಿರುದ್ಧವಾದ ಧೋರಣೆಗಳನ್ನು ಹೊಂದಿದೆ. ಈ ಅಧಿಕಾರವನ್ನು ಹೊಂದುವ ಹಕ್ಕು ಕೆಲವರಿಗೇ ಮಾತ್ರ ಬುಡಕಟ್ಟಿನೊಳಗೆ ಸೀಮಿತವಾಗಿದೆ. ಬುಡಕಟ್ಟಿನ ಜನರು ಈ ಆಡಳಿತದಲ್ಲಿ ಒಳಪಡುವವರು ಆದರೆ ಈ ಜನರು ಅಧಿಕಾರದಲ್ಲಿ ಪಾಲುದಾರರಲ್ಲ. ಬುಡಕಟ್ಟಿನೊಳಗೆ ನೀತಿ ನಿರೂಪಿಸುವ, ನ್ಯಾಯ ತೀರ್ಮಾನ ಮಾಡುವ, ನೀತಿಗಳನ್ನು ಜಾರಿಗೆ ತರುವ, ಹಟ್ಟಿಯ ಸಮುದಾಯದ ಬದುಕಿನ ಒಗ್ಗಟ್ಟನ್ನು ಕಾಯುವ ಕೆಲಸವನ್ನು ಬುಡಕಟ್ಟಿನೊಳಗಿನ ರಾಜಕೀಯ ಮತ್ತು ಅದರ ಆಡಳಿತಗಾರರು ನಿರ್ವಹಿಸುತ್ತಾರೆ. ಆದ್ದರಿಂದಲೇ ಅವರು ಔಪಚಾರಿಕ ರಾಜಕಾರಣದಿಂದ ದೂರ ಉಳಿಯಲು ಇಚ್ಛೆಪಡುತ್ತಾರೆ.

ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರು ರಾಜಕೀಯವಾಗಿ ಯಾವ ಸ್ಥಾನ–ಮಾನಗಳನ್ನು ಪಡೆದಿದ್ದಾರೆ ಎಂದು ವಿವೇಚಿಸಿದರೆ ತಿಳಿದುಬರುವುದು.ಅವರ ಪಾತ್ರ ಶೂನ್ಯವೆಂಬುದು, ಆಡಳಿತ ಅಧಿಕಾರದಲ್ಲಿ ಮಹಿಳೆಯ ಭಾಗವಹಿಸುವಿಕೆ ಆಡಳಿತಗಾರರನ್ನು ಆಯ್ಕೆಮಾಡುವ ಮತದಾರರಾಗಿ, ಅಧಿಕಾರ ನಡೆಸುವವರ ರಕ್ಷೆಗೆ ಒಳಪಡುವ ಸಮುದಾಯವಾಗಿ ಮಹಿಳಾ ಸಮುದಾಯ ಕಾಣಿಸಿಕೊಳ್ಳುತ್ತದೆ.

ಕಾಡುಗೊಲ್ಲ ಬುಡಕಟ್ಟಿನೊಳಗಿನ ರಾಜಕಾರಣದಲ್ಲಿ ಮಹಿಳೆಯರು ಪಾತ್ರಧಾರಿಗಳಷ್ಟೇ ಇಲ್ಲಿನ ಸೂತ್ರಧಾರಿಗಳು ಯಾವಾಗಲೂ ಪುರುಷರೇ ಆಗಿರುತ್ತಾರೆ.ಅಧಿಕಾರದ ಕೇಂದ್ರಗಳಾದ ಗೌಡ, ದಳವಾಯಿ, ಪೂಜಾರಿ, ಈ ಸ್ಥಾನಗಳಲ್ಲಿ ಇಂದಿಗೂ ಒಬ್ಬ ಮಹಿಳೆಯೂ ಕಾಣಿಸಿಕೊಂಡಿಲ್ಲ. ಮಹಿಳೆಯರಿಗೆ ಈ ಸ್ಥಾನಗಳು ವಂಚಿಸಲ್ಪಟ್ಟಿದೆ.ಅವರು ಈ ಬುಡಕಟ್ಟಿನ ರಾಜಕಾರಣದಲ್ಲಿ ಸ್ಪರ್ಧಿಸುವಂತಿಲ್ಲ, ಅಧಿಕಾರ ಪಡೆಯುವಂತಿಲ್ಲ. ಈ ಸ್ಥಾನ ವಂಚಿಕೆಯು ಬುಡಕಟ್ಟಿನೊಳಗೆ ಅವರ ಬದುಕನ್ನು ಗುಲಾಮರನ್ನಾಗಿ ಮಾಡಿದೆ.

ಔಪಚಾರಿಕ ರಾಜಕಾರಣದಲ್ಲಿ ಮೀಸಲಾತಿಯ ಕಾರಣದಿಂದ ಗ್ರಾಮಪಂಚಾಯಿತಿ ಮಟ್ಟದಲ್ಲಿ ಚುನಾವಣೆ ಸ್ಪರ್ಧಿಸಿರುವ 9 ಮಹಿಳೆಯರನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪರಿಚಯಿಸಿಕೊಂಡೆ, ಅವರಿಗೆ ಈ ರಾಜಕಾರಣದಲ್ಲಿ ಭಾಗವಹಿಸುವ ಅವಕಾಶ ದೊರದಿದ್ದು, ಹೇಗೆ ಎಂದು ಕೇಳಿದಾಗ ಸ್ವಯಿಚ್ಛೆಯಿಂದ ಯಾರೂ ಚುನಾವಣೆಗೆ ನಿಂತಿಲ್ಲವೆಂದೂ, ಮನೆಯವರು ತಮ್ಮನ್ನು ನಿಲ್ಲಲು ಹೇಳಿದ್ದರಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದುದ್ದಾಗಿ ತಿಳಿಸಿರುತ್ತಾರೆ. ಚುನಾವಣೆಗೆ ಸ್ಪರ್ಧಿಸುವುದು ಇಲ್ಲಿನ ಮಹಿಳೆಯರ ಸ್ವ-ಇಚ್ಛೆಯಿಲ್ಲವೆಂಬುದು ಸ್ಪಷ್ಟ. ಔಪಚಾರಿಕ ರಾಜಕಾರಣದಲ್ಲಿ ಆಕೆ ಪಾಲ್ಗೊಳ್ಳಲು ಇರುವ ಅಡ್ಡಿ ಆತಂಕಗಳೆಂದರೆ.

1. ಜೀವನಕ್ಕೆ ಕಷ್ಟವಿರುವುದರಿಂದ ಚುನಾವಣಾ ವೆಚ್ಚ ಭರಿಸಲು ಅಸಾಧ್ಯವಾಗಿರುವುದು.
2. ಅನಕ್ಷರತೆಯಿಂದಾಗಿ ಕಾಡುವ ಕೀಳರಿಮೆ.
3. ಮನೆಕೆಲಸ ಕುಟುಂಬದ ಜವಾಬ್ದಾರಿಗಳನ್ನೂ ತಮ್ಮ ರಾಜಕೀಯ ಬದುಕಿನೊಂದಿಗೆ ಮುಂದುವರಿಸಬೇಕಾದ ಅನಿವಾರ್ಯತೆ.
4. ಸಾರ್ವಜನಿಕ ಸಂಪರ್ಕದ ಕೊರತೆ.
5. ರಾಜಕೀಯದಲ್ಲಿ ನಿರ್ಣಯ ತೆಗೆದುಕೊಳ್ಳಲು ಮತ್ತು ಅಧಿಕಾರ ನಿರ್ವಹಿಸಲು ಉಂಟಾಗುವ ಬೌದ್ಧಿಕ ಪರಾವಲಂಬಿತನ.

ಈ ಮೊದಲಾದ ಕಾರಣಗಳಿಗಾಗಿ ಕಾಡುಗೊಲ್ಲ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಳ್ಳು ಸ್ವಯಿಚ್ಛೆಯನ್ನು ವ್ಯಕ್ತಪಡಿಸುವುದಿಲ್ಲ. ರಾಜಕೀಯ ಹಕ್ಕು ಅಧಿಕಾರವು ಅವರಿಗೆ ಪರಿಚಿತವಿಲ್ಲದಿರುವುದರಿಂದ ಅದರ ಬಗೆಗೆ ಕುತೂಹಲವೂ ಇಲ್ಲ. ಮಹಿಳಾ ಮೀಸಲಾತಿಯಡಿಯಲ್ಲಿ, ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕಾಡುಗೊಲ್ಲ ಮಹಿಳೆಯರು ಸ್ಪರ್ಧಿಸಿ ಗೆದ್ದಿದ್ದಾರೆ. ಗೆದ್ದವರನ್ನು ತಮ್ಮ ಕಾರ್ಯಚಟುವಟಿಕೆಗಳ ಕುರಿತು ಪ್ರಶ್ನಿಸಿದಾಗ ಅವರಿಂದ ದೊರೆತ ಉತ್ತರದಲ್ಲಿ ಅಧಿಕಾರವನ್ನು

ಅನುಭವಿಸುತ್ತಿರುವವರು ಪುರುಷರೇ ಹೆಚ್ಚು ಎಂಬುದು ಕಂಡುಬರುತ್ತದೆ. ಈ ಅಧಿಕಾರದ ಹೆಸರು ಮಾತ್ರ ಮಹಿಳೆಯರಲ್ಲಿದ್ದು ಅದರ ಚಲಾವಣೆಯು ಆಕೆಯ ಪತಿಗೆ ಸೇರಿರುತ್ತದೆ. ಈ ಕಾರಣವೆಂದರೆ "ಭಾರತದ ಸಂದರ್ಭದಲ್ಲಿ ಪ್ರಭುತ್ವದ ಹಕ್ಕುದಾರಿಕೆಯೆಂಬುದು ವಂಶ ಮತ್ತು ಕಾಲಾಧಾರಿತವಾಗಿತ್ತು. ಈ ಹಳೆಯ ಪಾತ್ರೆಯಲ್ಲಿಯೇ ಪ್ರಜಾಪ್ರಭುತ್ವವೆಂಬ ಮಧ್ಯವನ್ನು ಸುರಿಯಲಾಗಿದೆ. ಎಂಬುದಕ್ಕೆ ಸಮಕಾಲೀನ ರಾಜಕೀಯ ನಿದರ್ಶನವಾಗಿದೆ"[1] ಆದ್ದರಿಂದ ಮಹಿಳೆಯರಿಗೆ ದೊರೆತಿರುವ ರಾಜಕೀಯ ಅಧಿಕಾರವು ಅವಳಿಂದ ಅಪಹರಿಸಲ್ಪಡುತ್ತದೆ.

ಮಹಿಳೆಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳಲ್ಲಿ ಸುಧಾರಣೆಯಾಗದೆ ಯಾವ ಅಧಿಕಾರ ದೊರೆತರೂ ವ್ಯರ್ಥ.ಅಧಿಕಾರವನ್ನು ಬಳಸಬೇಕಾಗಿರುವ ಅವಳ ಆತ್ಮಸ್ಥೈರ್ಯ, ವಿಶ್ವಾಸ ಮತ್ತು ಸ್ವಾತಂತ್ರ್ಯವನ್ನು ಬಿಂಬಿಸುವ ಬದುಕಿನ ವಾತವರಣವನ್ನು ಮೊದಲು ಇಲ್ಲಿನ ಮಹಿಳೆಯರಿಗೆ ನೀಡಬೇಕಿದೆ.ಉನ್ನತ ಶಿಕ್ಷಣ, ಉದ್ಯೋಗ, ಸಾಮಾಜಿಕ ಕಟ್ಟುಪಾಡುಗಳ ನಿವಾರಣೆ, ಸಾಂಸ್ಕೃತಿಕ ಹೊಣೆಗಾರಿಕೆಯಿಂದ ಮುಕ್ತಿ ಇದೆಲ್ಲವೂ ಸಾಧ್ಯವಾದಾಗ ಮಾತ್ರ ಮಹಿಳೆ ತನಗೆ ದೊರೆಯುವ ರಾಜಕೀಯ ಅಧಿಕಾರವನ್ನು ಯಾರ ಅವಲಂಬನೆಯೂ ಇಲ್ಲದೆ ಆತ್ಮವಿಶ್ವಾಸದಿಂದ ಅನುಭವಿಸಲು ಸಾಧ್ಯ.

ಪ್ರಸ್ತುತ ಭಾರತೀಯ ಸಮಾಜದಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿ ಇನ್ನೂ ನೀಡಬೇಕೆ ಬೇಡವೆ ಎಂಬ ವಿಷಯ ಸಂಸತ್ತಿನಲ್ಲಿ ಕಾಲ್ಚೆಂಡಾಗಿದೆ. "ಅಧಿಕಾರವೆಂಬುದು ಶಕ್ತಿಗೆ ಸಂಬಂಧಿಸಿದ್ದು ಎಂಬುದಕ್ಕೆ ಚರಿತ್ರೆಯಲ್ಲಿ ಸಾಕಷ್ಟು ನಿದರ್ಶನಗಳಿವೆ. ಶಕ್ತಿ ಮತ್ತು ಯುಕ್ತಿ ಬಳಸಿ ಅಧಿಕಾರ ಹೊಂದುವ ಪ್ರಸಂಗದಲ್ಲೆಲ್ಲಾ ಜಾತಿ ಕುಲ ಧರ್ಮ ಲಿಂಗವೆಂಬವುಗಳೆಲ್ಲ ಗೌಣವಾಗುತ್ತದೆ"[2]ಮಹಿಳೆಗೆ ರಾಜಕೀಯ ಶಕ್ತಿಯುತ ಅಧಿಕಾರವನ್ನು ಮುಕ್ತವಾಗಿ ಇಲ್ಲವೆ ಸಮಾನವಾಗಿ ನೀಡಲು ಭಾರತ ಸಮಾಜ ಇನ್ನೂ ಸಿದ್ಧವಾಗಿಯೇ ಇಲ್ಲದಿರುವಾಗ ಬುಡಕಟ್ಟು ಸಮಾಜವಾದ ಕಾಡುಗೊಲ್ಲರಲ್ಲಿ ಮಹಿಳೆಯರಿಗೆ, ಬುಡಕಟ್ಟಿನ ಒಳಗೂ, ಹೊರಗೂ ರಾಜಕೀಯ ಅಧಿಕಾರ ನೀಡಬೇಕೆಂಬುದು ಒತ್ತಾಯಿಸುವುದು ಹಾಸ್ಯಾಸ್ಪದವೆನಿಸುತ್ತದೆ.

ಕಾಡುಗೊಲ್ಲ ಮಹಿಳೆಯರಿಗೆ ಬುಡಕಟ್ಟಿನೊಳಗೆ ರಾಜಕಾರಣದಲ್ಲಿ ಸ್ಥಾನ ಇಲ್ಲದಿರುವುದು ನಿರ್ವಿವಾದ ಸಂಗತಿ. ಗೌಡಿಕೆ, ಪೂಜಾರಿಕೆಯ ಹಕ್ಕನ್ನು ಅಧಿಕಾರವನ್ನು ಮಹಿಳೆಯರು ಎಂದಿಗೂ ಹೊಂದಬಹುದಾದ ಅವಕಾಶಗಳನ್ನು ಬುಡಕಟ್ಟು ರಾಜಕಾರಣ ಕೊಡುವುದಿಲ್ಲ. ಔಪಚಾರಿಕ ರಾಜಕಾರಣದಲ್ಲಿ ಗ್ರಾಮ ಪಂಚಾಯಿತಿ ಮಟ್ಟವನ್ನು ಬಿಟ್ಟರೆ ವಿಧಾನಸಭೆ. ಮತ್ತು ವಿಧಾನ ಪರಿಷತ್‌ಗೆ ಸ್ಪರ್ಧಿಸುವ ಅವಕಾಶಗಳು ಮೀಸಲಾತಿಯು ಕಾಡುಗೊಲ್ಲ ಮಹಿಳೆಯರಿಗೆ ಇಲ್ಲ. "ಭಾರತದಲ್ಲಿ 529 ವಿಧಾನಸಭಾ ಕ್ಷೇತ್ರಗಳಲ್ಲಿ 46 ಲೋಕಸಭಾ ಕ್ಷೇತ್ರಗಳನ್ನು ಬುಡಕಟ್ಟಿನವರಿಗೆ ಮೀಸಲಾಗಿರಿಸಿದೆ.

ಕರ್ನಾಟಕದಲ್ಲಿ ಕೇವಲ 2 ವಿಧಾನ ಸಭಾ ಕ್ಷೇತ್ರಗಳನ್ನು ಬುಡಕಟ್ಟಿನವರಿಗಾಗಿ ಮೀಸಲಾಗಿರಿಸಿದೆ".[7] ಈ ಮತಕ್ಷೇತ್ರವು ಕಾಡುಗೊಲ್ಲ ಬುಡಕಟ್ಟಿನಂತೆಯೇ ಇತರ ಬುಡಕಟ್ಟುಗಳಿಗೂ ಸೇರುವಂತದ್ದು ಆದ್ದರಿಂದ ಇಲ್ಲಿ ಕಾಡುಗೊಲ್ಲ ಮಹಿಳೆಯರು ಸ್ಪರ್ಧಿಸಲು ಅಸಾಧ್ಯವಾಗಿ ಉಳಿದಿದೆ.

ಕಾಡುಗೊಲ್ಲ ಮಹಿಳೆಗೆ ದೊರೆಯುವ ಸ್ಥಳೀಯ ಗ್ರಾಮ ಪಂಚಾಯಿತಿಯಲ್ಲಿನ ಔಪಚಾರಿಕ ಅಧಿಕಾರಗಳು ಸ್ಥಳೀಯವಾದ ಆಕೆಯ ಸಮಸ್ಯೆಗಳ ಪರಿಹರಿಸಿಕೊಳ್ಳುವ ಸೂಕ್ತ ಮಾರ್ಗವೂ ಆಗಿದೆ.ಆದರೆ ಸ್ಥಳೀಯ ವಾಗಿ ದೊರೆಯುವ ಈ ಅಧಿಕಾರ ಮಹಿಳೆಯರಿಗಿಂತ ಪುರುಷ ಕೇಂದ್ರಿತ ಕಾರ್ಯಕ್ರಮದ ವಿಸ್ತರಣೆಯಾಗಿಯೇ ಮುಂದುವರಿಯುತ್ತಿದೆ.ಗ್ರಾಮಪಂಚಾಯಿತಿ ಸದಸ್ಯರಾಗಿ ಯಾವ ಕೆಲಸಕಾರ್ಯಗಳನ್ನು ಮಾಡಿಸಿದ್ದೀರಾ ಎಂದು ಮಹಿಳೆಯರನ್ನು ಪ್ರಶ್ನಿಸಿದಾಗ ಹಟ್ಟಿಯ ದೇವಸ್ಥಾನದ ಕಾಂಪೌಂಡ್ ನಿರ್ಮಾಣ, ದೇವಸ್ಥಾನದ ದುರಸ್ಥಿ, ಚರಂಡಿ ನಿರ್ಮಾಣ, ನೀರಿನ ವ್ಯವಸ್ಥೆಗಾಗಿ ತೊಟ್ಟಿ ನಿರ್ಮಾಣ, ರಸ್ತೆ ದುರಸ್ತಿ, ಮಾಡಿಸುವುದಾಗಿ ಹೇಳುತ್ತಾರೆ.ಯಾರು ಮಾಡಿಸಿದರು?ನೀವೇ ನಿರ್ಧರಿಸಿ ಇಂತಹ ಕೆಲಸಗಳನ್ನು ನಿರ್ವಹಿಸಿದ್ದೀರ ಎಂದು ಕೇಳಿದಾಗ, ಇಲ್ಲ ನಮ್ಮ ಮನೆಯ ಯಜಮಾನರೇ ಈ ಕೆಲಸಗಳು ಹಟ್ಟಿಗೆ ಆಗಬೇಕೆಂದು ನಿರ್ಧರಿಸಿ ತಾನೇ ಮುಂದೆ ನಿಂತು ಮಾಡಿಸುವುದಾಗಿ ಹೇಳುತ್ತಾರೆ.ಮೀಟಿಂಗ್ ತೆರಳಲು ಈ ಮಹಿಳೆಯರನ್ನು ಪುರುಷರೇ ಕರೆದುಕೊಂಡು ಹೋಗಬೇಕು.ಕೆಲವೊಮ್ಮೆ ಹೋಗಲು ಸಾಧ್ಯವಾಗುವುದಿಲ್ಲ ಏಕೆಂದು ಪ್ರಶ್ನಿಸಿದಾಗ ಮನೇಲಿ ವಯಸ್ಸಾದವರು ಇದ್ದಾರೆ, ಮಕ್ಕಳಿದ್ದಾರೆ ಅವರನ್ನು ನೋಡ್ಕಬೇಕು.ಮನೆಗೆಲಸ ಮಾಡಬೇಕು ಎಂಬ ಕಾರಣ ನೀಡುತ್ತಾರೆ.ಇಲ್ಲಿ ಮೀಸಲಾತಿ ಅಡಿಯಲ್ಲಿ ಸಿಕ್ಕ ಅಧಿಕಾರದ ಮೂಲಕ ಮಹಿಳೆ ಸಾರ್ವಜನಿಕವಾಗಿ ಬೆಳೆಯಬೇಕೆಂಬ ಆಕಾಂಕ್ಷೆಗಳೇ ಇಲ್ಲದಿರುವುದು ಕಂಡುಬರುತ್ತದೆ. ಅಲ್ಲದೆ ನೀವು ಮಹಿಳೆಯಾದ್ದರಿಂದ ಹಟ್ಟಿಯೊಳಗಿನ ಮಹಿಳೆಯರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತೀರಾ ?ಅವರ ಆರ್ಥಿಕ ಉತ್ಪಾದನೆ ಸುಧಾರಿಸಲು ಯಾವ ಯಾವ ನೆರವು ಒದಗಿಸಲು ಬಯಸುತ್ತೀರಿ ಎಂದು ಪ್ರಶ್ನಿಸಿದಾಗ ಅವರ ಹೆಣ್ಣುಮಕ್ಕಳ ಸಮಸ್ಯೆ ಅವರೇ ವಹಿಸಿಕೊಳ್ಳಲಿ, ಅದು ತಮ್ಮ ಜವಾಬ್ದಾರಿಯಲ್ಲ ಎಂದು ಉತ್ತರಿಸುತ್ತಾರೆ.ಈ ಅಭಿಪ್ರಾಯಗಳು ರಾಜಕೀಯ ಅಧಿಕಾರದ ಬಗ್ಗೆ ಮಹಿಳೆಯರಿಗಿರುವ ಅರಿವಿನ ಮಿತಿಯನ್ನು ಪರಿಚಯಿಸುತ್ತದೆ.

ಬೌದ್ಧಿಕವಾಗಿ ಜ್ಞಾನವನ್ನು ನೀಡದೆ ಯಾವ ಆರ್ಥಿಕ ಅಭಿವೃದ್ಧಿಯನ್ನು ಯೋಜನೆಗಳನ್ನು ತಂದರೂ, ಅಧಿಕಾರದ ಚುಕ್ಕಾಣಿಯನ್ನು ನೀಡಿದರೂ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಎಂಬುದಕ್ಕೆ ಕಾಡುಗೊಲ್ಲ ಮಹಿಳೆಯರಿಗೆ ದೊರೆತಿರುವ ರಾಜಕೀಯ ಅಧಿಕಾರ ಸಾಕ್ಷಿಯಾಗಿದೆ.ಕಾಡುಗೊಲ್ಲರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸಮಾನತೆಯನ್ನು ನೀಗಿಸುವ ಮೂಲಕ ಯಾವುದೇ ಅಧಿಕಾರವನ್ನು ಯೋಜನೆಯನ್ನು ಯಶಸ್ವಿಗೊಳಿಸಲು ಸಾಧ್ಯವಿದೆ.ಈ

ಮಹಿಳೆಯರ ಸ್ಥಾನ-ಮಾನ ಎತ್ತರಿಸಿದರೆ ಅವರ ಬದುಕಿನ ಎತ್ತರವನ್ನು ಕಾಣಲು ಸಾಧ್ಯವಿಲ್ಲ. ಅಭಿವೃದ್ಧಿ ಮತ್ತು ಅಧಿಕಾರವು ಸಮಾಜ ಸುಧಾರಣವಾದಿ ಪ್ರತಿಫಲಗಳೊಂದಿಗೆ ತನ್ನನ್ನು ಹಂಚಿಕೊಳ್ಳಬೇಕಾಗುತ್ತದೆ ಇಲ್ಲದೆ ಹೋದರೆ ಅಭಿವೃದ್ಧಿ ಮತ್ತು ಅಧಿಕಾರದ ಅಸಮಾನ ಹಂಚಿಕೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ.ಮೊದಲು ಕಾಡುಗೊಲ್ಲ ಮಹಿಳೆಯರ ಸ್ಥಾನ-ಮಾನಗಳಲ್ಲಿ ಸುಧಾರಣೆಯಾಗಬೇಕಿದೆ ಅನಂತರ ದೊರೆತ ರಾಜಕೀಯ ಅಧಿಕಾರ ಪರವಲಂಬನೆ ಒಳಗಾಗದೆ ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

ಕೊನೆ ಟಿಪ್ಪಣಿ

1. ಮಹಿಳಾ ಪ್ರತಿನಿಧೀಕರಣ ರಾಜಕೀಯ ಕ್ಷೇತ್ರ ಲೇ. ಡಾ. ಮಲ್ಲಿಕಾಘಂಟಿ, ಕನ್ನಡ ಸಾಹಿತ್ಯ ಮತ್ತು ಮಹಿಳೆ ಪುಟ 20
2. ಅದೇ ಪುಟ 20
3. ಬುಡಕಟ್ಟು ಕುಲಕಸುಬು, ಕೆ.ಎಂ. ಮೈತ್ರಿ, ಪುಟ 36

ಅಧ್ಯಾಯ 10

ಕಾಡುಗೊಲ್ಲ ಮಹಿಳಾ ವಲಸೆಯ ಕಥನ

ಕಾಡುಗೊಲ್ಲ ಬುಡಕಟ್ಟು ಮೂಲವೃತ್ತಿ ಪಶುಸಂಗೋಪನೆಯಾದ್ದರಿಂದ ವೃತ್ತಿಯ ಕಾರಣದಿಂದ ಕಾಡುಗೊಲ್ಲರು ವಲಸೆ ಹೋಗಬೇಕಾದುದು ನೈಸರ್ಗಿಕವಾಗಿತ್ತು. ಪ್ರಾರಂಭದಲ್ಲಿ ಕಾಡುಗೊಲ್ಲರನ್ನು ಕುರಿತು ನಡೆದಿರುವ ಅಧ್ಯಯನಗಳು ಕಾಡುಗೊಲ್ಲರನ್ನು ಅರೆ ಅಲೆಮಾರಿ, ಅಲೆಮಾರಿಗಳು ಎಂದೇ ಗುರುತಿಸಿವೆ. ವೃತ್ತಿಯ ಕಾರಣದಿಂದ ಉಂಟಾದ ವಲಸೆಯನ್ನು ಕಾಡುಗೊಲ್ಲ ಬುಡಕಟ್ಟು ತನ್ನ ಬದುಕಿನ ಭಾಗವಾಗಿಯೇ ಸ್ವೀಕರಿಸಿತು.

ಕಾಡುಗೊಲ್ಲರು ವೃತ್ತಿಯ ಕಾರಣದಿಂದ ವಲಸೆ ಹೋಗುತ್ತಿರುವಾಗ ಕುಟುಂಬ ಸಮೇತ ವಲಸೆ ಹೋಗುತ್ತಿದ್ದರು.ಪಶು, ಕುರಿ ಜೊತೆಗೆ ಇರುವ ಕತ್ತೆಗಳು ಮತ್ತು ನಾಯಿಗಳು ಕೌಟುಂಬಿಕ ವಲಸೆಯ ಉಳಿಕೆಗಳಾಗಿ ಕಾಣುತ್ತದೆ.ಇಂದಿಗೂ ವೃತ್ತಿಯ ಕಾರಣದಿಂದ ವಲಸೆ ವಿರಳವಾಗಿದ್ದರೂ ಉಳಿದುಕೊಂಡಿದೆ ಆದರೆ ಕುಟುಂಬ ಸಮೇತ ವಲಸೆ ಇಲ್ಲ.

ವಲಸೆ ಎಂದರೆ ಕಡಿಮೆ ಅವಧಿಯಲ್ಲಿ ನಡೆಯುವ ಸ್ಥಳ ಮತ್ತು ವಾಸಸ್ಥಾನದ ಬದಲಾವಣೆಯೇ ಆಗಿದೆ."Migration is a shift in the place of residence for some length of Time" (Edwards S.M. The Rise of Bomby (1902) ಕಾಡುಗೊಲ್ಲರ ಪ್ರಾರಂಭಿಕ ವಲಸೆಯು ಜೀವನೋಪಾಯಕ್ಕಾಗಿ ಉಂಟಾಗಿತ್ತು. ಕಾಡುಗೊಲ್ಲರು ಬುಡಕಟ್ಟಿನಲ್ಲಾದ ವೃತ್ತಿಬದಲಾವಣೆ, ಮತ್ತು ಕೃಷಿಯನ್ನು ಆರಂಭಿಸಿದ್ದು, ಅಲೆಮಾರಿ ಬದುಕನ್ನು ಹಟ್ಟಿ ಬದುಕಿಗೆ ಬದಲಾಯಿತು. ಗ್ರಾಮದ ಹೊರಗೆ ಒಂದು ನಿರ್ದಿಷ್ಟ ಜಾಗದಲ್ಲಿ 5 ರಿಂದ 100 ಕುಟುಂಬಗಳು ಒಂದೇ ಕಡೆ ವಾಸಿಸುವ ಪದ್ಧತಿಯಿಂದ ವಲಸೆಯು ಬಹುಮಟ್ಟಿಗೆ ಕಡಿಮೆಯಾಯಿತು. ವಾಸಿಸುವ ಹಟ್ಟಿ ಮತ್ತು ಗ್ರಾಮಗಳ ಆಸು-ಪಾಸು ಸ್ಥಳೀಯವಾದ ವೃತ್ತಿಗಳಿಗೆ ಕಾಡುಗೊಲ್ಲರು ಹೊಂದಿಕೊಂಡರು.

ಕಾಡುಗೊಲ್ಲರ ಪುರುಷರು ಪಶುಪಾಲನೆಗೆ, ಕುರಿಸಾಕಾಣಿಕೆಗೆ ಆಹಾರಕ್ಕಾಗಿ ಕಾವಲಿನಿಂದ ಕಾವಲಿಗೆ ವಲಸೆ ಹೋಗಬೇಕಾದಾಗ ಮಹಿಳೆಯರೂ ಬಹುತೇಕ ತಮ್ಮ ಪತಿಯನ್ನು ಹಿಂಬಾಲಿಸುತ್ತಿದ್ದರು. ಕೆಲವೊಮ್ಮೆ ಹಟ್ಟಿಯಲ್ಲಿಯೇ ಮಹಿಳೆಯರು ಉಳಿದು ವಯಸ್ಸಾದ ವ್ಯಕ್ತಿಗಳು ಮತ್ತು ಮಕ್ಕಳನ್ನು ಪೋಷಿಸುವ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು.

ಉದ್ಯೋಗ ದೃಷ್ಟಿಯಿಂದ ಮಹಿಳೆಯರು ವಲಸೆ ಹೋಗಬೇಕಾದ ಸ್ಥಿತಿಯು ಕಾಡುಗೊಲ್ಲ ಸಮಾಜದಲ್ಲಿ ಪೂರ್ವದಲ್ಲಿ ಇರಲಿಲ್ಲ. ಕಾಡುಗೊಲ್ಲರ ಪುರುಷ ಪ್ರಧಾನ ಸಮಾಜವಾದ್ದರಿಂದ ಮಹಿಳೆಯು ಹೆಚ್ಚು ಕುಟುಂಬ ನಿರ್ವಹಣೆ ಮಾಡುವ ಕೆಲಸ ಕಾರ್ಯಗಳಲ್ಲಿ ನಿರತಳಾಗುತ್ತಿದ್ದಳು.ಎಲ್ಲಿ ತಮ್ಮ ಕುಟುಂಬ ವಲಸೆಗೆ ತೆರಳುತ್ತಿತ್ತೋ ಅಲ್ಲಿಯೇ ತನ್ನ ಸಾಂಸರಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದಳು. ಕೆಲವೊಮ್ಮೆ ಮನೆಯ ಯಜಮಾನ ಮಾತ್ರ ವಲಸೆಗೆ ತೆರಳಿದಾಗ ಮನೆಯಲ್ಲಿಯೇ ಉಳಿದು ಕುಟುಂಬ ನಿರ್ವಹಣೆಗಾಗಿ ಸ್ಥಳೀಯವಾಗಿ ಕೃಷಿಕೂಲಿ, ಇತರ ಕೂಲಿ ಕೆಲಸಗಳನ್ನು ಮಾಡಿ ಬಂದ ವೇತನದದಿಂದ ಮನೆಯ ನಿರ್ವಹಿಸಬೇಕಾದ ಹೊಣೆಗಾರಿಕೆಯು ಇರುತಿತ್ತು. ತಿಂಗಳುಗಳ ಕಾಲ ಪುರುಷರು ವಲಸೆ ಕಾರಣದಿಂದ ಕುಟುಂಬದಿಂದ ದೂರವಿದ್ದಾಗ ಮನೆಯ ಜವಾಬ್ದಾರಿಯನ್ನು ಮಹಿಳೆಯರೇ ನಿಭಾಯಿಸುತ್ತಿದ್ದಳು. ಈ ಸಂದರ್ಭದಲ್ಲಿ ಅವರ ಬಳಿ ಯಾವ ವ್ಯವಸಾಯದ ಭೂಮಿಯೂ ಇರುತ್ತಿರಲಿಲ್ಲವಾಗಿ ಆಕೆ ಕೃಷಿ ಮಾಡಬೇಕಾದ ಅಗತ್ಯತೆ ಉಂಟಾಗಲಿಲ್ಲ ಬದಲಿಗೆ ಸ್ಥಳೀಯವಾಗಿ ಕೂಲಿ ಕೆಲಸಗಳು ಧಾರಳವಾಗಿ ದೊರೆತವು.

ಇಂದು ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರಲ್ಲಿ ವಲಸೆ ಪದ್ಧತಿ ಇದೆ. ಅದು ಈ ಕೆಳಕಂಡ ಕಾರಣಗಳಿಗೆ ಉಂಟಾಗಿರುವುದು.

1. ಆರ್ಥಿಕ ವಲಸೆ
2. ವೈವಾಹಿಕ ವಲಸೆ, ಸಾಮಾಜಿಕ ವಲಸೆ
3. ಸಾಂಸ್ಕೃತಿಕ ವಲಸೆ
4. ಶೈಕ್ಷಣಿಕ ವಲಸೆ

ಆರ್ಥಿಕ ವಲಸೆ :-

ಪ್ರಸ್ತುತ ಕಾಡುಗೊಲ್ಲ ಮಹಿಳೆಯರಲ್ಲಿ ಆರ್ಥಿಕ ಕಾರಣಕ್ಕೆ ವಲಸೆಯು ವ್ಯಾಪಕವಾಗಿ ನಡೆಯುತ್ತಿದೆ. ಆರ್ಥಿಕ ವಲಸೆಯಲ್ಲಿ ತೆರಳುವ ಮಹಿಳೆಯರು ಬಹುತೇಕ 16 ರಿಂದ 18 20 ವರ್ಷದ ತರಣಿಯರಾಗಿದ್ದಾರೆ. ಇವರು ಎಸ್.ಎಸ್.ಎಲ್.ಸಿ, ಪಿಯುಸಿ, ಇಲ್ಲವೆ ಪ್ರಾಥಮಿಕ ಶಿಕ್ಷಣವನ್ನು ಹೊಂದಿದವರಾಗಿದ್ದಾರೆ. ಇವರ ವಲಸೆಯು ಶಾಶ್ವತದಲ್ಲ ಮೂಲ ನೆಲೆಯನ್ನು ಉಳಿಸಿಕೊಂಡೇ ಉದ್ಯೋಗದ ಕಾರಣಕ್ಕೆ ಉಂಟಾಗಿರುವ ವಲಸೆಯಾಗಿದೆ.

ಕಾಡುಗೊಲ್ಲ ಮಹಿಳೆಯರ ವಲಸೆಯ ಮುಖ್ಯಕ್ಷೇತ್ರ ಬೆಂಗಳೂರು. ಬೆಂಗಳೂರು ಔದ್ಯೋಗಿಕ ಕ್ಷೇತ್ರವಾಗಿರುವುದರಿಂದ ಇಲ್ಲಿ ಕಾರ್ಖಾನೆಗಳು, ಗಾರ್ಮೆಂಟ್ಸ್‌ಗಳು, ಮನೆಕೆಲಸ, ವ್ಯಾಪಾರಗಳಿಗೆ

ವಿಪುಲ ಅವಕಾಶ ನೀಡುತ್ತವೆ. ಕಾಡುಗೊಲ್ಲ ಮಹಿಳೆಯರ ಆರ್ಥಿಕ ವಲಸೆಯು ಹೆಚ್ಚು ಬೆಂಗಳೂರಿನಂತ ನಗರ ಕೇಂದ್ರಿತ ವಲಸೆಯಾಗಿದೆ. ನಗರದಲ್ಲಿ ಸಿಗುವ ಆಕರ್ಷಕ ಸಂಬಳ, ನಿರಂತರ ಉದ್ಯೋಗವು ಜೀವನಮಟ್ಟ ಸುಧಾರಣೆಗೆ ಹೆಚ್ಚು ಸಹಕಾರಿಯಾದ್ದರಿಂದ ಆರ್ಥಿಕ ವಲಸೆಯು ಹೆಚ್ಚಾಗುತ್ತಿದೆ.

ಕಾಡುಗೊಲ್ಲ ಪುರುಷ ವೃತ್ತಿಯನ್ನು ಬದಲಾಯಿಸಿದ್ದರಿಂದ ಸಾಮಾಜಿಕ ಆರ್ಥಿಕ ವಿಸ್ತರಣೆ ಆತನಲ್ಲಿ ಮಾತ್ರ ಸಾಧ್ಯವಾಗಿ ಮಹಿಳೆಯರು ಅತಂತ್ರರಾಗಿದ್ದರು. ಇಂದು ಹೆಚ್ಚುತ್ತಿರುವ ಆರ್ಥಿಕ ವಲಸೆಯು ಮಹಿಳೆಯರ ವೃತ್ತಿ ಬದುಕಿನಲ್ಲಿ ಹಲವು ಬದಲಾವಣೆಗೆ ಕಾರಣವಾಗಿದೆ. ಮಾತ್ರವಲ್ಲದೆ ಸಾಮಾಜಿಕ ಬದುಕಿನ ಬದಲಾವಣೆಗೂ ಕಾರಣವಾಗಿದೆ.

ಕಾಡುಗೊಲ್ಲ ಬುಡಕಟ್ಟು ಹಟ್ಟಿಯ ಆಚೆಗೆ ಹೆಣ್ಣು ಮಕ್ಕಳನ್ನು ಕಳುಹಿಸಲು ಆತಂಕದಿಂದ ಅದನ್ನು ನಿರ್ಬಂಧಿಸಿತ್ತು ಈ ಕಾರಣದಿಂದ ಸ್ಥಳೀಯವಾಗಿ ಮಾಡುವ ದುಡಿಮೆ ಮತ್ತು ಕೂಲಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿತು. ಆದರೆ ಭೌಗೋಳಿಕ ಕಾರಣಗಳಿಂದ ಉಂಟಾದ ಕೂಲಿ ಅಭಾವವು ದುಡಿಮೆಯ ವಲಸೆಯನ್ನು ಒಪ್ಪಿಕೊಳ್ಳುವಂತೆ ಮಾಡಿತು. ಅಲ್ಲದೆ ಸ್ಥಳೀಯವಾಗಿ ಸಿಗುತ್ತಿದ್ದ ಮಹಿಳೆಯರ ಕೂಲಿಯಿಂದ ಯಾವ ಉಳಿತಾಯವೂ ಸಾಧ್ಯವಾಗುತ್ತಿರಲಿಲ್ಲ. ಮತ್ತು ಕೂಲಿಯೂ ಕೆಲವೂ ಅನಿಶ್ಚಿತವಾಗಿತ್ತು.ಇದ್ದರೆ ಉಂಟು ಇಲ್ಲದಿದ್ದರೆ ಎಂಬ ಸ್ಥಿತಿಯೇ ಅಧಿಕವಾಗಿತ್ತು.ಬಿಸಿಲಿನಲ್ಲಿ ಅತ್ಯಧಿಕ ಶ್ರಮದಿಂದ ಮಹಿಳೆಯರು ಕಡಿಮೆ ಕೂಲಿಗೆ ದುಡಿಯ ಬೇಕಾಗಿತ್ತು.ಇದರಿಂದ ಬಡತನ ಹಾಗೆಯೇ ಉಳಿಯಿತು. ಇದರಿಂದಾಗಿ ಇಂದು ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಹಿಳೆಯರ ನಗರಕೇಂದ್ರಿತ ಆರ್ಥಿಕ ವಲಸೆಗೆ ಪ್ರೋತ್ಸಾಹವಿದೆ.ಇಲ್ಲಿ ತೆರಳುವ ಮಹಿಳೆಯರು ಮುಖ್ಯವಾಗಿ ಎರಡು ರೀತಿಯ ಉದ್ಯೋಗಗಳನ್ನು ದುಡಿಯುತ್ತಾರೆ. 1. ಗಾರ್ಮೆಂಟ್ಸ್‌ನಲ್ಲಿ 2. ಕಾರ್ಖಾನೆಗಳಲ್ಲಿ ಕೂಲಿ ಕಾರ್ಮಿಕರಾಗಿ, ಇವುಗಳೇ ಅಲ್ಲದೆ ತರಕಾರಿ ವ್ಯಾಪಾರ, ಹೂವ್ಯಾಪಾರ, ಮನೆಕೆಲಸದಂತ ವೃತ್ತಿಯನ್ನು ವಿರಳವಾಗಿ ಒಪ್ಪಿಕೊಂಡಿರುವುದು ಕಂಡುಬರುತ್ತದೆ.

ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಹೆಣ್ಣುಮಕ್ಕಳು ತಾವು ತಿಂಗಳಿಗೆ 5 ಸಾವಿರ ಪಡೆಯುತ್ತೇವೆ. ಅದರಲ್ಲಿ ಒಂದು ಸಾವಿರವನ್ನು ಊಟದ ಖರ್ಚಿಗಾಗಿ ಹಿಡಿದುಕೊಂಡರೆ ನಾಲ್ಕು ಸಾವಿರ ಪಡೆಯುತ್ತೇವೆ. ವಸತಿ ವ್ಯವಸ್ಥೆ ಉಚಿತವಾಗಿದೆ. 4000 ಸಾವಿರವನ್ನು ಉಳಿತಾಯ ಮಾಡಿ ಮನೆಗೆ ನೀಡುತ್ತೇವೆ ಎನ್ನುತ್ತಾರೆ. ಮಾಸಿಕವಾಗಿ ಪಡೆಯುವ 4000 ಸಾವಿರ ಕಾಡುಗೊಲ್ಲರ ಬುಡಕಟ್ಟಿನ ಒಂದು ಕುಟುಂಬದ ಜೀವನ ಮಟ್ಟ ಸುಧಾರಣೆಯಲ್ಲಿ ಮಹತ್ತರ ಬದಲಾವಣೆ ಉಂಟುಮಾಡಿದೆ.ಸ್ಥಳೀಯವಾಗಿ ಸಿಗುವ ಕೂಲಿ 60 ರಿಂದ 120 ರೂಗಳು ಮಾಸಿಕವಾಗಿ ದಿನವೂ ಕೂಲಿ ಪಡೆಯುತ್ತಾರೆ ಎಂದರೂ 60 ರಂತೆ ತಿಂಗಳಿಗೆ 1800, 120 ರಂತೆ 3600

ಅಗುತ್ತದೆ.ವಾರದಲ್ಲಿ ಯಾವ ದಿನವೂ ರಜೆ ಪಡೆಯುವಂತಿಲ್ಲ ಜೊತೆಗೆ ತಮ್ಮ ಊಟದ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕು.ಬಿಸಿಲಿನಲ್ಲಿ ಶ್ರಮವಹಿಸಬೇಕು.ಆದರೆ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಸಿಗುವ 4000 ದಿಂದ 5000 ರೂಗಳು ಕೂಲಿಗಿಂತ ಹೆಚ್ಚಿನ ಆದಾಯವಾಗಿದೆ.ಅಲ್ಲದೆ ವಾರದಲ್ಲಿ ಒಂದು ದಿನ ರಜೆ ಸಿಗುತ್ತದೆ. ನೆರಳಿನಲ್ಲಿ ಮಾಡಬಹುದಾದ ಕೆಲಸದ ಶ್ರಮವು ಹೆಚ್ಚು ಇರುವುದಿಲ್ಲ. ಆದ್ದರಿಂದ ಇಂದು ಕಾಡುಗೊಲ್ಲ ಯುವತಿಯರು ಪ್ರೌಢಶಿಕ್ಷಣದ ನಂತರ ದುಡಿಮೆಗಾಗಿ ನಗರಗಳ ಕಡೆ ಮುಖ ಮಾಡಿದ್ದಾರೆ.

ಈ ಯುವತಿಯರು ಮದುವೆಯ ಸಮಯಕ್ಕೆ ಹಟ್ಟಿಗೆ ಹಿಂದಿರುಗುತ್ತಾರೆ. ಹಟ್ಟಿಯಲ್ಲಿ ಅಂತರ್ಜಾತಿ ವಿವಾಹಕ್ಕೆ ವಿರೋಧ. ಇರುವುದರಿಂದ ಮಹಿಳೆಯರು ಅಂತಹ ವಿವಾಹಗಳಿಗೆ ಎದುರುತ್ತಾರೆ. ಸಂಬಂಧಿಕರಲ್ಲಿ ಈಗಾಗಲೇ ಗಂಡು ಗೊತ್ತಾಗಿರುವುದರಿಂದ ಅವರೊಟ್ಟಿಗೆ ವಿವಾಹವಾಗುತ್ತಾರೆ. ಆದರೆ ದುಡಿಮೆಯ ಕಾರಣಕ್ಕೆ ವಲಸೆ ಹೋದ ಪುರುಷರು ಕೆಲವೊಮ್ಮೆ ಅಂತರ್ಜಾತಿ ವಿವಾಹಗಳನ್ನು ಮಾಡಿಕೊಳ್ಳುತ್ತಾರೆ. ಅವರನ್ನೇನು ಇಂದು ಹಟ್ಟಿಯಿಂದ ಹೊರಹಾಕಿಲ್ಲ. ಅವರು ಬೆಂಗಳೂರಿನಲ್ಲಿಯೇ ನೆಲಸಿ ಹಟ್ಟಿಯ ಆಗಾಗ ಬಂದು ಹೋಗುತ್ತಾರೆ. ಹೀಗೆ ಬರುವಿಕೆ ಯಾವ ನಿರ್ಬಂಧವೂ ಇಂದು ಇಲ್ಲ. ಅವರ ದುಡಿಮೆ ಕುಟುಂಬದ ಅಗತ್ಯವಾದದ್ದರಿಂದ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ತಮ್ಮ ಸಂಸ್ಕೃತಿಯಲ್ಲಿ ಮಾಡಿಕೊಂಡಿದ್ದಾರೆ.ಆದರೆ ಉದ್ಯೋಗಕ್ಕೆ ತೆರಳಿರುವ ಮಹಿಳೆಯರು ಅಂತರ್ಜಾತಿ ವಿವಾಹಗಳಾದ ಉದಾಹರಣೆಗಳು ಇಲ್ಲ. ಮದುವೆಯ ಹೊತ್ತಿಗೆ ಕೆಲಸ ಬಿಟ್ಟು ಅವರು ಹಟ್ಟಿಗೆ ಹಿಂದಿರುತ್ತಾರೆ. ಕೆಲವೊಮ್ಮೆ ಮದುವೆಯ ನಂತರ ಗಂಡನೊಂದಿಗೆ ಮತ್ತೆ ಉದ್ಯೋಗಕ್ಕೆ ವಲಸೆ ಹೋಗುತ್ತಾರೆ.

ಪಾವಗಡ ತಾಲ್ಲೂಕಿನಲ್ಲಿ ಮಳೆಯ ಅಭಾವ, ಬರ, ಹುಲ್ಲುಗಾವಲಿಲ್ಲದಿರುವುದು, ಸ್ಥಳೀಯ ಸಂಪನ್ಮೂಲಗಳ ಕೊರತೆ, ವ್ಯವಸಾಯಕ್ಕೆ ಭೂಮಿ ಇಲ್ಲದಿರುವುದು, ಅನಕ್ಷರತೆ, ಸುಲಿಗೆ ದಬ್ಬಾಳಿಕೆ, ಆರ್ಥಿಕ ಅಸಮಾನ ಹಂಚಿಕೆಗಳು, ಬಡತನ ವಲಸೆಗೆ ಕಾರಣವಾದ ಸಂಗತಿಗಳಾಗಿವೆ. ಇಲ್ಲಿ ನೆಲೆಸಿರುವ ಕಾಡುಗೊಲ್ಲ ಬುಡಕಟ್ಟು ಬಡತನದಲ್ಲಿ ತೀರ ಸಂಕಷ್ಟವನ್ನೇ ಎದುರಿಸುತ್ತಿದೆ. ಕುರಿಸಾಕಾಣಿಕೆಗೆ ಕುಟುಂಬದ ಸ್ಥರವನ್ನು ಎತ್ತರಿಸಲು ಸಾಧ್ಯವಾಗಿಲ್ಲ. ಕುರಿಗೆ ಮೇವಿನ ಅಭಾವ, ಕುರಿಗಳ ಸಾವು, ವಿಮೆ, ಮಾಡಿಸದಿರುವುದು ಮೂಲ ವೃತ್ತಿಯಲ್ಲಿ ವಿಶ್ವಾಸ ಕಳೆದುಕೊಳ್ಳುವಂತೆ ಮಾಡಿದೆ. ಅನಿವಾರ್ಯವಾಗಿ ವೃತ್ತಿಯ ಜೊತೆಯಲ್ಲಿ ತೊಡಗಿ ವಲಸೆ ಹೋಗುವುದು ಅನಿವಾರ್ಯವಾಗಿದೆ. ಬುಡಕಟ್ಟಿನಲ್ಲಿ ಮಹಿಳೆಯರ ದುಡಿಮೆಯ (ಸಾಂಪ್ರದಾಯಿಕ) ವಲಯಗಳು ಕುಗ್ಗಿದ್ದರಿಂದ ಕೂಲಿಗಾಗಿ ಪರದಾಡುವಂತ ಸ್ಥಿತಿ ಉಂಟಾಗಿ ವಲಸೆ ಅನಿವಾರ್ಯವಾಯಿತು.

ಕಾಡುಗೊಲ್ಲರ ಮಹಿಳೆಯರ ಆರ್ಥಿಕ ವಲಸೆ ಮುಖ್ಯವಾಗಿ ಯುವ ಜನಾಂಗದ ವಲಸೆಯಂತೆ ಇದೆ. ದುಡಿಯುವಷ್ಟು ಪ್ರಾಪ್ತವಯಸ್ಕಳಾದ ಹೆಣ್ಣು ವಲಸೆ ಹೋಗಲು ಕಾತರಳಾಗುತ್ತಾಳೆ.ಅವಳಿಗೆ ಗಾರ್ಮೆಂಟ್ಸ್, ಕಾರ್ಖಾನೆ ಕೂಲಿ ಬಿಟ್ಟರೆ ಬೇರೊಂದು ಪರಿಚಯವಿಲ್ಲ. ತನ್ನ ಅನಕ್ಷರತೆ, ಕಾರಣದಿಂದ ಈ ಕೆಲಸವನ್ನೇ ಆಯ್ಕೆ ಮಾಡಿಕೊಳ್ಳುತ್ತಾಳೆ. ಪಾವಗಡ ತಾಲ್ಲೂಕು ಬರಪೀಡಿತ ಪ್ರದೇಶ ಇಲ್ಲಿ ಯಾವುದೇ ಉದ್ಯೋಗ ನೀಡುವ ಗಾರ್ಮೆಂಟ್ಸ್, ಕಾರ್ಖಾನೆಗಳು ಇಲ್ಲದ ಕಾರಣ ಬೆಂಗಳೂರಿನ ಕಡೆಗೆ ವಲಸೆ ನಿಗಧಿಯಾಗಿದೆ.ಆದ್ದರಿಂದ ಮಹಿಳೆಯರು ಬೆಂಗಳೂರಿಗೆ ತೆರಳುತ್ತಾರೆ.ಮಹಿಳೆಯರ ಈ ದುಡಿಮೆಯ ಕುಟುಂಬದ ಆರ್ಥಿಕ ಸ್ತರ ಹೆಚ್ಚಿದೆ.ಕಡಿಮೆ ಕೂಲಿಗೆ ದುಡಿಯುತ್ತಿದ್ದ ತಂದೆ-ತಾಯಿಯರು ಕೆಲಸ ಬಿಟ್ಟು, ಮಕ್ಕಳು ತಿಂಗಳು ಕಳುಹಿಸುವ ದುಡ್ಡಿಗೆ ಆತುಕೊಂಡಿರುತ್ತಾರೆ. ಈ ಕುಟುಂಬಗಳು ಬಿ.ಪಿ.ಎಲ್.ಕಾರ್ಡ್‌ಗಳನ್ನು ಹೊಂದಿರುವುದರಿಂದ ಕಡಿಮೆ ದರದಲ್ಲಿ ಪಡಿತರ ಪಡೆದು ಮಕ್ಕಳು ಕಳಿಸುವ ದುಡ್ಡಿನಲ್ಲಿ ಉಳಿತಾಯ ಮಾಡಿ ಜೀವನಮಟ್ಟ ಸುಧಾರಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ.

ಮಹಿಳೆಯರು ದುಡಿದು ಕಳುಹಿಸುವ ದುಡ್ಡಿನಲ್ಲಿ ಮನೆ ನಿರ್ಮಾಣ, ರಿಪೇರಿ, ಮದುವೆಗೆ ಒಡವೆ ಮಾಡಿಸಿಕೊಳ್ಳುವುದು, ಮನೆಗೆ ಬೇಕಾದ ಅಗತ್ಯ ಸೌಲಭ್ಯಗಳಾದ ಕುರ್ಚಿ, ಮೇಜು, ಹಾಸಿಗೆ, ಟೀವಿ, ಪೋನ್.ಗೆ ವ್ಯಯಿಸಿರುವುದು ಕಂಡು ಬರುತ್ತದೆ.

ಕೆಲವೊಮ್ಮೆ ಗಾರ್ಮೆಂಟ್ಸ್ ಕೆಲಸಗಳನ್ನು ಬಿಟ್ಟು ಹಿಂದುರುಗುವ ಮಹಿಳೆಯರು ಹಟ್ಟಿಯಲ್ಲಿಯೇ ಹೊಲಿಗೆ ಯಂತ್ರವನ್ನಿಟ್ಟು ದುಡಿಯುವ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ.

2) ಸಾಮಾಜಿಕ ವಲಸೆ :-

ಸಾಮಾಜಿಕ ವಲಸೆಯು ಮುಖ್ಯವಾಗಿ ವಿವಾಹದ ಕಾರಣದಿಂದ ಉಂಟಾಗಿರುವುದು, ಕಾಡುಗೊಲ್ಲ ಪುರುಷ ಈಗಾಗಲೇ ಉದ್ಯೋಗದ ಕಾರಣಕ್ಕೆ ಹಟ್ಟಿಯಿಂದ ಬೇರೆ ಕಡೆ ನೆಲೆಸಿದ್ದರೆ.ಅವರನ್ನು ವಿವಾಹವಾಗುವ ಮಹಿಳೆಯರು ಅವರೊಟ್ಟಿಗೆ ತೆರಳುತ್ತಾರೆ.

ಕಾಡುಗೊಲ್ಲ ಪುರುಷರಲ್ಲೂ ಅನಕ್ಷರತೆ, ಬಡತನದ ಕಾರಣಕ್ಕೆ ಕಾರ್ಖಾನೆ, ಸೆಕ್ಯೂರಿಟಿಗಾರ್ಡ್, ತರಕಾರಿ ವ್ಯಾಪಾರ, ಮೊದಲಾದ ವೃತ್ತಿಯನ್ನು ಮಾಡುವುದು ಕಂಡುಬರುತ್ತದೆ.ಅಕ್ಷರಸ್ಥರಾದವರು ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆದು ಹಟ್ಟಿಯಿಂದ ದೂರವಾಗಿ ಕೆಲಸ ಮಾಡುವ ಸ್ಥಳದಲ್ಲಿ ವಾಸಿಸುತ್ತಾರೆ.ಹೀಗೆ ವೃತ್ತಿಯ ಕಾರಣದಿಂದ ಪುರುಷನು ಎಲ್ಲಿ ವಾಸಿಸುತ್ತಾನೋ ಅಲ್ಲಿಗೆ ಮಹಿಳೆಯು ತೆರಳುತ್ತಾಳೆ.

ಕೂಲಿ, ಕಾರ್ಮಿಕ, ಗಾರ್ಡ್, ವ್ಯಾಪಾರ ಮೊದಲಾದವುಗಳಿಗೆ ಕಾಡುಗೊಲ್ಲ ಪುರುಷ ವಲಸೆ ಹೋದಾಗ ಅವರನ್ನು ವಿವಾಹವಾದ ಮಹಿಳೆಯರು ಸ್ಥಳೀಯವಾಗಿ ಸಿಗುವ ದುಡಿಮೆಯನ್ನು ಹುಡುಕಿಕೊಳ್ಳುತ್ತಾರೆ.ಅದಕ್ಕೆ ಹೊಂದಿಕೊಳ್ಳುತ್ತಾರೆ.

ಶೈಕ್ಷಣಿಕ ವಲಸೆ :-

ಶಿಕ್ಷಣವನ್ನು ಪಡೆಯುವ ಉದ್ದೇಶದಿಂದ ಉಂಟಾಗುವ ಸ್ಥಾನಾಂತರವನ್ನು ಶೈಕ್ಷಣಿಕ ವಲಸೆ ಎಂದು ಕರೆಯಲಾಗುತ್ತದೆ.ಕಾಡುಗೊಲ್ಲ ಬುಡಕಟ್ಟಿನಲ್ಲಿ ಶೈಕ್ಷಣಿಕ ವಲಸೆ ಮಹಿಳಾ ಬದುಕಿನಲ್ಲಿ ವಿರಳವಾಗಿದೆ.ಅವರ ಪ್ರಮಾಣ ಶೇ 9% ಮಾತ್ರ.ಬುಡಕಟ್ಟಿನಲ್ಲಿ ಇರುವ ಅಕ್ಷರಸ್ಥ ಬುದ್ಧಿವಂತ, ಆರ್ಥಿಕವಾಗಿ ಅನುಕೂಲಸ್ಥವಾದ ಕುಟುಂಬದವರು ಮಾತ್ರ ತಮ್ಮ ಹೆಣ್ಣು ಮಕ್ಕಳಿಗೆ ಉನ್ನತಶಿಕ್ಷಣಕ್ಕಾಗಿ ನಗರಗಳಿಗೆ ಕಳುಹಿಸಿಕೊಡುತ್ತಾರೆ.

ಕಾಡುಗೊಲ್ಲ ಬುಡಕಟ್ಟಿನ ಒಳಗೆ ಮಹಿಳೆಯರಿಗೆ ಸಂಬಂಧಿಸಿದಂತೆ ಆರ್ಥಿಕ ವಲಸೆಗೆ ಇರುವಷ್ಟು ಪ್ರಾಮುಖ್ಯತೆ ಶೈಕ್ಷಣಿಕ ವಲಸೆಗೆ ಇಲ್ಲ. ಶಿಕ್ಷಣದ ವಲಸೆಯ ವೆಚ್ಚದಾಯಕವಾದ್ದರಿಂದ ಅಂತಹ ವಲಸೆಯನ್ನು ಸಂಕಷ್ಟದಲ್ಲಿರುವ, ಬಡವರಾದ, ಕಾಡುಗೊಲ್ಲರು ನಿರಾಕರಿಸುತ್ತಾರೆ.ಜೀವನೋಪಾಯಕ್ಕೆ, ಸಂಪಾದನೆಗಾಗಿಯೇ ವಲಸೆ ಎಂಬ ಕ್ರಿಯೆಗೆ ಇವರು ಒಳಗಾಗಿರುವುದರಿಮದ ಮಹಿಳೆಯರ ಶೈಕ್ಷಣಿಕ ವಲಸೆಯನ್ನು ನಿರಾಕರಿಸುತ್ತಾರೆ.

ಸಾಂಸ್ಕೃತಿಕ ವಲಸೆ :-

ಕಾಡುಗೊಲ್ಲ ಬುಡಕಟ್ಟಿನಲ್ಲಿ ಸಾಂಸ್ಕೃತಿಕ ವಲಸೆಗೆ ನಿಷೇದವಿದೆ.ಕಾಡುಗೊಲ್ಲ ಮಹಿಳೆಯರು ಹಟ್ಟಿಯೊಳಗೆ ಬದುಕುವುದಕ್ಕೆ ನಿರಾಕರಿಸಿ ಕುಟುಂಬ ಸಮೇತ ವಲಸೆ ಹೋಗಲು ಅಥವಾ, ಒಬ್ಬಳೇ ವಲಸೆ ಹೋಗಲು ಬುಡಕಟ್ಟಿನ ನಿಯಮಗಳು ಅವಕಾಶ ನೀಡುವುದಿಲ್ಲ. ಎಷ್ಟೇ ಕಷ್ಟವಿದ್ದರೂ, ದಾರಿದ್ರ್ಯವಿದ್ದರೂ, ಬದುಕು ಅಸಹನೀಯ ವಾಗಿದ್ದರೂ ಅದೆಲ್ಲವನ್ನು ಸಹಿಸಿ ಮಹಿಳೆಯರು ಬುಡಕಟ್ಟಿನ ಒಳಗೆ ವಾಸಿಸಬೇಕಾಗುತ್ತದೆ.

ವಲಸೆಯ ಪರಿಣಾಮಗಳು :-

ಸಂಪ್ರದಾಯ, ಸಾಂಸ್ಕೃತಿಯ, ಸಾಮಾಜಿಕವಾಗಿ ಬಂಧಿಸಲ್ಪಟ್ಟ ವಾತಾವರಣದಲ್ಲಿ ನಿರ್ಬಂದಗಳ ಪಂಜರದಲ್ಲಿ ಬದುಕುತ್ತಿದ್ದ ಮಹಿಳೆಯರಿಗೆ ಬದುಕಿನಲ್ಲಿ ಸ್ವತಂತ್ರದ ಪರಿಚಯ

ಮಾಡಿಕೊಟ್ಟಿದ್ದೇ ವಲಸೆ. ಆಧುನಿಕ ಸ್ವತಂತ್ರ ಜೀವನ, ಆಧುನಿಕತೆಯು ಮಹಿಳಾ ಬದುಕಿಗೆ ಮಾತ್ರವಲ್ಲದೆ ಬುಡಕಟ್ಟಿಗೆ ಪ್ರವೇಶಿಸುತ್ತಿರುವುದು ವಲಸೆಯ ಮೂಲಕ ಎಂದರೆ ತಪ್ಪಾಗಲಾರದು.ಬುಡಕಟ್ಟಿನೊಳಗೆ ಚೌಕಟ್ಟಿನಲ್ಲಿ ಬದುಕುತ್ತಿದ್ದ ಮಹಿಳೆಯರು ಬೆಂಗಳೂರಿನಂತ ಬೃಹತ್ ನಗರಕ್ಕೆ, ಆಧುನಿಕ ಜೀವನಕ್ಕೆ ತೆರೆದುಕೊಂಡಿದ್ದು ಅಲ್ಲಿನ ನಯ-ನಾಜೂಕ, ವೇಷ-ಭೂಷಣ, ಮಾತುಗಾರಿಕೆ, ಅನುಸರಿಸಲು ಪ್ರೇರಣೆ ನೀಡಿ ಆ ಮೂಲಕ ಆ ಬದಲಾವಣೆಯನ್ನು ಹಟ್ಟಿಯ ಬದುಕಿಗೂ ಪರಿಚಯಿಸಿದರು.ಈ ಆಧುನಿಕತೆಯು ಬೌದ್ಧಿಕತೆಯದ್ದಲ್ಲ ಸಮಾನತೆಯ ನೆಲೆಯದ್ದಲ್ಲ. ಆಧುನಿಕ ಬದುಕಿನ ಪರಿವೇಷವಷ್ಟೇ.

ವೃತ್ತಿಯ ಕಾರಣಕ್ಕಾಗಿ ವಲಸೆ ಹೋಗುತ್ತಿರುವ ಮಹಿಳೆಯರು ಅನ್ಯ ಸಂಸ್ಕೃತಿಯವರೊಂದಿಗೆ ಬೆರೆಯಬೇಕಾಯಿತು. ಹಟ್ಟಿಯಿಂದ ಚೆದುರಿದ ಇವರ ಬದುಕು ಹೊಸ ಆಯಾಮವನ್ನು ಪಡೆಯಲು ಸಾಧ್ಯವಾಯಿತು. ಹೊಸ ಬದುಕಿನ ನಿರ್ಮಾಣ ಮಾಡಿಕೊಳ್ಳುವ ಸವಾಲನ್ನು ಸಾಮರ್ಥವಾಗಿಯೇ ಇವರು ಎದುರಿಸಿದರು. ಮೂಲತಃ ದುಡಿಮೆಗಾರರೇ, ಆಗಿದ್ದ ಕಾಡುಗೊಲ್ಲ ಮಹಿಳೆಯರು ದುಡಿಮೆಯಿಂದ ಉಂಟಾದ ಬದಲಾವಣೆಯನ್ನು ಸುಲಭವಾಗಿ ಜೀರ್ಣಸಿಕೊಂಡರು.ಸಿಗುವ ವೃತ್ತಿಯೂ ಬೌದ್ಧಿಕ ಸವಾಲಿನದಲ್ಲ ಹೆಚ್ಚು ದೈಹಿಕ ಶ್ರಮದುದ್ದಾರಿಂದ ಬಹುಬೇಗೆ ಹೊಂದಿಕೊಂಡರು.ಅಲ್ಲದೆ, ಸೂಕ್ಷ್ಮ ಕೆಲಸ ಮಾಡುವ ಕೌಶಲ್ಯವನ್ನೂ ಗಳಿಸಿಕೊಂಡರು.

ವಲಸೆಯು ನೀಡಿದ ವಿಭಿನ್ನ ಬದುಕುಗಳ ಪರಿಚಯ ಜೀವನ ಶಿಕ್ಷಣ ಕಾಡುಗೊಲ್ಲರು ತಮ್ಮ ಸ್ಥಿತಿಯನ್ನು ಕುರಿತು ಯೋಚಿಸುವಂತೆ ಮಾಡಿದೆ. ಹೀಗಾಗಿ ಬುಡಕಟ್ಟಿನೊಳಗಿನ ಸಂಪ್ರದಾಯಗಳನ್ನು ಅಸಮಾನತೆಯ ಆಚರಣೆಗಳನ್ನು ನಿಧಾನವಾಗಿ ಪ್ರಶ್ನಿಸುತ್ತಿದ್ದಾರೆ. ಆಚರಣೆಯಿಂದ ಹಿಂದೆ ಸರಿಯುತ್ತಿದ್ದಾರೆ.

ಮಹಿಳೆಯ ಆರ್ಥಿಕ ವಲಸೆಯಿಂದ ಆರ್ಥಿಕ ಸ್ವಾವಲಂಬನೆ, ಕುಟುಂಬದ ಆರ್ಥಿಕ ವಿಸ್ತರಣೆ, ಜೀವನಮಟ್ಟ ಸುಧಾರಣೆಯಾಗದೆ.

ಮಹಿಳೆಯ ವಲಸೆಯು ಕೆಲವೊಮ್ಮೆ ಶಿಕ್ಷಣ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿದೆ. ಸಾಮಾಜಿಕ ವಲಸೆಯಲ್ಲಿ ಬೇರೆ ಸ್ಥಳಗಳಿಗೆ ಹೋಗಿ ಊರೊಟ್ಟಿಗೆ ನೆಲಸುವ ಈ ಕುಟುಂಬಗಳಲ್ಲಿ ಶಿಕ್ಷಣದ ಮಹತ್ವ ಅರಿತು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಉದ್ದೇಶಕ್ಕೆ ಬದ್ಧರಾಗುತ್ತಿದ್ದಾರೆ.

ಕೂಲಿ. ಕಾರ್ಮಿಕ. ದುಡಿಮೆಗಾಗಿಯೇ ಮಹಿಳೆಯರು ವಲಸೆ ಹೋದರೂ ಅವರು ಸಂಪಾದಿಸುವ ಬಂಡವಾಳ ಅವರ ಆರ್ಥಿಕ ಬದುಕಿನ ಸ್ವಾವಲಂಬನೆಗೆ ಕಾರಣವಾಗುತ್ತಿದೆ.ತಾವು

ಗಳಿಸಿದ ದುಡ್ಡಿನಲ್ಲಿ ಹೊಲಿಗೆಯಂತ್ರ ಖರೀದಿಸಿ ಹಟ್ಟಿಯಲ್ಲಿ ವೃತ್ತಿ ಆರಂಭಿಸಿರುವ ಉದಾಹರಣೆಗಳಿವೆ.

ವಲಸೆ ಕಾರಣದಿಂದ ಮಹಿಳೆಯರ ಬದುಕಿನಲ್ಲಿ ಒಳಿತು ಉಂಟಾಗಿರುವಂತೆ ಕೆಲವು ಅನಾನುಕೂಲಗಳೂ ಸಂಭವಿಸುತ್ತವೆ. ನಗರ ಜೀವನದ ಬಗೆಗಿನ ಅಜ್ಞಾನ, ವಂಚನೆ, ನಗರದ ಕುರೂಪಗಳಿಗೆ ಒಳಗಾಗಬೇಕಾದುದೂ, ಅನಾಥ ಪ್ರಜ್ಞೆ ಮಹಿಳೆಯರನ್ನು ಕಾಡುತ್ತವೆ.

ವಲಸೆಯ ಕಾರಣದಿಂದ ಕಾಡುಗೊಲ್ಲರ ಸಾಂಸ್ಕೃತಿಕ ಬಿಗಿಯು ಸಡಿಲವಾಗುತ್ತಿವೆ. ಸಾಂಸ್ಕೃತಿಕ ಅನನ್ಯತೆಯ ಸಡಿಲವಾಗುತ್ತಿದೆ.ವಲಸಿಗರು ವರ್ಷಕ್ಕೊಮ್ಮೆ ದೇವಸ್ಥಾನ ತಮ್ಮ ಗುಡಿಕಟ್ಟೆಗೆ ಹೋಗುವುದು ಪದ್ಧತಿಯಂತೆ ಮಾಡುತ್ತಾರೆ.ಮೊದಲಿನಂತೆ ಅವುಗಳ ಮೇಲೆ ಯಾವುದೇ ಗೌರವವಿಲ್ಲ. ಬುಡಕಟ್ಟಿನ ಸಮುದಾಯದ ಬದುಕನ್ನು ವಲಸೆಯು ನಿಧಾನವಾಗಿ ಬದಲಿಸುತ್ತಿದೆ.ನಗರದಲ್ಲಿ ಚೆದುರಿದಂತೆ ನೆಲೆಸುವ ಕಾಡುಗೊಲ್ಲ ಬುಡಕಟ್ಟಿನ ಜನರು ಆಧುನಿಕ ಬದುಕಿನ ಪ್ರಭಾವಕ್ಕೆ ಒಳಗಾಗಿ ತಮ್ಮ ಸಾಂಸ್ಕೃತಿಕ ಆಚಾರ-ವಿಚಾರಗಳನ್ನು ತ್ಯಜಿಸಿದ್ದಾರೆ.ಯಾವುದೇ ಭಯ-ಆತಂಕಗಳಲ್ಲದೆ ಹೊಸ ಜೀವನಕ್ಕೆ ಹೊಂದಿಕೊಳ್ಳುತ್ತಿರುವುದು ಸಹಜವಾಗಿದೆ.

ಅಧ್ಯಾಯ 11

ಕಾಡುಗೊಲ್ಲ ಮಹಿಳಾ ಅಭಿವೃದ್ಧಿ ಸಂಕಥನ

ಮಹಿಳೆಯರು ಅಭಿವೃದ್ಧಿಯನ್ನು ಉಂಟುಮಾಡುತ್ತಿರುವರೇ? ಅಥವಾ ಅಭಿವೃದ್ಧಿ ಯೋಜನೆಯ ಫಲಾನುಭವಿಗಳೇ? ಎಂಬ ಪ್ರಶ್ನೆಯು ಭಾರತೀಯ ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳೆಯರನ್ನು ಬೇರೆಯಾಗಿಯೇ ಗುರುತಿಸುವಂತೆ ಮಾಡಿದೆ. ಮಹಿಳೆಯರು ಕೌಶಲ್ಯರಹಿತ, ದುರ್ಬಲರು, ಗುಲಾಮರು, ಬಡವರು, ಅಸಹಾಯಕರು ಎಂದು ಗುರುತಿಸಿ ಹಲವು ಮಹಿಳಾ ಅಭಿವೃದ್ಧಿಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ. "ದೇಶದ ಆರ್ಥಿಕತೆಯಲ್ಲಿ ಮಹಿಳೆಯರನ್ನು ಪ್ರಮುಖ ದುಡಿಮೆಗಾರರನ್ನಾಗಿ ಗುರುತಿಸದಿರುವುದೇ ಸಂಪನ್ಮೂಲಗಳ ಅಸಮಾನ ಹಂಚಿಕೆಗೆ ಕಾರಣ..... ಹೀಗೆ ಬರುವ ಸಂಪನ್ಮೂಲಗಳು ಮಹಿಳೆಯರ ಪರಿಸರ ಕುರಿತು ದೂರದೃಷ್ಟಿ ಮತ್ತು ಸಮುದಾಯದ ಸ್ವಾವಲಂಬನೆಗೆ ವಿರುದ್ಧವಾಗಿ ಕೇವಲ ಪುರುಷರ ಬೇಡಿಕೆ ಕನಸುಗಳನ್ನು ಪೂರೈಸುವುದಕ್ಕಾಗಿ ವ್ಯಯವಾಗುತ್ತದೆ"[1] ಜೋಸರಪ್ ಚಿಂತನೆಯು ಮಹಿಳೆಯು ಅಭಿವೃದ್ಧಿ ಯೋಜನೆಯ ಫಲಾನುಭವಿ ಮಾತ್ರ ಎಂಬ ಸ್ಥಿತಿಯನ್ನು ಪರಿಚಯಿಸುತ್ತದೆ.

ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹಂತಹಂತವಾಗಿ ಹಲವು ಹೋಜನೆಗಳ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಅಭಿವೃದ್ಧಿ ಎಂದರೆ ಇರುವ ಸ್ಥಿತಿಯಿಂದ ಬಿಡುಗಡೆಯನ್ನು ಹೊಂದಿ ಉತ್ತಮ ಜೀವನಮಟ್ಟ ಹೊಂದುವುದೇ ಆಗಿದೆ. ಭಾರತದಲ್ಲಿ ಸ್ತ್ರೀಯರ ಅಸಹಾಯಕತೆ, ಶೋಷಣೆಯನ್ನು ಗಮನಿಸಿ ಅವರಿಗೆ ಶೈಕ್ಷಣಿಕ, ಆರ್ಥಿಕ, ಸಂವಿಧಾನಿಕ, ಶಾಸನಾತ್ಮಕ, ಸಾಮಾಜಿಕ ಹಕ್ಕು ಮತ್ತು ಅವಕಾಶ ನೀಡುವಂತಹ ಯೋಜನೆಗಳನ್ನು ಸಿದ್ಧಗೊಳಿಸಿ ಇಂದು ಜಾರಿಗೆ ತರಲಾಗುತ್ತಿದೆ.

ಕಾಡುಗೊಲ್ಲ ಬುಡಕಟ್ಟು ಸರ್ಕಾರದ ಹಲವು ಯೋಜನೆಗಳ ಫಲಾನುಭವಿಯಾಗಿದೆ. ಇಲ್ಲಿ ಪ್ರತ್ಯೇಕವಾಗಿ ಕಾಡುಗೊಲ್ಲ ಮಹಿಳೆಯರಿಗೆಂದೇ ಯಾವುದೇ ಯೋಜನೆಗಳು ಇಲ್ಲ. ಕಾಡುಗೊಲ್ಲ ಬುಡಕಟ್ಟಿಗೆ ಪ್ರವರ್ಗ-Iರ ಅಡಿಯಲ್ಲಿ ನೀಡುವ ಯೋಜನೆಯೇ ಕಾಡುಗೊಲ್ಲ ಮಹಿಳೆಗೂ ಅನ್ವಯವಾಗುತ್ತದೆ. ಮುಂದುವರಿದು ಕರ್ನಾಟಕದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೇಂದ್ರ ಸರ್ಕಾರ ಪ್ರಾಯೋಜಿತ ಮಹಿಳಾ ಕಾರ್ಯಕ್ರಮ ಯೋಜನೆಗಳನ್ನು ಕಾಡುಗೊಲ್ಲ ಮಹಿಳೆಯರು ಪಡೆಯ ಬಹುದಾಗಿದೆ. ಅಂತಹ ಕೆಲವು ಯೋಜನೆಗಳನ್ನು ಈ ಅಧ್ಯಾಯದಲ್ಲಿ ಸಂಗ್ರಹಿಸಿ ದಾಖಲಿಸುವ ಪ್ರಯತ್ನ ಮಾಡಿದ್ದೇನೆ.

ಪೂರಕ ಪೌಷ್ಠಿಕ ಕಾರ್ಯಕ್ರಮ:

ಗರ್ಭಿಣಿ ಸ್ತ್ರೀಯರಿಗೆ, ಹಾಲುಣಿಸುವ ತಾಯಂದಿರಿಗೆ, 6 ತಿಂಗಳಿಂದ 6 ವರ್ಷದವರೆಗಿನ ಮಕ್ಕಳಿಗೆ ಶಿಫಾರಸ್ಸು ಮಾಡಲ್ಪಟ್ಟ ಪೌಷ್ಠಿಕತೆ ಮಟ್ಟಗಳನ್ನು ಫಲಾನುಭವಿಗಳು ಹೊಂದುವಂತೆ ಸಾಧ್ಯವಾಗಲು ಪೂರಕ ಪೌಷ್ಠಿಕ ಆಹಾರ ಒದಗಿಸುವುದು. ಇಂತಹ ಆಹಾರವನ್ನು ಬೇಯಿಸಿದ ರೂಪದಲ್ಲಿ ಅಥವಾ ಮನೆಗೆ ತೆಗೆದುಕೊಂಡ ಹೋಗುವ ಆಹಾರವಾಗಿ ನೀಡಲಾಗುವುದು.

ಬೆಳವಣಿಗೆ ಪರಿಶೀಲನೆ:

ಐದು ವರ್ಷದೊಳಗಿನ ಮಕ್ಕಳ ತೂಕವನ್ನು ಮಾಡಲಾಗುತ್ತದೆ. ಬೆಳವಣಿಗೆ ಚಾರ್ಟ್‌ಗಳ ಮೂಲಕ ಅವರ ಬೆಳವಣಿಗೆಯನ್ನು ಪರಿಶೀಲಿಸಿ ಪೌಷ್ಠಿಕತೆಯ ಮಟ್ಟ ತಿಳಿಯಲಾಗುತ್ತದೆ.

ಅನೌಪಚಾರಿತ ಶಾಲಾ ಪೂರ್ವ ಶಿಕ್ಷಣ:

ಈ ಯೋಜನೆಯುಮೂರರಿಂದ ಆರು ವರ್ಷದೊಳಗಿನ ಶಾಲಾ ಪೂರ್ವ ಮಗುವಿನ ಮೇಲೆ ಕೇಂದ್ರೀಕೃತವಾಗಿದ್ದು, ಆಟಿಕೆಗಳ ಸಲಕರಣೆಗಳ ಮೂಲಕ ಕಲಿಸುವ ವಿಧಾನವಾಗಿದೆ. ಇದು ಶಾಲಾಪೂರ್ವ ಶಿಕ್ಷಣ ಮಗುವಿನ ಸರ್ವಾಂಗೀಣ ಅಭಿವೃದ್ಧಿಯುಕ್ತ ಗಮನ ಕೇಂದ್ರೀಕರಿಸಿ ಮಕ್ಕಳ ಬೆಳವಣಿಗೆಗೆ ಆಟದ ಪರಿಸರ ಸೃಷ್ಟಿಸುತ್ತದೆ.

ಚುಚ್ಚುಮದ್ದು:

ಗರ್ಭಿಣಿ ಸ್ತ್ರೀಯರ ಮತ್ತು 6 ವರ್ಷದ ಒಳಗಿನ ಮಕ್ಕಳಿಗೆ ಈ ಸೇವೆಯ ಅಡಿಯಲ್ಲಿ ಸೋಂಕುರೋಗಗಳ ವಿರುದ್ಧ ಚುಚ್ಚುಮದ್ದು ನೀಡಲಾಗುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಮೂರು ಡೋಸ್‌ಗಳ ಟಿಟನಸ್, ಟಾಕ್ಸಯ್ಡ್ ನೀಡಲಾಗುತ್ತದೆ. ಆರು ವರ್ಷದ ಒಳಗಿನ ಮಕ್ಕಳಿಗೆ ಆರು ಮಾಸಿಕ ಕಾಯಿಲೆಗಳಾದ ಪೋಲಿಯೋ, ಗಂಟಲಮಾರಿ, ನಾಯಿಕೆಮ್ಮು, ಟೆಟನಸ್, ಕ್ಷಯ ಮತ್ತು ದಡಾರ, ಇವುಗಳ ವಿರುದ್ಧ ರಕ್ಷಣೆಗೆ ಚುಚ್ಚುಮದ್ದುಗಳನ್ನು ನೀಡಲಾಗುತ್ತದೆ.

ಆರೋಗ್ಯ ತಪಾಸಣೆ:

ಪ್ರತೀ ಮೂರು ತಿಂಗಳಿಗೊಮ್ಮೆ ಹಾಲುಣಿಸುವ ತಾಯಂದಿರಿಗೆ, ಗರ್ಭಿಣಿ ಸ್ತ್ರೀಯರಿಗೆ, 6 ತಿಂಗಳು 6 ವರ್ಷದ ವರೆಗಿನ ಮಕ್ಕಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯು

ನಿಯಮಿತವಾಗಿ ಆರೋಗ್ಯ ತಪಾಸಣೆ ಕೈಗೊಳ್ಳುತ್ತಾರೆ ಮತ್ತು ಪ್ರತೀ ತಿಂಗಳು ಉಪಕೇಂದ್ರದ ಕಿರಿಯ ಆರೋಗ್ಯ ಸಹಾಯಕಿ 6 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಗರ್ಭಿಣಿ ಸ್ತ್ರೀಯರಿಗೆ ಹಾಗೂ ಹಾಲುಣಿಸುವ ತಾಯಂದಿರ ಆರೋಗ್ಯ ತಪಾಸಣೆ ಕೈಗೊಳ್ಳುತ್ತಾರೆ.

ಆರೋಗ್ಯ ಮಾಹಿತಿ ಸೇವೆ:

ಮಹಿಳೆ ಮತ್ತು ಮಕ್ಕಳಿಗೆ ತುರ್ತು ವೈದ್ಯಕೀಯ ಅಗತ್ಯತೆಗಳು ಅಗತ್ಯವಿದ್ದಾಗ ಅಂಗನವಾಡಿ ಕಾರ್ಯಕರ್ತೆಯರು ಒಂದು ರೆಫರಲ್ ಚೀಟಿ ನೀಡುವ ಮೂಲಕ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಲು ಸೂಚಿಸುವುದು.

ಪೌಷ್ಠಿಕ ಮತ್ತು ಆರೋಗ್ಯ ಶಿಕ್ಷಣ:

ತಾಯಂದಿರ ಹಾಗೂ ಸಮುದಾಯದ ಜ್ಞಾನ ಮತ್ತು ಸಾಮರ್ಥ್ಯವನ್ನು ಮಕ್ಕಳು ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರ ಆರೋಗ್ಯ ಹಾಗೂ ಪೌಷ್ಠಿಕತೆಗೆ ಸಂಬಂಧಿಸಿದಂತೆ ಕೌಟುಂಬಿಕ ಪರಿಸರದೊಳಗೆ ಹೆಚ್ಚಿಸುವ ಉದ್ದೇಶದಿಂದ 15 ರಿಂದ 49 ವಯಸ್ಸಿನ ಎಲ್ಲಾ ಸ್ತ್ರೀಯರಿಗೂ ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ ನೀಡುವುದು.

ಭಾಗ್ಯಲಕ್ಷ್ಮೀ:

ನವಜಾತ ಹೆಣ್ಣು ಮಗುವಿನ ಹೆಸರಿನಲ್ಲಿ ಸರ್ಕಾರ ಹಣ ಠೇವಣಿ ಇಡುತ್ತದೆ. ಮೊದಲ ಹೆಣ್ಣು ಮಗುವಿಗೆ ಹಣಕಾಸಿನ ಸಂಸ್ಥೆಯಲ್ಲಿ ರೂ 19,300, ಅದೇ ಕುಟುಂಬದ ಎರಡನೇ ಹೆಣ್ಣು ಮಗುವಿಗೆ ರೂ 18,350 ರೂಗಳನ್ನು ಠೇವಣಿ ಇಡುತ್ತದೆ. ಹೆಣ್ಣು ಮಗುವಿಗೆ 18 ವರ್ಷ ನಂತರ ಅಸಲು ಬಡ್ಡಿಯ ಮೊತ್ತವನ್ನು ನೀಡಲಾಗುವುದು. ಮೊದಲ ಮಗುವಿಗೆ 1,00,097 ರೂ ಎರಡನೇ ಹೆಣ್ಣು ಮಗುವಿಗೆ 1,00,052 ರೂ ಸಿಗುತ್ತದೆ. ಹುಡುಗಿಯ ಇದನ್ನು ಶಿಕ್ಷಣಕ್ಕೆ ಬಳಸಿಕೊಳ್ಳಬಹುದು.

ಸ್ತ್ರೀಶಕ್ತಿ:

ಈ ಯೋಜನೆಯಡಿಯಲ್ಲಿ 15 ರಿಂದ 20 ಮಹಿಳೆಯರು ಸೇರಿ ಒಂದು ಸ್ವ ಸಹಾಯ ಗುಂಪು ರಚಿಸಿಕೊಳ್ಳುತ್ತಾರೆ. ಈ ಗುಂಪು ನಿಯಮಿತವಾಗಿ ಸಭೆ ಸೇರಿ ತಮ್ಮ ಉಳಿತಾಯವನ್ನು ಸಂಚಯಿಸುತ್ತಾ ಹೋಗುತ್ತಾವೆ. ಸರ್ಕಾರವೂ ಸಹ ಹಣಕಾಸಿನ ನೆರವು ಮತ್ತು ತರಬೇತಿಯನ್ನು ನೀಡಿ ಈ ಗುಂಪುಗಳು ಆದಾಯ ಉತ್ಪಾದನೆ ಚಟುವಟಿಕೆಗಳಲ್ಲಿ ತೊಡಗಲು ಪ್ರೋತ್ಸಾಹ

ನೀಡುತ್ತದೆ. ಸರ್ಕಾರವೇ ಅವರ್ತಕ ನಿಧಿಯಾಗಿ 5000 ನೀಡುತ್ತದೆ. ಇದನ್ನು ಆಹಾರ ಉತ್ಪಾದನಾ ಚಟುವಟಿಕೆಗೆ ಬಳಸಬಹುದು. ಮುಂದುವರಿದು ಬ್ಯಾಂಕ್ ಮೂಲಕ ಸಾಲ ಪಡೆಯಲು ಸರ್ಕಾರ ನೆರವಾಗುತ್ತದೆ.

ಕುಟುಂಬದ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ:

ಸಂವಿಧಾನಾತ್ಮಕ ಕಾಯ್ದೆಯಡಿ ಮಹಿಳೆಯರಿಗೆ ಒದಗಿಸುವ ಹಕ್ಕುಗಳ ಪರಿಣಾಮಕಾರಿ ರಕ್ಷಣೆಗಾಗಿ ಜೂನ್ 2007 ರಿಂದ ಈ ಕಾಯ್ದೆಯನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗಿದೆ. ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಉಚಿತ ಕಾನೂನು ನೆರವು ಆಸರೆ ಹಾಗೂ ಸಮಾಲೋಚನೆ, ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಕಾನೂನು ವೈದ್ಯಕೀಯ ಹಾಗು ಇತರ ನೆರವನ್ನು ನೀಡುತ್ತದೆ. ಈ ಯೋಜನೆಯ ಅಡಿಯಲ್ಲಿ 31 ಸ್ವಾಧಾರ ಕೇಂದ್ರಗಳು, 32 ಅಲ್ಪಾವಧಿ ತಂಗುದಾಣಗಳು 03 ಸ್ವಾಂತನ ಕೇಂದ್ರಗಳು ಆಶ್ರಯ ಗೃಹಗಳನ್ನು ಆರಂಭಿಸಿದೆ. ಆರ್ಥಿಕ ನೆರವು ಅಗತ್ಯವಿರುವವರಿಗೆ ಕನಿಷ್ಠ ರೂ 2000 ದಿಂದ ರೂ 10,000 ವರೆಗೆ ನೀಡುತ್ತದೆ. ತಮ್ಮ ಪತಿ ಹಾಗು ಕುಟುಂಬದ ಸದಸ್ಯರ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದವರು ಇಲ್ಲಿ ರಕ್ಷಣೆ ಪಡೆಯಬಹುದು.

ಹಾರೈಕೆ ಮತ್ತು ಅಗತ್ಯವಿರುವ ಮಕ್ಕಳ ಕ್ಷೇಮಾಭಿವೃದ್ಧಿ:

ಅನಾಥ ಹಾಗು ತಿರಸ್ಕರಿಸಲ್ಪಟ್ಟ ಮಕ್ಕಳಿಗೆ ನಿರ್ಗತಿಕ ಕುಟೀರಗಳಲ್ಲಿ ಆರೈಕೆ ಹಾಗೂ ಕೌಟುಂಬಿಕ ವಾತಾವರಣವನ್ನು ಒದಗಿಸುವುದು, ನಿರ್ಗತಿಕ ಕುಟುಂಬಗಳಲ್ಲಿ ಆಹಾರ ಭತ್ಯೆ, ಆಸರೆ, ಶಿಕ್ಷಣ, ವೃತ್ತಿ, ತರಬೇತಿ, ವೈದ್ಯಕೀಯ ಹಾಗು ಮನರಂಜನಾ ಸೌಲಭ್ಯಗಳನ್ನು ಒದಗಿಸಲಾಗುವುದು. ಈ ಯೋಜನೆಯಡಿ ನಿರ್ಗತಿಕ ಕುಟೀರಗಳನ್ನು ಸರ್ಕಾರದ ಆರ್ಥಿಕ ಬೆಂಬಲ ಪಡೆದ ಸರ್ಕಾರೇತರ ಸಂಸ್ಥೆಗಳು ನಡೆಸುತ್ತವೆ.

ಶಿಶುಗೃಹ ಅನಾಥಾಲಯಗಳು:

ತಿರಸ್ಕರಿಸಲ್ಪಟ್ಟ ಅಥವಾ ಅನಾಥರಾದ 6 ವರ್ಷದೊಳಗಿನ ಮಕ್ಕಳು ಹಾಗು ಶಿಶುಗಳು ದೇಶದೊಳಗೆ ದತ್ತು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಲು ಹಾಗು ಮಕ್ಕಳ ಕಾನೂನು ಬಾಹಿರ ದತ್ತು ತೆಗೆದುಕೊಳ್ಳುವಿಕೆಯನ್ನು ತಡೆಗಟ್ಟಲು ಈ ಯೋಜನೆ ತಯಾರಿಸಲ್ಪಟ್ಟಿದೆ. ತಿರಸ್ಕರಿಸಲ್ಪಟ್ಟ ಅಥವಾ ಅನಾಥರಾದ 6 ವರ್ಷದೊಳಗಿನ ಮಕ್ಕಳು ಹಾಗೂ ಶಿಶುಗಳ ಸಾಂಸ್ಥಿಕ ಆರೈಕೆ ಹಾಗೂ

ರಕ್ಷಣೆಯನ್ನು ಇದು ಒದಗಿಸುತ್ತದೆ. ಇಂತಹ ಶಿಶುಗೃಹಗಳನ್ನು ನಡೆಸಲು ಭಾರತ ಸರ್ಕಾರವು ಅನುದಾನ ನೀಡುತ್ತದೆ.

ಶಿಶುವಾಣಿ:

ರಕ್ಷಣೆಯ ಅಗತ್ಯವಿರುವ ಪ್ರತಿಯೊಂದು ಮಗುವನ್ನು ಶಿಶು ರಕ್ಷಣಾಜಾಲ ಸಂಪರ್ಕದ ಮೂಲಕ ತಲುಪುವ ಉದ್ದೇಶದಿಂದ ಗುರುತಿಸಲ್ಪಟ್ಟ ಸರಕಾರೇತರ ಸಂಸ್ಥೆಗಳ ಮೂಲಕ ಈ ಸೇವೆಗಳನ್ನು ಒದಗಿಸಲಾಗುತ್ತದೆ. ಶಿಶುಕ್ಷೇಮಾಭಿವೃದ್ಧಿ ಕ್ಷೇತ್ರದಲ್ಲಿನ ಹಲವಾರು ಇಲಾಖೆಗಳ ಹಾಗು ಸರಕಾರೇತರ ಸಂಸ್ಥೆಗಳೊಡಗೂಡಿ ಸಲಹಾ ಮಂಡಳಿ ಸ್ಥಾಪಿಸಲಾಗಿದೆ.

ಸಾಂತ್ವನ:

ವರದಕ್ಷಿಣೆ, ಮಾನಭಂಗ, ದೈಹಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯದಂತಹ ಹಲವಾರು ಕಿರುಕುಳಗಳಿಗೆ ಒಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಸರೆ, ಆರ್ಥಿಕ ನೆರವು ಹಾಗೂ ಪುನರ್ ವಸತಿಯನ್ನು ಈ ಯೋಜನೆ ಒದಗಿಸುತ್ತದೆ.[2]

ಪಾವಗಡದ ಬುಡಕಟ್ಟಿನ ಮಹಿಳೆಯರು ಆರೋಗ್ಯ ಸೇವೆಗಳನ್ನು ಹೆಚ್ಚು ಪಡೆಯುತ್ತಿದ್ದಾರೆ. ಭಾಗ್ಯಲಕ್ಷ್ಮಿ ಹಾಗೂ ಸ್ತ್ರೀ ಶಕ್ತಿ ಸಂಘಗಳನ್ನು ಸ್ಥಾಪಿಸಿ ಆರ್ಥಿಕ ನೆರವನ್ನು ಪಡೆದಿದ್ದಾರೆ. ಉಳಿದಂತೆ ಕೌಟುಂಬಿಕ ದೌರ್ಜನ್ಯ, ಸಾಂತ್ವನ ಮೊದಲಾದ ಯೋಜನೆಗಳ ಫಲಾನುಭವಿಗಳು ಇಲ್ಲ. ಕಾಡುಗೊಲ್ಲರ ಹಟ್ಟಿಯಲ್ಲಿರುವ ಅಂಗನವಾಡಿ ಕೇಂದ್ರಗಳು ಮಹಿಳೆಯರಿಗೂ ಅಭಿವೃದ್ಧಿ ಯೋಜನೆಗಳ ಮೂಲಕ ಆಡಳಿತಕ್ಕೂ ಇರುವ ಏಕೈಕ ಸಂಪರ್ಕ ಕೇಂದ್ರವಾಗಿದೆ. ಅಂಗನವಾಡಿಯ ಮೂಲಕ ನೀಡುವ ಯೋಜನೆಗಳನ್ನು ಬಿಟ್ಟರೆ ಇತರೆ ಹೊರಗಿನ ಯೋಜನೆಗಳು ಕಾಡುಗೊಲ್ಲ ಮಹಿಳೆಯರಿಗೆ ತಿಳಿದಿಲ್ಲ. ಸರ್ಕಾರ ಮತ್ತು ಈ ಮಹಿಳಾ ಸಮಾಜದ ನಡುವಿನ ಕೊಂಡಿಯಾಗಿ ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತವೆ. ಮಹಿಳಾ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಹಿಳಾ ಆಯೋಗ, ಗ್ರಾಮೀಣ ಸ್ವ ಉದ್ಯೋಗ ತರಬೇತಿ, ರಾಷ್ಟ್ರೀಯ ಮಹಿಳಾ ಕೋಶ್, ಮಹಿಳಾ ಸಮೃದ್ಧಿ ಯೋಜನೆ, ಕಂಡೆನ್ಸ್ ಕೋರ್ಸ್ ಆಫ್ ಎಜುಕೇಷನ್ ನೀಡುವ ಸವಲತ್ತುಗಳು ಮಹಿಳೆಯರಿಗಾಗಿ ಅಸ್ತಿತ್ವದಲ್ಲಿದ್ದರೂ ಅವುಗಳ ತಿಳುವಳಿಕೆ ಮತ್ತು ಪ್ರಯೋಜನ ಫಲಾನುಭವ ಕಾಡುಗೊಲ್ಲರ ಹಟ್ಟಿಗೆ ಕಾಲಿಟ್ಟಿಲ್ಲ.

ಮಾಹಿತಿ ಕ್ರಾಂತಿಯೊಂದು ಕಾಡುಗೊಲ್ಲ ಬುಡಕಟ್ಟಿನಲ್ಲಿ ಅಗತ್ಯ ಆಗಬೇಕಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಸರ್ಕಾರ ಶಿಕ್ಷಣ, ಆರೋಗ್ಯ ಉದ್ಯಮಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ

ಮಹಿಳೆಯರಿಗೆ ವಿಶೇಷ ಆದ್ಯತೆ ನೀಡಿರುವುದು. ಲಭ್ಯವಿರುವ ಶಾಸನಾತ್ಮಕ ಸವಲತ್ತುಗಳು ಸಂವಿಧಾನದ ಹಕ್ಕುಗಳ ಬಗ್ಗೆ ಕಾಡುಗೊಲ್ಲ ಮಹಿಳೆಯರಿಗೆ ತಿಳಿಸಿಕೊಡಬೇಕಿದೆ. ತಮ್ಮ ಸ್ಥಿತಿ-ಗತಿ ಸುಧಾರಿಸಿಕೊಳ್ಳಲು ಸರ್ಕಾರ ಕಾನೂನಿನ ಬೆಂಬಲ ಅಗತ್ಯವಿದೆ. ಅಲ್ಲದೆ ಬುಡಕಟ್ಟಿನ ಸಮುದಾಯದೊಳಗಿನ ಕೌಟುಂಬಿಕ ದೌರ್ಜನ್ಯಗಳಿಂದ ಪಾರಾಗಲು ಈ ಯೋಜನೆಗಳು ನೆರವಾಗುತ್ತಿವೆ. ಬುಡಕಟ್ಟಿನ ಸಮುದಾಯಕ್ಕೆ ಹೇರಿಕೆಗಳು ಮಹೀಳೆಯರಿಗೆ ಶೋಷಣಾತ್ಮಕವಾಗಿ ಪರಿಣಮಿಸಿದಾಗ ಅದರಿಂದ ಪಾರಾಗಲೂ ಮಹಿಳೆಯರಿಂದು ಸಂಘಟಿತರಾಗಿ ತಮಗಿರುವ ಕಾನೂನಿನ ಸಂವಿಧಾನಾತ್ಮಕ ಹಕ್ಕುಗಳನ್ನು ಚಲಾಯಿಸಬಹುದಾಗಿದೆ. ಕಾಡುಗೊಲ್ಲ ಪುರುಷ ಸಮಾಜವೂ ಮಹಿಳೆಯರಿಗಿರುವ ಕಾನೂನಾತ್ಮಕ ರಕ್ಷಣೆಯನ್ನು ಗಮನಿಸಿಕೊಂಡು ಪ್ರಸ್ತುತ ಬದುಕಿನಲ್ಲಿ ಎಚ್ಚರದಿಂದ ಬದುಕಬೇಕಿದೆ.

ಕಾಡುಗೊಲ್ಲ ಮಹಿಳೆಯರು ಸ್ವೀಕರಿಸಿರುವ ಸ್ತ್ರೀಶಕ್ತಿ ಸಂಘ, ವೃತ್ತಿ ತರಬೇತಿ, ಬ್ಯಾಂಕ್ ಸಾಲದಂತಹ ಯೋಜನೆಗಳು ಕಾಡುಗೊಲ್ಲ ಮಹಿಳೆಯ ದುಡಿಮೆಯ ಹೊರೆಯನ್ನು ಹೆಚ್ಚಿಸಿದರೂ ಜೀವನ ಮಟ್ಟ ಸುಧಾರಣೆಯಲ್ಲಿ ಅನುಪಮ ಕೊಡುಗೆ ನೀಡುತ್ತಿವೆ. ಬದುಕಿನ ಒತ್ತಡಗಳಿಂದ ಕೊಂಚ ಮಟ್ಟಿಗೆ ನಿರಾಳತೆಯನ್ನು ಈ ಯೋಜನೆಗಳು ನೀಡಿದೆ.

ಕಾಡುಗೊಲ್ಲ ಬುಡಕಟ್ಟಿನೊಳಗಿನ 'ಆಶ್ರಯ ಯೋಜನೆ'ಯು ಮಹಿಳೆಯರಿಗೆ ಒಂದು ಸೂರು ನೀಡಿದೆ. ಗುಡಿಸಲಲ್ಲಿ ಇರಬೇಕಾಗಿದ್ದ ಮಹಿಳೆಯರು ಈ ಯೋಜನೆಯಿಂದ ಶಾಶ್ವತ ಸೂರನ್ನು ಹೊಂದಿದ್ದಾರೆ. ಅಲ್ಲದೆ ಸರ್ಕಾರವು ಬುಡಕಟ್ಟು ಮಹಿಳೆಯರು ಹಟ್ಟಿ ಹೊರಗೆ ಋತುಸೂತಕ, ಹೆರಿಗೆ ಆದಾಗ ಇರಬೇಕಾದ ಸನ್ನಿವೇಷಗಳನ್ನು ಅರಿತು ಕೃಷ್ಣ ಕುಟೀರಗಳನ್ನು ನಿರ್ಮಿಸಿಕೊಟ್ಟಿದೆ. ಇದು ಶೋಷಣಾತ್ಮಕ ಆಚರಣೆಯ ಆಧುನಿಕ ರೂಪದ ಮುಂದುವರಿಕೆಯಾದರೂ ತತ್ಕಾಲಕ್ಕೆ ಮಹಿಳೆಯರಿಗೆ ಭಯ ನೀಡುವ, ಬಿಸಿಲು, ಗಾಳಿ ಮಳೆಯಿಂದ ರಕ್ಷಣೆಯ ಪಡೆಯುವ ಸೂರಾಗಿದೆ.

ಒಟ್ಟಿನಲ್ಲಿ ಕಾಡುಗೊಲ್ಲ ಮಹಿಳೆ ಸ್ವೀಕರಿಸಿರುವ ಅಭಿವೃದ್ಧಿ ಯೋಜನೆಗಳು ಅವರಿಗೆ ತಕ್ಷಣ ಅಗತ್ಯವಾದಿದ್ದ ಸಹಾಯವನ್ನು ನೀಡಿ ಅವರ ಸ್ಥಿತಿ-ಗತಿಗಳ ಸುಧಾರಣೆ ಮಾಡುವಲ್ಲಿ ಯಶಸ್ವಿ ಹೆಜ್ಜೆಯನ್ನಿಡುತ್ತದೆ.

ಕೊನೆ ಟಿಪ್ಪಣಿ

1. ಬೋಸರಪ್ ಚಿಂತನೆಗಳು ಮಹಿಳ ಅಧ್ಯಯನ-2 ಲೇ ಡಾ. ಹೇಮಲತಾ ಪುಟ 108
2. ನಾಗರಿಕ ಸನ್ನದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪಾವಗಡ ತಾಲ್ಲೂಕು

ಅಧ್ಯಾಯ 12

ಕಾಡುಗೊಲ್ಲ ಬುಡಕಟ್ಟಿನ ಸ್ತ್ರೀವಾದಿ ಸಂಕಥನ

ಕಾಡುಗೊಲ್ಲ ಬುಡಕಟ್ಟಿನಲ್ಲಿ ಪ್ರತ್ಯೇಕ ಸ್ತ್ರೀವಾದ ಇದೆಯೇ? ಎಂಬ ಪ್ರಶ್ನೆಯೊಂದಿಗೆ ಹೊಸ ಅಧ್ಯಯನವೊಂದು ಆರಂಭವಾಗಬೇಕಾಗಿದೆ, ಏಕೆಂದರೆ ಸ್ತ್ರೀವಾದದ ಕುರಿತೇ ಉಂಟಾಗಿರುವ ಅಪಸ್ವರಗಳು ಅನುಮಾನಗಳು ಸ್ತ್ರೀವಾದ ತಾತ್ವಿಕತೆಯನ್ನು, ಸ್ತ್ರೀವಾದಿ ವಿಮರ್ಶೆಯನ್ನು ಸಂಶಯಾತ್ಮಕ ದೃಷ್ಟಿಯಿಂದ ನೋಡುವಂತೆ ಮಾಡಿದೆ. ಈ ಸಂಶಯಾತ್ಮಕ ದೃಷ್ಟಿಯಿಂದ ಆದ ಆರೋಗ್ಯಪೂರ್ಣ ಬೆಳವಣಿಗೆ ಎಂದರೆ ದೇಶೀಯವಾಗಿ ವಿವಿಧ ಬುಡಕಟ್ಟು, ಜಾತಿ, ಜನಪದರಲ್ಲಿ ಸ್ತ್ರೀ ಶಕ್ತಿಯ ರೂಪುಗಳನ್ನು, ಸ್ತ್ರೀ ಏನಾಗಿದ್ದಾಳೆ ಎಂಬ ಶೋಧನೆಯನ್ನು ಮಾಡಲು ಸಾಧ್ಯವಾಯಿತು. ಈ ಸಂಗತಿಗಳು ದೇಶೀಯವಾಗಿ ಸ್ತ್ರೀವಾದವನ್ನು ಬಲಪಡಿಸಿತು. ಸ್ತ್ರೀವಾದವು ಪಾಶ್ಚಾತ್ಯರಿಂದ ಕಡ ತಂದದ್ದು ಅದಕ್ಕೆ ನೆಲದ ಸ್ಪರ್ಶವಿಲ್ಲ. ದೇಶೀಯವಾದುದಲ್ಲ ಎಂಬ ಆರೋಪಗಳು ಸ್ತ್ರೀವಾದವನ್ನು ನಿರಾಕರಿಸುತ್ತಿವೆ.[1] ಇಂತಹ ಪ್ರಕ್ರಿಯೆಗೆ ಮೂಲಕಾರಣವೆಂದರೆ ಭಾರತದಲ್ಲಿ "ದುರತವೆಂದರೆ ಚರಿತ್ರೆಯದ್ದುಕ್ಕೂ ಮಹಿಳೆ ಒಂದು ವರ್ಗ ಜಾತಿ, ಕುಲ ಸಂಸ್ಕೃತಿ ಸಮಾಜವಾಗಿ ರೂಪುಗೊಳ್ಳದಿರುವುದು"[2] ಭಾರತೀಯ ಸಮಾಜವು ಮಹಿಳೆಯನ್ನು ಪ್ರತ್ಯೇಕಿಸಲಿಲ್ಲ. ಬದಲಿಗೆ ಅವರು ಈಗಾಗಲೇ ಇರುವ ಜಾತಿಗಳೊಳಗಿನ, ಕುಲಗಳೊಳಗಿನ, ಸಂಸ್ಕೃತಿಗಳೊಳಗಿನ ಒಂದು ಅಂಗ ಎಂದು ಭಾವಿಸಿದೆ. ಇಂದಿನ ಜಾತಿ ಸಮಸ್ಯೆಗಳಂತೆ, ಸಂಸ್ಕೃತಿಗಳಲ್ಲಿನ ಸಮಸ್ಯೆಯಂತೆ ಮಹಿಳೆಯರದ್ದು ಪ್ರತ್ಯೇಕ ಸಮಸ್ಯೆಯಾಗಿ ಕಾಣದೆ ಜಾತಿ ಮತ್ತು ಸಂಸ್ಕೃತಿ ಸಮಸ್ಯೆಗಳಲ್ಲಿ ಅದೂ ಕೂಡ ಸೇರಿದೆ ಎಂಬ ಪೂರ್ವಗ್ರಹಿಕೆ ಇದೆ. ಇದರಿಂದಾಗಿ ಸಮಾಜವು ಮಹಿಳೆ ಪ್ರತ್ಯೇಕ ಸಿಡಿಯುವುದನ್ನು ಸ್ವತಂತ್ರ ಅಸ್ಮಿತೆಯನ್ನು ಕಂಡುಕೊಳ್ಳ ಹೊರಟಾಗ ತಡೆಯಲು ಪ್ರಯತ್ನಿಸುತ್ತದೆ. ಅವರನ್ನು ಜಾತಿಯೊಳಗೂ ಸಂಸ್ಕೃತಿಯೊಳಗೆ ವಿಲೀನೀಕರಿಸುವ ಪ್ರಯತ್ನ ಮಾಡುತ್ತದೆ. ಸ್ತ್ರೀವಾದವು ಮಹಿಳೆಯರ ಪ್ರತ್ಯೇಕತೆಯನ್ನು ಸ್ವತಂತ್ರ ಅಸ್ಮಿತೆಗಳನ್ನು ಬಯಸುವುದರಿಂದ ಸ್ತ್ರೀವಾದವನ್ನೇ ನಿರಾಕರಿಸುವ ಪ್ರಯತ್ನಗಳು ಇಂದಿಗೂ ನಿರಂತರವಾಗಿವೆ.

ಭಾರತೀಯ ಸ್ತ್ರೀವಾದವು ಪಾಶ್ಚಾತ್ಯ ಪ್ರಭಾವವನ್ನು ಪಡೆದಿದೆ. ಭಾರತದ ಜಾತಿ ಹೋರಾಟಗಳೂ ಹೊರಗಿನ ಪ್ರಭಾವಗಳನ್ನು ತಮ್ಮಲ್ಲಿ ಅರಗಿಸಿಕೊಂಡೇ ದೇಶೀಯವಾಗಿ ಜಾತಿ ವ್ಯವಸ್ಥೆಯ ಮೂಲ ಬೇರುಗಳನ್ನು ಕಿತ್ತೆಸೆಯಲು ಹೋರಾಡಿವೆ. ಹಾಗೆಂದು ಈ ಹೋರಾಟವನ್ನು ಪಾಶ್ಚಾತ್ಯ ಹೋರಾಟವೆಂದು ಕರೆಯಲು ಸಾಧ್ಯವಿಲ್ಲ. ಪ್ರಭಾವವನ್ನು ಸಿದ್ಧಾಂತ, ತಾತ್ವಿಕತೆಗಳ ಮಟ್ಟಿಗೆ ಸ್ವೀಕರಿಸಿ ದೇಶೀಯವಾಗಿ ಇರುವ ಜಾತಿ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಗುರುತಿಸಿ

ಸೈದ್ಧಾಂತಿಕತೆವಾಗಿ ಮತ್ತು ಹೋರಾಟಗಳನ್ನು ನಡೆಸಿವೆ. ಸ್ತ್ರೀವಾದವೂ ಪಾಶ್ಚಾತ್ಯ ಸಿದ್ಧಾಂತ, ತಾತ್ವಿಕತೆಗಳಿಂದ ಪ್ರಭಾವ ಪಡೆದಿವೆ. ಅದಕ್ಕೆ ದೇಶೀಯವಾಗಿ ಇರುವ ಮಹಿಳಾ ಸಮಸ್ಯೆಗಳನ್ನು ಗುರುತಿಸಿಕೊಳ್ಳುವಷ್ಟು ಅರಿವು ಇದೆ. ಅದು ಜಟ್ಟು ಭಾರತದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಸೃಷ್ಟಿಸುವಂತಹ ಇಲ್ಲವೆ ಭಾರತೀಯ ಮಹಿಳೆಯರನ್ನು ಪಾಶ್ಚಾತ್ಯ ಮಹಿಳೆಯರನ್ನಾಗಿ ಮಾಡುವ ಅನವಶ್ಯಕ ಕಾರ್ಯದಲ್ಲಿ ಸ್ತ್ರೀವಾದ ಭಾಗಿಯಾಗಿಲ್ಲ. ಹೊರಗಿನ ಪ್ರಭಾವವನ್ನು ಅರಗಿಸಿಕೊಂಡು ಬೆಳೆದ ದಲಿತ ಹೋರಾಟಗಳು ಚಿಂತನೆಗಳು ಹೇಗೆ ಪಾಶ್ಚಾತ್ಯ ಪುರುಷನನ್ನು, ಪಾಶ್ಚಾತ್ಯ ಸಮಾಜವನ್ನು ಸೃಷ್ಟಿಸಲು ಸಾಧ್ಯವಾಗಿಲ್ಲವೋ ಹಾಗೆ ಸ್ತ್ರೀವಾದವೂ. ಪಾಶ್ಚಾತ್ಯ ಮಹಿಳಾ ಸಮಾಜ, ಮಹಿಳೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ.

ಸ್ತ್ರೀವಾದ ಹೊಂದಿರುವ ವ್ಯಾಪಕತೆಯೇ ಅದರ ಒಡಕಿಗೆ ಕಾರಣವಾಗುತ್ತದೆ. ಸ್ತ್ರೀವಾದವನ್ನು ನಿರಾಕರಿಸಲು ಸಂಸ್ಕೃತಿಯ ಕಾರಣಗಳನ್ನು ಮುಂದು ಮಾಡಲಾಗುತ್ತದೆ. ಪಾಶ್ಚಾತ್ಯರ ಮಾರ್ಕ್ಸ್‌ವಾದ, ಸಮತಾವಾದ, ಸಮಾಜವಾದ, ವರ್ಣ ಹೋರಾಟ, ವರ್ಗಹೋರಾಟಗಳಿಂದ ಪ್ರೇರಣೆಗೊಂಡು ಭಾರತದಲ್ಲಿ ನಡೆಸುವ ಹೋರಾಟಗಳು ಸಾಂಸ್ಕೃತಿಕವಾಗಿ ಮಾತ್ರ ಸ್ವೀಕಾರವಾಗಿರದೆ ಸಾಮಾಜಿಕವಾಗಿ ಆರ್ಥಿಕವಾಗಿ ಬೆಳೆಯುವ ಮೂಲಕ ಎತ್ತರವನ್ನು ಮಾತ್ರವಲ್ಲದೆ ವಿಸ್ತಾರವನ್ನು ಪಡೆಯಿತು. ಸ್ತ್ರೀವಾದವು ಹೀಗೆ ತನ್ನ ಉದ್ದ-ಅಗಲಗಳನ್ನು ವಿಸ್ತರಿಸಿಕೊಳ್ಳಬೇಕಾದರೆ ಸಂಸ್ಕೃತಿಯ ಹೇರಿಕೆಗಳ ಮೂಲಕ ತಡೆ ಒಡ್ಡುವ ಪ್ರಯತ್ನಗಳು ನಡೆದಿದೆ. ಕಾರಣ ಮಹಿಳಾ ವಿಷಯಗಳು ನೇರವಾಗಿ ಸಂಸ್ಕೃತಿಗೆ ಸಂಬಂಧಪಟ್ಟ ವಿಚಾರವಾಗಿರುವುದು. ಮಹಿಳಾ ಸಮಸ್ಯೆಗಳ ಮೂಲ ಬೇರು ಇರುವುದು ಸಂಸ್ಕೃತಿಗಳಲ್ಲಿಯೇ. ಮಹಿಳಾ ಹೋರಾಟವೆಂದರೆ ಈ ಬೇರುಗಳನ್ನು ಹೊರ ತೆಗೆಯುವ ಪ್ರಯತ್ನವಾಗಿರುತ್ತದೆ. ಈ ಪ್ರಯತ್ನವೇ ಸ್ತ್ರೀವಾದವನ್ನು ಪ್ರಶ್ನಿಸುವಂತೆ ಮಾಡಿದೆ.

ಸ್ತ್ರೀವಾದವು ನಮ್ಮ ಸಂಸ್ಕೃತಿಯ ವಿಮರ್ಶೆಯಾಗಿರುತ್ತದೆ. ಈ ಸಂಸ್ಕೃತಿಯ ವಿಮರ್ಶೆಯನ್ನು ಬದಲಾವಣೆಯನ್ನು ಸಹಿಸದಿರುವ ಮನಸ್ಸುಗಳು ಸ್ತ್ರೀವಾದದ ದೇಶೀಯತೆಗಳನ್ನು ಪ್ರಶ್ನಿಸುವ, ನಿರಾಕರಿಸುವ ಮಾರ್ಗಗಳನ್ನು ಹಿಡಿಯುತ್ತದೆ. ಪುರುಷ ಸಮಾಜಕ್ಕಿರುವ ಆತಂಕ ಇಲ್ಲಿ ವ್ಯಕ್ತವಾಗುತ್ತದೆ. "ಸ್ತ್ರೀವಾದ ದೇಶಿಯವಲ್ಲವೆಂದು ಹೇಳಿದರೆ, ಅದು ಪ್ರಾಯಶಃ ನಮ್ಮ ಸಂಸ್ಕೃತಿ ವಿಮರ್ಶಾತೀತ ಮತ್ತು ಪರಿಪೂರ್ಣವೆಂದು ಹೇಳಿದಂತೆಯೇ ಆಗುತ್ತದೆ.[3] ಆದರೆ ಹಾಗೆ ಇಲ್ಲದಿರುವುದೇ ಸತ್ಯ. ಸ್ತ್ರೀವಾದವನ್ನೇ ಕುರಿತ ಪೂರ್ವಗ್ರಹಗಳು ಕೆಲವೊಂದು ಕಲ್ಪನೆಗಳ ಸುತ್ತ ಹೆಣೆಯಲ್ಪಟ್ಟಿವೆ." "ಸ್ತ್ರೀವಾದ ಎಷ್ಟದರೂ ಪಶ್ಚಿಮದಿಂದ ಆಮದಾದ ಸರಕು ನಮ್ಮ ಅಗತ್ಯಗಳಿಗನುಗುಣವಾಗಿ "ನಮ್ಮ ಸಂಸ್ಕೃತಿ" ಯ ಅಂಗವಾಗಿ ಬಂದುದಲ್ಲ ಸ್ತ್ರೀವಾದಿಗಳು ಭಾರತೀಯ ಮಹಿಳೆಯರಿಗೆ ಸಹಜವಾದ ರೀತಿಯಲ್ಲಿ ನಡೆಯುತ್ತಿಲ್ಲ ಅದುದರಿಂದ ಅದು ನಮ್ಮ

ಸಂಸ್ಕೃತಿ ಹಾಗೂ ಮೌಲ್ಯಗಳು ಕುಂದುತ್ತಿರುವ ಲಕ್ಷಣ"[4] ಇಂತಹ ಸ್ತ್ರೀವಾದ ಕುರಿತ ಸ್ಥಾಪಕ ಗ್ರಹಿಕೆಗಳು ಇಂದಿನ ಬುಡಕಟ್ಟು, ಜನಪದ, ದಲಿತ ಮಹಿಳಾ ಅಧ್ಯಯನ ಮೂಲಕ ನಿರಾಕರಿಸ್ಪಡುತ್ತಿವೆ.

ಸ್ತ್ರೀವಾದವು ಪ್ರಪಂಚದ ಎಲ್ಲ ಸಮಾಜಗಳಲ್ಲಿ ಸ್ತ್ರೀಯರ ಶೋಷಣೆ ಇದೆ ಎಂಬುದನ್ನು ಒಪ್ಪುತ್ತದೆ. ಈ ಜಾಗತಿಕ ವಿಸ್ತಾರ ಮಹಿಳೆ ಶೋಷಣೆಗಿರುವುದು ಸತ್ಯವೂ ಹೌದು. ವರ್ಗ ಹೋರಾಟಗಳು, ವರ್ಣ ಹೋರಾಟಗಳು ಸಮಾಜದಿಂದ ಸಮಾಜಕ್ಕೆ ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗಿದೆ. ಆದರೆ ಮಹಿಳಾ ಸಮಸ್ಯೆಗಳು ಮಾತ್ರ ಎಲ್ಲಾ ಸಮಾಜದ ಸಂಸ್ಕೃತಿಗಳಲ್ಲೂ ಸಾರ್ವತ್ರಿಕವಾಗಿದೆ. ಈ ವ್ಯಾಪಕತೆಯಲ್ಲಿ ಬುಡಕಟ್ಟು ಮಹಿಳಾವಾದ, ದಲಿತ ಮಹಿಳಾವಾದ, ಭಾರತೀಯ ಮಹಿಳಾವಾದ ಸೇರಿಕೊಂಡು ಸ್ತ್ರೀವಾದವನ್ನು ಒಡೆಯುವುದಿಲ್ಲ ಬದಲಿಗೆ ಒಗ್ಗೂಡಿಸುತ್ತದೆ. ಎಲ್ಲ ರೀತಿಯ ಮಹಿಳಾವಾದಗಳನ್ನು ಒಗ್ಗೂಡಿಸಿಕೊಂಡ ಗಂಭೀರ ಸಮುದ್ರದಂತೆ ಸ್ತ್ರೀವಾದ ಇದೆ. ಈ ಒಗ್ಗಟ್ಟು ಸ್ತ್ರೀವಾದ ಬಲವನ್ನು ಹೆಚ್ಚಿಸಿದೆ. ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದವನ್ನು ಭಾರತೀಯರದ್ದು ಪಾಶ್ಚಿಮಾತ್ಯರದ್ದು ಎಂದು ವರ್ಗಿಕರಿಸಲು ಸಾಧ್ಯವಿಲ್ಲ. ಭಾರತೀಯ ಸ್ತ್ರೀವಾದವು ತನ್ನ ವಿಮರ್ಶೆಗೆ ಒಳಪಡಿಸುವುದು ಭಾರತೀಯ ಸಮಾಜವನ್ನೇ ಹೊರತು ಪಾಶ್ಚಾತ್ಯ ಸಮಾಜವನ್ನಲ್ಲ. ಅಂದರೆ "ಸ್ತ್ರೀವಾದವು ಭಾರತೀಯ ಸಮಾಜದ ಪುರುಷ ಪ್ರಧಾನ ಮತ ಮತ್ತು ಸಂರಚನೆಗಳನ್ನು ವಿಮರ್ಶಿಸುತ್ತದೆ."[5] ಸ್ತ್ರೀವಾದ ವಿಮರ್ಶೆಯು ಮಹಿಳಾ ವಿಷಯದಲ್ಲಿ ಬದಲಾವಣೆಯನ್ನು ತರುವುದರಿಂದ ಅಂದರೆ ಮಹಿಳೆಯರ ಉಡುಗೆ-ತೊಡುಗೆ, ಊಟ, ಶಿಕ್ಷಣ, ಸಾಂಸ್ಕೃತಿಕತೆ, ಸಾಮಾಜಿಕತೆ, ಧಾರ್ಮಿಕತೆಗಳಲ್ಲಿ ಬದಲಾವಣೆ ಉಂಟಾಗುವುದರಿಂದ ಸಮಾಜವು ಪುನರ್ ರೂಪುಗೊಳ್ಳಬೇಕಾಗುತ್ತದೆ. ಹೀಗೆ ಉಂಟಾಗುವ ಬದಲಾವಣೆ ಪಾಶ್ಚಾತ್ಯರನ್ನು ಹೋಲಬಹುದು, ಇಲ್ಲದಿರಬಹುದು. ಆದರೆ ಈ ಹೋಲಿಕೆಯನ್ನು ಪಾಶ್ಚಾತ್ಯರಿಂದ ಕಡ ತಂದದಲ್ಲ. ಹೊಸ ಅರಿವು ನೀಡುವ ಬದಲಾವಣೆಯು ಹೊಸದಾಗಿಯೇ ಇರಬೇಕಲ್ಲವೆ?. ಈ ಬದಲಾವಣೆಯನ್ನು ಹಳೆ ಸಂಸ್ಕೃತಿ ಸಂಪ್ರದಾಯಗಳ ಚೌಕಟ್ಟಿನೊಳಗೆ ನೋಡುವ ಸಾಂಪ್ರದಾಯಿಕ ಧೋರಣೆ ಭಾರತೀಯ ಸಮಾಜವಲ್ಲಿ ಮಹಿಳೆಯರ ಸಮಸ್ಯೆಗಳನ್ನು ಜಟಿಲಗೊಳಿಸಿದೆ. ಸ್ತ್ರೀವಾದ ಭಾರತೀಕರಣವಾಗಬೇಕು ಎಂಬ ವಾದವನ್ನು ಸ್ತ್ರೀವಾದದ ಎದುರುಗಿಡಲಾಗುತ್ತಿದೆ. ಭಾರತ ಸಮಜದಲ್ಲಿ ಭಾರತೀಕರಣವೆನ್ನುವುದು ಪುರುಷ ಸಮಾಜ ಹಿಂದಿನಿಂದಲೂ ಮಹಿಳೆಯರ ಮೇಲೆ ಹೇರಿಕೊಂಡು ಬಂದಿರುವ ಸಾಂಸ್ಕೃತಿಕ ಮೌಲ್ಯವಾಗಿಯೇ ಕಾಣುತ್ತದೆ.

ಭಾರತೀಯ ಸಂದರ್ಭದಲ್ಲಿ ಸ್ತ್ರೀವಾದವೆಂದರೆ "ಕೇವಲ ಕುತೂಹಲದ ಶೈಕ್ಷಣಿಕ ವಿಷಯವಾಗಲಿ ಕೇವಲ ವಿವಾದಗ್ರಸ್ತ ವಿಚಾರವಾಗಲಿ ಕೇವಲ ಬೌದ್ಧಿಕ ಚರ್ಚೆಯ ವಸ್ತುವಾಗಲೀ

ಅಲ್ಲ” ಬದಲಿಗೆ “ಮಹಿಳೆಯರ ಪರ ಚಿಂತನೆಯನ್ನು ಹುಟ್ಟುಹಾಕಿ ಅವರ ಹಕ್ಕು, ಸಮಾನತೆ, ಸ್ವಾತಂತ್ರ್ಯಗಳನ್ನು ಎತ್ತಿಹಿಡಿದು ಅವರ ತುಳಿತ ಶೋಷಣೆ ವಿರುದ್ಧದ ಹೋರಾಟದ ನಿಲುವೆ ಸ್ತ್ರೀವಾದವಾಗಿದೆ”[7] ಸ್ತ್ರೀವಾದವು ಸಮಾಜವನ್ನು ಪ್ರಶ್ನಿಸುವುದು ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದು ಎಂದರೆ ಭಾರತೀಯ ಸಮಾಜವನ್ನು ಒಡೆಯುವುದಲ್ಲ ಬದಲಿಗೆ ಮಹಿಳೆಯ ಅಸಮಾನ ಪಾತಾಳಿಗಳನ್ನು ಸಮಾನಾಗಿಸುವ ಪ್ರಯತ್ನವೇ ಆಗಿದೆ. ಲಿಂಗಭೇದವೂ ಭಾರತೀಯ ಸಮಾಜದಲ್ಲಿ ಜಾತಿ ಸಮಸ್ಯೆಯಷ್ಟೇ ಭೀಕರವಾಗಿದೆ. ಆದ್ದರಿಂದ ಎಲ್ಲಾ ಸಮಾಜ ಸಮುದಾಯಗಳೊಳಗಿನ ಲಿಂಗತಾರತಮ್ಯದ ನೆಲೆಗಳನ್ನು ಗುರುತಿಸಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

ಕಾಡುಗಳಲ್ಲಿ ಬುಡಕಟ್ಟಿನೊಳಗೆ ಸ್ತ್ರೀವಾದವು ಇದೆಯೇ? ಎಂಬ ಪ್ರಶ್ನೆಗೆ ಇದೆ ಎಂಬುದೇ ಉತ್ತರ. ಆದರೆ ಕಾಡುಗೊಲ್ಲ ಬುಡಕಟ್ಟಿನ ಪುರಷನಿಗೇ ಸವಲತ್ತುಗಳು ಇಲ್ಲದಿರುವಾಗ, ಮಹಿಳೆಗೆ ಹೇಗೆ ಲಭ್ಯವಾಗಲು ಸಾಧ್ಯ ಎಂಬ ಪ್ರಶ್ನೆ ಎದುರಾಗಬಹುದು. ಈ ಬುಡಕಟ್ಟಿನ ಮಹಿಳೆಯರಿಗೆ ಹೊರಗಿನ ಸವಲತ್ತುಗಳು ಲಭ್ಯವಾಗವುದಿರಲಿ ತಮ್ಮ ಬುಡಕಟ್ಟಿನೊಳಗೆ ಅಗತ್ಯ ಸವಲತ್ತುಗಳು ಸಮಾನವಾಗಿ ಹಂಚಿಕೆಯಾದರೆ ಮಹಿಳೆ ಸಮಸ್ಯೆಗಳಿಂದ ಮುಕ್ತಳಾಗಬಹುದು.

ಕಾಡುಗೊಲ್ಲ ಬುಡಕಟ್ಟಿನ ಸಮಸ್ಯೆಯು ಕಾಡುಗೊಲ್ಲ ಮಹಿಳೆಯರ ಸಮಸ್ಯೆಯಾಗಿಲ್ಲ. ಆದ್ದರಿಂದಲೇ ಕಾಡುಗೊಲ್ಲ ಬುಡಕಟ್ಟಿನಲ್ಲಿ ಸ್ತ್ರೀವಾದ ಪ್ರತ್ಯೇಕವಾಗಿಯೇ ಅಧ್ಯಯನವಾಗಬೇಕಿದೆ. ಇಲ್ಲಿ ಬುಡಕಟ್ಟಿನ ಸ್ತ್ರೀವಾದವೆಂದರೆ “ಸ್ತ್ರೀ ಪರವಾದುದೂ ಅಲ್ಲ, ಪುರುಷ ವಿರೋಧಿಯಾದುದೂ ಅಲ್ಲ ಅದು ಲಿಂಗಭೇದದ ವಿರೋಧಿಯಾದುದು”[8] ಲಿಂಗಭೇದವು ಇಲ್ಲಿನ ಅಧ್ಯಯನ ರೀತಿಯೂ ಆಗಿದೆ. ಭಾರತೀಯ ಸ್ತ್ರೀವಾದ ಶಿಷ್ಟ ಮತ್ತು ಜನಪದ ಸಂಸ್ಕೃತಿಗಳಲ್ಲಿ ಸಮಾಜವನ್ನು ಅಧ್ಯಯನಕ್ಕೆ ಒಳಪಡಿಸುತ್ತದೆ. ಭಾರತೀಯ ಸ್ತ್ರೀವಾದ ತನ್ನ ಆಕೃತಿಗಳನ್ನು ಜನಪದ ಸಂಸ್ಕೃತಿಗಳ ಶೋಧಗಳಲ್ಲಿ ಗುರುತಿಸಿಕೊಳ್ಳುವ ಪ್ರಯತ್ನ ನಡೆಯುತ್ತಿರುವ ಈ ಹೊತ್ತಿನಲ್ಲಿ ಕಾಡುಗೊಲ್ಲ ಬುಡಕಟ್ಟು ಸ್ತ್ರೀವಾದವು ಬೆಳಕು ಪಡೆದಿದೆ.

ಕಾಡುಗೊಲ್ಲ ಬುಡಕಟ್ಟು ಪಿತೃಪ್ರಧಾನ ಸಮಾಜವನ್ನು ಹೊಂದಿದೆ. ಇಲ್ಲಿ ಸ್ತ್ರೀವಾದವೆಂದರೆ ಸ್ತ್ರೀ ಏನಾಗಿದ್ದಾಳೆ. ಏನಾಗಿಲ್ಲ ಎಂದು ತಿಳಿಯುವುದರ ಜೊತೆಗೆ ಏನಾಗಬೇಕು ಎಂಬುದನ್ನು ಅರಿಯುವುದೇ ಆಗಿದೆ. ಈ ಬುಡಕಟ್ಟಿನೊಳಗೆ ಸಂಸ್ಕೃತಿ. ಧರ್ಮ, ನ್ಯಾಯ. ಸಮಾಜದ ನಿಲುವುಗಳು ಮಹಿಳೆಯರನ್ನು ಹೇಗೆ ಘಾಸಿಗೊಳಿಸಿವೆ ಎಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ಗಮನಿಸಿದೆ. ಬುಡಕಟ್ಟಿನ ಸಮಸ್ಯೆಗೂ ಬುಡಕಟ್ಟಿನೊಳಗಿರುವ ಮಹಿಳೆಯ ಸಮಸ್ಯೆಗಳಿಗೂ ಸಾಕಷ್ಟು ಅಂತರಗಳಿವೆ. ಕಾಡುಗೊಲ್ಲ ಬುಡಕಟ್ಟು ತನ್ನದೇಯಾದ ಸಂಸ್ಕೃತಿ. ಸಮಾಜ. ಧರ್ಮ. ನ್ಯಾಯ ವ್ಯವಸ್ಥೆಯನ್ನು

ಹೊಂದಿದ್ದು ಅವುಗಳು ಬುಡಕಟ್ಟಿನ ಮಹಿಳೆ ಹೇಗಿರಬೇಕೆಂಬುದನ್ನು ನಿರ್ಧರಿಸುತ್ತವೆ. ಬುಡಕಟ್ಟಿನಲ್ಲಿ ಮಹಿಳೆಯನ್ನು ಸಂಸ್ಕೃತಿಯ ಅನನ್ಯ ಸಂಗತಿಯಾಗಿ ಕಾಣಲಾಗಿದೆ. ಆಧುನಿಕತೆ ಮತ್ತು ಅಭಿವೃದ್ಧಿ ಸಂಗತಿಗಳಿಗೆ ಸಂಸ್ಕೃತಿಯ ಅನನ್ಯತೆಯನ್ನು ಬಿಟ್ಟುಕೊಡಲು ಬುಡಕಟ್ಟು ಒಪ್ಪುವುದಿಲ್ಲ. ಆದ್ದರಿಂದ ಮಹಿಳಾ ಸಮಸ್ಯೆಗಳು ಬೆಳಕು ಪಡೆಯದೆ ಸಂಸ್ಕೃತಿ ಅನನ್ಯತೆಯಾಗಿಯೆ ಉಳಿದು ಬಿಡುತ್ತದೆ. ಉದಾಹರಣೆಗಳಿಗೆ ಕಾಡುಗೊಲ್ಲರ ಒಂದು ಜಾಗೃತಿ ಸಮಾವೇಶದಲ್ಲಿ ನಾನು ಪಾಲ್ಗೊಂಡ ಸಂದರ್ಭವನ್ನು ಇಲ್ಲಿ ಹೇಳಬಯಸುತ್ತೇನೆ. ಕಾಡುಗೊಲ್ಲ ಬುಡಕಟ್ಟು ಇಂದು ಪರಿಶಿಷ್ಟ ಪಂಗಡ ಸ್ಥಾನಮಾನಕ್ಕಾಗಿ ಹೋರಾಟ ಮಾಡುತ್ತಿದೆ. ಅದಕ್ಕಾಗಿ ಸಂಘಟಿತರೂ ಆಗುತ್ತಿದ್ದಾರೆ. ಈ ಹೋರಾಟದಲ್ಲಿ ಮಹಿಳಾ ವಿಷಯಗಳಿಗೆ ಅವಕಾಶವು ಇಲ್ಲ. 19.06.211 ರಂದು ನಡೆದ ಬಿಜ್ಜೇಹಳ್ಳಿ ಜಾಗೃತಿ ಸಭೆಯಲ್ಲಿ ಚರ್ಚಿಸಿದ ವಿಷಯಗಳೆಂದರೆ. ಕಾಡುಗೊಲ್ಲರ ದೇವಸ್ಥಾನಗಳಿಗೆ ಹೇಗೆ ಭೂಮಿಯನ್ನು ಹೊಂದಿಸಿಕೊಳ್ಳಬೇಕು. ದೇವಸ್ಥಾನದ ನಿರ್ಮಾಣಕ್ಕೆ ಹೇಗೆ ಹಣ ಸಂಗ್ರಹಿಸಬೇಕು. ಪರಿಶಿಷ್ಟ ಪಂಗಡದ ಸ್ಥಾನಮಾನ ಪಡೆಯಲು ಸಂಘಟಿತರಾಗಿ ಹೇಗೆ ಸರ್ಕಾರದ ಮೇಲೆ ಒತ್ತಡ ತರಬೇಕು, ಯುವಕರಿಗೆ ತಮ್ಮ ಸಂಸ್ಕೃತಿಯ ಪರಿಚಯ ಮಾಡಕೊಡಬೇಕೆಂದು. ಈ ಸಭೆಯ ಚರ್ಚೆಯಲ್ಲಿ ಭಾಗವಹಿಸಿದವರು ಕಾಡುಗೊಲ್ಲ ಬುಡಕಟ್ಟು ಪರುಷರು, ಪೂಜಾರಿಗಳು, ಗೌಡರುಗಳು, ಇಂಜಿನಿರ್‌ಗಳು, ರಾಜಕಾರಣಿಗಳು, ಆದರೆ ಇಲ್ಲಿಗೆ ಆಗಮಿಸಿದ್ದ ಮಹಿಳಾ ಸಮುದಾಯ ಚರ್ಚೆಯಲ್ಲಿ ಭಾಗವಹಿಸಲೂ ಇಲ್ಲ, ಬದಲಿಗೆ ಅಲ್ಲಿಯೇ ಊಟದ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು, ದೇವರ ಕೆಲಸಗಳಿಗೆ ಸಹಾಯಮಾಡುತ್ತಿದ್ದರು, ಪಾತ್ರೆ ಉಜ್ಜುವ, ಕಸ ಗುಡಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ಜಾಗೃತಿ ಸಭೆಯಲ್ಲಿ ಯಾವೊಬ್ಬ ಪುರುಷರೂ ಮಹಿಳಾ ವಿಷಯವನ್ನು ಚರ್ಚಿಸಲಿಲ್ಲ ಏಕೆ? ಏಕೆಂದರೆ ಬುಡಕಟ್ಟಿನೊಳಗೆ ಮಹಿಳೆಯರು ಶೋಷಿಸಲ್ಪಡುತ್ತಿದ್ದಾಳೆ ಎಂಬ ಅರಿವೇ ಇಲ್ಲ ಹಾಗೂ ಮಹಿಳಾ ಸಮಸ್ಯೆಗಳು ತಮ್ಮ ಸಮಸ್ಯೆಗಳಲ್ಲ ಎಂಬುದು. ಹಾಗಿದ್ದರೆ ಬುಡಕಟ್ಟಿನೊಳಗೆ ಮಹಿಳೆಯರಿಗೆ ಧ್ವನಿಯನ್ನು, ಅಸ್ಮಿತೆಯನ್ನು ಯಾರು ನೀಡಬೇಕು?. ಈ ಹಿನ್ನೆಲೆಯಲ್ಲಿ ಬುಡಕಟ್ಟಿನ ಅಧ್ಯಯನಗಳು ಮಹಿಳೆಯರನ್ನು ಕುರಿತು ಸಾಂಸ್ಕೃತಿಕ ಅನನ್ಯತೆಗಳಿಂದ ಬಿಡಿಸಿಕೊಂಡು ಸಾಂಸ್ಕೃತಿಕ ವೈಭವಗಳಲ್ಲಿ ಮೈಮರೆಯದೆ ಪ್ರತ್ಯೇಕವಾಗಿ ಅಧ್ಯಯನಕ್ಕೆ ತೊಡಗಲೇಬೇಕಿದೆ.

ಬುಡಕಟ್ಟಿನೊಳಗೆ ಕಾಡುಗೊಲ್ಲ ಮಹಿಳೆಯು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹೇಗೆ ನಿಯಂತ್ರಿಸಲ್ಪಟ್ಟಿದ್ದಾರೆ ಎಂಬುದನ್ನು ಹಿಂದಿನ ಅಧ್ಯಾಯಗಳಲ್ಲಿಯೇ ನಮೂದಿಸಲಾಗಿದೆ. ಈ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವಿದ್ದರೂ ಅದು ಸ್ತ್ರೀತ್ವದ ಅಸ್ತಿತ್ವ ನೀಡಲು ಸಾಧ್ಯವಾಗಿಲ್ಲ. ಆದಾಯವು ಕುಟುಂಬ ಇಲ್ಲವೆ ಪುರುಷನ ಆದಾಯವನ್ನು ಹೆಚ್ಚಿಸುವ ಒಂದು ಭಾಗವಾಗಿಯೇ ಇದೆ. ಇದುವರೆಗೂ ಕಾಡುಗೊಲ್ಲ ಮಹಿಳೆಯರು ತಮ್ಮ ಸ್ಥಾನ-

ಮಾನಗಳಿಗೆ ಹೋರಾಟವನ್ನು ಮಾಡಿಲ್ಲ ಸಂಘಟಿತರಾಗಿಯೂ ಇಲ್ಲ. ತಮ್ಮ ಸಮಾಜದೊಳಗೆ ತಮಗೆ ಹಲವು ರೀತಿಯ ಹಿಂಸೆಗಳಿದ್ದರೂ ಅವುಗಳನ್ನು ಪ್ರತಿಭಟಿಸದೆ ಅಸಹನೆಯಿಂದ ಒಪ್ಪಿ ಬದುಕುತ್ತಿದ್ದಾರೆ. ತಮ್ಮ ಬಿಡುಗಡೆಗೆ ಹೊರಗಿನಿಂದ ಸಹಾಯ ಹಸ್ತದ ನಿರೀಕ್ಷೆಯಲ್ಲಿದ್ದಾರೆ.

ಬುಡಕಟ್ಟಿನೊಳಗಿನ ಮಹಿಳಾ ಬದುಕನ್ನು ಈ ಮೂಲಕ ಬುಡಕಟ್ಟಿನ ಸ್ತ್ರೀವಾದವನ್ನು ದಾಖಲಿಸಲಾಗಿದೆ. ಅಂತಹ ಕೆಲವು ಮುಖ್ಯ ಸಂಗತಿಗಳೆಂದರೆ:

ಸಮುದಾಯದ ಒಕ್ಕಟ್ಟಿನ ಬದುಕನ್ನು ಕಾಡುಗೊಲ್ಲ ಮಹಿಳೆ ನಿರಾಕರಿಸುತ್ತಾಳೆ. ಕಾಡುಗೊಲ್ಲ ಬುಡಕಟ್ಟು ಸಮಾಜ ಸಮುದಾಯ ಕೇಂದ್ರಿತ ಬದುಕಿಗೆ ಆದ್ಯತೆಯನ್ನು ನೀಡಿದೆ. ಬುಡಕಟ್ಟಿನೊಳಗಿರುವ ಅನ್ಯ ಜಾತಿಯವರು ವಾಸಿಸಲು ನಿಷೇಧ. ಅಂತರ್ಜಾತಿ ವಿವಾಹ ನಿಷೇಧ, ಊರಿನಿಂದ ದೂರವಾಗಿ ಪ್ರತ್ಯೇಕ ವಾಸದ ನೆಲೆಯನ್ನು ಹೊಂದಿರುವುದು. ಕಟ್ಟೇಮನೆಗಳು ಬುಡಕಟ್ಟಿನ ಸಮುದಾಯ ಬದುಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ರೂಪಗೊಂಡವು. ಅಂತೆಯೇ ಬುಡಕಟ್ಟಿನ ಮಹಿಳೆಯು ಇಲ್ಲಿನ ಶಾಸನ-ಕಟ್ಟಳೆಗಳಿಂದ ಬಂಧಿತಳು. ತನ್ನ ಬಂಧನ ಬಿಡುಗಡೆ ಎಂದರೆ ಸಮುದಾಯದಿಂದ ಬಿಡುಗಡೆ ಎಂದು ಭಾವಿಸುತ್ತಾಳೆ. 'ನಾವು ಎಲ್ಲದ್ರೂ ಹೋಗಬೇಕು, ಟೌನ್ ಸೇರಬೇಕು ಅನ್ಸುತ್ತೆ' ಎಂಬ ಮಹಿಳೆಯ ಮಾತುಗಳು ಸಮುದಾಯದ ರೀತಿ–ನೀತಿಗಳ ಕಟ್ಟಳೆಗಳಿಂದ ಪಾರಾಗಿ ಹೊಸ ಬದುಕಿನ ಅಸ್ಮಿತೆಗಳನ್ನು ಪಡೆಯುವ ಬಯಕೆಗಳನ್ನು ವ್ಯಕ್ತಪಡಿಸುತ್ತದೆ.

ಕಾಡುಗೊಲ್ಲ ಮಹಿಳೆಯರು ತಾವು ಸಂಸ್ಕೃತಿಯ ಶ್ರೇಷ್ಠತೆಯ ಭಾಗವಾಗಿ ಉಳಿಯಲು ನಿರಾಕರಿಸುತ್ತಾರೆ. ಅಂದರೆ ಸಂಸ್ಕೃತಿಯ ಶ್ರೇಷ್ಠತೆಯನ್ನು ನಿರಾಕರಿಸುತ್ತಾರೆ. ಕಾಡುಗೊಲ್ಲ ಬುಡಕಟ್ಟಿನ ಒಳಗೆ ಋತುಮತಿ, ಋತುಚಕ್ರ, ಹೆರಿಗೆಯು ಹೆಣ್ಣಿನ ಬದುಕನ್ನು ಮೈಲಿಗೆ ಎಂದು ಭಾವಿಸುವಂತೆ ಮಾಡಿವೆ. ಈ ಮೈಲಿಗೆ ಆಚರಣೆಗಳು ಬುಡಕಟ್ಟಿನ ಸಂಸ್ಕೃತಿಯ ಶ್ರೇಷ್ಠ ಸಂಗತಿಗಳಾಗಿವೆ. ಈ ಮೈಲಿಗೆ ಆಚರಣೆಗಳನ್ನು ನಿರಾಕರಿಸುವ ಮೂಲಕ ಸಾಂಸ್ಕೃತಿಕ ಶ್ರೇಷ್ಠತೆಯಿಂದ ಬಿಡುಗಡೆ ಹೊಂದ ಬಯಸುತ್ತಾಳೆ.

ಕಾಡುಗೊಲ್ಲ ಬುಡಕಟ್ಟಿನಲ್ಲಿ ವಿವಾಹವಾಗುವ ಮಹಿಳೆಯ ವಯಸ್ಸು ಎಷ್ಟಿರಬೇಕು? ಯಾರನ್ನು ವಿವಾಹವಾಗಬೇಕು? ಎಂಬುದನ್ನು ತೀರ್ಮಾನಿಸುವುದು ಮನೆಯ ಯಜಮಾನ. ವಿವಾಹಿತರಾಗಿರುವ ಬಹುತೇಕ ಮಹಿಳೆಯರು ತಮ್ಮ ಬಾಲ್ಯವಿವಾಹದ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾಳೆ. ಬಾಲ್ಯವಿವಾಹದಿಂದ ಕಳೆದುಕೊಂಡ ಶೈಕ್ಷಣಿಕ ಬದುಕನ್ನು ನೆನಪಿಸಿಕೊಳ್ಳುತ್ತಾರೆ. ಮುಂದಿನ ಹೆಣ್ಣುಮಕ್ಕಳಾದರೂ ಬಾಲ್ಯವಿವಾಹದಿಂದ ಮುಕ್ತಿ ಪಡೆಯಬೇಕು ಎಂದು ಬಯಸುತ್ತಾರೆ.

ಸಂಗಾತಿ ಆಯ್ಕೆಯ ಬಗೆ ಸ್ವಾತಂತ್ರ್ಯವನ್ನು ಬಯಸುತ್ತಾರೆ. ಸೋದರ ಸಂಬಂಧಿಗಳಲ್ಲಿ ವಿವಾಹ ಮತ್ತು ಬಾಲ್ಯವಿವಾಹ ಮಹಿಳೆಯರ ಬದುಕಿನ ವೈವಿಧ್ಯತೆಯನ್ನು ಮುರುಟಿ ಹಾಕುವುದರಿಂದ ಇವುಗಳು ಬದಲಾಗಬೇಕೆಂದು ಬಯಸುತ್ತಾಳೆ.

ಕಾಡುಗೊಲ್ಲ ಮಹಿಳೆಯರಲ್ಲಿ ಹೊಸ ಬದುಕಿನ ಬಗೆಗೆ ಕುತೂಹಲವಿದೆ. ಊರಿನ ಇತರ ಜನರಂತೆ ತಾವು ನಾಗರೀಕರಂತೆ ಬದುಕಬೇಕು ಎಂಬ ಬಯಕೆಯಿದೆ. ಅದಕ್ಕೆ ಸಂಬಂಧಿಸಿದ ಶಿಕ್ಷಣ ಮತ್ತು ಉದ್ಯೋಗ ಹೊಂದಲು ಈ ಮಹಿಳೆಯರು ಆಸಕ್ತಿಯನ್ನು ಹೊಂದಿದ್ದಾರೆ. ಆ ಮುಕ್ತ ವಾತಾವರಣಕ್ಕಾಗಿ ಅಪೇಕ್ಷೆ ಪಡುತ್ತಾರೆ. ಕೊಂಚ ಮಟ್ಟಿಗೆ ಆರ್ಥಿಕ ವಲಸೆಯು ಅವರ ಬಯಕೆಯನ್ನು ತಣಿಸುತ್ತದೆ.

ಕಾಡುಗೊಲ್ಲ ಬುಡಕಟ್ಟಿನ ಮಹಿಳೆಯರ ಸ್ಥಿತಿಗಳಿಗೆ ಬುಡಕಟ್ಟಿನ ಸಮಾಜವೇ ಕಾರಣವಾಗಿದೆ. ಇಲ್ಲಿ ಮಹಿಳೆಯ ಸಮಸ್ಯೆಗಳ ನಿವೇದನೆಯೇ ಅವರ ಸಮಾನ ನೆಲೆಗಾಗಿನ ಹಕ್ಕೊತ್ತಾವಾಗುತ್ತದೆ. ಅವರ ಸಮಸ್ಯೆಗಳನ್ನು ತಿಳಿದು ಅವರ ಹೊಸ ಬದುಕಿನ ತುಡಿತಗಳಿಗೆ, ಸ್ಥಿತಿ-ಗತಿಗಳ ಸುಧಾರಣೆಗೆ, ಸಮಾಜ ಜೊತೆಗೆ ಕಾಡುಗೊಲ್ಲ ಬುಡಕಟ್ಟು ಸಮಾಜವೂ ಸ್ಪಂದಿಸಬೇಕಿದೆ. ತನ್ನ ಸಮುದಾಯದ ಬದುಕಿಗೆ ಎರವಾದರೂ ಬದಲಾವಣೆಗೆ ಮನಸ್ಸು ಮಾಡಬೇಕಿದೆ. ಬದಲಾವಣೆಯು ಸಿಡಿದರೂ ಅನಂತರದಲ್ಲಿ ಮತ್ತೆ ಒಗ್ಗೂಡುವ ಪ್ರಯತ್ನ ಮಾಡುತ್ತಿರುತ್ತದೆ. ಮಹಿಳೆಯರ ಹೊಸ ಅರಿವು ಬುಡಕಟ್ಟಿನ ಹೊಸ ಬದಲಾವಣೆಗೂ ಕಾರಣವಾಗ ಬಲ್ಲದಾಗಿದೆ. ಅದು ಸಮುದಾಯ ಬದುಕನ್ನು ಇನ್ನು ಹೆಚ್ಚಿನದಾಗಿ ಮುಂದುವರೆಸಬಲ್ಲದು ಎಂಬ ನಂಬಿಕೆಯನ್ನು ಇಡಬಹುದಾಗಿದೆ.

ಕೊನೆ ಟಿಪ್ಪಣಿ

1. ವಿಮರ್ಶೆಯ ನೆಲೆ, ಸ್ತ್ರೀವಾದ, ದಲಿತವಾದದಿಂದ ಸ್ತ್ರೀವಾದದೆಡೆಗೆ ಲೇ: ಅರವಿಂದ ಮಾಲಗತ್ತಿ ಪುಟ 61
"ಇಂದಿನ ಸ್ತ್ರೀವಾದ ಚಿಂತೆಗಳನ್ನು ಗಮನಿಸಿದರೆ ಅದು ದೇಶಿಯನೆಲೆಯಿಂದ ಕೂಡಿದಲ್ಲ. ಅದು ಪಾಶ್ಚಾತ್ಯ ಸಂತೆಯಿಂದ ಕೊಂಡು ತಂದದ್ದು. ಅಥವ ಕಡ ತಂದದ್ದು. ಈಗಾಗಿ ಇದಕ್ಕೆ ನೆಲದ ಸ್ಪರ್ಶವಿಲ್ಲ. ಒಂದುವೇಳೆ ಅದು ದಲಿತೇತರ ನೆಲೆಯಿಂದ ಕಾಣಿಸಿಕೊಳ್ಳುವ ಸ್ತ್ರೀವಾದವೇ ಆಗಿದ್ದರು ಅದು ವಿಕಲಾಂಗ ಸ್ತ್ರೀವಾದ ಆಗುತ್ತದೆಯೇ ವಿನಹ ಪೂರ್ಣ ಸ್ವರೂಪದ ಸ್ತ್ರೀವಾದ ಆಗಲಾರದು. ದಲಿತ ನೆಲೆಯಿಂದ ರೂಪುಗೊಳ್ಳಲು ದಲಿತವಾದಕ್ಕೆ ಮಹಿಳಾ ಸ್ಪರ್ಶವಿದೆ. ಈಗಾಗಿ ಈಗಿರುವ ಪಾಶ್ಚಿತೀಕರಣದ ಸ್ತ್ರೀವಾದವನ್ನು ದಲಿತ

ಮಹಿಳೆಯರು ದೇಶಿ ಮಹಿಳಾವಾದವನ್ನಾಗಿ ಎಂದರೆ ತಲೆ ಕೆಳಗಾಗಿ ನಿಂತಿರುವ ಸ್ತ್ರೀವಾದವನ್ನು ತಲೆ ಮೇಲು ಮಾಡಿ ನಿಲ್ಲಿಸಲು ಸಾಧ್ಯ"

2. ಕನ್ನಡ ಸಾಹಿತ್ಯ ಮತ್ತು ಮಹಿಳೆ ಪುಟ 21
3. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಪುಟ 17
4. ಅದೇ ಪುಟ 4
5. ಅದೇ ಪುಟ 58
6. ಮಹಿಳಾ ಅಧ್ಯಯನ ಲೇ: ಡಾ.ಹೇಮಲತ ಪುಟ 2
7. ಅದೇ ಪುಟ 18
8. ಅದೇ ಪುಟ 18

ಸಮಾರೋಪ

ಸಮಾರೋಪದಲ್ಲಿ ಅಧ್ಯಾಯಗಳ ಸಾರಂಶಗಳನ್ನು ಕ್ರೋಡೀಕರಿಸಿ ಹೇಳದೆ ನನ್ನ ಅಧ್ಯಯನದ ತಾತ್ವಿಕ ಚಿತ್ತಿಯನ್ನು ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡುತ್ತೇವೆ. ಕಾಡುಗೊಲ್ಲರ ಮಹಿಳೆಯ ಬದುಕಿನ ಇತಿಹಾಸ ಏನಾಗಿತ್ತು. ವರ್ತಮಾನದ ಬದುಕು ಏನಾಗಿದೆ ಎಂಬುದು ನನ್ನ ಅಧ್ಯಯನದ ಪ್ರಮುಖ ಆಶಯವಾಗಿತ್ತು. ಇತಿಹಾಸಕ್ಕೂ ವರ್ತಮಾನಕ್ಕೂ ಇರುವ ನಂಟನ್ನು ಈ ಹಿಂದಿನ ಅಧ್ಯಾಯಗಳಲ್ಲಿ ವಿವರವಾಗಿ ನಿರೂಪಿಸಿದೆ. ಕಾಡುಗೊಲ್ಲ ಸಾಹಿತ್ಯದಲ್ಲಿ ಶೋಧಿತವಾಗುವ ಮಹಿಳಾ ಇತಿಹಾಸವು ವರ್ತಮಾನದ ಮಹಿಳಾ ಬದುಕಿನಲ್ಲಿ ಹೆಚ್ಚು ಭಿನ್ನತೆಯನ್ನು ಪ್ರದರ್ಶಿಸುವುದಿಲ್ಲ. ಕಾಡುಗೊಲ್ಲ ಬುಡಕಟ್ಟಿನೊಳಗೆ ವಾಸಿಸುವ ಹೆಣ್ಣು ಸಮುದಾಯದಿಂದ ಪ್ರತ್ಯೇಕವಾಗಿ, ಸಮುದಾಯದೊಳಗಿದ್ದೂ ಒಂಟಿಯಾಗಿ ವಾಸಿಸುವ ಮಾನಸಿಕ ಜೀವಿಯಂತೆ ಗೋಚರಿಸುತ್ತಾಳೆ. ಇವಳ ಒಂಟಿತನದ ಆಸರಿಕೆ-ಬೇಸರಿಕೆ ಸಾಮಾಜಿಕ ಕಟ್ಟುಪಾಡುಗಳಿಂದ ಜನಿಸಿವೆ. ಕಾಡುಗೊಲ್ಲ ಮಹಿಳಾ ಅಧ್ಯಯನವು ಮಾನಸಿಕವಾಗಿ ಒಂಟಿಯಾಗಿರುವ ಮಹಿಳೆಯರಿಗೆ ನೈತಿಕಶಕ್ತಿಯನ್ನು ಹೆಚ್ಚಿಸುವ ಜೊತೆಗೆ ಹೊಸ ಅರಿವಿನ ಮೂಲಕ ಸಮುದಾಯ ಬದುಕಿಗೆ ಹಿಂದಿರುಗಿಸುತ್ತದೆ.

ಕಾಡುಗೊಲ್ಲ ಪುರುಷ ಸಮಾಜಕ್ಕಿಂತ ಈ ಮಹಿಳೆಯರ ಸಮಸ್ಯೆಗಳು ಭಿನ್ನವಾಗಿರುವುದರಿಂದ ಕಾಡುಗೊಲ್ಲ ಮಹಿಳೆಯರನ್ನು ಕುರಿತು ಪ್ರತ್ಯೇಕ ಅಧ್ಯಯನವನ್ನು ಮಾಡಲೆಬೇಕಿದೆ. ಬುಡಕಟ್ಟಿನ ಇತಿಹಾಸದಲ್ಲಿ ಮಹಿಳೆಯರ ಇತಿಹಾಸ ಕರಗಿಹೋಗಿದೆ. ಹೆಚ್ಚೆಂದರೆ ಪುರುಷ ಶಕ್ತಿಯ ವಿಜೃಂಭಣೆಯಲ್ಲಿ, ಸಾಂಸ್ಕೃತಿಕ ಬಿಗುವಿಕೆಯಲ್ಲಿ ಮಹಿಳೆಯ ಅಸ್ತಿತ್ವದ ಅಧೀನ ನೆಲೆಗಳು ಮಸುಕಾಗಿಯೇ ದಾಖಲಾಗಿವೆ. ಇತಿಹಾಸದ ಒಳಗೆ ಸಿಗುವಂತೆ ವರ್ತಮಾನದಲ್ಲಿಯೂ ಮಹಿಳಾಬದುಕು ಇದ್ದು, ಅವರ ಸ್ವಾತಂತ್ರ, ಅತ್ಮವಿಶ್ವಾಸಗಳು, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಗತಿಗಳು ನಿಯಂತ್ರಿಸಲ್ಪಟ್ಟಿವೆ, ನಿರಾಕರಿಸಲ್ಪಟ್ಟಿದೆ. ಹಟ್ಟಿಯ ಮಹಿಳೆಯರ ಸ್ವರೂಪ ಸ್ವಾಭಾವಗಳಿಗೆ ಇದುವರೆಗೂ ಪುರುಷ ಸಮಾಜವೇ ಬೆಲೆಕಟ್ಟಿದೆ. ಈ ಅಧ್ಯಯನದಲ್ಲಿ ಮಹಿಳೆಯ ಸಂವೇದನೆಗಳನ್ನು ದಾಖಲಿಸಿ ಅವುಗಳ ಮೂಲಕವೇ ಅವರ ತುಡಿತ ಮಿಡಿತಗಳನ್ನು ಗ್ರಹಿಸಿ ಹೇಳುವ ಪ್ರಯತ್ನ ಮಾಡಲಾಗಿದೆ. ಈ ಸಂವೇದನೆಯಲ್ಲಿ ತಮ್ಮೆಲ್ಲಾ ಬಂಧನಗಳಿಂದ ಮುಕ್ತಗೊಂಡು ಸ್ವಾವಲಂಬಿ ಜೀವನ ಮಾಡುವ ಬಯಕೆಗಳು ಢಾಳಾಗಿಯೇ ಕಾಣುತ್ತದೆ. ಈ ಸಂವೇದನೆ ಬುಡಕಟ್ಟಿನೊಳಗೆ ಹೂತುಹೋದ ಮಹಿಳಾ ಚರಿತ್ರೆಯನ್ನು ಬಯಲಿಗಿಡುತ್ತದೆ.

ಕಾಡುಗೊಲ್ಲ ಸಮಾಜದಲ್ಲಿ ಆರ್ಥಿಕತೆ, ಅಧಿಕಾರ, ಹಕ್ಕು, ಆಸ್ತಿಯಹೊಣೆಗಾರಿಕೆ ಎಲ್ಲವೂ ಪುರುಷಾಧಿಕಾರದಲ್ಲಿರುವುದರಿಂದ ಇಲ್ಲಿನ ಮಹಿಳೆಯರ ಅಸ್ತಿತ್ವ ಮತ್ತು ಸ್ವಾತಂತ್ರ್ಯದ ನೆಲೆಗಳು ಸಹಜವಾಗಿರದೆ ದಮನಕ್ಕೆ ಒಳಪಟ್ಟಿವೆ. ಈ ದಮನಿತ ಬದುಕಿನ ಇತಿಹಾಸದಲ್ಲಿ ಈ ಮಹಿಳೆಯರ ಬದುಕಿನ ವಿಸ್ತಾರವೂ ಮೊಟಕುಗೊಂಡಿದೆ. ಪ್ರಜಾಸತ್ತಾತ್ಮಕವಾದ ಭಾರತೀಯ ಸಮಾಜದಲ್ಲಿ ಭಾರತೀಯರೆಲ್ಲರಿಗೂ ಲಭ್ಯವಿರುವ ಸಮಾನ ಅವಕಾಶ, ಅನುಕೂಲಗಳನ್ನು ಕಾಡುಗೊಲ್ಲ ಮಹಿಳೆಯರೂ ಪಡೆಯುವಂತಾಗಬೇಕು. ಇದಕ್ಕಾಗಿ ಲಭ್ಯವಿರುವ ಕ್ರಮಗಳನ್ನು - ಸರ್ಕಾರವೂ, ಸೇವೆಗಳನ್ನು - ಸಾಮಾಜಿಕ ಸಂಘಟನೆಗಳೂ, ಸಂಘ ಸಂಸ್ಥೆಗಳೂ, ಅವಕಾಶಗಳನ್ನು - ಈ ಬುಡಕಟ್ಟಿನ ಸಮಾಜವೂ ಮಾಡಿಕೊಡಬೇಕಿದೆ.

ಪಾವಗಡ ಮಳೆ ಅಭಾವವಿರುವ ಬರಪೀಡಿತನಾಡು. ದಶಕಗಳಿಂದಲೂ ಈ ತಾಲ್ಲೂಕು ಹಿಂದುಳಿದ ಪ್ರದೇಶವೆಂದು ಗುರುತಿಸಿಕೊಂಡಿದೆ. ಈ ಭೌಗೋಳಿಕ ಪರಿಸರವು ಇಲ್ಲಿನ ಕಾಡುಗೊಲ್ಲ ಮಹಿಳೆಯರ ಬದುಕನ್ನು ಪ್ರಭಾವಿಸಿವೆ. ತಾಲ್ಲೂಕಿನ ಗ್ರಾಮೀಣ ಮಹಿಳೆಯರ ಸಾಕ್ಷರತೆ 2011ರ ಗಣತಿಯಂತೆ ಶೇ 53.1% ಮಾತ್ರ. ಶಿಕ್ಷಣವಂಚಿತ ಜೀವನದಿಂದ ಈ ಮಹಿಳೆಯರು ತಮ್ಮ ಅಧೀನ ನೆಲೆಗಳನ್ನು ಗುರುತಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಈ ಕಾರಣದಿಂದ ತಮ್ಮ ಮೇಲಾಗುತ್ತಿರುವ ಲಿಂಗತಾರತಮ್ಯದ ಪರಿಣಾಮಗಳನ್ನು ಪ್ರತಿಭಟಿಸದೆ ತಮ್ಮ ಕರ್ಮವೆಂದು ಬದುಕುವ ಹುಸಿ ಸ್ಥೈರಣೆಯನ್ನು ಬೆಳಸಿಕೊಂಡಿದ್ದಾರೆ. ಉನ್ನತ ಶಿಕ್ಷಣವಂಚಿತರಾದ ಈ ಮಹಿಳೆಯರು ಇದುವರೆಗೆ ಪಡೆದಿರುವ ಉತ್ತಮ ಉದ್ಯೋಗಗಳೆಂದರೆ ಅಂಗನವಾಡಿ ಕಾರ್ಯಕರ್ತೆಯರು, ಪ್ರಾಥಮಿಕ ಶಾಲಾಶಿಕ್ಷಕಿಯರು, ಕಂಪ್ಯೂಟರ್ ಆಪರೇಟರ್‌ಗಳಾಗಿ ಮಾತ್ರ. ಇವರ ಸಂಖ್ಯೆಯು ಬೆರಳೆಣಿಕೆಯಷ್ಟು. ಈ ಪ್ರದೇಶದ ಬಹುತೇಕ ಮಹಿಳೆಯರು ಉದ್ಯೋಗವಾಗಿ ಕೂಲಿಯನ್ನೇ ಅವಲಂಬಿಸಿದ್ದಾರೆ. ಕೂಲಿಯಿಂದ ಪಡೆಯುವ ಆದಾಯ ಕುಟುಂಬ ನಿರ್ವಹಣೆಗಷ್ಟೇ ಸಾಕಾಗುವುದರಿಂದ ನಿರಂತರ ದುಡಿಮೆ ಅನಿವಾರ್ಯವಾಗಿದೆ. ಇದರಿಂದ ದೊರೆಯುವ ಆದಾಯ ಜೀವನ ಮಟ್ಟ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿದರೂ ಇತರ ವಲಯಗಳಿಗೆ ವಿಸ್ತರಣೆಗೊಳ್ಳ ಬದುಕಿನಿಂದಾಗಿ ಆಧುನಿಕ ಬದುಕಿನೊಂದಿಗೆ ಸ್ಪರ್ಧಿಸಲಾರದೆ ಹಿಂದುಳಿಯಬೇಕಾಗಿದೆ.

ಕಾಡುಗೊಲ್ಲ ಬುಡಕಟ್ಟಿನೊಳಗೆ 'ಸಮುದಾಯದ ಒಗ್ಗಟ್ಟಿನ ಬದುಕು' ವಿಶ್ವಾತ್ಮಕ ದೃಷ್ಟಿಯದ್ದು. ಇಂದು ಹಲವು ಜೇರೆ ಜಾತಿ. ವರ್ಗಗಳು ಒಗ್ಗಟ್ಟು ಉಳಿಸಿಕೊಳ್ಳಲು ಹೆಣಗುತ್ತಿರಬೇಕಾದರೆ ಇಂದಿಗೂ ಈ ಬುಡಕಟ್ಟಿನೊಳಗಿರುವ ಒಗ್ಗಟ್ಟು ಸಮುದಾಯತ್ವ ಮೆಚ್ಚುವಂತಿದೆ ಆದರೆ ಈ ಒಗ್ಗಟ್ಟು ಅಥವಾ ಸಮುದಾಯತ್ವವನ್ನು ಉಳಿಸಿಕೊಳ್ಳಲು ಸಮುದಾಯದ ಜನರ ಹಕ್ಕುಗಳನ್ನು,

ಆಕಾಂಕ್ಷೆಗಳನ್ನು ದಮನಿಸುವುದು ಸರಿಯಲ್ಲ. ಸಮುದಾಯದ ಒಗ್ಗಟ್ಟು ಶೋಷಣಾತ್ಮಕ ನೆಲೆಯದ್ದಾಗಿರಬಾರದು. ಸಮಾನತೆಯ, ಸಾಮರಸ್ಯದ ನೆಲೆಯಾಗಿದ್ದಿರಬೇಕು. ಬುಡಕಟ್ಟಿನ ಸಮಾಜದೊಳಗಿರುವ ಪುರುಷ ಮತ್ತು ಮಹಿಳೆಯರ ನಡುವಿನ ಅಸಮಾನ ನೆಲೆಗಳನ್ನು ಬುಟಕಟ್ಟು ಸಮಾನಗೊಳಿಸಬೇಕಿದೆ. ಈ ಕಾರಣಕ್ಕೆ ಮಹಿಳೆ ಬದುಕಿಗೆ ಎರವಾಗುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕಟ್ಟಳೆಗಳನ್ನು ಕೈ ಬಿಡಬೇಕಾಗುತ್ತದೆ. ಅನಂತರದಲ್ಲಿ ಮಹಿಳೆಯರ ಸಮಾನ ಹಕ್ಕು ಅವಕಾಶಗಳು ಸಾಧ್ಯವಾಗಿ ಹೊಸ ಅರಿವಿನಿಂದ ಅಸಮಾನಮುಕ್ತವಾಗಿ, ಒಗ್ಗಟ್ಟನು ಹೊಂದಿದ ಕಾಡುಗೊಲ್ಲ ಬುಡಕಟ್ಟು ಬುಡಕಟ್ಟಾಗಿಯೇ ಉಳಿಯುತ್ತದೆ. ಆಗ ಸಮುದಾಯ ಒಗ್ಗಟ್ಟಿನ ವಿಶ್ವಾತ್ಮಕ ದೃಷ್ಟಿಕೋನದ ಬದುಕು ಎಲ್ಲರಿಗೂ ಸಹ್ಯವೆನಿಸುತ್ತದೆ.

ಕಾಡುಗೊಲ್ಲ ಬುಡಕಟ್ಟಿನ ಸ್ತ್ರೀವಾದವು ತನ್ನ ಅಸ್ತಿತ್ವ ದಮನಗೊಂಡ ಇತಿಹಾಸವನ್ನು ಹೇಳುತ್ತಿದ್ದರೂ ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ಮಡುತ್ತಿರುತ್ತದೆ. ವಲಸೆ ಮತ್ತು ಶಿಕ್ಷಣ ಇಂದು ಕೊಂಚಮಟ್ಟಿಗೆ ನೆರವಾಗುತ್ತಿದೆ. ಬುಡಕಟ್ಟಿನಿಂದ ಸಿಡಿಯುವಿಕೆ ಇದರಿಂದ ಸಾಧ್ಯವಿಲ್ಲದಿದ್ದರೂ ನಿಧಾನಗತಿಯ ಬಿಡುಗಡೆ ಇದೆ. ಈ ಬೆಳವಣಿಗೆಯನ್ನು ಬುಡಕಟ್ಟು ತನ್ನ ಅಸಹಾಯಕತೆಯಿಂದಲೇ ಸ್ವೀಕರಿಸಿದೆ. ಮಹಿಳೆಯರ ಬದುಕಿನ ಬದಲಾವಣೆಗೆ ಮುಕ್ತ ಮನಸ್ಸಿನಿಂದ ಬುಡಕಟ್ಟು ಸಮಾಜ ಒಪ್ಪುವ ಮೂಲಕ ತನ್ನ ಜೀವನ ವಿರೋಧಿನೀತಿಯನ್ನು ಕೈಬಿಡಬೇಕು. ಕಾಡುಗೊಲ್ಲ ಪುರುಷರಿಗೆ ಒದಗಿಸಿ ಕೊಟ್ಟಿರುವ ಸಾಧ್ಯತೆಯನ್ನು ಮಹಿಳೆಯರ ವಿಷಯದಲ್ಲಿ ನೀಡಲು ಯಾವುದೇ ಹಿಂಜರಿಕೆಯನ್ನು ಬುಡಕಟ್ಟು ಇಟ್ಟುಕೊಳ್ಳುವುದು ಸರಿಯಲ್ಲ.

ಕಾಡುಗೊಲ್ಲ ಮಹಿಳೆಯರು ಆತ್ಮವಿಶ್ವಾಸಿಗಳು ಬದುಕಿನ ಸಂಕಷ್ಟಗಳಿಗೆ ಎದೆಕೊಟ್ಟವರು.. ಅವರಲ್ಲಿ ನೋವುಗಳಿದ್ದರೂ, ಜೀವನಕ್ಕೆ ಕಷ್ಟವಿದ್ದರೂ ಬದುಕಿನ ವಿಮುಖತೆ ಇಲ್ಲ. ಇನ್ನು ಚೆನ್ನಾಗಿ ಬದುಕಬೇಕೆಂಬ ಛಲವಿದೆ. ಈ ಛಲವೇ ಹೊಸ ಬದುಕಿನ ದಾರಿಗಳನ್ನು ಶೋಧಿಸಿಕೊಳ್ಳುವಲ್ಲಿ ಅವರಿಗೆ ನೆರವಾಗುತ್ತಿದೆ.ಈ ಮಹಿಳೆಯರ ಬದುಕಿನ ಶ್ರದ್ಧೆ ಅಚ್ಚರಿ ಹುಟ್ಟಿಸುವಂತದ್ದು. ಬಡತನವನ್ನೇ ಉಟ್ಟು-ಹಾಸಿ ಬದುಕಿದ ಇವರು ಬರದಲ್ಲಿಯೂ ಬದುಕುವ ಮಾರ್ಗಗಳನ್ನು ಹುಡುಕಿಕೊಂಡಿದ್ದಾರೆ.

ಕಾಡುಗೊಲ್ಲ ಮಹಿಳೆಯರ ಬದುಕಿನ ಇತಿಹಾಸ ಹುಡುಕುತ್ತಾ ಅದು ಅವರ ಸಾಹಿತ್ಯದಲ್ಲಿ ದಾಖಲಾಗಿರುವುದನ್ನು ಗುರುತಿಸಿಕೊಂಡು ವರ್ತಮಾನದ ಅವರ ಬದುಕನ್ನು ಅಧ್ಯಯನ ನಡೆಸಿದಾಗ ಬಹಳಷ್ಟು ಸಾಮ್ಯತೆಗಳು ಇದ್ದವು. ಈ ಹಿಂದಿನ ಅಧ್ಯಾಯಗಳಲ್ಲಿ ಕಾಡುಗೊಲ್ಲ ಮಹಿಳೆಯರ ವರ್ತಮಾನದ ಬದುಕನ್ನು ದಾಖಲಿಸುವ ಪ್ರಯತ್ನ ಮಾಡಿದ್ದೇನೆ. ಅವರ ಇರುವ ಸ್ಥಿತಿಯನ್ನು ನಿರೂಪಿಸುವುದೆಂದರೆ ಅದನ್ನು ಸಮರ್ಥಿಸುವುದೆಂದಲ್ಲ. ಬದಲಿಗೆ ವರ್ತಮಾನದಲ್ಲಿ ಬದುಕಿನ ಸ್ಥಿತಿಯಬದಲಾವಣೆಗೆ ಬದಲಾವಣೆಯ ಮಾರ್ಗಗಳನ್ನು ಶೋಧಿಸುವುದೇ ಆಗಿತ್ತು.

ಜನಪದ ಸಂಸ್ಕೃತಿಯಲ್ಲಿ ಸ್ತ್ರೀಶಕ್ತಿಯು ಪಾದರಿಗಳು. ಸ್ತ್ರೀಯಾತ್ಮಕತೆಗಳ ಕುರುಹುಗಳವೆ ಎಂದು ಕಾಡುಗೊಲ್ಲ ಮಹಿಳಾ ಸಂಸ್ಕೃತಿಯನ್ನು ಹುಡುಕುತ್ತಾ ಹೊರಟ ನನಗೆ ಪ್ರಾರಂಭದಲ್ಲಿ ನಿರಾಶೆಯಾಯಿತು. ವರ್ತಮಾನದ ಮಹಿಳೆಯರು ಸಾಮಾಜಿಕ ಬದುಕಿನಲ್ಲಿ ಪುರುಷ ಸಮಾಜದ ನಿಯಮಗಳ ಅಡಿಯಲ್ಲಿ ನಲುಗಿರುವ ಸಂಗತಿಗಳು ಹೆಚ್ಚು ಬಯಲಿಗ ಬಂದವು. ಈ ಸಂಗತಿಯು ವರ್ತಮಾನದಲ್ಲಿ ಮಾತ್ರವಲ್ಲ ಇತಿಹಾಸದಲ್ಲೂ ಹಾಗೇ ಇತ್ತು. ಪುರುಷ ಸಮಾಜದ ಅಡಿಯಲ್ಲಿ ನಲುಗಿರುವ ಈ ಮಹಿಳಾ ಸಮುದಾಯ ಅಸಹನೆಯಿಂದ ಸಿಡಿದು ಹೋಗಿಲ್ಲ ಬದಲಿಗೆ ನೋವುಗಳನ್ನು ಅರಗಿಸಿಕೊಂಡು ಬದುಕುತ್ತಿದೆ. ಈ ಅರಗಿಸಿಕೊಂಡ ಸಹನೆಯ ಬದುಕಿನಲ್ಲಿ ಬದುಕಿನ ಉತ್ಸಾಹವಿದೆ. ಈ ಓಂದೆ ಅಧ್ಯಾಯದಲ್ಲಿ ದಾಖಲಿಸಲಾಗದ ಒಂದು ಸಾಹಿತ್ಯದ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಅಂಬಳಿಕೆ ಓಬಯಣ್ಣ ಅವರು ಸಂಗ್ರಹಿಸಿರುವ ಕಾಡುಗೊಲ್ಲರ ಜನಪದ ಗೀತೆಗಳು ಸಂಗ್ರಹದಲ್ಲಿ 'ಪಾಂಡವರಮೇಲಿನ ಪದ' ಗೀತೆಯಲ್ಲಿ ದ್ರೌಪದಿಯ ಪಾತ್ರ ಕಾಡುಗೊಲ್ಲ ಮಹಿಳಾ ಬದುಕಿನ ಸಹನೆಯನ್ನು ಪರಿಚಯಿಸುವಂಥದ್ದು.

ಕಾಡುಗೊಲ್ಲರ ಈ ದ್ರೌಪದಿಯು 'ದುರಿಯ'ನ (ದುರ್ಯೋಧನನ) ಬಯಕೆಗೆ ತುತ್ತಾದವಳು. ಪಾಂಡವರು ದ್ರೌಪದಿಯನ್ನು ಜೂಜಿನಲ್ಲಿ ಸೋತು ಮೇಲೆ ದುರಿಯನ ತೊತ್ತಾಗಿ ಅರಮನೆಗೆ ದ್ರೌಪದಿ ಬರುತ್ತಾಳೆ. ಹೀಗೆ ಬರುವವಳನ್ನು ಸೀರೆ ಸೆಳೆದು ಮಾನ ಅಪಹರಿಸುವ ಸನ್ನಿವೇಶ ಗೀತೆಯಲ್ಲಿ ಇಲ್ಲ ಬದಲಿಗೆ ದುರಿಯನ ಅರಮನೆಗೆ ಬರುವ ದ್ರೌಪದಿ ಗಾಂಧಾರಿ, ಭಾನುಮತಿ, ದುಶ್ಯಲೆಗೆ ವಂದಿಸಿ ಅರಮನೆಯ ಕಸ ಗುಡಿಸುವ, ನೀರುತರುವ ಕಾಯಕ ಮಾಡುತ್ತಾಳೆ. ಶ್ರೀಕೃಷ್ಣನ ಸಹಾಯವಿಲ್ಲದೆ ದುರಿಯನನ್ನು ಸೋಲಿಸಿ ಪಾಂಡವರು ಕಳೆದುಕೊಂಡಿದ್ದ ಸಕಲ ಸಂಪತ್ತನ್ನೂ ದ್ರೌಪದಿ ಗೆಲ್ಲುತ್ತಾಳೆ. ತಾನು ಅಸಹಾಯಕಳಾಗಿ ರಕ್ಷಣೆಗೆ ಶ್ರೀಕೃಷ್ಣನ ಮೊರೆಯನ್ನಿಡುವುದಿಲ್ಲ ಈ ದ್ರೌಪದಿ. ಅಷ್ಟೇ ಅಲ್ಲ ತನ್ನನ್ನು ಅರಮನೆಯಲ್ಲಿ ಆಳಾಗಿ ದುಡಿಸಿದ ದುರಿಯನನ್ನು ತಾನೇ ಕೊಲ್ಲುತ್ತಾಳೆ.

ಕಾಲೀಲ್ಹಾಕೀದ ಸಾರಿ ಕಣ್ಣಿಲಿ ತಗುಲ್ಯಾವೆ
ಕಣ್ಣೊಡೆದು ದುರಿಯನ ತೆಲಿ ಬಡಿದು – ದ್ರೌಪತ
ನೆತ್ತರುವಾಗಿ ಎದ್ದಾಬ ತುರಾಜಿಟ್ಟು (ಪುಟ 370 ಕಾಡುಗೊಲ್ಲರ ಜನಪದ ಗೀತೆಗಳು)

ಭೀಮನ ಸಹಾಯವಿಲ್ಲದೆ ತನ್ನ ಅಪಮಾನವನ್ನು ತಾನೇ ಎದುರಿಸಿ ನಿಂತ ದಿಟ್ಟ ಹೆಣ್ಣಾಗಿ ದ್ರೌಪದಿ ಕಾಣುತ್ತಾಳೆ. ದ್ರೌಪದಿಯಲ್ಲಿರುವಂತಹ ಅಂತಃಶಕ್ತಿಯನ್ನು ಹಲವು ಕಷ್ಟಗಳ ನಡುವೆ

ಬದುಕು ಮಾಡುತ್ತಿರುವ ಕಾಡುಗೊಲ್ಲ ಮಹಿಳೆಯರಲ್ಲಿ ಇಂದಿಗೂ ಕಾಣಬಹುದಾಗಿದೆ. ಒಂಟಿಯಾಗಿ, ಸ್ವಂತಶಕ್ತಿಯಿಂದ ಬದುಕಿನ ಕಷ್ಟಗಳನ್ನು ಎದುರಿಸಿ ಸಮನಾಗಿ ಬದುಕುವ ಜಾಣ್ಮೆ ಈ ಮಹಿಳೆಯರಲ್ಲಿ ಇದೆ.

ಕಾಡುಗೊಲ್ಲರ ಮಹಿಳೆಯ ಧಾರ್ಮಿಕ ಬದುಕು, ಆರ್ಥಿಕ ಬದುಕು, ಶೈಕ್ಷಣಿಕ ಬದುಕು, ರಾಜಕೀಯ ಬದುಕು, ಸಾಮಾಜಿಕ ಬದುಕು ಅವರ ಒಪ್ಪಿಗೆಯ ಗೈರುಹಾಜರಿಯಲ್ಲಿ ಸಾಗಿದೆ. ಬುಡಕಟ್ಟಿನ ಬದುಕಿನ ಕೇಂದ್ರ ಶಕ್ತಿಯಾಗಿರುವ ಮಹಿಳೆಯು ಸಮಾಜದಲ್ಲಿ ಸಂಪೂರ್ಣವಾಗಿ ಹಾಜರಾಗಬೇಕಾದರೆ ಅವಳ ಮೇಲೆ ಹೇರಲಾಗಿರುವ ಸಾಂಸ್ಕೃತಿಕ ಒತ್ತಡಗಳನ್ನು ಇಲ್ಲವಾಗಿಸಬೇಕಿದೆ, ಕಾಡುಗೊಲ್ಲರ ಪುರುಷನ ಸಾಂಸ್ಕೃತಿಕ ವೈಭವ ಮಹಿಳಾ ಬದುಕಿಗೆ ಕುತ್ತಾಗುವುದು ಬೇಡ ಅದನ್ನು ಆಧುನಿಕ ರೂಪದಲ್ಲಿ ಮರುಸ್ಥಾಪಿಸುವುದು ಬೇಡವಾಗಿದೆ.

ಈ ಹಟ್ಟಿಯೊಳಗೆ ಅಭಿವೃದ್ಧಿ ಪ್ರಧಾನ ಯೋಜನೆಗಳಾಗಿ ಆರ್ಥಿಕ ಸಂಘಟನೆಗಳು ಅಸ್ತಿತ್ವದಲ್ಲಿದೆ. ಈ ಆರ್ಥಿಕ ಸಂಘಟನೆಗಳು ಮಹಿಳಾ ಸಬಲೀಕರಣದ ಹಿನ್ನೆಲೆಯಲ್ಲಿ ರಚನೆಯಾದವು. ಈ ಆರ್ಥಿಕ ಘಟಕಗಳಿಂದ ಊರಿನ ಶೆಟ್ಟರ ಹತ್ತಿರ ಸಾಲಕ್ಕೆ ಹೋಗುವುದು ತಪ್ಪಿದೆ. ಆದರೆ ಈ ಮಹಿಳೆಯರ ಆರ್ಥಿಕ ಸಬಲೀಕರಣ ಮಾಡುವುದಕ್ಕಿಂತ ಅವರ ಮೇಲೆ ದುಡಿಮೆಯ ಒತ್ತಡವನ್ನು ಹೆಚ್ಚಿಸಿದೆ. ಈ ಆರ್ಥಿಕ ಯೋಜನೆಗಳು ಮಹಿಳೆಯರಿಗೆ ಸಾಲ ನೀಡುವ ಮತ್ತು ಪಡೆಯುವ ಸಂಘಟನೆಗಳಾಗಿ ಮಾತ್ರ ಹಟ್ಟಿಯೊಳಗೆ ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರು ಪಡೆಯುವ ಸಾಲ ಬಹುತೇಕ ಕುರಿವ್ಯಾಪಾರದ ಮೇಲೆ ತೊಡಗಿಸುವುದರಿಂದ ಸಾಲ ಮರುಪಾವತಿಸಲು ಮಹಿಳೆಯರು ನಿರಂತರ ದುಡಿಮೆಯನ್ನು ಹುಡುಕಿಕೊಳ್ಳಲೇ ಬೇಕಾದುದು ಅನಿವಾರ್ಯವಾಗಿದೆ. ಮಹಿಳಾ ಪ್ರಧಾನ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ಅಭಿವೃದ್ಧಿ ಪ್ರಧಾನ ಯೋಜನೆಗಳು ಈ ಹಟ್ಟಿಯನ್ನು ಪ್ರವೇಶಿಸಬೇಕಾಗಿವೆ. ಇಂತಹ ಯೋಜನೆಗಳು ಈ ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ನೆರವಾಗಬಲ್ಲದು.

ಹಟ್ಟಿಯಲ್ಲಿ ಶ್ರೀಕೃಷ್ಣಯಾದವ ಯುವಕ ಸಂಘಟನೆಗಳು ಅಸ್ತಿತ್ವದಲ್ಲಿವೆ. ಈ ಸಂಘಟನೆಯಲ್ಲಿ ಯುವಕರು ಮಾತ್ರ ಸದಸ್ಯರಿದ್ದು ಒಬ್ಬ ಮಹಿಳಾ ಸದಸ್ಯರು ಇಲ್ಲ. ಹಟ್ಟಿಯೊಳಗೆ ಯಾವ ಮಹಿಳಾ ಸಾಮಾಜಿಕ ಸಂಘಟನೆಗಳು ಇಲ್ಲ. ಹಟ್ಟಿಯೊಳಗೆ ಮಹಿಳಾ ಸಾಮಾಜಿಕ ಸಂಘಟನೆಗಳು ಅವರ ಸ್ಥಿತಿಗತಿ ಸುಧಾರಣೆಯಲ್ಲಿ ಪ್ರಮುಖಪಾತ್ರ ವಹಿಸಬಲ್ಲವಾದ್ದರಿಂದ ಅವುಗಳ ಅಗತ್ಯವಿದೆ.

ಲಿಂಗ ತಾತಮ್ಯದ ನೆಲೆಗಳು ಹಟ್ಟಿಯೊಳಗೆ ಧಾರಾಳವಾಗಿಯೆ ಇದೆ. ಈ ಅಸಮಾನ ನೆಲೆಯಿಂದಾಗಿ ಇಲ್ಲಿನ ಮಹಿಳೆಯರ ಶಿಕ್ಷಣ, ಉದ್ಯೋಗ, ಸಾಮಾಜಿಕ ಸ್ಥಾನಮಾನ, ಅಧಿಕಾರ

ಹಕ್ಕುಗಳೆಲ್ಲಾ ತುಳಿಯಲ್ಪಟ್ಟಿದೆ. ಬೌದ್ಧಿಕವಾಗಿ ಸ್ವತಂತ್ರ ಪಡೆಯದೆ ಲಭ್ಯವಿರುವ ಯಾವುದೇ ರಾಜಕೀಯ ಆರ್ಥಿಕ ಶಕ್ತಿಯು ನಿಷ್ಪ್ರಯೋಜಕವೆಂಬುದನ್ನು ಹಟ್ಟಿಯ ವರ್ತಮಾನದ ಮಹಿಳೆಯರ ಬದುಕು ಸಾಬೀತುಗೊಳಿಸಿದೆ. ತಮಗೆ ದೊರೆಯುವ ಅವಕಾಶಗಳನ್ನು ಸ್ವಾವಲಂಬಿಯಾಗಿ ಸದುಪಯೋಗ ಪಡಿಸಿಕೊಳ್ಳಲು ಬೌದ್ಧಿಕ ಅಗತ್ಯವನ್ನು ಪೂರೈಸುವ ವಾತವರಣವನ್ನು ಅವರಿಗೆ ನೀಡಬೇಕಿದೆ.

ಕಾಡುಗೊಲ್ಲ ಮಹಿಳೆಯರು ಆತ್ಮವಿಶ್ವಾಸದಿಂದಲೇ ಎಷ್ಟೋ ಕಷ್ಟಗಳಿದ್ದರೂ ಕುಟುಂಬವನ್ನು ಹೆಗಲಲ್ಲಿ ಹೊತ್ತು ನಡೆಸುತ್ತಿದ್ದಾಳೆ. ಆದರೆ ಈ ನಡಿಗೆಯು ಭಾರವಾಗಿದ್ದರು ಅದರ ಹೆಜ್ಜೆಗಳು ಮಾತ್ರ ದಾಖಲಾಗುತ್ತಿಲ್ಲವಷ್ಟೇ. ಚಿಕ್ಕ ವಯಸ್ಸಿಗೆ ವಿವಾಹವಾಗಿ, ಪ್ರಬುದ್ಧತೆಗೂ ಮುನ್ನ ಕುಟುಂಬದ ಹೊಣೆಗಾರಿಕೆಯನ್ನು ಹೊತ್ತು ದುಡಿಮೆ ಮತ್ತು ಬದುಕು ಎರಡನ್ನೂ ಸಮನ್ವಯಗೊಳಿಸುತ್ತಾ ಒಂದು ವೇಳೆ ಕುಟುಂಬದಲ್ಲಿ ಪುರುಷ ಅಸಮರ್ಥವಾಗಿದ್ದಾರೆ ಅವನನ್ನು ಸಾಕುವ ಮಹಿಳೆಯರ ಬದುಕಿನ ಸ್ಥೈರಣೆ ಅಭಿನಂದನೀಯವೇ. ಸಿಮೋನ್‌ದಬೋವಾ ಹೇಳುವಂತೆ "ಸ್ತ್ರೀ ವಿಮೋಚನೆಯಲ್ಲಿ ಮನುಷ್ಯನ ವಿಮೋಚನೆಯಿದೆ" ಅಷ್ಟು ಮಾತ್ರವಲ್ಲ ಸ್ತ್ರೀ ಬದುಕಿನಲ್ಲಿ ಮನುಷ್ಯನ ಬದುಕೂ ಇದೆ. ಕಾಡುಗೊಲ್ಲ ಮಹಿಳಾ ಬದುಕಿನ ಉತ್ಸಾಹವೇ ಇಂದಿಗೂ ಕಾಡು ಬುಡಕಟ್ಟು ಹಟ್ಟಿಯಾಗಿಯೇ ಉಳಿಯಲು ಸಾಧ್ಯವಾಗಿದೆ, ಕುಟುಂಬ ಕುಟುಂಬವಾಗಿಯೇ ಉಳಿಯಲು ಸಾಧ್ಯವಾಗಿದೆ.

ಹಾಗೆಂದು ಮಹಿಳೆಯರ ಸ್ಥಿತಿಗಳ ಸುಧಾರಣೆ ಬೇಕಿಲ್ಲ ಎಂದಲ್ಲ. ಸುಧಾರಣೆ ಇಂದು ತುರ್ತಾಗಿ ಆಗಲೇಬೇಕಾದ ಕಾರ್ಯವಾಗಿದೆ. ಬುಡಕಟ್ಟಿನೊಳಗಿನ ಮಹಿಳೆಯರ ಬದುಕಿನ ಶೋಷಣೆಯು ಇಲ್ಲವಾದರೆ ಮಾತ್ರ ಭವಿಷ್ಯದಲ್ಲಿ ಹಟ್ಟಿಯೂ ಉಳಿಯುತ್ತದೆ. ಇಲ್ಲದಿದ್ದರೆ ಅಳುವಿನ ಅಂಚಿಗೆ ತಲುಪಬೇಕಾಗುತ್ತದೆ.

ವಿಶ್ವಾತ್ಮಕ ಒಗ್ಗಟ್ಟು ಏಕತೆಗೆ ಆದ್ಯತೆ ನೀಡುವ ಕಾಡುಗೊಲ್ಲ ಬುಡಕಟ್ಟು ಮಹಿಳೆಯರ ಬದುಕಿನಲ್ಲಿ ಹೊಸ ಅರಿವಿಗೆ ಬದಲಾವಣೆಗೆ ಜಾಗ ನೀಡುವ ಮೂಲಕ ಆಧುನಿಕತೆಯನ್ನು ತನ್ನಲ್ಲಿ ಅರಗಿಸಿಕೊಂಡು ನಡೆಯಬೇಕಾಗುತ್ತದೆ. ಆಧುನಿಕತೆಯಿಂದ ಮರೆ ಮಾಡಿಕೊಂಡು, ಮುಚ್ಚಿಕೊಂಡು ಬದುಕಲು ಪ್ರಯತ್ನಿಸಿದರೆ ಅದು ಹಿಮ್ಮೆಟ್ಟಿಸುತ್ತದೆ, ಬೆದರಿಸುತ್ತದೆ. ಆಧುನಿಕತೆಯನ್ನು ಅಪ್ಪಿಯೂ ಬದಲಾವಣೆಗೆ ತೆರೆದುಕೊಂಡು ಸಮುದಾಯದ ಬದುಕನ್ನು ಸಾಧ್ಯಗೊಳಿಸಿಕೊಳ್ಳಬೇಕಿರುವುದು ಇಂದು ಕಾಡುಗೊಲ್ಲ ಬುಡಕಟ್ಟು ಎದುರಿಸಬೇಕಾದ ಸವಾಲಾಗಿದೆ.

ವಕ್ತೃಸೂಚಿ

1. ಕಣ್ಣಮ್ಮ 45 ವರ್ಷ ದೇವರಹಟ್ಟಿ
2. ಈರಮ್ಮ 60 ವರ್ಷ ಪೆಮ್ಮನಹಳ್ಳಿ
3. ಮಮತ 23 ವರ್ಷ ಬ್ಯಾಡರ ಹಟ್ಟಿ
4. ರತ್ನಮ್ಮ 38 ವರ್ಷ ಜುಂಜಪ್ಪನ ಹಟ್ಟಿ
5. ನಾಗವೇಣಮ್ಮ 45 ವರ್ಷ ಜುಂಜಪ್ಪನ ಹಟ್ಟಿ
6. ನಾಗಮ್ಮ 45 ವರ್ಷ ಕೆಂಚಮ್ಮನಹಳ್ಳಿ ಗೊಲ್ಲರ ಹಟ್ಟಿ
7. ಲಕ್ಷ್ಮಮ್ಮ 32 ವರ್ಷ ಚಿಕ್ಕತಿಮ್ಮನ ಹಟ್ಟಿ
8. ಈರಮ್ಮ 40 ವರ್ಷ ಲಿಂಗದ ಹಳ್ಳಿ ಗೊಲ್ಲರ ಹಟ್ಟಿ
9. ಕರಿಯಮ್ಮ 60 ವರ್ಷ ಕಾಮನಹಟ್ಟಿ
10. ಗೀತ 25 ವರ್ಷ ಬ್ಯಾಡರಹಳ್ಳಿ ಗೊಲ್ಲರ ಹಟ್ಟಿ
11. ಶಿವಮ್ಮ 20 ವರ್ಷ ಗೌಡಗಾರನಾಗನ ಹಟ್ಟಿ
12. ರಾಧಮ್ಮ 26 ವರ್ಷ ಬ್ಯಾಡನೂರು ಗೊಲ್ಲರ ಹಟ್ಟಿ
13. ಮಂಜುಳ 17 ವರ್ಷ ಬ್ಯಾಡನೂರು ಗೊಲ್ಲರ ಹಟ್ಟಿ
14. 80 ವರ್ಷ ಚಿತ್ತಮ್ಮ ಮುಗುದಾಳ ಬೆಟ್ಟ ಗೊಲ್ಲರ ಹಟ್ಟಿ
15. ಕರಿಯಪ್ಪ 40 ವರ್ಷ ಬ್ಯಾಡನೂರು ಗೊಲ್ಲರ ಹಟ್ಟಿ
16. ನೇತ್ರ 29 ವರ್ಷ ಕೆಂಚಮ್ಮನಹಳ್ಳಿ ಗೊಲ್ಲರ ಹಟ್ಟಿ
17. ನಾಗವೇಣಿ 32 ವರ್ಷಈರಮುದ್ದನ ಹಟ್ಟಿ
18. ಗಿಡ್ಡಮ್ಮ 54 ವರ್ಷ ಹೊಸಹಳ್ಳಿ ಗೊಲ್ಲರ ಹಟ್ಟಿ
19. ಸರೋಜಮ್ಮ 69 ವರ್ಷ ಬೊಮ್ಮನ ಹಟ್ಟಿ
20. ಸಾವಿತ್ರಮ್ಮ 65 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರ ಹಟ್ಟಿ
21. ಅನಿತ 17 ವರ್ಷ ಚನ್ನಸಾಗರದ ಹಟ್ಟಿ
22. ನಾಗವೇಣಮ್ಮ 30 ವರ್ಷ ಈರಮುದ್ದನಹಟ್ಟಿ
23. ಸರೋಜಮ್ಮ 52 ವರ್ಷ ಕಣವೇನಹಳ್ಳಿ ಗೊಲ್ಲರ ಹಟ್ಟಿ
24. ಈರಮ್ಮ 60 ವರ್ಷ ಚಿಕ್ಕ ತಿಮ್ಮನಹಳ್ಳಿಗೊಲ್ಲರಹಟ್ಟಿ
25. ಗಂಗಮ್ಮ 85 ವರ್ಷ ಕಾಮನಹಟ್ಟಿ
26. ಕರಿಯಮ್ಮ 69 ವರ್ಷ ಕುಲಮೆಹಟ್ಟಿ
27. ಕಣ್ಣೀರಮ್ಮ 58 ವರ್ಷ ಎರಪಳಪಾಳ್ಯ ಗೊಲ್ಲರಹಟ್ಟಿ

28. ತಾಯಮ್ಮ 46 ವರ್ಷ ಪೊನ್ನ ಸಮುದ್ರಗೊಲ್ಲರಹಟ್ಟಿ

29. ನಾಗವೇಣಿ ಅಂಗನವಾಡಿ ಕಾರ್ಯಕರ್ತೆ ಪೆಮ್ಮನಪಳ್ಳಿಗೊಲ್ಲರಹಟ್ಟಿ

30. ಹನುಮಕ್ಕ 65 ವರ್ಷ ಚಿತ್ತಗಾನಹಳ್ಳಿ ಗೊಲ್ಲರಹಟ್ಟಿ

31. ಅನುಸೂಯ 39 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ

32. ಚಿತ್ತಮ್ಮ 25 ವರ್ಷ ಜೋಗರ ಹಟ್ಟಿ

33. ಲಕ್ಷ್ಮಮ್ಮ 26 ವರ್ಷ ಪೆಮ್ಮನಹಳ್ಳಿಗೊಲ್ಲರಹಟ್ಟಿ

34. ಶೋಭ 30 ವರ್ಷ ಜುಂಜಪ್ಪನ ಹಟ್ಟಿ

35. ಸಿದ್ದಮ್ಮ 64 ವರ್ಷ ಕೋಣನಕುರಿಕೆ ಗೊಲ್ಲರ ಹಟ್ಟಿ

36. ಅಕ್ಕಮ್ಮ 68 ವರ್ಷ ಜಂಗಮರ ಗೊಲ್ಲರಹಟ್ಟಿ

37. ಕರಿಯಮ್ಮ 70 ವರ್ಷ ಕಾರನಾಗನಹಟ್ಟಿ

38. ನಿರ್ಮಲ 19 ವರ್ಷ ಬ್ಯಾಡನೂರು ಗೊಲ್ಲರಹಟ್ಟಿ

39. ಪಾತಮ್ಮ 82 ವರ್ಷ ಕೆಂಚಮ್ಮನಹಳ್ಳಿಗೊಲ್ಲರಹಟ್ಟಿ

40. ಆಶಾ 29 ವರ್ಷ ಪಳುವಳ್ಳಿ ಗೊಲ್ಲರಹಟ್ಟಿ

41. ಪಾರ್ವತಮ್ಮ 59 ವರ್ಷ ದೇವರಹಟ್ಟಿ

42. ಪವಿತ್ರ 28 ವರ್ಷ ಕಾಮನಹಟ್ಟಿ

43. ದೊಡ್ಡೀರಮ್ಮ 36 ವರ್ಷ ಕಾರನಾಗನಹಟ್ಟಿ

44. ಗಿರಿಯಮ್ಮ 70 ವರ್ಷ ಕುಲುಮೆಹಟ್ಟಿ

45. ರಾಜಮ್ಮ 34 ವರ್ಷ ಹೊಸಹಳ್ಳಿ ಗೊಲ್ಲರಹಟ್ಟಿ

46. ಈರಕ್ಕ 80 ವರ್ಷ ಕೆ ಟಿ ಹಳ್ಳಿ ಗೊಲ್ಲರಹಟ್ಟಿ

47. ಕರಿಯಮ್ಮ 62 ವರ್ಷ ಪೊನ್ನಸಮುದ್ರಗೊಲ್ಲರಹಟ್ಟಿ

48. ಅರ್ಪಿತ 19 ವರ್ಷ ಚನ್ನಸಾಗರದ ಹಟ್ಟಿ

49. ಚಿಕ್ಕಣ್ಣ 45 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ

50. ಯಶೋಧ 20 ವರ್ಷ ಎರಪಾಳ್ಯಗೊಲ್ಲರಹಟ್ಟಿ

51. ಗಂಗಮ್ಮ 31 ವರ್ಷ ಗೌಡಗರನಹಟ್ಟಿ

52. ರಾಜಮ್ಮ 32 ವರ್ಷ. ಹನುಮಕ್ಕ 75 ವರ್ಷ ಚಿಕ್ಕತಿಮ್ಮನಹಳ್ಳಿಗೊಲ್ಲರಹಟ್ಟಿ

53. ಸಿತ್ತಮ್ಮ 54 ವರ್ಷ ಲಿಂಗದಹಳ್ಳಿ ಗೊಲ್ಲರ ಹಟ್ಟಿ

54. ನೀಲಮ್ಮ 35 ವರ್ಷ ಜಂಗಮರಗೊಲ್ಲರಹಟ್ಟಿ

55. ದೊಡ್ಡಮ್ಮ 67 ವರ್ಷ ಸೂಲನಾಯ್ಕನಹಳ್ಳಿ ಗೊಲ್ಲರಹಟ್ಟಿ

56. ಭಾಗ್ಯ 23 ವರ್ಷ ಕುಲುಮೆ ಹಟ್ಟಿ

57. ಚಿಕ್ಕಮ್ಮ 70 ವರ್ಷ ಲಿಂಗದಹಳ್ಳಿ ಗೊಲ್ಲರಹಟ್ಟಿ

58. ದೊಡ್ಡೀರಮ್ಮ 75 ವರ್ಷ ಪೊನ್ನಸಮುದ್ರ ಗೊಲ್ಲರಹಟ್ಟಿ

59. ಪದ್ಮ 20 ವರ್ಷ ಚಿಕ್ಕತಿಮ್ಮನಹಳ್ಳಿ ಗೊಲ್ಲರಹಟ್ಟಿ

60. ಸೌಮ್ಯ 18 ವರ್ಷ ಕೆಂಚಮ್ಮನಹಳ್ಳಿ ಗೊಲ್ಲರಹಟ್ಟಿ

61. ಈರಮ್ಮ 56 ವರ್ಷ ಚಿತ್ತಗಾನಹಳ್ಳಿ ಗೊಲ್ಲರಹಟ್ಟಿ

62. ನಾಗಮ್ಮ 63 ವರ್ಷ ಚನ್ನಸಾಗರದ ಗೊಲ್ಲರಹಟ್ಟಿ

63. ಚಿತ್ತಮ್ಮ 54 ವರ್ಷ ದೇವರಹಟ್ಟಿ

64. ಸಾಕಮ್ಮ 59 ವರ್ಷ ಕಾಮನಹಟ್ಟಿ

65. ಸಿರಿಯಮ್ಮ 60 ವರ್ಷ ಕಣವೇನಹಳ್ಳಿ ಗೊಲ್ಲರಹಟ್ಟಿ

66. ಮಾದಮ್ಮ 68 ವರ್ಷ ಎರಪಾಳ್ಯ ಗೊಲ್ಲರಹಟ್ಟಿ

67. ತಿಮ್ಮಕ್ಕ 53 ವರ್ಷ ಬೊಮ್ಮನಹಟ್ಟಿ

68. ಸಣ್ಣಮ್ಮ 65 ವರ್ಷ ದೊಡ್ಡಟ್ಟಿ

69. ಸಹನ 32 ವರ್ಷ ಗೌಡಗಾರನಹಟ್ಟಿ

70. ಜಯಮ್ಮ 48 ವರ್ಷ ಜಂಗಮರಹಳ್ಳಿ ಗೊಲ್ಲರಹಟ್ಟಿ

71. ಕರಿಯಪ್ಪ 60 ವರ್ಷ ಈರಮುದ್ದನಹಟ್ಟಿ

72. ಬಾಳಮ್ಮ 54 ವರ್ಷ ಜೋಗಾರಹಟ್ಟಿ

73. ತಿಮ್ಮಮ್ಮ 75 ವರ್ಷ ಜುಂಜಪ್ಪನಹಟ್ಟಿ

74. ನಾಗಣ್ಣ 64 ವರ್ಷ ಹೊಸಹಳ್ಳಿ ಗೊಲ್ಲರಹಟ್ಟಿ

75. ಜಡೆಯಮ್ಮ 59 ವರ್ಷ ಕಾರನಾಗನಹಟ್ಟಿ

76. ಸಣ್ಣನಾಗಮ್ಮ 42 ವರ್ಷ ಕೆ.ಟಿ ಹಳ್ಳಿ ಗೊಲ್ಲರಹಟ್ಟಿ

77. ಕರಿಯಮ್ಮ 52 ವರ್ಷ ವಡ್ಡರಹಟ್ಟಿ

78. ಮುದ್ದಮ್ಮ 43 ವರ್ಷ ಕೆ.ಟಿ ಹಳ್ಳಿ ಗೊಲ್ಲರಹಟ್ಟಿ

79. ರತ್ನಮ್ಮ 35 ವರ್ಷ ಚಿಕ್ಕತಿಮ್ಮನಹಳ್ಳಿ ಗೊಲ್ಲರಹಟ್ಟಿ

80. ಕಂಬಮ್ಮ 50 ವರ್ಷ ಕಾಮನಹಟ್ಟಿ

81. ಕರಿಯಮ್ಮ 76 ವರ್ಷ ದೇವರಹಟ್ಟಿ

82. ರಾಮಕ್ಕ 65 ವರ್ಷ ದೇವರಹಟ್ಟಿ

83. ಚಿತ್ತಜ್ಜಿ 78 ವರ್ಷ ಪೊನ್ನಸಮುದ್ರ ಗೊಲ್ಲರಹಟ್ಟಿ

ಪರಾಮರ್ಶನ ಸಾಹಿತ್ಯ

1. ಅಂಬಳಿಕೆ ಹಿರಿಯಣ್ಣ, – ಕಾಡುಗೊಲ್ಲರ ಜನಪದ ಗೀತೆಗಳು
ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮೈಸೂರು.

2. ಅಂಬಳಿಕೆ ಹಿರಿಯಣ್ಣ, – ಲೌಕಿಕ ಸಂಪಸ್ರದಾಯದ ಚೌಡಿಕೆ ಕಾವ್ಯಗಳು
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

3. ಡಾ. ಎಂ. ಉಷಾ – ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು
ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು.

4. ಕವಿತಾ ರೈ – ಮಹಿಳೆ ಮತ್ತು ಕುಟುಂಬ ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

5. ಕರೀಂ ಖಾನ್ ಎನ.ಕೆ. – ಜನಪರ ಗೀತೆ ಜನಪರ ಪ್ರಕಾಶನ,
ಗಾಂಧಿನಗರ, ಬೆಂಗಳೂರು.

6. ಕರೀಗೌಡ ಬೀಚನಹಳ್ಳಿ – ಸಂಕಥನ , ಅಜಂತ ಪ್ರಕಾಶನ
1283, 23 ನೇ ಮುಖ್ಯರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು

7. ಕಡೆ ತೋಟದ ಎನ್.ಕೆ. – ಎಲ್ಲಮ್ಮನ ಜೋಗಡಿಯರ ಹಾಗೂ ದೇವದಾಸಿ ಪದ್ಧತಿ
ಕರ್ನಾಟಕವಿಶ್ವವಿದ್ಯಾನಿಲಯ, ಧಾರವಾಡ.

8. ಕಲುಬುರ್ಗಿ ಎಂ.ಎಂ. – ಜಾನಪದ ಸಾಹಿತ್ಯ ದರ್ಶನ
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

9. ಕೃಷ್ಣಮೂರ್ತಿ ಹನೂರು, – ಕತ್ತಾಲ ದಾರಿದೂರ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

10. (ಸಂ) ಕೃಷ್ಣಮೂರ್ತಿ ಹನೂರು. – ಸಾವಿರದ ಸಿರಿ ಬೆಳಗು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2005

11. ಕೃಷ್ಣಮೂರ್ತಿ ಹನೂರು. - ಜಾನಪದ ವೀರಗೀತೆಗಳು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು.

12. ಕಾಳೇಗೌಡ ನಾಗವಾರ - ಕಾಡುಗೊಲ್ಲರ ಹಟ್ಟಿಯೊಂದರ ಅಧ್ಯಯನ
(ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ)

13. ಕಾಳೇಗೌಡ ನಾಗವಾರ - ಜುಂಜಪ್ಪನ ಕಾವ್ಯ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು.

14. ಕಾಳೇಗೌಡ ನಾಗವಾರ - ಜುಂಜಪ್ಪ
ರಾಜ್ಯ ಸಂಪನ್ಮೂಲ ಕೇಂದ್ರ,
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ
ಸಮಿತಿ, ಕುವೆಂಪುನಗರ, ಮೈಸೂರು.

15. ಕಾಳೆಗೌಡ ನಾಗವಾರ - ಬೀದಿ ಮಕ್ಕಳು ಬೆಳದೂ
ಪ್ರಸಾರಾಂಗ,
ಬೆಂಗಳೂರು ವಿಶ್ವವಿದ್ಯಾನಿಲಯ,
ಬೆಂಗಳೂರು.

16. ಕಾಳೇಗೌಡ ನಾಗವಾರ - ಗಿರಿಜನ ಸಂಸ್ಕೃತಿ
ಎನ್.ಹುಚ್ಚಪ್ಪ ಮಾಸ್ತರ್,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ, ಬೆಂಗಳುರು. 2000

17. ಖಂಡೋಬಾ ದ.ಕೆ. - ಜಾನಪದ ಮುನ್ನೋಟ
ಸಂಗೀತ ಪಬ್ಲಿಕೇಷನ್, ಗುಲ್ಬರ್ಗ.

18. ಗೀತಾ ನಾಗಭೂಷಣ - ದುರಗ ಮುರಗಿಯವರ ಸಂಸ್ಕೃತಿ
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು.

19. ಗಿರಡ್ಡಿ ಗೋವಿಂದರಾಜ - ಜನಪದ ಕಾವ್ಯ
ಕರ್ನಾಟಕವಿಶ್ವವಿದ್ಯಾನಿಲಯ,
ಧಾರವಾಡ.

20. ಗಿರಿಗೌಡ - ಎರಡು ಜನಪದ ಕಾವ್ಯಗಳು
ಕೃಷ್ಣದೇವರಾಯನ ರಸ್ತೆ,
ಜಯನಗರ, ಮೈಸೂರು.

21.ಗೋವಿಂದರಾಜು. .ಕಿ.ಆರ್.	-	ಕನ್ನಡಮ್ಮ - ಹೆಣ್ಣು ಸಂಕಥನದ ನಾಡು, ನುಡಿ ರೂಪಕ ಪ್ರತೀಕಗಳು ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
22. ಗೋವಿಂದರಾಜು	-	ದನಗಳ ದೇವತೆ ಕಾಂಟುರಾಯ, ಕನ್ನಡ ಪ್ರಭ
23. ಗಂಗಾಧರಯ್ಯ ಪಿ ಎಂ	-	ಕಾಡುಗೊಲ್ಲರು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು 2011
24. ಚೆಲುವರಾಜು (ಮಾಡ್ಗನಹಳ್ಳಿ ದಾಸಪ್ಪ ಹಾಡಿದ ಗಣೆ ಕಾವ್ಯ)	-	ಜುಂಜಪ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
25. ಚೆನ್ನಬಸಪ್ಪ ಗೊ.ರು.	-	ಜಾನಪದ ದರ್ಶನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
26. ಚೆನ್ನಣ್ಣ ವಾಲೀಕಾರ	-	ಜಾನಪದ ಲೋಕ ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ, ಬಂಡೇಪುರ ಕಾಲನಿ, ಗುಲ್ಬರ್ಗ.
27. ಚಂದ್ರಶೇಖರ ಕಂಬಾರ	-	ಕನ್ನಡ ಜಾನಪದ ವಿಶ್ವಕೋಶ (ಸಂ) 1 ಮತ್ತು 2 ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
28. ಚಂದ್ರೆಗೌಡ ಕುಲಕರ್ಣಿ	-	ಎಲ್ಲಮ್ಮನ ಆಟ ಸಂಗಾತಿ ಪ್ರಕಾಶನ, ಕಡದಹಳ್ಳಿ.
29. ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ	-	ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
30. ಜವರೇಗೌಡ ದೇ.	- -	ಜಾನಪದ ಅಧ್ಯಯನ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
31. (ಸಂ) ತಪಸ್ವೀಕುಮಾರ್	-	ಸಂಸ್ಕೃತಿ ಅಧ್ಯಯನ ಚಾಮುಂಡಿ ಎಂಟರ್ ಪ್ರೈಸಸ್, ಮೈಸೂರು.

32. ಶಿವ್ವೇರುದ್ರಸ್ವಾಮಿ ಹೆಚ್. – ಕರ್ನಾಟಕ ಸಂಸ್ಕೃತಿ
ಡಿ.ವಿ.ಕೆ. ಮೂರ್ತಿ ಪ್ರಕಾಶನ,
ಕೃಷ್ಣಮೂರ್ತಿಪುರ, ಮೈಸೂರು.

33.ಶಿವ್ವೇರುದ್ರಸ್ವಾಮಿ ಹೆಚ್. – ಕರ್ನಾಟಕ ಸಂಸ್ಕೃತಿ ಸಮೀಕ್ಷೆ
ಮೈಸೂರು. 1968.

34. ದೇವುಡು ನರಸಿಂಹಶಾಸ್ತ್ರಿ – ಕರ್ನಾಟಕ ಸಂಸ್ಕೃತಿ
ಶಾರದಾ ಪ್ರಕಟಣಾಲಯ, ಬೆಂಗಳೂರು.

35.ನರಸಿಂಹಾಚಾರ್ ಡಿ.ಎನ್. – ಗೋವಿನ ಹಾಡು
ಶಾರದಾ ಮಂದಿರ, ಮೈಸೂರು.

36. ನಾಗಭೂಷಣಸ್ವಾಮಿ ಓ.ಎಲ್ – ವಿಮರ್ಶೆಯ ಪರಿಭಾಷೆ,
138, ಮೊದಲನೆಯ ಮಹಡಿ,
ಗಾಂಧಿ ಬಜಾರ್ ಸರ್ಕಲ್,
ಬಸವನಗುಡಿ ಬೆಂಗಳೂರು

37. ನಾಗೇಗೌಡ ಹೆಚ್.ಎನ್. – ಸೋಬಾನೆ ಚಿಕ್ಕಮ್ಮನ ಪದಗಳು
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು.

38.ನಿಂಗಣ್ಣ ಸಣ್ಣಕ್ಕಿ – ಎಲ್ಲಮ್ಮನ ಜೋಗಿಗಳು
ಅಯ್.ಬಿ.ಎಸ್. ಪ್ರಕಾಶನ,
ಬೆಂಗಳೂರು.

39. ಪರಮಶಿವಯ್ಯ ಜಿ.ಶಂ. – ಮಂಟೇಸ್ವಾಮಿಯ ನೀಲಿಗಾರರು
ಆರ್.ವಿ.ಎನ್. ಪ್ರಕಾಶನ, ಬೆಂಗಳೂರು.

40. ಪರಮಶಿವಯ್ಯ ಜಿ.ಶಂ. – ಕರ್ನಾಟಕ ಜಾನಪದ
ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡಮಿ, ಬೆಂಗಳೂರು.

41.ಪರಮಶಿವಯ್ಯ ಜಿ.ಶಂ. – ಜಾನಪದ ಗಂಗೋತ್ರಿ
ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ, ಬೆಂಗಳೂರು.
1993.

42. (ಸಂ) ಎ.ಎಸ್.ಪ್ರಭಾಕರ. – ಆದಿವಾಸಿ ಆಖ್ಯಾನ
ಸಿದ್ಧಾರ್ಥ ಪ್ರಕಾಶನ ಹೊಸಪೇಟೆ

43. (ಸಂ.) ಎಂ.ಎಸ್. ಪ್ರಭಾಕರ – ಬುಡಕಟ್ಟು ಅಭಿವೃದ್ಧಿಮೀಮಾಂಸೆ
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
ಹಂಪಿ 2004

44. ಬರಗೂರು ರಾಮಚಂದ್ರಪ್ಪ – ಸಂಸ್ಕೃತಿ ಉಪಸಂಸ್ಕೃತಿ
– ಭೂಮಿ ಬಳಗ, ಮೈಸೂರು. 1994.
ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು.

45. ಬಸವರಾಜ ಸಬರದ – ಸಮುದಾಯ ಮತ್ತು ಸಂಸ್ಕೃತಿ
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು–2002.

46. ಬೋರಲಿಂಗಯ್ಯ ಹಿ.ಚಿ – ಗಿರಿಜನರ ನಾಡಿಗೆ ಪಯಣ

47. ಸಂ. ಬೋರಲಿಂಗಯ್ಯ ಹಿ.ಚಿ. – ಕರ್ನಾಟಕ ಜಾನಪದ ಕಲೆಗಳ ಕೋಶ
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996.

48. (ಸಂ.) ಬೋರಲಿಂಗಯ್ಯ, ಹಿ.ಚಿ.
ಎ.ಎಸ್.ಪ್ರಭಾಕರ, – ಬುಡಕಟ್ಟು ಅಧ್ಯಯನ ಸಂಪುಟ –1
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2003.

49. ಬೋರಲಿಂಗಯ್ಯ ಹಿ.ಚಿ.,
ಎ.ಎಸ್.ಪ್ರಭಾಕರ, – ಬುಡಕಟ್ಟು ಅಧ್ಯಯನ – 3
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.2005.

50. ಭೈರೇಗೌಡ ಎಂ. – ಇರುಳಿಗರ ಜಾನಪದ ಅಧ್ಯಯನ
ಸಿವಿಜಿ ಪಬ್ಲಿಕೇಷನ್ , ಬೆಂಗಳೂರು
2000

51. ಮಹಿಳಾ ಅಧ್ಯಯನ – ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

52. ಮೀರಾಸಾಬಿಹಳ್ಳಿ ಶಿವಣ್ಣ – ಗೊಲ್ಲಕಡಗ
ಸಿ.ವಿ.ಜಿ .ಪಬ್ಲಿಕೇಷನ್ಸ್,
ವೈಯಾಲಿ ಕಾವಲ್, ಬೆಂಗಳೂರು.

53. ಮೀರಾಸಾಬಿಹಳ್ಳಿ ಶಿವಣ್ಣ – ಮ್ಯಾಸಮಂಡಲ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

54. ಮೈತ್ರಿ ಕೆ.ಎಂ. – ಬುಡಕಟ್ಟು ಕುಲ ಕಸುಬುಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2002.

55. ಡಾ. ಮೊಗಳ್ಳಿ ಗಣೇಶ – ಅವ್ಯಕ್ತ ಚರಿತ್ರ
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ. 2009

56. ರಹಮತ್ ತರೀಕೆರೆ – ಕನ್ನಡ ಸಂಶೋಧನೆ ತಾತ್ವಿಕ ವಿಚಾರ
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

57. ರಾಜಶೇಖರ್ ಪಿ.ಕೆ. – ಜಾನಪದ ಸಂಭ್ರಮ
ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲೀಷರ್ಸ್,
ಮೈಸೂರು. 2003.

58. (ಪ್ರ.ಸಂ.) ಲಕ್ಕಪ್ಪಗೌಡ ಹೆಚ್.ಜೆ – ಕರ್ನಾಟಕ ಬುಡಕಟ್ಟುಗಳು
ಸಂಪುಟ – 1,2
ಕರ್ನಾಟಕ ಜಾನಪದ ಅಕಾಡೆಮಿ 1998

59. ವಿರೂಪಾಕ್ಷಿ ಪೂಜಾರಹಳ್ಳಿ – ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು
ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ. 2002.

60. ಮೂಲ: ವಂದನಾ ಶಿವ
ಕನ್ನಡಕ್ಕೆ ಮಾಧವ ಐತಾಳ್ – ಬತ್ತದ ಚಿಲುಮೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2005

61. ಶ್ರೀಮತಿ ಹೆಚ್.ಎಸ್. – ಸ್ತ್ರೀವಾದ, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

62. ಶ್ರೀಮತಿ ಹೆಚ್.ಎಸ್. – ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

63. ಶ್ರೀಮತಿ ಹೆಚ್.ಎಸ್. – ಹೆಣ್ಣು ಮತ್ತು ಭಾಷೆ, ಪ್ರಸಾರಾಂಗ ,
ಕನ್ನಡ ವಿಶ್ವವಿದ್ಯಾನಿಲಯ ಹಂಪಿ.

64. ತಿ.ನಂ. ಶಂಕರನಾರಾಯಣ – ಕಾಡುಗೊಲ್ಲರು
ಪ್ರಸಾರಾಂಗ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
1982

65. ಶ್ರೀಕಂಠಯ್ಯ ಕೆ. – ರಣವಾದ್ಯಗಳು
ಪಿ.ಬಿ.ಎಚ್. ಪ್ರಕಾಶನ, ಬೆಂಗಳೂರು.

66. ಶಿವಣ್ಣ ಎಸ್. – ಕಾಡುಗೊಲ್ಲರ ಸಾಂಸ್ಕೃತಿಕ ವೀರರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು 2011

67. ಸಾರಾ ಅಬೂಬಕರ್ – ಸಾಹಿತ್ಯ ಸಂಸ್ಕೃತಿ ಮಹಿಳೆ
ಸತ್ಯಶ್ರೀ ಪ್ರಿಂಟರ್ಸ್. ಬೆಂಗಳೂರು.

68. ಡಾ.ಸಿದ್ಧಲಿಂಗಯ್ಯ – ಗ್ರಾಮ ದೇವತೆಗಳು
– ಮೂಲಭಾರತಿ ಪ್ರಕಾಶನ. 1997

69. (ಸಂ) ಸುಮಿತ್ರಾಬಾಯಿ ಬಿ.ಎನ್. ಮತ್ತು
ಎನ್.ಗಾಯತ್ರಿ. – ಸ್ತ್ರೀವಾದಿ ಪ್ರವೇಶಿಕೆ
ನವಕರ್ನಾಟಕ, ಬೆಂಗಳೂರು.

70. ಹಳೆಮನೆ ರಾಜಶೇಖರ – ಮಹಿಳೆ ಮತ್ತು ಸಂಸ್ಕೃತಿ
ಸ್ನೇಹ ಪ್ರಿಂಟರ್ಸ್, ಬೆಂಗಳೂರು.

71. ಹಾ.ಮಾ. ನಾಯಕ. – ಜಾನಪದ ತ.ವೆಂ. ಸ್ಮಾರಕ ಗ್ರಂಥಮಾಲೆ,
ಮೈಸೂರು

72. ಡಾ. ಹಾಲತಿ ಸೋಮಶೇಖರ್, – ಮಹಿಳಾ ಚಳುವಳಿ – ಸಾಮಾಜಿಕ
ಮತ್ತು ಸಾಂಸ್ಕೃತಿಕ ಹಿನ್ನೆಲೆ
ವಿಸ್ಮಯ ಪ್ರಕಾಶನ. ಚಾಮರಾಜಪೇಟೆ,
ಬೆಂಗಳೂರು.

73. ಹೆಗಡೆ ಎಲ್.ಆರ್. – ಜಾನಪದ ಜೀವನ ಮತ್ತು ಕಲೆ ಸಮಾಜ
ಸಮಾಜ ಪುಸ್ತಕಾಲಯ, ಧಾರವಾಡ

74. ಡಾ. ಹೇಮಲತಾ ಎಚ್.ಎಂ – ಮಹಿಳಾ ಅಧ್ಯಯನ 1 ರಿಂದ5
ಡಿವಿಕೆ ಮೂರ್ತಿ ಪ್ರಕಾಶನ ಮೈಸೂರು–
2006


ENGLISH BOOKS

1. Mysore state Gazatteer (Tumkur District) - 1969

2. Castes and Tribes of Southern India Vol- 15.7 - Edgar Thuston and K.Rangachari Govt. press, Madras – 1909.

3. The Mysore Tribes and Vol-2 - L.K. Anantha Krishna Iyer Mittal publications, Delhi 1928.

4. Karnataka Backward Class Commission Report - Havanur L.G. Government of Karnataka, Bangalore. 1975.




ಕಾಡುಗೊಲ್ಲರ ಕುರಿ ರೊಪ್ಪಗಳು





ಕುರಿ ಸಾಕಾಣಿಯಲ್ಲಿ ಕಾಡುಗೊಲ್ಲರು




ಕೋಳಿ ಮತ್ತು ಕುರಿ ಸಾಕಾಣಿಯಲ್ಲಿ ಕಾಡುಗೊಲ್ಲ ಮಹಿಳೆಯರು







ಗ್ರಾಮ ಪಂಚಾಯಿತಿ ಸದಸ್ಯೆ
ನಾಗವೇಣಮ್ಮ



ಕಾಡುಗೊಲ್ಲ ಮಹಿಳೆಯರು



ಕಾಡು ಗೊಲ್ಲ ಕುಟುಂಬ



ಕಟ್ಟಿಗೆ ಸಂಸ್ಕರಣಾ ನಿರತ ಕಾಡುಗೊಲ್ಲ ಮಹಿಳೆ



ಕಾಡುಗೊಲ್ಲ ಮಹಿಳಾ ಜನಪದ ಹಾಡುಗಾರ್ತಿಯರು



ವ್ಯಾಪಾರ ನಿರತ ಕಾಡುಗೊಲ್ಲ ಮಹಿಳೆ











ಕಾಡುಗೊಲ್ಲ ಪುರುಷರು ಧರಿಸುವ ಕುಲಚಿಹ್ನೆಯಿರುವ ಕೈ ಬಳೆ



ಕಾಡುಗೊಲ್ಲ ಮಹಿಳೆಯರು ಧರಿಸುವ ಕುಲಚಿಹ್ನೆಯಿರುವ ಗೊಲ್ಲಕಡಗ




ಹೊಲಿಗೆ ವೃತ್ತಿ ನಿರತ ಕಾಡುಗೊಲ್ಲ ಮಹಿಳೆ



ಕಾಡುಗೊಲ್ಲ ಬಾಣಂತಿ



ಕಾಡುಗೊಲ್ಲಹಟ್ಟಿಯ ಪ್ರಾಥಮಿಕ ಶಾಲೆ



ಬಾಲ್ಯವಿವಾಹಕ್ಕೆ ಒಳಗಾದ ಕಾಡುಗೊಲ್ಲ ಹೆಣ್ಣು















ಕಾಡುಗೊಲ್ಲರ ಹಟ್ಟಿ



ಕಾಡುಗೊಲ್ಲರ ಹಟ್ಟಿ



ಕಾಡುಗೊಲ್ಲರ ಮನೆ



ಕಾಡುಗೊಲ್ಲರ ಮನೆ



ಕಾಡುಗೊಲ್ಲರ ಮನೆ



ನಿರ್ಮಾಣ ಹಂತದಲ್ಲಿರುವ ಕಾಡುಗೊಲ್ಲರ ಮನೆ










ಕಾಡುಗೊಲ್ಲರ ದೇವಸ್ಥಾನ



ಕಾಡುಗೊಲ್ಲರ ದೇವಸ್ಥಾನ



ಕಾಡುಗೊಲ್ಲರ ದೇವಸ್ಥಾನ ಪೂಜಾರು



ಕಾಡುಗೊಲ್ಲರ ದೇವಸ್ಥಾನ



ಕಾಡುಗೊಲ್ಲರ ಹಟ್ಟಿಯಲ್ಲಿ ಆಚರಿಸಲ್ಪಡುವ ಕೃಷ್ಣಜನ್ಮಾಷ್ಟಮಿ



ನಿರ್ಮಾಣ ಹಂತದಲ್ಲಿರುವ ಕಾಡುಗೊಲ್ಲರ ದೇವಸ್ಥಾನ















ಬಾಣಂತಿ ಕಾಡುಗೊಲ್ಲ ಮಹಿಳೆಯರು ಇರುವ ಗುಬ್ಬ





